ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ
ಗಣರಾಜ್ಯೋತ್ಸವ ಅಂಗವಾಗಿ ನವದೆಹಲಿಯಲ್ಲಿ ಹಮ್ಮಿಕೊಂಡಿರುವ ಎನ್‌ಸಿಸಿ ಶಿಬಿರದಲ್ಲಿ ಕೆಡೆಟ್‌ಗಳು ಶನಿವಾರ ನೃತ್ಯ ಪ್ರದರ್ಶಿಸಿದರು

ಶ್ರೀ ರಾಮ ಜನ್ಮಭೂಮಿ ದೇವಾಲಯ, ಅಯೋಧ್ಯೆ

ರಾಮಲಾಲ ಪ್ರಾಣ-ಪ್ರತಿಷ್ಠಾ, ಸ,ಮಾರಂಭ

ಪೌಷ ಶುಕ್ಲ ದ್ವಾದಸಿ, ವಿಕ್ರಮನಾಮ ಸಂವತ್ಸರ 2080
ಸೋಮವಾರ, 22 ಜನವರಿ, 2024, ಸಮಯ 12:20

ಉಪಸ್ಥಿತರಿರುವ ಗಣ್ಯರು

ಮಹಾಂತ ನೃತ್ಯ ಗೋಪಾಲದಾಸ ಜಿ ಮಹಾರಾಜ
ಅಧ್ಯಕ್ಷರು, ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ

ಗೌರವಾನ್ವಿತ ನರೇಂದ್ರ ಮೋದಿ ಜಿ
ಪ್ರಧಾನ ಮಂತ್ರಿಗಳು, ಭಾರತ ಸರಕಾರ

ಡಾ:ಮೋಹನರಾವ್ ಭಾಗವತ ಜೀ
ಸರಸಂಘಚಾಲಕ, ರಾಷ್ಟ್ರೀಯ ಸ್ವಯಂ ಸೇವಕ ಸಂಘ

ಆನಂದಿಬೆನ್ ಪಟೇಲ್ ಜೀ
ರಾಜ್ಯಪಾಲರು, ಉತ್ತರ ಪ್ರದೇಶ

ಯೋಗಿ ಆದಿತ್ಯನಾಥ ಜೀ ಮಹಾರಾಜ
ಮುಖ್ಯಮಂತ್ರಿ, ಉತ್ತರ ಪ್ರದೇಶ



ಸುಮಾರು 125 ಭಾರತೀಯ ಸಂಪ್ರದಾಯಗಳ ಸಂತರು, ದಾರ್ಶನಿಕರು ಹಾಗೂ ವಿವಿಧ ಕ್ಷೇತ್ರಗಳ 2500 ಗಣ್ಯರು ಸಮಾರಂಭವನ್ನು ಅಲಂಕರಿಸಲಿದ್ದಾರೆ.

ನಾವು ನಮ್ಮ ಹಳ್ಳಿ /ಪ್ರದೇಶ /ಕಾಲನಿಗಳನ್ನು ರಾಮಮಯವನ್ನಾಗಿ ಮಡೋಣ

ರಾಮ ಲಲ್ಲಾನನ್ನು ಸಂಭ್ರಮ, ಸಡಗರದಿಂದ ಸ್ವಾಗತಿಸಿ

ಸ್ತುತಿ ಗೀತೆಗಳನ್ನು ಹಾಡುವುದು
ಭರತ ರಾಮ ಮಯಿಗೆ ಬಣ್ಣ ಹಚ್ಚುವುದು
ಮನೆಗಳ ಬಾಗಿಲು ಮುಂದೆ ದೀಪ ಬೆಳಗಿಸುವ ಮೂಲಕ ಈ ಐತಿಹಾಸಿಕ ಕ್ಷಣಗಳನ್ನು ಸಂಭ್ರಮಿಸಿ

- ಮಕರ ಸಂಕ್ರಾಂತಿಯಿಂದ ಜನವರಿ 22 ರ ವರೆಗೆ ನಿಮ್ಮ ಸಮೀಪದ ಮಂದಿರಗಳಲ್ಲಿ ಸ್ವಚ್ಛತಾ ಆಂದೋಲನ ಕೈಕೊಳ್ಳಿ
- ಜನವರಿ 22 ರಂದು ಸಮೀಪದ ಮಂದಿರದಲ್ಲಿ ನಾಮ ಸಂಕೀರ್ತನ ನಡೆಸಿ
- ನಿಮ್ಮ ಸಮೀಪದ ಮಂದಿರದ ಬಳಿ ಟಿ.ವ್ಹಿ/ಎಲ್‌ಇಡಿ/ಸ್ಕ್ರೀನ್ ಅಳವಡಿಸಿ ಪ್ರಾಣ ಪ್ರತಿಷ್ಠಾ ಸಮಾರಂಭವನ್ನು ಸಾಮೂಹಿಕವಾಗಿ ವೀಕ್ಷಿಸಿ
- ಪ್ರಾಣ ಪ್ರತಿಷ್ಠಾ ಸಮಾರಂಭದ ನಂತರ ಹಳ್ಳಿ/ಕಾಲನಿ /ಪ್ರದೇಶಗಳಲ್ಲಿ ಪ್ರಸಾದ ಹಂಚಿ
- ಪ್ರಾಣ ಪ್ರತಿಷ್ಠಾ ದಿನದಂದು ಸಂಜೆ ನಿಮ್ಮ ಮನೆ ಬಾಗಿಲು /ಕೆಲಸದ ಸ್ಥಳ/ಅಂಗಡಿ ಬಳಿ ಕನಿಷ್ಠ ಐದು ದೀಪಗಳನ್ನು ಬೆಳಗಿಸಿ
- ಪ್ರಾಣ ಪ್ರತಿಷ್ಠ ದಿನದ ನಂತರ ದರ್ಶನಕ್ಕಾಗಿ ನಿಮಗೆ ಅನುಕೂಲವಾದ ಸಮಯದಲ್ಲಿ ಅಯೋಧ್ಯೆಗೆ ಭೆಟ್ಟಿ ನೀಡಿ.

Regd. No. 76/1683 PAN - AAZTS6197B

ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ

ಕ್ಯಾಂಪ್ ಆಫೀಸ್ : ಮಂದಿರ ನಿರ್ಮಾಣ ಕಾರ್ಯಶಾಲಾ, ರಾಮಘಾಟ್ ಚೌರಾಹ, ಅಯೋಧ್ಯೆ -224123

ದೇವದುರ್ಗ: 27 ಪಿಡಿಒಗಳ ಅಮಾನತು

ರಾಯಚೂರು: ದೇವದುರ್ಗ ತಾಲ್ಲೂಕಿನ 33 ಗ್ರಾಮ ಪಂಚಾಯಿತಿಗಳಲ್ಲಿ ನಡೆದ ₹150 ಕೋಟಿಗೂ ಅಧಿಕ ಮೊತ್ತದ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಪಾಂಡ್ವೆ ಅವರು 27 ಪಿಡಿಒಗಳನ್ನು ಅಮಾನತು ಮಾಡಿದ್ದಾರೆ.

ರಾಜ್ಯ ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿ ಪರಿಶೀಲನೆ ನಡೆಸಿ ನೀಡಿದ ವರದಿ ಆಧರಿಸಿ ಅಮಾನತು ಮಾಡಿದ್ದಾರೆ. ಜಿಲ್ಲೆಯಿಂದ ವರ್ಗಾವಣೆಯಾಗಿ ಕಲಬುರಗಿ, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಾಲ್ಕು ಪಿಡಿಒಗಳನ್ನೂ ಅಮಾನತು ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ದೇವದುರ್ಗ ತಾಲ್ಲೂಕಿನ ಮಸರಕಲ್ ಪಂಚಾಯಿತಿ ಪಿಡಿಒ ಆಗಿ ಕಾರ್ಯನಿರ್ವಹಿಸಿ ಬಡ್ತಿ ಹೊಂದಿದ್ದ ಮಾನ್ವಿ ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಖಾಲೀದ್ ಅಹಮ್ಮದ್ ಅವರನ್ನೂ ಅಮಾನತುಗೊಳಿಸಲಾಗಿದೆ ಎಂದು ರಾಹುಲ್ ಪಾಂಡ್ವೆ ತಿಳಿಸಿದ್ದಾರೆ.

2023ರ ಡಿಸೆಂಬರ್ 8ರಂದು ನಾಲ್ವರು ಪಿಡಿಒಗಳನ್ನು ಅಮಾನತು ಮಾಡಲಾಗಿತ್ತು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಶೇ 50ಕ್ಕೂ ಅಧಿಕ ಹುದ್ದೆಗಳು ಖಾಲಿ

ಕ್ಯಾನ್ಸರ್ ಚಿಕಿತ್ಸೆಗೆ ಸಿಬ್ಬಂದಿ ಕೊರತೆ

• ವರುಣ ಹೆಗಡೆ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಬೆಂಗಳೂರು: ದೇಶದ ಪ್ರಮುಖ ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಒಂದಾದ ಇಲ್ಲಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಸಿಬ್ಬಂದಿ ಕೊರತೆ ಎದುರಿಸುತ್ತಿದೆ. ಇದರಿಂದಾಗಿ ಸಂಸ್ಥೆಗೆ ಬರುವ ರೋಗಿಗಳಿಗೆ ಚಿಕಿತ್ಸೆಯಲ್ಲಿ ವ್ಯತ್ಯಯವಾಗುತ್ತಿದೆ.

ಕ್ಯಾನ್ಸರ್ ಚಿಕಿತ್ಸೆಗಾಗಿ ಸಂಸ್ಥೆಗೆ ಸ್ಥಳೀಯ ರೋಗಿಗಳ ಜತೆಗೆ ದೇಶದ ಬೇರೆ ಬೇರೆ ರಾಜ್ಯಗಳು ಹಾಗೂ ವಿದೇಶಗಳಿಂದಲೂ ರೋಗಿಗಳು ಬರುತ್ತಿದ್ದಾರೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ನೆರವಿನಿಂದ ಅತ್ಯಾಧುನಿಕ ಸೌಲಭ್ಯ ಹೊಂದಿದ ಹೊರರೋಗಿ ಘಟಕ (ಒಪಿಡಿ) ಹಾಗೂ ವಿವಿಧ ಚಿಕಿತ್ಸಾ ಘಟಕಗಳು ಸಂಸ್ಥೆಗೆ ಇತ್ತೀಚಿನ ವರ್ಷಗಳಲ್ಲಿ ಸೇರ್ಪಡೆಗೊಂಡಿವೆ. ಇದರಿಂದಾಗಿ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆಯೂ ಏರಿಕೆ ಕಂಡಿದ್ದು, ಪ್ರತಿ ನಿತ್ಯ ಸರಾಸರಿ 1,400 ಹೊರರೋಗಿಗಳು ಚಿಕಿತ್ಸೆಗೆ ಬರುತ್ತಿದ್ದಾರೆ. ಆದರೆ, ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಇಲ್ಲದಿರುವುದರಿಂದ ರೋಗಿಗಳ ನಿರ್ವಹಣೆ ಸಂಸ್ಥೆಗೆ ಸವಾಲಾಗಿದೆ.

ಸಂಸ್ಥೆಗೆ ಮಂಜೂರಾಗಿದ್ದ ಅಧಿಕಾರಿ ಹಾಗೂ ನೌಕರರ ಕಾಯಂ ಹುದ್ದೆಗಳಲ್ಲಿ ಬಹುತೇಕ ಹುದ್ದೆಗಳು ಖಾಲಿ ಉಳಿದಿವೆ. ಮಂಜೂರಾಗಿದ್ದ 1,767 ಹುದ್ದೆಗಳಲ್ಲಿ 1,109 ಹುದ್ದೆಗಳಿಗೆ ನೇಮಕಾತಿ ನಡೆದಿಲ್ಲ. ಸಂಸ್ಥೆಗೆ ಮಂಜೂರಾಗಿದ್ದ ಒಟ್ಟು 242 ಗ್ರೂಪ್ ಎ ಹುದ್ದೆಗಳಲ್ಲಿ 138 ಹುದ್ದೆಗಳು ಮಾತ್ರ ಭರ್ತಿಯಾಗಿವೆ. 118 ಗ್ರೂಪ್ ಬಿ ಹುದ್ದೆಗಳಲ್ಲಿ 82 ಹುದ್ದೆಗಳು ಖಾಲಿಯಿದ್ದು, 36 ಅಧಿಕಾರಿಗಳು ಮಾತ್ರ ಕಾಯಂ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದು ಸಂಸ್ಥೆಯ ಆಡಳಿತ ಮಂಡಳಿಯ ಮೇಲೆ ಪರಿಣಾಮ ಬೀರಿದೆ.

ಸಿಬ್ಬಂದಿ ಸಮಸ್ಯೆ: ಸಂಸ್ಥೆಗೆ ಮಂಜೂರಾಗಿದ್ದ ಕಾಯಂ ಗ್ರೂಪ್ ಸಿ ಹಾಗೂ ಗ್ರೂಪ್ ಡಿ ನೌಕರರ 1,407 ಹುದ್ದೆಗಳಲ್ಲಿ 484 ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಗ್ರೂಪ್ ಸಿ 1,109 ಕಾಯಂ ಹುದ್ದೆಗಳಲ್ಲಿ 684 ಹುದ್ದೆಗಳು ಖಾಲಿ ಉಳಿದಿದ್ದು, 425 ನೌಕರರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ, 298 ಗ್ರೂಪ್ ಸಿ ಹುದ್ದೆಗಳಲ್ಲಿ 239 ಹುದ್ದೆಗಳು ಖಾಲಿ ಉಳಿದಿದ್ದು, 59 ನೌಕರರು ಮಾತ್ರ ಕಾಯಂ ಸೇವೆಯಡಿ ಕಾರ್ಯನಿರ್ವಹಿಸುತ್ತಿದ್ದಾರೆ.

1973ರಲ್ಲಿ 50 ಹಾಸಿಗೆಗಳೊಂದಿಗೆ ಪ್ರಾರಂಭವಾದ ಸಂಸ್ಥೆ, ಈಗ 871 ಹಾಸಿಗೆಗಳನ್ನು ಒಳಗೊಂಡಿದೆ. ಹಾಸಿಗೆಗಳ ಸಂಖ್ಯೆ ಹೆಚ್ಚಳವಾದರೂ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಒದಗಿಸ-ದಿರುವುದು ಸಂಸ್ಥೆಯ ವೈದ್ಯರು ಹಾಗೂ ನೌಕರರ ಅಸಮಾಧಾನಕ್ಕೆ ಕಾಣವಾಗಿದೆ.

‘ಸಿಬ್ಬಂದಿ ಕೊರತೆಯಿಂದ ಸಂಸ್ಥೆಯಲ್ಲಿ ವೈದ್ಯಕೀಯ ಸೇವೆ ವ್ಯತ್ಯಯವಾಗುತ್ತಿದೆ. ಪೆಟ್ ಸ್ಕ್ಯಾನ್ ಘಟಕ ಸೇರಿ ವಿವಿಧ ಘಟಕಗಳನ್ನು ತಜ್ಞರಲ್ಲದವರು ನಿರ್ವಹಿಸುತ್ತಿದ್ದಾರೆ. ಪರೀಕ್ಷೆಗಳಿಗೆ ರೋಗಿಗಳು ಇಡೀ ದಿನ ಕಾಯಬೇಕಾದ ಪರಿಸ್ಥಿತಿಯಿದೆ. ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ಒದಗಿಸಿದರೆ ಗುಣಮಟ್ಟದ ಚಿಕಿತ್ಸೆ ಸಾಧ್ಯವಾಗುತ್ತದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ ಅಂಶಗಳು

765
ಕಿದ್ವಾಯಿ ಸಂಸ್ಥೆಯಲ್ಲಿನ ಹಾಸಿಗೆಗಳ ಸಂಖ್ಯೆ

106
ಸಂಸ್ಥೆಯಲ್ಲಿನ ಐಸಿಯು ಹಾಸಿಗೆಗಳ ಸಂಖ್ಯೆ

ವಾರ್ಷಿಕ 3 ಲಕ್ಷ ಮಂದಿಗೆ ಚಿಕಿತ್ಸೆ

ಸಂಸ್ಥೆಯಲ್ಲಿ ಪ್ರತಿವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಬಾಯಿ, ಜಠರ, ಸ್ತನ, ಅನ್ನನಾಳ ಸೇರಿ ವಿವಿಧ ಪ್ರಕಾರಗಳ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸಂಸ್ಥೆಗೆ ಚಿಕಿತ್ಸೆ ಸಂಬಂಧ ದಾಖಲಾಗಿದ್ದವರಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 3,294 ಮಂದಿ ಮೃತಪಟ್ಟಿದ್ದಾರೆ. ತಡವಾಗಿ ಆಸ್ಪತ್ರೆಗೆ ದಾಖಲು, ಚಿಕಿತ್ಸೆ ವಿಳಂಬ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪೀಡಿತರಲ್ಲಿ ಕೆಲವರ ಜೀವಕ್ಕೆ ಅಪಾಯವಾಗುತ್ತಿದೆ. ಸಂಸ್ಥೆಯ ದಾಖಲಾತಿ ಪ್ರಕಾರ ಶೇ 50ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3 ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ.

ರೋಗಿಗಳಿಗೆ ಸಮಸ್ಯೆಯಾಗದಂತೆ ಚಿಕಿತ್ಸೆಗೆ ಕ್ರಮವಹಿಸಲಾಗಿದೆ. ವಿವಿಧ ಚಿಕಿತ್ಸಾ ಸೌಲಭ್ಯಗಳು ಸೇರ್ಪಡೆ ಆಗಿರುವುದರಿಂದ ಹೆಚ್ಚುವರಿ ಸಿಬ್ಬಂದಿಗೆ ಸರ್ಕಾರಕ್ಕೆ ಮನವಿ ಮಾಡಿದ್ದೇವೆ.

ಡಾ.ವಿ.ಲೋಕೇಶ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಸುದ್ದಿ 2 ನಿಮಿಷ

ಜೆಡಿಎಸ್ ಚಿಹ್ನೆ ಬಳಕೆ: ಸಿ.ಎಂ. ಇಬ್ರಾಹಿಂಗೆ ನಿರ್ಬಂಧ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಪಕ್ಷದ ಚಿಹ್ನೆ, ಲೆಟರ್ ಹೆಡ್ ಬಳಕೆ ಮಾಡುವಂತಿಲ್ಲ. ಜೆಡಿಎಸ್ ಹೆಸರಲ್ಲಿ ಸುದ್ದಿಗೋಷ್ಠಿ ನಡೆಸುವಂತಿಲ್ಲ. ಪದಾಧಿಕಾರಿಗಳನ್ನು ನೇಮಕ ಮಾಡುವಂತಿಲ್ಲ ಎಂದು ಸಿಟಿ ಸಿವಿಲ್ ಕೋರ್ಟ್ ಆದೇಶ ನೀಡಿದೆ.

ಇಬ್ರಾಹಿಂ ಅವರು ಜೆಡಿಎಸ್‌ನಿಂದ ಉಚ್ಚಾಟನೆಯಾದರೂ ಪಕ್ಷದ ಚಿಹ್ನೆ, ಹೆಸರು ಬಳಸುತ್ತಿದ್ದಾರೆ. ಅದಕ್ಕೆ ನಿರ್ಬಂಧ ವಿಧಿಸಬೇಕು ಎಂದು ಕೋರಿ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಎ.ಪಿ.ರಂಗನಾಥ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಇಬ್ರಾಹಿಂ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾಗ ಸಂಪೂರ್ಣ ನಿಷ್ಕ್ರಿಯರಾಗಿದ್ದರು. ಸಂಘಟನೆ, ಬಲವರ್ಧನೆಗೆ ಯಾವುದೇ ಕಾರ್ಯಕ್ರಮ ಹಮ್ಮಿಕೊಳ್ಳಲಿಲ್ಲ. ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದಾರೆ ಎಂಬ ಆರೋಪದ ಮೇಲೆ ಅವರನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅಮಾನತು ಮಾಡಿದ್ದರು. ನಂತರ ಬೆಂಗಳೂರಿನಲ್ಲಿ ನಡೆದ ಪಕ್ಷದ ರಾಷ್ಟ್ರೀಯ ನಾಯಕರ ಸಭೆ ಉಚ್ಚಾಟನೆಯ ನಿರ್ಧಾರ ಕೈಗೊಂಡಿತ್ತು.

ಆದರೆ, ಇಬ್ರಾಹಿಂ ಅವರು ‘ನಮ್ಮದೇ ನಿಜವಾದ ಜೆಡಿಎಸ್. ಉಚ್ಚಾಟನೆ ನಿಯಮ ಬಾಹಿರ. ಈಗಲೂ ನಾನೆ ರಾಜ್ಯ ಘಟಕದ ಅಧ್ಯಕ್ಷ’ ಎಂದು ಹೇಳಿಕೆ ನೀಡಿದ್ದರು. ಅಧಿಕೃತವಾಗಿಯೇ ಪಕ್ಷದ ಲೆಟರ್‌ಹೆಡ್, ಚಿಹ್ನೆ ಬಳಸುತ್ತಿದ್ದರು.

ನನ್ನ ಅವಧಿಯಲ್ಲಿ ಮುಸ್ಲಿಮರಿಗೆ 4ರಷ್ಟು ಮೀಸಲಾತಿ: ಮೊಯಿಲಿ

ಬೆಂಗಳೂರು: ‘ನಾನು ಮುಖ್ಯಮಂತ್ರಿಯಾಗಿದ್ದಾಗ ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗ 2ಬಿ ಎಂದು ವಿಂಗಡಿಸಿ, ಶೇ 6ರಷ್ಟು ಮೀಸಲಾತಿ ನೀಡಿ ಆದೇಶ ಹೊರಡಿಸಲಾಗಿತ್ತು. ಆಗ ಜನತಾದಳ ಸರ್ಕಾರ ಅಧಿಕಾರದಲ್ಲಿ ಇರಲಿಲ್ಲ’ ಎಂದು ಕೇಂದ್ರದ ಮಾಜಿ ಸಚಿವ ಎಂ. ವೀರಪ್ಪ ಮೊಯಿಲಿ ತಿಳಿಸಿದ್ದಾರೆ.

‘ನನ್ನ ಅವಧಿಯಲ್ಲೇ ಚಿನ್ನಪ್ಪರೆಡ್ಡಿ ಆಯೋಗದ ವರದಿ ಅನುಷ್ಠಾನ ಮಾಡಲಾಗಿತ್ತು. ಒಟ್ಟು ಮೀಸಲಾತಿ ಪ್ರಮಾಣ ಶೇ 50 ಮೀರಬಾರದೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಬಳಿಕ ಮುಸ್ಲಿಮರ ಮೀಸಲಾತಿಯನ್ನು ಶೇ 6ರಿಂದ ಶೇ 4ಕ್ಕೆ ಇಳಿಸಲಾಯಿತು. ಈ ಆದೇಶವನ್ನು ಕೂಡಾ ನಾನು ಮುಖ್ಯಮಂತ್ರಿ ಆಗಿದ್ದಾಗಲೇ ಹೊರ-ಡಿಸಲಾಗಿತ್ತು. ಈ ಮೀಸಲಾತಿಯು ರಾಜಕೀಯ, ಶೈಕ್ಷಣಿಕ ಮತ್ತು ಉದ್ಯೋಗಕ್ಕೆ ಅನ್ವಯಿಸಲಾಯಿತು. ಈ ಬಗ್ಗೆ ನಾನಾ ಅಭಿಪ್ರಾಯಗಳು ವ್ಯಕ್ತವಾಗುತ್ತಿರುವುದರಿಂದ, ಗೊಂದಲ ಉಂಟಾಗಬಾರದೆಂದು ಈ ಸ್ಪಷ್ಟೀಕರಣ ನೀಡುತ್ತಿದ್ದೇನೆ’ ಎಂದೂ ಅವರು ಹೇಳಿದ್ದಾರೆ.

ಅಯೋಧ್ಯೆಗೆ ವಿಶೇಷ ರೈಲು

ಹುಬ್ಬಳ್ಳಿ: ಅಯೋಧ್ಯೆಯಲ್ಲಿ ರಾಮನ ದರ್ಶನಕ್ಕೆ ತೆರಳುವ ಭಕ್ತರ ಅನುಕೂಲಕ್ಕೆ ರಾಜ್ಯದಿಂದ ವಿಶೇಷ ರೈಲುಗಳ ವ್ಯವಸ್ಥೆ ಮಾಡಲು ನೈರುತ್ಯ ರೈಲ್ವೆ ಮುಂದಾಗಿದೆ.

ಬೆಂಗಳೂರಿನಿಂದ 3, ಮೈಸೂರು– 2, ತುಮಕೂರು–2, ಚಿತ್ರದುರ್ಗ 2 ಮತ್ತು ವಾಸ್ಕೊದಿಂದ 2 ರೈಲುಗಳು ಸಂಚರಿಸಲಿವೆ. ಜ.31ರಿಂದ ಮಾರ್ಚ್ 5ರವರೆಗೆ ಈ ರೈಲುಗಳು ಸಂಚಾರ ನಡೆಸಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ನೈರುತ್ಯ ರೈಲ್ವೆ ವ್ಯಾಪ್ತಿಯ ವಿವಿಧ ಜಿಲ್ಲೆಗಳಿಂದಲೂ ವಿಶೇಷ ರೈಲುಗಳಿಗೆ ಬೇಡಿಕೆ ಇದೆ. ಆದರೆ, ಅನುಮೋದನೆ ಸಿಕ್ಕಿಲ್ಲ. ವಿಶೇಷ ರೈಲುಗಳ ವೇಳಾಪಟ್ಟಿಯನ್ನು ಶೀಘ್ರ ಬಿಡುಗಡೆ ಮಾಡಲಾಗುವುದು’ ಎಂದು ಅವರು ತಿಳಿಸಿದ್ದಾರೆ.

‘ಮಂತ್ರಾಕ್ಷತೆ ಅಲ್ಲ, ಅನ್ನಭಾಗ್ಯದ ಅಕ್ಕಿ’

ಕೊರಟಗೆರೆ: ‘ಕಾಂಗ್ರೆಸ್ ಸರ್ಕಾರ ನೀಡಿದ ಅನ್ನಭಾಗ್ಯ ಯೋಜನೆಯ ಅಕ್ಕಿಗೆ ಬಿಜೆಪಿಯವರು ಅರಿಶಿಣ ಬೆರೆಸಿ ರಾಮನ ಅಕ್ಷತೆ, ಅಯೋಧ್ಯೆಯಿಂದ ಬಂದಿದೆ ಎಂದು ಜನರನ್ನು ಮರುಳು ಮಾಡುವ ಮೂಲಕ ಚುನಾವಣೆ ಗಿಮಿಕ್ ಮಾಡುತ್ತಿದ್ದಾರೆ’ ಎಂದು ಗೃಹಸಚಿವ ಜಿ. ಪರಮೇಶ್ವರ ಟೀಕಿಸಿದರು.

ಪಟ್ಟಣದಲ್ಲಿ ಶನಿವಾರ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ನಾವು ಹುಟ್ಟಿದಾಗಿನಿಂದಲೂ ರಾಮ ಭಕ್ತರೇ. ಪ್ರತಿ ವರ್ಷ ರಾಮನವಮಿಯಂದು ರಾಮನ ಪೂಜೆ ಮಾಡಿ ಮಜ್ಜಿಗೆ, ಪಾನಕ, ಹೆಸರುಬೇಳೆ ಹಂಚುವ ಮೂಲಕ ಶ್ರೀರಾಮನನ್ನು ಆರಾಧಿಸುತ್ತಿದ್ದೇವೆ. ಆದರೆ ಬಿಜೆಪಿಯವರು ಚುನಾವಣೆ ಸಂದರ್ಭದಲ್ಲಿ ಮಾತ್ರ ರಾಮನ ವಿಚಾರ ಮುನ್ನಲೆಗೆ ತಂದು ದೇಶದಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ’ ಎಂದರು.

ರಾಮ ಭಕ್ತರು ಪ್ರತಿ ಹಳ್ಳಿಯ, ಪ್ರತಿ ಮನೆಯಲ್ಲಿದ್ದಾರೆ. ಕೇವಲ ಚುನಾವಣೆಗಾಗಿ ಈ ರೀತಿ ಗೊಂದಲ ಸೃಷ್ಟಿಸುವುದನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದರು.

ನಗರದ ಹಲವೆಡೆ ರಾಮಜಪ ನಾಳೆ

ಪ್ರಜಾವಾಣಿ ವಾರ್ತೆ

ಅಯೋಧ್ಯೆಯಲ್ಲಿ ನಡೆಯುವ ಶ್ರೀರಾಮ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವದ ಅಂಗವಾಗಿ ನಗರದಲ್ಲಿ ಬ್ಯಾನರ್‌ಗಳು ರಾರಾಜಿಸುತ್ತಿವೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ಅಯೋಧ್ಯೆಯ ರಾಮ-ಮಂದಿರದಲ್ಲಿ ಇದೇ 22ರಂದು (ಸೋಮವಾರ) ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ ನಡೆಯುವ ಅಂಗವಾಗಿ ನಗರದ ವಿವಿಧೆಡೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

‘ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಅಯೋಧ್ಯೆಯ ರಾಮ-ಮಂದಿರದಲ್ಲಿ ನಡೆಯುವ ಪ್ರಾಣ ಪ್ರತಿಷ್ಠಾಪನಾ ಪ್ರಯುಕ್ತ ಬೆಂಗಳೂರು ದಕ್ಷಿಣ ಲೋಕಸಭೆ ಕ್ಷೇತ್ರದಲ್ಲಿ ಶ್ರೀರಾಮ ಉತ್ಸವ, ಲಕ್ಷ ದೀಪೋತ್ಸವ, ಭಜನೆ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

‘ಪದ್ಮನಾಭನಗರದ ಕಾರ್ಮೆಲ್ ಸ್ಕೂಲ್ ಮೈದಾನದಲ್ಲಿ ಸೋಮವಾರ ಸಂಜೆ 5ಕ್ಕೆ ಗಾಯಕರಾದ ವಿಜಯ್ ಪ್ರಕಾಶ್, ಅರುಣ್ ಡಿ. ರಾವ್ ಅವರಿಂದ ಶ್ರೀರಾಮ ಸಂಕೀರ್ತನೆ, ಭಜನೆ ನಡೆಸಿಕೊಡಲಿದ್ದಾರೆ. 500ಕ್ಕೂ ಹೆಚ್ಚು ಮಕ್ಕಳು, ರಾಮ, ಸೀತೆ, ಲಕ್ಷ್ಮಣ ಮತ್ತು ಹನುಮಂತನ ವೇಷಧರಿಸಿ ನೃತ್ಯ ಮಾಡಲಿದ್ದಾರೆ’ ಎಂದರು.

ಮಾಲ್‌ನಲ್ಲಿ ನೇರ ಪ್ರಸಾರ: ಅಯೋಧ್ಯೆಯಲ್ಲಿ ಸೋಮವಾರ ಮಧ್ಯಾಹ್ನ 12.20ಕ್ಕೆ ನಡೆಯುವ ‘ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ’ದ ನೇರ ಪ್ರಸಾರವನ್ನು ರಾಜಾಜಿನಗರದ ಬ್ರಿಗೇಡ್ ಗೇಟ್‌ವೇನಲ್ಲಿರುವ ಒರಾಯನ್ ಮಾಲ್‌ನಲ್ಲಿ ಆಯೋಜಿಸಲಾಗಿದೆ.

ಗೋವಿಂದರಾಜನಗರದ ಮಾರುತಿ ಮಂದಿರದಲ್ಲಿ ಬೆಳಿಗ್ಗೆ 9ರಿಂದ ‘ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ’ದ ನೇರ ಪ್ರಸಾರ ನಡೆಯಲಿದ್ದು, ಪುಷ್ಪಾಲಂಕಾರ, ಶ್ರೀರಾಮ ಭಜನೆ, ಪ್ರಸಾದ ವಿನಿಯೋಗ ಹಾಗೂ ದೇವಸ್ಥಾನಕ್ಕೆ ದೀಪಾಲಂಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಾಟಕ ಪ್ರದರ್ಶನ: ಎ.ವಿ. ಸತ್ಯನಾರಾಯಣ ಅವರು ಸಂಯೋಜಿಸಿ ನಿರ್ದೇಶಿಸಿರುವ ‘ರಾಮಾಯಣ’ ನೃತ್ಯ ನಾಟಕದ ಪ್ರದರ್ಶನವನ್ನು ಚಾಮರಾಜಪೇಟೆಯಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಮಧ್ಯಾಹ್ನ 3ಕ್ಕೆ ಆಯೋಜಿಸಲಾಗಿದೆ.

ಸೀತಾ ಕಲ್ಯಾಣೋತ್ಸವ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ ಸಹಯೋಗದಲ್ಲಿ ಇದೇ 21 ಹಾಗೂ 22ಕ್ಕೆ ತ್ರಯೋದಶ ಲಕ್ಷ ಶ್ರೀರಾಮತಾರಕ ಮಹಾಯಾಗ, ಸೀತಾ ಕಲ್ಯಾಣೋತ್ಸವವನ್ನು ಮಹಾಲಕ್ಷ್ಮೀ ಬಡಾವಣೆಯಲ್ಲಿರುವ ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

21ಕ್ಕೆ ಬೆಳಿಗ್ಗೆ 7ರಿಂದ ಶ್ರೀರಾಮ ಸುಪ್ರಭಾತ್, ಗೋಪೂಜೆ, ಯಾಗ ಶಾಲಾ ಪ್ರವೇಶ, ಗಂಗಾಪೂಜೆ, ಗಣಪತಿ ಪೂಜೆ, ಶ್ರೀರಾಮಾಯಣ ಪಾರಾಯಣ, ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಂಜೆ 4ರಿಂದ ಸೀತಾ ಕಲ್ಯಾಣೋತ್ಸವ ನಡೆಯಲಿದೆ. 22ರಂದು ಬೆಳಿಗ್ಗೆ 7.30ಕ್ಕೆ ಶ್ರೀರಾಮತಾರಕ ಮಹಾಯಾಗ ಕಲಶಾಭಿಷೇಕ ನಡೆಯಲಿದೆ. ಬೆಳಿಗ್ಗೆ 10.30ಕ್ಕೆ ಪೂರ್ಣಾಹುತಿ, 11ಕ್ಕೆ ಅಯೋಧ್ಯೆಯ ನಡೆಯುವ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವದ ನೇರ ಪ್ರಸಾರ ಆಯೋಜಿಸಲಾಗಿದೆ.

ರಾಮ ಜಪ

ಅಯೋಧ್ಯೆಯಲ್ಲಿ ಬಾಲ ರಾಮನ ಪ್ರತಿಷ್ಠಾಪನೆ ಪ್ರಯುಕ್ತ ನಗರದ ಆನಂದ್ ರಾವ್ ವೃತ್ತದ ಬಳಿ ಪಾತಾಳ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಇರಿಸಲಾಗಿರುವ ರಾಮನ ಪ್ರತಿಮೆ ಜನರನ್ನು ಆಕರ್ಷಿಸುತ್ತಿದೆ
ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

‘ಹರಿಪ್ರಸಾದ್ ವಿಚಾರಣೆಗೆ ರಾಜ್ಯಪಾಲರ ಒತ್ತಡ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಯೋಧ್ಯೆ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಗೋಧ್ರಾ ಮಾದರಿಯಲ್ಲಿ ಘಟನೆಗಳು ನಡೆಯಬಹುದು ಎಂದು ಎಚ್ಚರಿಕೆ ನೀಡಿದ್ದ ಬಿ.ಕೆ. ಹರಿಪ್ರಸಾದ್ ಹೇಳಿಕೆ ಬಗ್ಗೆ ರಾಜ್ಯಪಾಲರು ತನಿಖೆ ಆಗುತ್ತಿದೆಯೇ ಇಲ್ಲವೇ ಎಂದು ಪದೆಪದೇ ಕೇಳಿದ್ದಾರೆ. ರಾಜ್ಯಪಾಲರ ಮಾತಿಗೆ ಗೌರವ ಕೊಟ್ಟು ಗೃಹ ಇಲಾಖೆಯಿಂದ ಹರಿಪ್ರಸಾದ್ ವಿಚಾರಣೆಗೆ ಪೊಲೀಸರು ತೆರಳಿದ್ದರು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ರಾಜ್ಯದ ಕಾನೂನು ಸುವ್ಯವಸ್ಥೆಗೂ ರಾಜ್ಯಪಾಲರಿಗೂ ಏನು ಸಂಬಂಧ. ಹಿಂದಿನ ಸರ್ಕಾರ ಇದ್ದಾಗ ಎಂದೂ ಈ ರೀತಿ ಆಗಿಲ್ಲ. ಈ ಬಾರಿ ಏಕೆ ಆಗುತ್ತಿದೆ. ಈ ವಿಚಾರವಾಗಿ ರಾಜ್ಯಪಾಲರು ಏಕೆ ಅಷ್ಟೊಂದು ಆಸಕ್ತಿ ಹೊಂದಿದ್ದಾರೆ. ಕೇಂದ್ರ ಸರ್ಕಾರದಿಂದ ಅವರಿಗೆ ನಿರ್ದೇಶನ ಇತ್ತೇ’ ಎಂದೂ ಪ್ರಶ್ನಿಸಿದರು.

‘ಹರಿಪ್ರಸಾದ್ ಅವರಿಗೆ ಮುಜುಗರ ಉಂಟು ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲ. ಬಿಜೆಪಿ ಆಡಳಿತ ಇಲ್ಲದ ರಾಜ್ಯಗಳಲ್ಲಿ ಅಲ್ಲಿನ ರಾಜ್ಯಪಾಲರ ಮೂಲಕ ಬಿಜೆಪಿಯವರು ಆಡಳಿತ ಮಾಡಲು ಹೊರಟಿದ್ದಾರೆ’ ಎಂದು ಆರೋಪಿಸಿದ ಪ್ರಿಯಾಂಕ್, ‘ನಾವು ಏನೇ ಇದ್ದರೂ ಕಾನೂನು ಚೌಕಟ್ಟಿನಲ್ಲಿ ಮಾಡುತ್ತೇವೆ’ ಎಂದರು.

‘ಅನಂತ ಕುಮಾರ ಹೆಗಡೆ ಅಥವಾ ಕಲ್ಲಡ್ಕ ಪ್ರಭಾಕರ್ ಭಟ್ ಯಾರೇ ಇದ್ದರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ಕಾನೂನು ಮೀರಲು ಯಾರನ್ನೂ ಬಿಡುವುದಿಲ್ಲ. ಇಲ್ಲಿ ಉತ್ತರ ಪ್ರದೇಶದ ಆಡಳಿತ ನಡೆಯುವುದಿಲ್ಲ. ಅವರೆಲ್ಲರೂ ಇಂದಲ್ಲ, ನಾಳೆ ಒಳಗಡೆ ಹೋಗುತ್ತಾರೆ. ಅದರಲ್ಲಿ ಅನುಮಾನಬೇಡ’ ಎಂದು ಹೇಳಿದರು.

ಡಿಜಿಪಿಗೆ ರಾಜ್ಯಪಾಲರ ಸೂಚನೆ: ಪರಮೇಶ್ವರ

‘ಹರಿಪ್ರಸಾದ್ ನೀಡಿದ್ದ ಹೇಳಿಕೆಗೆ ಸಂಬಂಧಿಸಿದ ಸುದ್ದಿ ರಾಜ್ಯಪಾಲರ ಗಮನಕ್ಕೆ ಬಂದಿತ್ತು. ಈ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ಪೊಲೀಸ್ ಮಹಾ-ನಿರ್ದೇಶಕರಿಗೆ ಅವರು ಸೂಚಿಸಿದ್ದರು. ಕಾನೂನು ಚೌಕಟ್ಟಿನಲ್ಲಿ ಏನು ಕೆಲಸ ಮಾಡಬೇಕೊ ಅದನ್ನು ಪೊಲೀಸರು ಮಾಡಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಹರಿಪ್ರಸಾದ್ ಅವರ ವಿರುದ್ಧ ಯಾರೂ ಒಳಸಂಚು, ಪಿತೂರಿ ನಡೆಸುತ್ತಿಲ್ಲ. ಅವರಿಗೆ ತೊಂದರೆ ಮಾಡಬೇಕು ಎಂಬ ಉದ್ದೇಶವೂ ಇಲ್ಲ’ ಎಂದರು.

‘ಸಂಸದ ಅನಂತ ಕುಮಾರ ಹೆಗಡೆ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಕಲ್ಲಡ್ಕ ಪ್ರಭಾಕರ್ ಭಟ್ ಅವರ ಪ್ರಕರಣದ ತನಿಖೆ ಮುಂದುವರಿದಿದೆ. ನ್ಯಾಯಾಲಯಕ್ಕೆ ದೋಷಾ ರೋಪಣಾಪಟ್ಟಿ ಸಲ್ಲಿಸಲಾಗುತ್ತಿದೆ’ ಎಂದರು.

ಶಿಲೆ ತೆಗೆದಿದ್ದಕ್ಕೆ ದಂಡ ಪಾವತಿಸಿದ್ದ ಗುತ್ತಿಗೆದಾರ

ಪ್ರಜಾವಾಣಿ ವಾರ್ತೆ

ಮೈಸೂರು: ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆಯಾಗ-ಲಿರುವ ‘ಬಾಲರಾಮ’ನ ಮೂರ್ತಿ ಕೆತ್ತಲು ಬಳಸಿದ ಕೃಷ್ಣಶಿಲೆಯನ್ನು ಒದಗಿಸಿದ್ದ ಕಲ್ಲು ಗಣಿ ಗುತ್ತಿಗೆದಾರ ಶ್ರೀನಿವಾಸ್ ನಟರಾಜು ಅವರಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ₹ 80 ಸಾವಿರ ದಂಡ ಹಾಕಿದ್ದ ಸಂಗತಿ ಹೊರಬಿದ್ದಿದೆ.

‘ತಾಲ್ಲೂಕಿನ ಹಾರೋಹಳ್ಳಿಯ ರಾಮದಾಸ್ ಅವರ ಜಮೀನಿನಲ್ಲಿದ್ದ ಕಲ್ಲನ್ನು ಹೊರ ತೆಗೆದಿದ್ದೆವು. ಮಾಲೀಕರು ಸಮತಟ್ಟು ಮಾಡಿಕೊಡುವಂತೆ ಕೇಳಿದ್ದರು. ಆಗ, ಅನಾಮಧೇಯ ವ್ಯಕ್ತಿಯೊಬ್ಬರು ನೀಡಿದ ದೂರಿನಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ಭೂ ಸಂಪತ್ತನ್ನು ಅನುಮತಿ ಇಲ್ಲದೆ ಹೊರ-ತೆಗೆದಿದ್ದೀರಿ ಎಂದು ದಂಡ ವಿಧಿಸಿದ್ದರು. ಇದೆಲ್ಲವೂ, ಬಾಲರಾಮನ ಮೂರ್ತಿಗೆ ಬೇಕಾದ ಶಿಲೆ ಕಳುಹಿಸುವುದಕ್ಕಿಂತ ಮುಂಚೆ ನಡೆದಿತ್ತು’ ಎಂದು ಶ್ರೀನಿವಾಸ್ ತಿಳಿಸಿದರು.

‘ಇಲ್ಲಿಂದ ಅಯೋಧ್ಯೆಗೆ ಶಿಲೆ ಸಾಗಿಸಲು ₹ 6 ಲಕ್ಷ ಖರ್ಚಾಗಿದೆ. ಆದರೆ, ನಮಗೆ ಸಿಕ್ಕಿರುವುದು ₹ 1.95 ಲಕ್ಷ ಮಾತ್ರ. ಅದನ್ನು ಅಯೋಧ್ಯೆಯ ರಾಮಮಂದಿರದ ಟ್ರಸ್ಟ್‌ನೊಂದಿಗೆ ಸಂಪರ್ಕ ಹೊಂದಿದ್ದ ಶ್ರೀನಾಥ್ ಎನ್ನುವವರು ನೀಡಿದ್ದಾರೆ’ ಎಂದರು.

‘ಇಲ್ಲಿಂದ ಕಳುಹಿಸಲಾದ ಶಿಲೆಯಲ್ಲಿ ಮೂರ್ತಿ ಕೆತ್ತನೆಯಾಗಿದ್ದು, ಇಡೀ ವಿಶ್ವದ ಗಮನ ಸೆಳೆದಿದೆ. ಆದರೆ, ಈ ಕಲ್ಲು ತೆಗೆದ ಬಡವನ ಜೇಬಿಗೆ ಕತ್ತರಿ ಬಿದ್ದಿರುವು-ದನ್ನು ಪ್ರತಿನಿಧಿಗಳು ಗಮನಿಸಿಲ್ಲ. ಕಲ್ಲು ಈಗ ವಿಗ್ರಹವಾಗಿ ಅದನ್ನು ಪ್ರತಿಷ್ಠಾಪಿ-ಸಲು ಕೇಂದ್ರ ಸರ್ಕಾರವೇ ಬೆಂಬಲವಾಗಿ ನಿಂತಿರುವಾಗ ಅದು ಊರ್ಜಿತ ಎನ್ನಬಹುದು. ದಂಡ ಪಾವತಿಸಿರುವುದರಿಂದ, ಕಲ್ಲು ತೆಗೆದದ್ದು ಅನಧಿಕೃತ ಎಂಬ ಕಾರಣಕ್ಕೆ ಈಗ ಮೂರ್ತಿಯನ್ನು ಜಪ್ತಿ ಮಾಡಲಾಗುವುದೇ? ಜಮೀನಿನ ಮಾಲೀಕ ರಾಮದಾಸ್ ಹಾಗೂ ಶಿಲೆ ಒದಗಿಸಿದ ಶ್ರೀನಿವಾಸ್ ಅವರಿಗೆ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಕೊಡಬೇಕು. ಮುಡಾದಿಂದ ಉಚಿತ ನಿವೇಶನ ನೀಡಬೇಕು’ ಎಂದು ಕನ್ನಡಪರ ಹೋರಾಟಗಾರ ಅರವಿಂದ ಶರ್ಮ ಒತ್ತಾಯಿಸಿದ್ದಾರೆ.

ಜೇನುತುಪ್ಪ ಅಭಿಷೇಕ

ಮದ್ದೂರು: ಅಯೋಧ್ಯೆಯ ಶ್ರೀರಾಮ ಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಪಟ್ಟಣದ ಪ್ರಸಿದ್ಧ ಹೊಳೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಜೇನುತುಪ್ಪದ ಅಭಿಷೇಕ ನಡೆಸಲಾಯಿತು.

ಫಲಪುಷ್ಪ ಪ್ರದರ್ಶನಕ್ಕೆ ಪ್ರೇಕ್ಷಕರ ದಂಡು

ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನಕ್ಕೆ 29,100 ಮಂದಿ ಶನಿವಾರ ಭೇಟಿ ನೀಡಿದ್ದರು. ₹18 ಲಕ್ಷ ಪ್ರವೇಶ ಶುಲ್ಕ ಸಂಗ್ರಹವಾಗಿತ್ತು.

ಲಾಲ್‌ಬಾಗ್‌ನ ನಾಲ್ಕು ಗೇಟ್‌ಗಳಲ್ಲಿ ಜನಸಂದಣಿ ಹೆಚ್ಚಿತ್ತು. ಗಾಜಿನ ಮನೆಯಲ್ಲಿ ಪುಷ್ಪಗಳಲ್ಲಿ ಅರಳಿದ ಅನುಭವ ಮಂಟಪವನ್ನು ನೋಡಲು ಬಂದಿದ್ದ ಜನ ಸರತಿ ಸಾಲಿನಲ್ಲಿ ನಿಂತಿದ್ದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯ

22ರಂದು ಮುನ್ನೆಚ್ಚರಿಕೆ ವಹಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: ಅಯೋಧ್ಯೆಯಲ್ಲಿ ಜ.22ರಂದು ನಡೆಯುವ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ವೇಳೆ ಕರ್ನಾಟಕದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ರಾಜ್ಯ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಮುಖಂಡ ಬಿ.ಕೆ.ಹರಿಪ್ರಸಾದ್ ಅವರು ಸಾಮಾನ್ಯ ವ್ಯಕ್ತಿ ಅಲ್ಲ. ಅಂಥವರು ಅಹಿತಕರ ಘಟನೆಗಳು ನಡೆಯಬಹುದು ಎಂಬ ಎಚ್ಚರಿಕೆ ಕೊಟ್ಟಿದ್ದಾರೆ. ಹಾಗಾಗಿ, ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು’ ಎಂದು ಆಗ್ರಹಿಸಿದರು.

ಪೊಲೀಸರು ಹರಿಪ್ರಸಾದ್ ಅವರ ವಿಚಾರಣೆ ನಡೆಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಹರಿಪ್ರಸಾದ್ ಅವರನ್ನು ಟಾರ್ಗೆಟ್ ಮಾಡುತ್ತಿರುವುದು ರಾಜ್ಯ ಸರ್ಕಾರವೋ ಅಥವಾ ಕೇಂದ್ರವೋ ಎನ್ನುವುದು ಮುಂದಿನ ದಿನಗಳಲ್ಲಿ ತಿಳಿಯಲಿದೆ ಎಂದರು. ಕಾಂಗ್ರೆಸ್ ಗೊಂದಲ, ದ್ವಂದ್ವ ನಿಲುವಿನಲ್ಲಿದೆ. ಅಲ್ಪಸಂಖ್ಯಾತರ ತುಷ್ಟೀಕರಣ ಮತ್ತು ರಾಮಭಕ್ತರ ಬಗ್ಗೆ ತಿರಸ್ಕಾರದ ನಡವಳಿಕೆಯನ್ನು ತೋರುತ್ತಿದೆ. ಕರಸೇವಕ ಶ್ರೀಕಾಂತ ಪೂಜಾರಿಯನ್ನು ರಾಜ್ಯ ಸರ್ಕಾರ ದುರುದ್ದೇಶದಿಂದ ಬಂಧಿಸಿತ್ತು. ರಾಜ್ಯದಲ್ಲಿನ ಶಾಂತಿಯುತ ವಾತಾವರಣ ಹಾಳುಗೆಡವಲು ಈ ಬಂಧನ ನಡೆದಿತ್ತು ಎಂದು ಆರೋಪಿಸಿದರು.

ಪ್ರಾಣ ಪ್ರತಿಷ್ಠಾಪನೆ: ಪಿವಿಆರ್‌ನಲ್ಲಿ ನೇರ ವೀಕ್ಷಣೆ

ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದ ನೇರ ವೀಕ್ಷಣೆಗೆ ಪಿವಿಆರ್ ಚಿತ್ರಮಂದಿರಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಜನರು ಅಂದು ಉತ್ತರಾಭಿಮುಖವಾಗಿ ಐದು ದೀಪ ಬೆಳಗಿಸಬೇಕು ಎಂದು ವಿಜಯೇಂದ್ರ ಕೋರಿದರು.

ಜ.31ರಿಂದ ಮಾರ್ಚ್ 25ರವರೆಗೆ ರಾಜ್ಯದಿಂದ 35 ಸಾವಿರ ರಾಮಭಕ್ತರು ಅಯೋಧ್ಯೆಗೆ ಭೇಟಿ ನೀಡುವರು. ರಾಜ್ಯದ ಪ್ರಮುಖ ನಿಲ್ದಾಣಗಳಿಂದ ಸುಮಾರು 25 ರೈಲುಗಳಲ್ಲಿ ಪ್ರಯಾಣಿಸುವರು. ಅವರಿಗೆ ಊಟ, ಉಪಾಹಾರದ ವ್ಯವಸ್ಥೆ ಮಾಡಲಾಗುತ್ತಿದೆ. ಪ್ರತಿ ರಾಮಭಕ್ತರಿಗೆ ಕ್ಯೂಆರ್ ಕೋಡ್ ಹೊಂದಿರುವ ಗುರುತುಪತ್ರ ವಿತರಿಸಲಾಗುತ್ತಿದೆ. ಅಯೋಧ್ಯೆಯಲ್ಲಿ ಕನ್ನಡ ಸಹಾಯವಾಣಿ ಕೇಂದ್ರವಿದ್ದು, ಕರ್ನಾಟಕದ ಭಕ್ತರಿಗೆ ಕನ್ನಡ ಭಾಷೆಯಲ್ಲೇ ಪ್ರಕಟಣೆ ನೀಡುವ ವ್ಯವಸ್ಥೆ ಮಾಡಲಾಗಿದೆ. ವಸತಿಗಾಗಿ ವ್ಯವಸ್ಥಿತವಾದ ಜರ್ಮನ್ ಟೆಂಟ್‌ಹೌಸ್, ಸ್ನಾನಗೃಹ, ಶೌಚಾಲಯ ವ್ಯವಸ್ಥೆಗಳಿರುತ್ತವೆ ಎಂದರು.

ಈ ಅಭಿಯಾನದ ಸಂಚಾಲಕರಾಗಿ ವಿಧಾನ ಪರಿಷತ್‌ನ ಮಾಜಿ ಸದಸ್ಯ ಸಿದ್ದರಾಜು, ಸಹ-ಸಂಚಾಲಕರಾಗಿ ಜಗದೀಶ್ ಹಿರೇಮನಿ ಅವರನ್ನು ನೇಮಿಸಲಾಗಿದೆ ಎಂದು ಮಾಹಿತಿ ನೀಡಿದರು.

ತೆಂಗಿನ ಗರಿ ಬಾಳೆ, ದಿಂಡಿನಲ್ಲಿ ಅರಳಿದ ಮಂದಿರ

ಪ್ರಜಾವಾಣಿ ವಾರ್ತೆ

ತೆಂಗಿನ ಗರಿ ಹಾಗೂ ಬಾಳೆ ದಿಂಡಿನಲ್ಲಿ ಅರಳಿದ ಅಯೋಧ್ಯೆ ರಾಮಮಂದಿರ
ಪ್ರಜಾವಾಣಿ ಚಿತ್ರಗಳು/ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರಿನ ಲಾಲ್‌ಬಾಗ್ ನಲ್ಲಿ ಹಮ್ಮಿಕೊಂಡಿರುವ 215ನೇ ಫಲಪುಷ್ಪ ಪ್ರದರ್ಶನದಲ್ಲಿ ಇಕೆಬಾನ, ಪುಷ್ಪ ರಂಗೋಲಿ ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಥಾಯ್‌ಆರ್ಟ್, ಜಾನೂರು ಮತ್ತು ಬೋನ್ಸಾಯ್ ಗಿಡಗಳ ಪ್ರದರ್ಶನದ ಉದ್ಘಾಟನೆ ನಂತರ ಚಲನ ಚಿತ್ರ ನಟಿ ತಾರಾ ಅನುರಾಧ ವೀಕ್ಷಿಸಿದರು

ಬೆಂಗಳೂರು: ಜಾನೂರು ಕಲೆಯಲ್ಲಿ ತೆಂಗಿನ ಗರಿ ಹಾಗೂ ಬಾಳೆ ದಿಂಡಿನಲ್ಲಿ ಅರಳಿದ ರಾಮಮಂದಿರ, ರಾಮನ ಪ್ರತಿಕೃತಿ, ಕಪ್ಪು ಸುಂದರಿಗೆ ತೊಡಿಸಿದ್ದ ತೆಂಗಿನ ಉಡುಗೆ, ತರಕಾರಿಗಳಿಂದ ಮಾಡಿದ ವಿಶೇಷ ಕೆತ್ತನೆ ನೋಡುಗರ ಮನಸೂರೆಗೊಂಡವು.

ಲಾಲ್‌ಬಾಗ್‌ನ ತೋಟಗಾರಿಕೆ ಮಾಹಿತಿ ಕೇಂದ್ರದಲ್ಲಿ ಫಲಪುಷ್ಪ ಪ್ರದರ್ಶನದ ಅಂಗವಾಗಿ ಆಯೋಜಿಸಿರುವ ವಿಶೇಷ ಪ್ರದರ್ಶನದಲ್ಲಿ, ಇಕೆಬಾನ ಹೂಗಳ ಪ್ರದರ್ಶನವೂ ಚಿತ್ತಾಕರ್ಷಕವಾಗಿತ್ತು. ಇವುಗಳೊಂದಿಗೆ ಫೋಟೊ ತೆಗೆಸಿಕೊಳ್ಳಲು ಪೈಪೋಟಿ ನಡೆಸುತ್ತಿದ್ದರು.

ವೈವಿಧ್ಯಮಯ ಹೂಗಳಿಂದ ಬಿಡಿಸಿದ ಭಾರತದ ಭೂಪಟ, ಟೊಮೆಟೊ, ಕುಂಬಳಕಾಯಿ ಸೇರಿದಂತೆ ವಿವಿಧ ತರಕಾರಿಗಳಲ್ಲಿ ವಿಶೇಷ ಕೆತ್ತನೆ ನೋಡುಗರನ್ನು ಸೆಳೆಯಿತು.

ಐದು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. ಜಾನೂರು ಕಲೆಯಲ್ಲಿ 26, ಹೂವಿನ ರಂಗೋಲಿ ಸ್ಪರ್ಧೆಯಲ್ಲಿ 15, ಇಕೆಬಾನದಲ್ಲಿ 12, ಥಾಯ್ ಆರ್ಟ್‌ನಲ್ಲಿ 16 ಮತ್ತು ತರಕಾರಿ ಕೆತ್ತನೆ ಸ್ಪರ್ಧೆಯಲ್ಲಿ 23 ಮಹಿಳೆಯರು ಭಾಗವಹಿಸಿದ್ದರು.

ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದ ನಟಿ ತಾರಾ ಅನುರಾಧಾ, ‘ತೆಂಗಿನ ಗರಿ, ತರಕಾರಿ ಹಾಗೂ ಪುಷ್ಪಗಳನ್ನು ಬಳಸಿಕೊಂಡು ಸುಂದರವಾದ ಕಲಾಕೃತಿಗಳನ್ನು ರಚಿಸಿರುವ ಎಲ್ಲರೂ ಅಭಿನಂದನಾರ್ಹರು. ಬಸವಣ್ಣ ಹಾಗೂ ವಚನ ಸಾಹಿತ್ಯ ಆಧಾರಿತ ಫಲಪುಷ್ಪ ಪ್ರದರ್ಶನ ಆಯೋಜಿಸುವ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಲಾಗಿದೆ’ ಎಂದು ತಿಳಿಸಿದರು.

‘ಅಯೋಧ್ಯೆಯಲ್ಲಿ ರಾಮ ಮಂದಿರದ ಉದ್ಘಾಟನೆಯಾಗಲಿದ್ದು, ಭಾರತೀಯರ ಕನಸು ನನಸಾಗಲಿದೆ. ಸಾವಿರಾರು ಹಿರಿಯರ ಶ್ರಮಕ್ಕೆ ಫಲ ಸಿಕ್ಕಂತಾಗಿದೆ. ಅದಕ್ಕೆ ಪೂರಕವಾಗಿ ಜಾನೂರು ಕಲೆಯಲ್ಲಿ ರಾಮನಿಗೆ ಸಂಬಂಧಿಸಿದ ಕಲಾಕೃತಿಗಳನ್ನು ರಚಿಸಿರುವುದು ಶ್ಲಾಘನೀಯ’ ಎಂದರು.

ಭಾನುವಾರ, ಜನವರಿ 21, 2024 | ಬೆಂಗಳೂರು | ₹ 7.00 | ಸಂಪುಟ 77| ಸಂಚಿಕೆ 21 | ಪುಟ 24
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹಳ್ಳಿ ಹಳ್ಳಿಗಳಲ್ಲೂ ಜನಪದ ವಾಲ್ಮೀಕಿಯರು ರಾಮಾಯಣವನ್ನು ಸಮಕಾಲೀನಗೊಳಿಸಿ ಪ್ರಸ್ತುತಪಡಿಸುತ್ತಿದ್ದಾರೆ



ನಟಿ ರಶ್ಮಿಕಾ ಡೀಪ್‌ಫೇಕ್ ವಿಡಿಯೊ: ಆರೋಪಿ ಸೆರೆ 10
ಆರ್. ಅಶೋಕ ನೇತೃತ್ವದಲ್ಲಿ ಎಸ್ಪಿ ಕಚೇರಿಗೆ ಮುತ್ತಿಗೆ
ಬಿಜೆಪಿ ಟಿಕೆಟ್‌ಗೆ ಮೂವರ ಕಸರತ್ತು 8
ಅತ್ಯಾಚಾರ: ಎಸ್‌ಐಟಿ ತನಿಖೆಗೆ ಆಗ್ರಹ 8

ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಕ್ಷಣಗಣನೆ

ಅಯೋಧ್ಯೆ: ರಾಮ ಮಂದಿರದಲ್ಲಿ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಗೆ ಕ್ಷಣಗಣನೆ ಶುರುವಾಗಿದ್ದು, ಇಡೀ ಅಯೋಧ್ಯೆಯನ್ನು 'ಧಾರ್ಮಿಕ ಉತ್ಸಾಹ' ಆವರಿಸಿಕೊಂಡಿದೆ. ದೇಶದ ವಿವಿಧ ಭಾಗಗಳಲ್ಲೂ ಸಡಗರ ಮನೆಮಾಡಿದೆ. ಪ್ರಾಣ ಪ್ರತಿಷ್ಠಾಪನಾ ಸಮಾರಂಭ ಸೋಮವಾರ (ಜನವರಿ 22) ನಡೆಯಲಿದೆ. 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಡೈನಾಮಿಕ್ ಗ್ರೌಂಡ್ ವಾಟರ್ ರಿಸೋರ್ಸಸ್ ಆಫ್ ಇಂಡಿಯಾ 2023 ವರದಿಯಲ್ಲಿ ಕಳವಳ

ಮತ್ತಷ್ಟು ಆಳದತ್ತ ಅಂತರ್ಜಲ

• ಮಂಜುನಾಥ್ ಹೆಬ್ಬಾರ್

ಒಳನೋಟ

ನವದೆಹಲಿ: 'ಈಗಾಗಲೇ ಸಾವಿರ ಅಡಿ ಕೊರೆಸಿದ್ದೇನೆ. ಆದರೂ ನೀರು ಬಂದಿಲ್ಲ. ಇನ್ನೂ ಐನೂರು ಅಡಿ ಕೊರೆಸಿದರೂ ನೀರು ಸಿಗುತ್ತದೆ ಎಂಬ ಭರವಸೆ ಇಲ್ಲ. ಇನ್ನೂ ಆಳಕ್ಕೆ ಹೋದರೆ ಗಡಸು ನೀರು ಬರುತ್ತದೆ ಎನ್ನುತ್ತಿದ್ದಾರೆ. ನಾನೊಬ್ಬನೇ ಅಲ್ಲ, ನನ್ನಂತಯೇ ಹಲವರು ಸಾವಿರಾರು ಅಡಿ ಕೊಳವೆಬಾವಿ ಕೊರೆಸಿ ಕೈಸುಟ್ಟುಕೊಂಡಿದ್ದಾರೆ' ಎಂದು ಗುಡಿಬಂಡೆ ತಾಲ್ಲೂಕು ಚೌಟತಿಮ್ಮನಹಳ್ಳಿ ಗ್ರಾಮದ ರೈತ ಸಿ.ಆರ್.ನಾರಾಯಣಸ್ವಾಮಿ ಬೇಸರದಿಂದಲೇ ಹೇಳಿದರು.

ಅಂತರ್ಜಲ ಅತಿ ಬಳಕೆ	
ಜಿಲ್ಲೆ	ಶೇ
ಕೋಲಾರ	172
ಬೆಂಗಳೂರು ಗ್ರಾ.	154
ಚಿಕ್ಕಬಳ್ಳಾಪುರ	153
ಬೆಂಗಳೂರು ನಗರ	150
ಚಿತ್ರದುರ್ಗ	132
ಚಾಮರಾಜನಗರ	96.53
ರಾಮನಗರ	95.77
ತುಮಕೂರು	91.77
ದಾವಣಗೆರೆ	88.91
ಬಾಗಲಕೋಟೆ	88.71

'ನಾವು ಚಿಕ್ಕವರಿದ್ದಾಗ ಸ್ವಲ್ಪ ಅಗೆದರೂ ನೆಲದಲ್ಲಿ ನೀರು ಬರುತ್ತಿತ್ತು. ಎಂತಹ ಬೇಸಿಗೆಯಲ್ಲೂ ಕುಡಿಯುವ ನೀರಿಗೆ ತೊಂದರೆಯಾಗುತ್ತಿರಲಿಲ್ಲ. ಈಗ ನೋಡಿ, ಸಾವಿರ ಅಡಿ ಕೊರೆದರೂ ಮಣ್ಣಿನ ಧೂಳು ಹಾರುತ್ತಿದೆ. ನೀರಿನ ಪಸೆ ಕಾಣುತ್ತಿಲ್ಲ. ಭೂಮ್ತಾಯಿ ಕರುಣೆ ತೋರುತ್ತಿಲ್ಲ' ಎಂದು ಕೊಳವೆಬಾವಿ ಸುತ್ತ ಬಿದ್ದಿದ್ದ ಬಿಳಿ ಪುಡಿ ತೋರಿಸುತ್ತ ಮಾತು ಮುಂದುವರೆಸಿದರು.

'ನಮ್ಮ ತಾತ, ಮುತ್ತಾತಂದಿರು ಕಟ್ಟಿಸಿದ್ದ ಕೆರೆ, ಕಟ್ಟೆಗಳನ್ನು ನಾವು ಉಳಿಸಿಕೊಳ್ಳಲಿಲ್ಲ. ಕಾಡುಗಳನ್ನು ಕಾಪಾಡಿಕೊಳ್ಳಲಿಲ್ಲ. ಅವನ್ನು ಚೆನ್ನಾಗಿಟ್ಟುಕೊಂಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದಾಗ ಮುಖದಲ್ಲಿ ವಿಷಾದವಿತ್ತು. ರಾಜ್ಯದ ಉಳಿದೆಡೆಯ ಕತೆ ಇದಕ್ಕಿಂತ ಭಿನ್ನವಾಗಿಲ್ಲ.

ಕರ್ನಾಟಕದಲ್ಲಿ 2022ಕ್ಕೆ ಹೋಲಿಸಿದರೆ 2023ರಲ್ಲಿ ಅಂತರ್ಜಲ ಮಟ್ಟ ಮತ್ತಷ್ಟು ಕಡಿಮೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಪರಿಸ್ಥಿತಿ ತುಂಬಾ ಅಪಾಯಕಾರಿ ಮಟ್ಟ ತಲುಪಿದೆ ಎಂದು ಡಿಸೆಂಬರ್‌ನಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯ ಬಿಡುಗಡೆ ಮಾಡಿದ ವರದಿ ಹೇಳುತ್ತವೆ. 'ಡೈನಾಮಿಕ್ ಗ್ರೌಂಡ್ ವಾಟರ್ ರಿಸೋರ್ಸಸ್ ಆಫ್ ಇಂಡಿಯಾ-2023' ವರದಿ ರಾಜ್ಯದ ಅಂತರ್ಜಲ ದುಸ್ಥಿತಿ ಮೇಲೆ ಬೆಳಕು ಚೆಲ್ಲುತ್ತದೆ.

ಸಮಾಧಾನದ ವಿಷಯ ಎಂದರೆ ಹಾಸನ ಮತ್ತು ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಸುಧಾರಿಸಿದೆ. ಹೆಚ್ಚಿನ ಜಿಲ್ಲೆಗಳಲ್ಲಿ ಆಳದಿಂದ ಮತ್ತಷ್ಟು ಆಳಕ್ಕೆ ಕುಸಿಯುತ್ತ ಸಾಗಿದೆ. ಅಂತರ್ಜಲ ಅತಿ ಬಳಕೆ ಮಾಡುವ ತಾಲ್ಲೂಕುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಆದರೆ, ವ್ಯಾಪಕ ಮಳೆ ಸುರಿಯುವ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಮತ್ತಿತರ ಜಿಲ್ಲೆಗಳಲ್ಲಿ ಅಂತರ್ಜಲ ಕೊಳ್ಳೆ ವ್ಯಾಪಕವಾಗಿ ಏರಿಕೆಯಾಗಿದೆ.

ಏಳು ನದಿಗಳಿರುವ ಬೆಳಗಾವಿ ಸೇರಿದಂತೆ ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ಹಳೆ ಮೈಸೂರು ಭಾಗದಲ್ಲಿ ಅಂತರ್ಜಲ ಕುಸಿತ ಆತಂಕಕ್ಕೆ ಕಾರಣವಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗಳಲ್ಲಿ 'ಭವಿಷ್ಯದ ಬಳಕೆಗಾಗಿ ನಿವ್ವಳ ಅಂತರ್ಜಲ ಲಭ್ಯತೆ' ಶೂನ್ಯಕ್ಕೆ ಇಳಿದಿವೆ. ಈ ಜಿಲ್ಲೆಗಳು ಮರುಭೂಮಿ ರಾಜ್ಯವಾದ ರಾಜಸ್ಥಾನದ ಹಾದಿ ತುಳಿದಿವೆ.

ಭಾರತವು ತನ್ನ ಅಂತರ್ಜಲದಲ್ಲಿ ಶೇ 50ರಷ್ಟನ್ನು ಬಳಸುತ್ತಿದೆ. ಅದರಲ್ಲೂ ಶೇ 90ರಷ್ಟನ್ನು ಕೃಷಿಗೆ ಬಳಸಲಾಗುತ್ತಿದೆ. ಬೇರೆ ದೇಶದಲ್ಲಿ ಇದು ಶೇ 50ರಿಂದ 60ರಷ್ಟಿದೆ. ಆದರೆ ನಮ್ಮಲ್ಲಿ ನಿರ್ವಹಣೆ ಸರಿ ಇಲ್ಲ. 'ನೀರಿನ ಉತ್ಪಾದಕತೆ' ಬಗ್ಗೆ ಚಿಂತಿಸುತ್ತಿಲ್ಲ. ಅಂತರ್ಜಲದ ಬಳಕೆ ಮತ್ತು ಮರುಪೂರಣ ವೈಜ್ಞಾನಿಕವಾಗಿ ನಡೆಯಬೇಕು ಎನ್ನುತ್ತಾರೆ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಜಲ ಸಂಪನ್ಮೂಲ ಮತ್ತು ಪರಿಸರ ಎಂಜಿನಿಯರಿಂಗ್ ವಿಭಾಗದ ಪ್ರೊ. ಶೇಖರ್ ಮುದ್ದು. 6ನೇ ಪುಟ ನೋಡಿ

ರಾಜ್ಯಪಾಲರಿಂದ ತಿಳಿವಳಿಕೆ ಕೊಡಿಸಿ: ಸಿಎಸ್‌ಗೆ ಪತ್ರ

ಕೆಪಿಎಸ್‌ಸಿ: ಅಧ್ಯಕ್ಷ, ಕಾರ್ಯದರ್ಶಿ 'ಸಂಘರ್ಷ' ತೀವ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಅಧ್ಯಕ್ಷರು ಮತ್ತು ಕೆಲವು ಸದಸ್ಯರು ಹಾಗೂ ಕಾರ್ಯದರ್ಶಿ ನಡುವಿನ 'ಸಂಘರ್ಷ' ಮತ್ತಷ್ಟು ತೀವ್ರಗೊಂಡಿದ್ದು, ಪ್ರಕರಣ ರಾಜ್ಯ ಸರ್ಕಾರದ ಅಂಗಳ ತಲುಪಿದೆ. ಅಧ್ಯಕ್ಷರು ಮತ್ತು ಸದಸ್ಯರಿಗೆ ರಾಜ್ಯಪಾಲರ ಮೂಲಕ ತಿಳಿವಳಿಕೆ ಕೊಡಿಸಬೇಕು ಎಂದು ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್‌ಗೆ ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ಎಸ್. ಲತಾ ಕುಮಾರಿ ಪತ್ರ ಬರೆದಿದ್ದಾರೆ.

'ಆಯೋಗ ಮತ್ತು ಸರ್ಕಾರಕ್ಕೆ ಮುಜುಗರ ಉಂಟಾಗದ ರೀತಿಯಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸುವಂತೆ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರಿಗೆ ಅರಿವು ಮೂಡಿಸಬೇಕು. ವಿವಿಧ ಹುದ್ದೆಗಳಿಗೆ ನಿಯಮಾನುಸಾರ ಆಯ್ಕೆ ಪೂರ್ಣಗೊಳಿಸಲು ಸೂಚನೆ ನೀಡಬೇಕು' ಎಂದೂ ಕಾರ್ಯದರ್ಶಿ ಮನವಿ ಮಾಡಿದ್ದಾರೆ' ಎಂದು ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ (ಎಚ್‌ಎಲ್‌ಸಿ) ಹುದ್ದೆ ನೇಮಕಾತಿಗೆ ಸಂಬಂಧಿಸಿದಂತೆ ಈ ಪತ್ರ ಬರೆಯಲಾಗಿದೆ. 'ಆಯೋಗದ ಸಿಬ್ಬಂದಿ ಜತೆ ಐವರು ಸದಸ್ಯರು ಅನುಚಿತವಾಗಿ ವರ್ತಿಸಿದ್ದಾರೆ. ಬಳಿಕ, ಕಚೇರಿಗೆ ಗೈರು ಹಾಜರಾಗಿರುವ ಈ ಸಿಬ್ಬಂದಿ, ವಯೋನಿವೃತ್ತಿಗೆ ಕೋರಿಕೆ ಸಲ್ಲಿಸಿದ್ದು, ಭಯದ ವಾತಾವರಣ ಉಂಟು ಮಾಡಿದೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾಗಿ ತಿಳಿದುಬಂದಿದೆ.

8ನೇ ಪುಟ ನೋಡಿ

'ಎಚ್‌ಎಲ್‌ಸಿಯಿಂದ ರಾಜೀನಾಮೆ ಪಡೆಯಲು ಕಾರಣವಾದ ₹ 12 ಲಕ್ಷ ವೆಚ್ಚ'

ಪ್ರಜಾವಾಣಿ ವಿಶೇಷ

'ಕಾನೂನು ಕೋಶದ ಮುಖ್ಯಸ್ಥರಾಗಿದ್ದ (ಎಚ್‌ಎಲ್‌ಸಿ) ಎಸ್.ಎಚ್. ಹೊಸಗೌಡರ್ ಅವರ ಅವಧಿ 2024ರ ಅ. 23ರವರೆಗೂ ಇತ್ತು. ಆದರೆ, ಕೋರ್ಟ್‌ನಲ್ಲಿರುವ ಆಯೋಗದ ಅಧ್ಯಕ್ಷರ ವೈಯಕ್ತಿಕ ಪ್ರಕರಣದಲ್ಲಿ ವಕೀಲರಿಗೆ ಪಾವತಿಸಬೇಕಿದ್ದ ಸಂಭಾವನೆ ₹ 12 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ಆಯೋಗದಿಂದ ಪಾವತಿಸಬೇಕೆಂದು ಅಭಿಪ್ರಾಯ ನೀಡಲು ನಿರಾಕರಿಸಿದ್ದ ಹೊಸಗೌಡರ್, 'ನ್ಯಾಯಾಲಯದ ಪ್ರಕರಣ ವೈಯಕ್ತಿಕವಾಗಿದ್ದು, ಸ್ವಂತ ವೆಚ್ಚದಿಂದ ಭರಿಸಬೇಕು' ಎಂದು ಅಭಿಪ್ರಾಯ ನೀಡಿದ್ದರು. ಈ ಕಾರಣಕ್ಕೆ ಹೊಸಗೌಡರ್ ಮೇಲೆ ಒತ್ತಡ ಹೇರಿ ಬಲವಂತವಾಗಿ ರಾಜೀನಾಮೆ ಪತ್ರ ಪಡೆಯಲಾಗಿದೆ. ಅಲ್ಲದೆ, ಹೊಸಗೌಡರ್ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಕಾರ್ಯದರ್ಶಿಗೆ ಸೂಚಿಸಿ, ಈ ವಿಷಯವನ್ನು ಆಯೋಗದ ಸಭೆಗೆ ಮಂಡಿಸಲು ಸೂಚಿಸಲಾಗಿದೆ. ಕಾನೂನು ಕೋಶದ ಮುಖ್ಯಸ್ಥರು ಯಾವುದೇ ಒತ್ತಡಕ್ಕೆ ಮಣಿಯದೆ, ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅಧ್ಯಕ್ಷರು ಮತ್ತು ಸದಸ್ಯರು ಅವಕಾಶ ನೀಡದಿರುವುದು ಈ ಹಿಂದೆಯೂ ನಡೆದಿದೆ' ಎಂಬುದಾಗಿ ಪತ್ರದಲ್ಲಿ ಕಾರ್ಯದರ್ಶಿ ವಿವರಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

ಭಾರತ–ಮ್ಯಾನ್ಮಾರ್ ಗಡಿಗೆ ಬೇಲಿ: ಶಾ

ಪ್ರಜಾವಾಣಿ ವಾರ್ತೆ

ಗುವಾಹಟಿ: ಭಾರತ– ಮ್ಯಾನ್ಮಾರ್ ಗಡಿಯಲ್ಲಿ ಬೇಲಿ ನಿರ್ಮಿಸಲು ಹಾಗೂ ಜನರ ಮುಕ್ತ ಸಂಚಾರ ಒಪ್ಪಂದ ರದ್ದುಗೊಳಿಸಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದರು.

ಅಸ್ಸಾಂ ಪೊಲೀಸ್ ಕಮಾಂಡೊಗಳ ಪ್ರಥಮ ಬ್ಯಾಚ್‌ನ ನಿರ್ಗಮನ ಪಥ ಸಂಚಲನ ಸಮಾರಂಭದಲ್ಲಿ ಮಾತನಾಡಿದ ಅವರು, 'ಮ್ಯಾನ್ಮಾರ್ ಜತೆಗಿನ ನಮ್ಮ ಗಡಿ ಮುಕ್ತವಾಗಿತ್ತು. ಆದರೆ ನರೇಂದ್ರ ಮೋದಿ ಸರ್ಕಾರವು ಭಾರತ– ಬಾಂಗ್ಲಾದೇಶ ನಡುವಣ ಗಡಿ ರೀತಿಯಲ್ಲೇ ಮ್ಯಾನ್ಮಾರ್ ಜತೆಗಿನ ಗಡಿಯಲ್ಲೂ ಬೇಲಿ ಹಾಕಲು ನಿರ್ಧರಿಸಿದೆ' ಎಂದರು.

'ಭಾರತ–ಮ್ಯಾನ್ಮಾರ್ ಗಡಿ ಸಮೀಪ ನೆಲೆಸಿರುವ ಜನರು ಪರಸ್ಪರರ ಭೂಪ್ರದೇಶದೊಳಗೆ ಸಂಚಾರಕ್ಕೆ ಅವಕಾಶ ನೀಡುವ ಮುಕ್ತ ಸಂಚಾರ ಒಪ್ಪಂದವನ್ನು (ಎಫ್‌ಎಂಆರ್) ಸರ್ಕಾರ ಕೊನೆಗೊಳಿಸಲಿದೆ' ಎಂದು ತಿಳಿಸಿದರು.

ಮ್ಯಾನ್ಮಾರ್ ಗಡಿಗೆ ಬೇಲಿ ಹಾಕಲು ಮತ್ತು ಎಫ್‌ಎಂಆರ್ ರದ್ದುಪಡಿಸಲು ಮಣಿಪುರ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರು ಕೇಂದ್ರ ಸರ್ಕಾರವನ್ನು ಹಲವು ಸಲ ಒತ್ತಾಯಿಸಿದ್ದಾರೆ. ಆದರೆ ಮಿಜೋರಾಂ ಮತ್ತು ನಾಗಾಲ್ಯಾಂಡ್ ಸರ್ಕಾರವು ಬೇಲಿ ಹಾಕುವ ನಿರ್ಧಾರಕ್ಕೆ ಈಚೆಗೆ ವಿರೋಧ ವ್ಯಕ್ತಪಡಿಸಿದ್ದವು. ಎಫ್‌ಎಂಆರ್ ಒಪ್ಪಂದ 1970 ರಿಂದಲೂ ಜಾರಿಯಲ್ಲಿದೆ. ಭಾರತವು ಮ್ಯಾನ್ಮಾರ್ ಜತೆ ಒಟ್ಟು 1,643 ಕಿ.ಮೀ ನಷ್ಟು ಗಡಿ ಹಂಚಿಕೊಂಡಿದೆ.

ಅಕ್ರಮ ಸೀಟು ಹಂಚಿಕೆ: ಕೆಇಎಗೆ ₹ 5 ಲಕ್ಷ ದಂಡ

ಬೆಂಗಳೂರು: ರೇಡಿಯೊ ಡಯಗ್ನೋಸಿಸ್ ವೈದ್ಯಕೀಯ ಸ್ನಾತಕೋತ್ತರ ಪದವಿಯ ಸೀಟ್ ಅನ್ನು ಬ್ಲಾಕ್ ಮಾಡುವ ಮೂಲಕ ಕಾನೂನು ಬಾಹಿರವಾಗಿ ಸೀಟು ಹಂಚಿಕೆ ಮಾಡಿದ ಆರೋಪದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಹೈಕೋರ್ಟ್ ₹ 5 ಲಕ್ಷ ದಂಡ ವಿಧಿಸಿದೆ.

ಈ ಸಂಬಂಧ ಸೀಟು ವಂಚಿತರಾದ ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಡಾ.ಸಿ.ಕೆ.ರಜನಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಮತ್ತು ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ಅರ್ಜಿದಾರರಿಗೆ ರೇಡಿಯೊ ಡಯಗ್ನೋಸಿಸ್ ಸೀಟನ್ನು ಮರು ಹಂಚಿಕೆ ಮಾಡಬೇಕು' ಎಂದೂ ನಿರ್ದೇಶಿಸಿದೆ.

'ದಂಡದ ಮೊತ್ತದಲ್ಲಿ ₹ 2.5 ಲಕ್ಷ ಮೊತ್ತವನ್ನು ಡಾ.ಸಿ.ಕೆ.ರಜನಿ ಅವರಿಗೆ ಪಾವತಿಸಬೇಕು. ಉಳಿದ ₹ 2.5 ಲಕ್ಷ ಮೊತ್ತವನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಹೆಸರಿನಲ್ಲಿ ಠೇವಣಿ ಇರಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ವೈದ್ಯಕೀಯ ಸ್ನಾತಕೋತ್ತರ ವಿಭಾಗದ ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರಕ್ಕೆ ಅರ್ಜಿದಾರರು ಪಾವತಿಸಿರುವ ಶುಲ್ಕವನ್ನು ಕಲಬುರಗಿಯ ಎಂ.ಆರ್. ವೈದ್ಯಕೀಯ ಕಾಲೇಜಿನ ರೇಡಿಯೊ ಡಯೋಗ್ನಾಸಿಸ್ ಸೀಟಿಗೆ ಸರಿ ಹೊಂದಿಸಬೇಕು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

'2023ರ ಸೆಪ್ಟೆಂಬರ್ 19ರಲ್ಲಿ ನಡೆದ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ನನಗೆ ಅನ್ಯಾಯವಾಗಿದೆ' ಎಂದು ಆಕ್ಷೇಪಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

भारतीय गुणवत्ता परिषद्
QUALITY COUNCIL® OF INDIA
QCI
Creating an Ecosystem for Quality

Building India's Quality Legacy for a VIKSIT BHARAT

QCI Celebrates its 27th Foundation Day

#27YearsofQuality

January 21, 2024

Established as an Apex Body for Accreditation and Quality Promotion through a Cabinet decision of Govt. of India, QCI is an independent and autonomous body that plays a pivotal role at the national level in propagating, adoption and adherence to quality standards in all important spheres of activities. The Department for Promotion of Industry and Internal Trade (DPIIT), Ministry of Commerce & Industry, is the Nodal Point for QCI. India's national accreditation system under the Quality Council of India (QCI) has been ranked 5th in the Global Quality Infrastructure Index (GQII), amongst 185 economies

QCI IN YOUR LIFE

NABL – National Accreditation Board for Testing & Calibration Laboratories
Becoming the Best Ever in Laboratory Accreditation
8,700+
NABL Accredited Testing, Calibration & Medical labs , Proficiency Testing Providers & Reference Material Producers contribute in developing Quality Infrastructure for Make in India, Exports, etc

NABH – National Accreditation Board for Hospitals & Healthcare Providers
Elevating Quality in Healthcare Across Nation
20,000+
Accreditation, Certification & Empanelments of National & International Hospitals, SHCOs, Ayush Hospitals, Dental, Eye Care, Allopathic Clinics, Care Homes, Digital Health Programme and others

NABCB – National Accreditation Board for Certification Bodies
Setting the Standard for Certification Excellence
1,00,000+
inspection,
25,000+
Management system certifications
by 250+ Accredited Bodies

NABET – National Accreditation Board for Education and Training
Striving for Quality in Education, Environment & MSME
8,000+
Assessed and Accredited Schools,
30,000+
Capacity Building of Teachers, Principals and Educationists

NBQP – National Board for Quality Promotion
Harnessing the Power of Collaboration
1,50,000+
stakeholders connectd through initiatives like Quality Bharat @100 Mission, Quality Setu, Events, Education Quality Promotion, State connect, ISO Standards implementation

PADD – Project Analysis and Documentation Division
Last-Mile Access, First-Class Quality
40,000+
Audits under various schemes,
6500+ Personnel & 5500+ Products certified

PPID – Project Planning & Implementation Division
Transforming Ideas into Action
300+
projects executed successfully at National and State level

ZED – Zero Defect • Zero Effect
Catalysing the Competitiveness of Indian Industry
1,00,000+
Certified MSMEs

TCB – Training and Capacity Building
Expanding Expertise and Building Futures through Excellence
300+
training sessions benefiting
17,500+
professionals

POLICY UNIT
Shaping Policies, Enabling Excellence
Policy & strategy arm of QCI building transformative systems, schemes & services such as Made in India, ONDC, Market Surveillance, etc. & augmenting capacity for quality policies

Empowering Initiatives:

- **ONDC** – Open Network for Digital Commerce: Democratising the Nation's e-commerce ecosystem
- **SARPANCH SAMVAAD** – Quality Council of India: Transforming Villages into Quality Villages
- **गुणवत्ता गुरुकुल** – GUNVATTA GURUKUL: Building a cadre of young professionals to fulfil the vision of a Viksit Bharat
- **गुणवत्ता संकल्प**: State initiatives to focus on critical quality interventions across the sectors
- **Nashik Spearheads Quality City Mission**: Ensuring Quality of Life for India's 140 Crore citizens, city by city
- **QUALITY BHARAT – VIKSIT BHARAT**: Spreading the message of Quality in all facets of life to make Bharat Viksit

Some of Our Flagship Projects

Swachh Bharat Mission (SBM)
World's largest cleanliness survey covering >4,000 ULBs. QCI involved in Swachh Survekshan since 2016

Atal Bhujal Yojana
Improving groundwater management covering 222 blocks in 7 water-stressed states

Quality Assessment for Coal
Ecosystem Transformation, scrutinizing quality of coal over 500 MMT since 2017

Public Grievances and Administrative Reforms
Assisting in the universalization of CPGRAMS 7.0 in all ministries and departments of the Government of India

PM SVANidhi
Socio-Economic profiling of street vendors. 24 Lakh + vendors profiled in 3500+ ULBs

GeM Vendor Assessment
Promoting quality products on the GeM Portal by seller validation. 9,000+ OEM assessments completed

Transformation of the Food Corporation of India (FCI)
End-to-end technology for traceability of grains in Bharat's food quality supply chain affecting ~850 million beneficiaries in over 40,000 Procurement Centres

Collaboration with Ministry of Culture (MoC)
Broadening access to India's cultural heritage for everyone in the country and across the globe

Assessment of 55,000 students at 128 schools run by Pimpri Chinchwad Municipal Corporation (PCMC)
Improving academic performance across levels

Mystery Shopping for Product Quality
Analysing quality of toys in domestic market through mystery shopping & testing leading to the QCO on toys & subsequent improvement of toys sold in India

Scan to visit Website

Quality Council of India, Institution of Engineers Building, IInd Floor, 2 - Bahadur Shah Zafar Marg, New Delhi - 110002, India.

@QualityCouncilofIndia | @QualityCouncil | qualitycouncilofindia | quality-council-of-india-qci- | info@qcin.org

or www.qcin.org

ಶರಣರ ಸ್ಥಳಗಳನ್ನು ಅಭಿವೃದ್ಧಿಪಡಿಸಿ: ಮನು ಬಳಿಗಾರ್

ಬೆಂಗಳೂರು: 'ಕೂಡಲ ಸಂಗಮ, ಬಸವಕಲ್ಯಾಣ ಸೇರಿ ಬಸವಾದಿ ಶರಣರ ಸ್ಥಳಗಳನ್ನು ಅಂತರರಾಷ್ಟ್ರೀಯ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಬೇಕು. ಈ ಸಂಬಂಧ ಮುಂಬರುವ ಬಜೆಟ್‌ನಲ್ಲಿ ಕನಿಷ್ಠ ಒಂದು ಸಾವಿರ ಕೋಟಿ ರೂಪಾಯಿ ಮೀಸಲಿಡಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಮನು ಬಳಿಗಾರ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಬಸವಣ್ಣ ಅವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿರುವುದನ್ನು ಸ್ವಾಗತಿಸಿರುವ ಅವರು, 'ಈ ಘೋಷಣೆಯಿಂದ ನಾಡಿಗೆ ಹೊಸ ಚೈತನ್ಯ ಸಿಕ್ಕಂತಾಗಿದೆ. ವಿವಿಧ ಶರಣರ ತತ್ವ ಹಾಗೂ ಸಾಹಿತ್ಯವನ್ನು ಪ್ರಸಾರ ಮಾಡುವ ಕೆಲಸವಾಗಬೇಕು. ಶಿವಶರಣರ ಸ್ಥಳಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೆಚ್ಚಿನ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಟ್ಟು, ಕಾರ್ಯಕ್ರಮಗಳನ್ನು ಘೋಷಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಬಿಬಿಎಂಪಿ, ಜಲಮಂಡಳಿ ಅಧಿಕಾರಿಗಳಿಗೆ ಎಸ್‌.ಟಿ.ಸೋಮಶೇಖರ್ ತಾಕೀತು

'ಕೆರೆ ಮಧ್ಯೆ ಒಳಚರಂಡಿ ಬೇಡ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಅವೈಜ್ಞಾನಿಕ ಕಾಮಗಾರಿಯಿಂದ ಗಾಂಧಿನಗರ ಕೆರೆ ಅಭಿವೃದ್ಧಿ ಸಾಕಾರಗೊಂಡಿಲ್ಲ. ಕೆರೆಗೆ ಕಲ್ಮಶ ಹರಿಯದಂತೆ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕು' ಎಂದು ಶಾಸಕ ಎಸ್‌.ಟಿ.ಸೋಮಶೇಖರ್ ತಾಕೀತು ಮಾಡಿದರು.

ಕೆರೆ ಅಂಚಿನಲ್ಲೇ ಒಳಚರಂಡಿ ಪೈಪ್ ಅಳವಡಿಸಲಾಗುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಶಾಸಕರು ಶನಿವಾರ ಪರಿಶೀಲನೆ ನಡೆಸಿದರು.

ವಿಶ್ವೇಶ್ವರಯ್ಯ ಬಡಾವಣೆ, ಜ್ಞಾನ ಭಾರತಿ ಬಡಾವಣೆ ಸೇರಿದಂತೆ ಗಾಂಧಿನಗರ ಕೆರೆ ಸುತ್ತಮುತ್ತಲಿನ ಜನ ವಸತಿ ಪ್ರದೇಶಗಳ ಕೊಳಚೆ ನೀರು ಗಾಂಧಿನಗರ ಕೆರೆಗೆ ಸೇರಿ ಮಲೀನಗೊಂಡಿದೆ. ಇದರೊಂದಿಗೆ ಪ್ರಸ್ತುತ ನಡೆಯುತ್ತಿರುವ ಕೆರೆ ಅಭಿವೃದ್ಧಿ ಕಾಮಗಾರಿಯೂ ಅವೈಜ್ಞಾನಿಕವಾಗಿದೆ. ಕೆರೆಯಲ್ಲಿ ಒಳಚರಂಡಿ ಮಾರ್ಗ ಅಳವಡಿಸಬಾರದು ಎಂದು ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

ಮಳೆಗಾಲ ಪ್ರಾರಂಭಕ್ಕೆ ಮುನ್ನವೇ ಕೆರೆ ಅಭಿವೃದ್ಧಿ ಕಾಮಗಾರಿ ಪೂರೈಸಬೇಕು. ಹೆಚ್ಚುವರಿ ಅನುದಾನದ ಅಗತ್ಯಬಿದ್ದರೆ, ಸರ್ಕಾರದಿಂದ ಶೀಘ್ರ ಬಿಡುಗಡೆ ಮಾಡಿಸುವುದಾಗಿ ಭರವಸೆ ನೀಡಿದರು.

'ಅಭಿವೃದ್ಧಿ ಕಾರ್ಯ ಆಮೆಗತಿಯಲ್ಲಿ ನಡೆಯುತ್ತಿದೆ. ಕೊಳಚೆ ನೀರು ಕೆರೆಗೆ ಹರಿಯುತ್ತಿರುವುದರಿಂದ ಸುತ್ತಮುತ್ತಲಿನ ನಿವಾಸಿಗಳು ವಾಸ ಮಾಡಲು ಸಾಧ್ಯವಿಲ್ಲದಂತಾಗಿದೆ' ಎಂದು ಕೆರೆ ಮತ್ತು ಭೂ ಸಂರಕ್ಷಣೆ ಸಮಿತಿ ಅಧ್ಯಕ್ಷ ಎನ್‌.ಕದರಪ್ಪ ದೂರಿದರು.

ಬಿಬಿಎಂಪಿ ಕೆರೆ ವಿಭಾಗದ ಎಂಜಿನಿಯರ್ ಗೀತಾ, ಅಧಿಕಾರಿಗಳಾದ ಮಹೇಶ್, ನವನೀತ್, ದೀಪಕ್ ಸ್ಥಳೀಯ ಮುಖಂಡರಾದ ಎಂ.ಹರೀಶ್ ಕುಮಾರ್, ಮಹೇಂದ್ರ ಕಿರಣ್, ಎಚ್ ಡಿ ಜಗದೀಶ್, ರಾಮಚಂದ್ರಪ್ಪ, ಜಗದೀಶ್ ಗುರಿಕಾರ್, ಸಬೀಹ ಅಂಜು ಉಪಸ್ಥಿತರಿದ್ದರು.

ಶಾಸಕ ಎಸ್‌.ಟಿ. ಸೋಮಶೇಖರ್ ಅವರು ಗಾಂಧಿನಗರ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದರು

ಮುಖ್ಯಾಂಶಗಳು

- ಶಾಸಕರಿಂದ ಸ್ಥಳ ಪರಿಶೀಲನೆ
- ಕೆರೆಗೆ ಕಲ್ಮಶ ಹರಿಯದಂತೆ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕೆಂದು ಸೂಚನೆ

MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾಗದ ವಿಭಾಗ, ಎಂ.ಎಸ್‌.ಐ.ಎಲ್. ಹೌಸ್, 36, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು – 560 052
ದೂರವಾಣಿ: 080-22264023-25

ಸಂ: ಎಂಎಸ್ಐಎಲ್/ಪಿಡಿ/ 505(2)/2023-24 ದಿನಾಂಕ: 20.01.2024

ಆಸಕ್ತಿ ವ್ಯಕ್ತಪಡಿಸುವಿಕೆ (EoI)

ಉದ್ಯಮಿಯಾಗುವ ಸುವರ್ಣಾವಕಾಶ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್ಐಎಲ್), ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಾಗಿದ್ದು ಕಳೆದ ಐದು ದಶಕಗಳಿಂದ ವಿದ್ಯಾ ಮತ್ತು ಲೇಖಕ್ ಬ್ರಾಂಡ್ ನೋಟ್ ಬುಕ್‌ಗಳು ಮತ್ತು ಲೇಖನ ಸಾಮಗ್ರಿಗಳನ್ನು ಮಾರ್ಕೆಟಿಂಗ್ ಮಾಡುವಲ್ಲಿ ತೊಡಗಿಸಿಕೊಂಡಿದೆ. ಈ ಬ್ರಾಂಡ್‌ಗಳು ಗುಣಮಟ್ಟ ಮತ್ತು ಸ್ಪರ್ಧಾತ್ಮಕ ಬೆಲೆಗೆ ಮಾರುಕಟ್ಟೆಯಲ್ಲಿ ಹೆಚ್ಚು ಹೆಸರುವಾಸಿಯಾಗಿವೆ.

ವಿದ್ಯಾ ಮತ್ತು ಲೇಖಕ್ **ಬ್ರಾಂಡ್‌ಗಳ ಅಡಿಯಲ್ಲಿ ಸಂಪೂರ್ಣ ಶ್ರೇಣಿಯ ಉತ್ಪನ್ನಗಳನ್ನು ಮಾರಾಟ ಮಾಡಲು ಕರ್ನಾಟಕದಾದ್ಯಂತ ವಿತರಕರು ಮತ್ತು ಫ್ರಾಂಚೈಸಿಗಳನ್ನು ನೇಮಿಸಲು ಎಂಎಸ್ಐಎಲ್ ಉದ್ದೇಶಿಸಿದೆ.** ವಿವರವಾದ ನಿಯಮ ಮತ್ತು ನಿಬಂಧನೆಗಳನ್ನು ಇಓಐ ದಸ್ತಾವೇಜುಗಳಲ್ಲಿ ನೀಡಿದ್ದು ಅವುಗಳನ್ನು ಇ- ಪೋರ್ಟಲ್ **https://kppp.karnataka.gov.in** ಅಥವಾ ವೆಬ್‌ಸೈಟ್ **www.msilonline.com** ನಿಂದ ಪಡೆದುಕೊಳ್ಳಬಹುದು. ಆಸಕ್ತ ವ್ಯಕ್ತಿಗಳು ತಮಗಿರುವ ಅನುಭವ ಮತ್ತು ಅರ್ಹತೆ ಕುರಿತಂತೆ ಸಂಪೂರ್ಣ ವಿವರಗಳೊಂದಿಗೆ ತಮ್ಮ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ದಿನಾಂಕ **05.02.2024** ರಂದು ಸಂಜೆ 5.30 ಗಂಟೆಯವರೆಗೆ ಅಥವಾ ಅದಕ್ಕೂ ಮೊದಲು ಇ-ಪೋರ್ಟಲ್ **https://kppp.karnataka.gov.in** ಮೂಲಕ ಅಥವಾ ಇ-ಮೇಲ್ **qcpaper@msilonline.com**, **msil.paper@msilonline.com** ಮೂಲಕ ಅಥವಾ ಮೇಲ್ಕಂಡ ವಿಳಾಸಕ್ಕೆ ಖುದ್ದಾಗಿ ಹಾಜರಾಗಿ ಸಲ್ಲಿಸಬಹುದು.

ಯಾವುದೇ ಸ್ಪಷ್ಟೀಕರಣಗಳಿಗೆ, ಎಂಎಸ್ಐಎಲ್ ಕಾಗದ ವಿಭಾಗವನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಿ ಪಡೆಯಬಹುದು **(9844201135 / 8050543530)**.

ಸಹಿ/- ಪ್ರಧಾನ ವ್ಯವಸ್ಥಾಪಕರು (ಕಾಗದ ವಿಭಾಗ)

ಥೈರಾಯ್ಡ್ ತಪಾಸಣೆ ವೈದ್ಯಕೀಯ ಶಿಬಿರ ನಾಳೆಯಿಂದ

ಬೆಂಗಳೂರು: ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಆಸ್ಪತ್ರೆಯು ಥೈರಾಯ್ಡ್ ತಪಾಸಣೆಗೆ ಸಂಬಂಧಿಸಿದಂತೆ ಇದೇ 22ರಿಂದ 25ರವರೆಗೆ ವೈದ್ಯಕೀಯ ಶಿಬಿರವನ್ನು ಹಮ್ಮಿಕೊಂಡಿದೆ.

ಆಸ್ಪತ್ರೆಯ ಅಂತಃಸ್ರಾವ ವಿಜ್ಞಾನ (ಎಂಡೋಕ್ರಿನೊಲೊಜಿ) ವಿಭಾಗವು ಸೂಪರ್ ಸ್ಪೆಷಾಲಿಟಿ ಬ್ಲಾಕ್‌ನಲ್ಲಿ ಬೆಳಿಗ್ಗೆ 9ರಿಂದ ಮಧ್ಯಾಹ್ನ 12.30ರವರೆಗೆ ನಾಲ್ಕು ದಿನಗಳೂ ಶಿಬಿರ ನಡೆಸಲಿದೆ. ಮೊದಲು ನೋಂದಾಯಿಸಿದ 300 ಮಂದಿಗೆ ಉಚಿತ ಸಮಾಲೋಚನೆ ಒದಗಿಸಲಾಗುತ್ತದೆ. ₹ 2 ಸಾವಿರ ವೆಚ್ಚದ ಸಮಗ್ರ ಥೈರಾಯ್ಡ್ ಪರೀಕ್ಷೆಗಳನ್ನು ಕೇವಲ ₹ 199ಕ್ಕೆ ಮಾಡಲಾಗುತ್ತದೆ. ನೋಂದಾಯಿತರಿಗೆ ಶಿಬಿರದ ನಂತರ ಇನ್ನೊಮ್ಮೆ ವೈದ್ಯರ ಭೇಟಿಯ ಅವಕಾಶವನ್ನೂ ನೀಡಲಾಗುತ್ತದೆ ಎಂದು ಆಸ್ಪತ್ರೆ ತಿಳಿಸಿದೆ.

ಸಂಪರ್ಕಕ್ಕೆ: 6361873036.

ವೀಣಾ ವಾದನ ಸಂಗೀತ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು ಕಿರಿಯರ ಹಾಗೂ ಹಿರಿಯರ ವಿಭಾಗದಲ್ಲಿ ಫೆ.18ರಂದು ಕರ್ನಾಟಕ ವೀಣಾ ವಾದನ ಸಂಗೀತ ಸ್ಪರ್ಧೆ ಹಮ್ಮಿಕೊಂಡಿದೆ.

'ಕೆ. ಮೋಹನ್ ದೇವ್ ಆಳ್ವ-ಡಾ.ಎಂ.ಕೆ. ಶೈಲಜಾ ಆಳ್ವ ದತ್ತಿ' ಆಶ್ರಯದಲ್ಲಿ ಈ ಸ್ಪರ್ಧೆ ನಡೆಯಲಿದೆ. ಕಿರಿಯರ ವಿಭಾಗದಲ್ಲಿ 8ರಿಂದ 15 ವರ್ಷದವರು ಹಾಗೂ ಹಿರಿಯರ ವಿಭಾಗದಲ್ಲಿ 16ರಿಂದ 25 ವರ್ಷದವರು ಪಾಲ್ಗೊಳ್ಳಬಹುದಾಗಿದೆ.

ಆಸಕ್ತರು ಫೆ.12ರ ಸಂಜೆ 5 ಗಂಟೆಯೊಳಗೆ ಎನ್‌.ಆರ್. ಕಾಲೊನಿಯ ಮೂರನೇ ಮುಖ್ಯರಸ್ತೆಯಲ್ಲಿರುವ ಪ್ರತಿಷ್ಠಾನದ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದವರಿಗೆ ₹3 ಸಾವಿರ, ದ್ವಿತೀಯ ಬಹುಮಾನ ಪಡೆದವರಿಗೆ ₹2 ಸಾವಿರ ಹಾಗೂ ತೃತೀಯ ಬಹುಮಾನ ಪಡೆದವರಿಗೆ ₹1 ಸಾವಿರ ನಗದು ನೀಡಲಾಗುತ್ತದೆ. ವೀಣೆ ಮತ್ತು ಅದಕ್ಕೆ ಪೂರಕ ಸಲಕರಣೆಗಳನ್ನು ಸ್ಪರ್ಧಿಗಳೇ ತರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 99728 12127.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ

'ಕ್ಯಾನ್ಸರ್ ಲಸಿಕೆಗೆ ಕೇಂದ್ರಕ್ಕೆ ಮನವಿ'

ಪ್ರಜಾವಾಣಿ ವಾರ್ತೆ

ದಿನೇಶ್ ಗುಂಡೂರಾವ್

ಬೆಂಗಳೂರು: 'ಕ್ಯಾನ್ಸರ್ ನಿಯಂತ್ರಣಕ್ಕೆ ತಪಾಸಣೆ ಹಾಗೂ ಲಸಿಕೆ ಸಹಕಾರಿ. ಆದ್ದರಿಂದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ 'ಎಚ್‌ಪಿವಿ ಲಸಿಕೆ' ನೀಡಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಅಪೋಲೊ ಆಸ್ಪತ್ರೆಗಳ ಸಮೂಹವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ದೇಶದ ಪ್ರಥಮ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಗಂಥಿ ವಿಜ್ಞಾನ ಕೇಂದ್ರವನ್ನು (ಎಐ-ಡ್ರಿವನ್ ಪ್ರಿಸಿಶನ್ ಆಂಕಾಲಜಿ ಸೆಂಟರ್) ಉದ್ಘಾಟಿಸಿ ಅವರು ಮಾತನಾಡಿದರು.

'ಬದಲಾದ ಜೀವನ ವಿಧಾನ, ಪಾಶ್ಚಾತ್ಯ ಆಹಾರ ಪದ್ಧತಿ, ವಾಯುಮಾಲಿನ್ಯ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್, ಹೃದಯಾಘಾತ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಸುಲಭವಾಗಿ ಕಾಯಿಲೆಯನ್ನು ವಾಸಿ ಮಾಡಬಹುದು. ಆದ್ದರಿಂದ ಈ ಬಗ್ಗೆ ಕ್ರಮವಹಿಸಲಾಗಿದೆ. ಕ್ಯಾನ್ಸರ್ ಲಸಿಕೆ ದುಬಾರಿ ಆಗಿರುವುದರಿಂದ ಎಲ್ಲರಿಗೂ ಪಡೆಯಲು ಸಾಧ್ಯವಾಗುವುದಿಲ್ಲ' ಎಂದು ಹೇಳಿದರು.

'ವ್ಯಕ್ತಿಯನ್ನು ದೈಹಿಕ, ಮಾನಸಿಕ ಮತ್ತು ಆರ್ಥಿಕವಾಗಿ ಕುಗ್ಗಿಸುತ್ತಿದ್ದ ಕ್ಯಾನ್ಸರ್ ಕಾಯಿಲೆ ಇತ್ತೀಚೆಗೆ ಸಾಮಾನ್ಯವಾಗಿದೆ. ಈ ಕಾಯಿಲೆ ಬಗ್ಗೆ ಜಾಗೃತಿಯೂ ಮೂಡುತ್ತಿದ್ದು, ತಂತ್ರಜ್ಞಾನದ ನೆರವಿನಿಂದ ಚಿಕಿತ್ಸೆಗಳು ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡುತ್ತಿವೆ. ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳು ನಿಖರ ಚಿಕಿತ್ಸೆಗೆ ಸಹಕಾರಿಯಾಗುತ್ತಿವೆ. ಕಡಿಮೆ ಖರ್ಚಿನಲ್ಲಿ ನಿಖರ ಚಿಕಿತ್ಸೆ ಎಲ್ಲರಿಗೂ ಸಿಗಬೇಕೆನ್ನುವುದು ನಮ್ಮ ಆದ್ಯತೆ' ಎಂದು ತಿಳಿಸಿದರು.

ಅಪೋಲೊ ಆಸ್ಪತ್ರೆಗಳ ವ್ಯವಸ್ಥಾಪಕ ನಿರ್ದೇಶಕಿ ಸುನೀತಾ ರೆಡ್ಡಿ, 'ಕ್ಯಾನ್ಸರ್ ಪೀಡಿತರಲ್ಲಿ ಹಲವರು ಆತ್ಮವಿಶ್ವಾಸ ಕಳೆದುಕೊಂಡು, ತಮ್ಮ ಜೀವನ ಅಂತ್ಯವಾಯಿತು ಅಂದುಕೊಳ್ಳುತ್ತಾರೆ. ಆದ್ದರಿಂದ ಕ್ಯಾನ್ಸರ್ ಕಾಯಿಲೆ ಬಗ್ಗೆ ಜನರಲ್ಲಿನ ಭಯವನ್ನು ಹೋಗಲಾಡಿಸಬೇಕಿದೆ. ನಿಖರ ಚಿಕಿತ್ಸೆ ಹಾಗೂ ಶೀಘ್ರ ಚೇತರಿಕೆಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಈ ಕೇಂದ್ರ ಸಹಕಾರಿಯಾಗಲಿದೆ. ಈ ಕೇಂದ್ರವು ಹೊಸ ರೋಗಿಗಳನ್ನು ಗುರುತಿಸಲು, ಕ್ಯಾನ್ಸರ್ ಪೀಡಿತರ ಆರೋಗ್ಯದ ಮೇಲೆ ನಿಗಾ ಇಡಲು ಕೂಡ ನೆರವಾಗಲಿದೆ' ಎಂದರು.

ಅಪೋಲೊ ಕ್ಯಾನ್ಸರ್ ಸೆಂಟರ್‌ನ ವೈದ್ಯಕೀಯ ಗಂಥಿ ವಿಜ್ಞಾನದ ಮುಖ್ಯಸ್ಥ ಡಾ. ವಿಜಯ್ ಅಗರ್ವಾಲ್, ಹಿರಿಯ ಸಲಹೆಗಾರ ಡಾ. ವಿಶ್ವನಾಥ್ ಎಸ್. ಪಾಲ್ಗೊಂಡಿದ್ದರು.

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಆರ್.ಟಿ. ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಭೂಪಸಂದ್ರ ಮುಖ್ಯರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಮೃತಪಟ್ಟಿದ್ದಾರೆ.

ಭೂಪಸಂದ್ರದ ಆರ್.ಎಂ.ವಿ 2ನೇ ಹಂತದ ನಿವಾಸಿ ದೇವರಾಜ್ (43) ಮೃತಪಟ್ಟವರು.

'ಗುರುವಾರ ರಾತ್ರಿ 8.30ರ ಸುಮಾರಿಗೆ ಭೂಪಸಂದ್ರ ಮುಖ್ಯರಸ್ತೆಯಲ್ಲಿ ಸರಕು ಸಾಗಣೆ ಆಟೊ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಸಮೀಪದ ಬ್ಯಾಪ್ಟಿಸ್ಟ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಶುಕ್ರವಾರ ರಾತ್ರಿ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಚಾಲಕ ಪರಾರಿ: 'ಅಪಘಾತ ನಡೆದ ಬಳಿಕ ಆಟೊವನ್ನು ಚಾಲಕ ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ನಾಗಶೆಟ್ಟಿಹಳ್ಳಿ ಕಡೆಯಿಂದ ಚಾಲಕ ಆಟೊವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದ ಎಂಬುದು ಕಂಡುಬಂದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಗೂಂಡಾಕಾಯ್ದೆ: ಪ್ರಸ್ತಾವ ಸಲ್ಲಿಕೆ ವೇಳೆ ಕಟ್ಟುನಿಟ್ಟಿನ ಕ್ರಮ ಅನುಸರಿಸಲು ನಿರ್ದೇಶನ

ತಾಂತ್ರಿಕ ಲೋಪದಿಂದ 'ಬಂಧಮುಕ್ತ'

• ಆದಿತ್ಯ ಕೆ.ಎ.

ಗೂಂಡಾಕಾಯ್ದೆಯನ್ನು ಕೊನೆ ಅಸ್ತ್ರವಾಗಿ ಬಳಸುವುದು ಅವಶ್ಯ. ವೈಯಕ್ತಿಕ ಹಿತಾಸಕ್ತಿ ಅಥವಾ ಯಾರದ್ದೋ ವಿರುದ್ಧ ಜಾರಿಗೊಳಿಸುವಂತಿಲ್ಲ

ಅಲೋಕ್ ಮೋಹನ್
ರಾಜ್ಯ ಪೊಲೀಸ್ ಮಹಾನಿರ್ದೇಶಕ

ಬೆಂಗಳೂರು: ಗೂಂಡಾಕಾಯ್ದೆ ಅಡಿ ಬಂಧನಕ್ಕೆ ಒಳಗಾದ ಆರೋಪಿಗಳು, ಹೈಕೋರ್ಟ್‌ನಲ್ಲಿ 'ಹೇಬಿಯಸ್ ಕಾರ್ಪಸ್' ಸಲ್ಲಿಕೆ ವೇಳೆ ಹಲವು ನ್ಯೂನತೆ ಎತ್ತಿಹಿಡಿದು 'ಬಂಧಮುಕ್ತ' ಆಗುತ್ತಿದ್ದಾರೆ. ಇದಕ್ಕೆ ಪೊಲೀಸರು ಸಲ್ಲಿಸುತ್ತಿರುವ ಪ್ರಸ್ತಾವದಲ್ಲಿರುವ 'ತಾಂತ್ರಿಕ ಲೋಪದೋಷವೇ ಕಾರಣ' ಎಂಬುದು ಕಂಡುಬಂದಿದೆ.

ರಾಜ್ಯದಲ್ಲಿ ಬಹಳಷ್ಟು ಪ್ರಕರಣಗಳಲ್ಲಿ ಕೆಲವು ಲೋಪಗಳಿಂದಾಗಿ ಗೂಂಡಾಕಾಯ್ದೆ ಅಡಿ ಬಂಧನಕ್ಕೆ ಒಳಗಾದವರು ಸುಲಭವಾಗಿ ಬಂಧಮುಕ್ತ ಆಗುತ್ತಿದ್ದಾರೆ. ಆ ರೀತಿಯ 13 ಪ್ರಕರಣಗಳನ್ನು ಉಲ್ಲೇಖಿಸಿ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ಸುತ್ತೋಲೆ ಹೊರಡಿಸಿದ್ದಾರೆ.

'ಗೂಂಡಾಕಾಯ್ದೆ ಅಡಿ ಪ್ರಸ್ತಾವ ಸಲ್ಲಿಸುವಾಗ ಕಟ್ಟುನಿಟ್ಟಿನ ಕ್ರಮ ಅನುಸರಿಸಬೇಕು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಎಲ್ಲ ಘಟಕಾಧಿಕಾರಿಗಳಿಗೆ ಮಹಾನಿರ್ದೇಶಕರು ನಿರ್ದೇಶನ ನೀಡಿದ್ದಾರೆ.

'ರಾಷ್ಟ್ರರಕ್ಷಣಾ ಪಡೆ ಸಂಘಟನೆ'ಯ ಮುಖಂಡ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ವಿರುದ್ಧ ನಗರದ ಚಾಮರಾಜಪೇಟೆ, ವಿಜಯನಗರ ಜಿಲ್ಲೆಯ ಹಂಪಿ ಟೂರಿಸಂ ಪೊಲೀಸ್ ಠಾಣೆ, ರಾಮನಗರದ ಸಾತನೂರು ಸೇರಿದಂತೆ ರಾಜ್ಯದ ಹಲವು ಠಾಣೆಗಳಲ್ಲಿ ದೊಂಬಿ, ಕೊಲೆ, ಹಲ್ಲೆ, ಪ್ರಾಣ ಬೆದರಿಕೆ ಪ್ರಕರಣಗಳು ದಾಖಲಾಗಿದ್ದವು. ಅದಾದ ಮೇಲೆ ಪ್ರಸ್ತಾವನೆ ಸಿದ್ಧಪಡಿಸಿ ಅವರ ವಿರುದ್ಧ ರೌಡಿಪಟ್ಟಿ ತೆರೆದು ಬಂಧಿಸಲಾಗಿತ್ತು. ನಂತರ, ಅವರು ಜಾಮೀನ ಮೇಲೆ ಬಿಡುಗಡೆಯಾಗಿದ್ದರು.

'ಪುನೀತ್ ಕೆರೆಹಳ್ಳಿ, ಬೆಂಗಳೂರಿನ ಶ್ರೀಕಾಂತ್, ಹಾಸನ ಜಿಲ್ಲೆಯ ಸಂದೀಪಗೌಡ ಪ್ರಕರಣಗಳಲ್ಲಿ ಬಂಧನಕ್ಕೆ ಸಾಕಷ್ಟು ಕಾರಣಗಳು ಇಲ್ಲ' ಎಂದು ಹೇಳಿ ಹೈಕೋರ್ಟ್‌ನ ಸಲಹಾ ಮಂಡಳಿ ಅವರ ಬಿಡುಗಡೆಗೆ ಆದೇಶಿಸಿತ್ತು. ಬರೀ ರೂಢಿಗತ ಅಪರಾಧಿ ಎಂಬ ಕಾರಣಕ್ಕೆ ಗೂಂಡಾಕಾಯ್ದೆ ಅಡಿ ಬಂಧಿಸುವಂತಿಲ್ಲ. ಈ ಕಾಯ್ದೆಯಡಿ ಬಂಧಿಸುವಾಗ ಬಂಧಿಯ ಚಟುವಟಿಕೆಗಳು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದಂತೆ ಗಂಭೀರವಾಗಿ ಪರಿಗಣಿತವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು' ಎಂದು ನಿರ್ದೇಶಿಸಿದ್ದಾರೆ.

ಬಂಧಿಗೆ ಒದಗಿಸಿರುವ ದಾಖಲಾತಿಗಳು ಸ್ಪಷ್ಟವಾಗಿ ಓದುವಂತೆ ಇರಬೇಕು. ಬಂಧಿತ ಜಾಮೀನು ಪಡೆದಿದ್ದರೆ, ಜಾಮೀನು ಉಲ್ಲಂಘಿಸಿದ್ದರೆ ಅದರ ವಿವರಗಳನ್ನು ಒದಗಿಸಬೇಕು' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 'ಬ್ಯಾಟರಿ' ಜಯಂತ್ ಪ್ರಕರಣದಲ್ಲಿ ಉಲ್ಲೇಖಿಸಿದ್ದಾರೆ. ಸಲಹಾ ಮಂಡಳಿ ಎದುರು ವಿಚಾರಣೆ ನಡೆಯುವ ಸಮಯದಲ್ಲಿ ನಿಯೋಜಿತ ಅಧಿಕಾರಿಗಳು, ಪ್ರಕರಣವನ್ನು ಸಮರ್ಥನೆ ಮಾಡುವಲ್ಲಿ ವಿಫಲರಾಗುತ್ತಿದ್ದಾರೆ. 'ಪ್ರಕರಣವನ್ನು ಅರ್ಥೈಸಿಕೊಂಡು ಸಮರ್ಥ ವಿಡಿಯೊ, ಚಿತ್ರಗಳ ಸಿಡಿಆರ್ ಅನ್ನು ಮಂಡಳಿ ಎದುರು ಪ್ರಸ್ತುತ ಪಡಿಸಬೇಕು' ಎಂದು ನಿರ್ದೇಶಿಸಲಾಗಿದೆ.

ಒಬ್ಬ ನಾಗರಿಕನ ಸಂವಿಧಾನಾತ್ಮಕ ಹಕ್ಕಿನ ವಿಷಯವನ್ನೂ ಆಯಾ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಆಯುಕ್ತರು ಗಮನದಲ್ಲಿ ಇಡುವುದು ಅವಶ್ಯ ಎಂದು ಅಲೋಕ್ ಮೋಹನ್ ತಿಳಿಸಿದ್ದಾರೆ.

> **'ಮಾತೃಭಾಷೆಯಲ್ಲೂ ಕಾರಣ ಇರಲಿ'**
>
> ಗೂಂಡಾಕಾಯ್ದೆ ಅಡಿ ಬಂಧನದ ಆದೇಶ, ಬಂಧನದ ಕಾರಣಗಳನ್ನು ಕನ್ನಡ, ಇಂಗ್ಲಿಷ್‌ನಲ್ಲಿ ಒದಗಿಸಲಾಗುತ್ತಿದೆ. ಬಂಧನಕ್ಕೆ ಒಳಗಾದವರಿಗೆ ಈ ಎರಡೂ ಭಾಷೆಯನ್ನು ಓದಲು, ಬರೆಯಲು, ಅರ್ಥ ಮಾಡಿಕೊಳ್ಳಲು ಬಾರದಿದ್ದಲ್ಲಿ ಆರೋಪಿಯ ಮಾತೃ ಭಾಷೆಯಲ್ಲೂ ಬಂಧನಕ್ಕೆ ಕಾರಣ ತಿಳಿಸಬೇಕು ಎಂದು ವಿಜಯಪುರದ ಗೂಂಡಾಕಾಯ್ದೆ ಅಡಿ ಬಂಧನಕ್ಕೆ ಒಳಗಾದ 'ಹುಚ್ಚಪ್ಪ' ಅಲಿಯಾಸ್ ಧನರಾಜ್ ಪ್ರಕರಣ ಉಲ್ಲೇಖಿಸಿದ್ದಾರೆ.

ಸುದ್ದಿ 2 ನಿಮಿಷ

ಹುಳಿಯಾರು: ಬೆಂಕಿ ನಂದಿಸುವಾಗ ಅರಣ್ಯ ಪಾಲಕ ಸಾವು

ಹುಳಿಯಾರು: ಸಮೀಪದ ಬರಗೀಹಳ್ಳಿ ಅರಣ್ಯ ಪ್ರದೇಶದಲ್ಲಿ ಆವರಿಸಿದ್ದ ಬೆಂಕಿ ನಂದಿಸಲು ಹೋಗಿದ್ದ ಅರಣ್ಯಪಾಲಕ ಎಚ್.ಜಿ.ರೇಣುಕಮೂರ್ತಿ(37) ಶುಕ್ರವಾರ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಹಂದನಕೆರೆ ಗ್ರಾಮದ ರೇಣುಕಮೂರ್ತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಪ್ರಾದೇಶಿಕ ಅರಣ್ಯ ಪ್ರದೇಶದ ಬರಗೀಹಳ್ಳಿ ವಲಯದಲ್ಲಿ ಗಸ್ತು ನಿರ್ವಹಿಸುತ್ತಿದ್ದರು. ಸಿಬ್ಬಂದಿ ಜತೆ ಬೆಂಕಿ ನಂದಿಸುತ್ತಿದ್ದ ವೇಳೆ ಹೊಗೆಯಲ್ಲಿ ಸಿಲುಕಿದ ಅವರಿಗೆ ಹೃದಯಾಘಾತವಾಗಿದೆ.

ಘಟನೆ ನಡೆದ ಸ್ಥಳಕ್ಕೆ ತುಮಕೂರು ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಅನುಪಮಾ, ಸಹಾಯಕ ಸಂರಕ್ಷಣಾಧಿಕಾರಿ ಸುಬ್ಬಾರಾವ್ ಭೇಟಿ ನೀಡಿ ಪರಿಶೀಲಿಸಿದರು.

ಕಾರ್ಮಿಕರ ನಕಲಿ ಕಾರ್ಡ್ ರದ್ದು: ಸಂತೋಷ್ ಲಾಡ್

ಪೀಣ್ಯ ದಾಸರಹಳ್ಳಿ: 'ಕಾರ್ಮಿಕ ಇಲಾಖೆಯಲ್ಲಿ ಸುಮಾರು ಎರಡೂವರೆ ಲಕ್ಷ ನಕಲಿ ಕಾರ್ಡ್‌ಗಳನ್ನು ಕೂಡಲೇ ರದ್ದುಪಡಿಸಬೇಕು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅಧಿಕಾರಿಗಳಿಗೆ ಸೂಚಿಸಿದರು.

ಮಂಜುನಾಥ ನಗರದ ಕಾರ್ಮಿಕ ಭವನದಲ್ಲಿ ಆಯೋಜಿಸಿದ್ದ 'ಕರ್ನಾಟಕ ಕಡ್ಡಾಯ ಉಪಧನ ವಿಮಾ ನಿಯಮ 2024' ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ರಾಜ್ಯದ ಎಲ್ಲಾ ತಾಲ್ಲೂಕುಗಳಿಂದ ತಲಾ 2 ಲಕ್ಷದಿಂದ 3 ಲಕ್ಷ ಸದಸ್ಯರು ಇಲಾಖೆಯಡಿ ನೋಂದಣಿ ಆಗಿದ್ದಾರೆ. ಆದರೆ, 30 ಸಾವಿರ ಸದಸ್ಯರಿಗೆ ಮಾತ್ರ ಗ್ರಾಚ್ಯುಯಿಟಿ ಬಗ್ಗೆ ತಿಳಿವಳಿಕೆಯಿದೆ. ಉಳಿದವರಿಗೆ ಯಾಕೆ ಮಾಹಿತಿ ಇಲ್ಲ' ಎಂದು ಅಧಿಕಾರಿಗಳನ್ನು ಸಚಿವರು ತರಾಟೆಗೆ ತೆಗೆದುಕೊಂಡರು.

'ಯಾವ ಕಂಪನಿಗಳಲ್ಲಿ ಎಷ್ಟು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎನ್ನುವ ಸಂಪೂರ್ಣ ಮಾಹಿತಿ ನಿಮ್ಮ ಬಳಿ ಇರಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಬೇಕು' ಎಂದು ಸೂಚಿಸಿದರು.

'ಸರ್ಕಾರದ ನೀತಿ ನಿಯಮಗಳನ್ನು ಪಾಲನೆ ಮಾಡದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಕಾನೂನಿನ ಅಡಿಯಲ್ಲಿ ಎಲ್ಲರೂ ಕೆಲಸ ಮಾಡಿ, ಇಲಾಖೆಗೆ ಹಾಗೂ ಸರ್ಕಾರಕ್ಕೆ ಗೌರವ ತರುವಂತಹ ಕೆಲಸ ಮಾಡಬೇಕು' ಎಂದು ತಾಕೀತು ಮಾಡಿದರು.

ಕಿಯೋನಿಕ್ಸ್ ಎಂ.ಡಿ ಸೇರಿ ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಯೋಜನೆಯನ್ನು (ಐಸಿಟಿ–3) ಸಮರ್ಪಕವಾಗಿ ಅನುಷ್ಠಾನಗೊಳಿಸದೆ ಸರ್ಕಾರಕ್ಕೆ ₹109.19 ಕೋಟಿ ನಷ್ಟವನ್ನುಂಟು ಮಾಡಿದ ಆರೋಪದ ಮೇಲೆ ಕಿಯೋನಿಕ್ಸ್, ಎವೆರಾನ್ ಕಂಪನಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸರ್ಕಾರದ ಉಪ ಕಾರ್ಯದರ್ಶಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರ ದಲ್ಲಿದ್ದಾಗ ಸರ್ಕಾರಿ ಶಾಲಾ ಮಕ್ಕಳಿಗೆ ಕಂಪ್ಯೂಟರ್ ಸಾಕ್ಷರತೆ ನೀಡಲು 2009–10ರಲ್ಲಿ ಐಸಿಟಿ–3 ಯೋಜನೆ ರೂಪಿಸಲಾಗಿತ್ತು. ₹147.69 ಕೋಟಿ ಮೊತ್ತದ ಯೋಜನೆಯನ್ನು ಸರಿಯಾಗಿ ನಿಭಾಯಿಸದೆ ಅಂದಿನ ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ಹರಿಕುಮಾರ್ ಝಾ, ಚೆನ್ನೈನ ಎವೆರಾನ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಪಿ.ಕಿಶೋರ್ ಹಾಗೂ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಯಾಗಿದ್ದ ಐ.ಎಫ್.ಮಾಗಿ ಅವರು ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟು ಮಾಡಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಪ್ರೌಢಶಾಲಾ ವಿಭಾಗದ ನಿರ್ದೇಶಕರು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಇದನ್ನು ಆಧರಿಸಿ, ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಅಂದು ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಹಾಗೂ ಶಿಕ್ಷಣ ಸಚಿವರಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಂಪುಟದ ಒಪ್ಪಿಗೆ ಪಡೆದು 4,396 ಸರ್ಕಾರಿ ಶಾಲೆಗಳಿಗೆ ಕಂಪ್ಯೂಟರ್, ಸ್ಕ್ಯಾನರ್, ಡಿಜಿಟಲ್ ಕ್ಯಾಮೆರಾ, ಪ್ರಿಂಟರ್, ಎಲ್‌ಸಿಡಿ ಪ್ರಾಜೆಕ್ಟರ್ ಸೇರಿದಂತೆ ಹಾರ್ಡ್‌ವೇರ್ ಉಪಕರಣಗಳನ್ನು ಪೂರೈಸಲು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮಕ್ಕೆ (ಕಿಯೋನಿಕ್ಸ್) ಗುತ್ತಿಗೆ ನೀಡಿದ್ದರು.

ಕಿಯೋನಿಕ್ಸ್ ಸಂಸ್ಥೆಯು ನಿಯಮ ಉಲ್ಲಂಘಿಸಿ ಚೆನ್ನೈನ ಎವೆರಾನ್ ಕಂಪನಿಗೆ ಉಪ ಗುತ್ತಿಗೆ ನೀಡಿತ್ತು. ಅಲ್ಲದೇ, ಐದು ವರ್ಷಗಳ ಅವಧಿಯಲ್ಲಿ ಹಂತಹಂತವಾಗಿ ಅನುಷ್ಠಾನಗೊಳಿಸಿದ್ದ ಯೋಜನೆಯಲ್ಲಿ ಶಾಲೆಗಳಿಗೆ ಹಾರ್ಡ್‌ವೇರ್ ಪೂರೈಸುವ ಮೊದಲೇ ಒಂದೇ ಬಾರಿಗೆ ಸಾಫ್ಟ್‌ವೇರ್ ಖರೀದಿಸಲಾಗಿತ್ತು. ಇದರಿಂದ ಇಲಾಖೆಗೆ ಆರ್ಥಿಕ ನಷ್ಟವಾಗಿತ್ತು. ಈ ಕುರಿತು ತನಿಖೆ ನಡೆಸಲು 10 ವರ್ಷಗಳ ಹಿಂದೆಯೇ ಐಎಎಸ್ ಅಧಿಕಾರಿ ಜಿ.ವಿ.ಕೃಷ್ಣರಾವ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿ ಐದು ಬಾರಿ ವರದಿ ಸಲ್ಲಿಸಿದರೂ, ಲೋಪಗಳನ್ನು ಪಟ್ಟಿ ಮಾಡಿ ಪ್ರತಿ ಬಾರಿಯೂ ವರದಿ ತಿರಸ್ಕರಿಸಲಾಗಿತ್ತು.

ಪ್ರಶಸ್ತಿ ಪ್ರದಾನ

ಇಂಡಿಯನ್ ವಾಟರ್ ವರ್ಕರ್ಸ್ ಅಸೋಸಿಯೇಷನ್ (ಐಡಬ್ಲ್ಯುಡಬ್ಲ್ಯುಎ) ಕೊಯಮತ್ತೂರಿನಲ್ಲಿ ಹಮ್ಮಿಕೊಂಡಿದ್ದ 56ನೇ ಸಮಾವೇಶದಲ್ಲಿ ಬೆಂಗಳೂರಿನ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಬೈರಾರೆಡ್ಡಿ ಎಚ್.ವಿ. ಮತ್ತು ಎಸ್. ಮೌರ್ಯ ಅವರಿಗೆ ಐಡಬ್ಲ್ಯುಡಬ್ಲ್ಯುಎ ಅಧ್ಯಕ್ಷ ಎಂ. ಮಥಿಯಳಗನ್ ಅವರು 'ಯುವ ರಾಯಭಾರಿ ಪ್ರಶಸ್ತಿ' ಪ್ರದಾನ ಮಾಡಿದರು. ಐಡಬ್ಲ್ಯುಡಬ್ಲ್ಯುಎ ನಿಕಟಪೂರ್ವ ಅಧ್ಯಕ್ಷ ಸುಭಾಷ್ ಬಿ. ಭುಜಬಲ್, ಉಪಾಧ್ಯಕ್ಷ ಎಂ. ಅಗರ್‌ವಾಲ್, ಜಂಟಿ ಕಾರ್ಯದರ್ಶಿ ಕೆ. ಇಳಂಗೋವನ್, ಸಂಘಟನಾ ಕಾರ್ಯದರ್ಶಿ ಕೆ. ಚೆಲ್ಲಮುತ್ತು ಹಾಗೂ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಚ್.ಕೆ. ರಾಮರಾಜು ಪಾಲ್ಗೊಂಡಿದ್ದರು

₹26 ಕೋಟಿ ಮೌಲ್ಯದ ಕೊಕೇನ್ ಜಪ್ತಿ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಕೀನ್ಯಾದ ಮಹಿಳೆಯೊಬ್ಬಳು ದೆಹಲಿಗೆ ಸಾಗಿಸುತ್ತಿದ್ದ ₹26 ಕೋಟಿ ಮೌಲ್ಯದ 2.56 ಕೆ.ಜಿ ಕೊಕೇನ್ ಮಾದಕ ವಸ್ತುವನ್ನು ವೈಮಾನಿಕ ಗುಪ್ತಚರ ನಿರ್ದೇಶನಾಲಯದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಕಳ್ಳ ಸಾಗಣೆ ಮಾಡುತ್ತಿದ್ದ ಕೀನ್ಯಾದ ಮಹಿಳೆಯನ್ನು ಬಂಧಿಸಿದ್ದಾರೆ.

ಜ.15ರಂದು ಅಪಾರ ಪ್ರಮಾಣದ ಮಾದಕ ವಸ್ತು ಕಳ್ಳ ಸಾಗಣೆ ಮಾಡುತ್ತಿರುವ ಬಗ್ಗೆ ಅಧಿಕಾರಿಗಳಿಗೆ ಸುಳಿವು ದೊರೆತಿತ್ತು. ದೆಹಲಿಗೆ ತೆರಳುತ್ತಿದ್ದ ಪ್ರಯಾಣಿಕರನ್ನು ಪರಿಶೀಲಿಸಿದಾಗ ಮಹಿಳೆ ಸೂಟ್‌ಕೇಸ್ ಕೆಳಗೆ ಡಬ್ಬದಲ್ಲಿ 2.56 ಕೆ.ಜಿ ಕೊಕೇನ್ ಅಡಗಿಸಿ ಇಟ್ಟಿದ್ದಳು. ಮಹಿಳೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮದ್ಯ ಸೇವಿಸಿ ಹಣಕ್ಕಾಗಿ ಗಲಾಟೆ: ವ್ಯಕ್ತಿ ಕೊಲೆ

ಬೆಂಗಳೂರು: ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡಬಾಣಸವಾಡಿಯಲ್ಲಿ ಮದ್ಯ ಸೇವಿಸಿ ಹಣಕ್ಕೆ ಪೀಡಿಸುತ್ತಿದ್ದ ಸಹೋದರಿ ಮಗನನ್ನು ಮಾವ ಚಾಕುವಿನಿಂದ ಇರಿದು, ಬಳಿಕ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದಾನೆ.

ದೊಡ್ಡಬಾಣಸವಾಡಿ ನಿವಾಸಿ ಅಜಯ್ ಅಲಿಯಾಸ್ ಟಿನ್ನು(29) ಕೊಲೆಯಾದ ವ್ಯಕ್ತಿ.
ಕೊಲೆ ಪ್ರಕರಣ ಸಂಬಂಧ ಆರೋಪಿ ಮುರುಳಿ(42) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಕೊಲೆಯಾದ ಅಜಯ್‌ಗೆ ತಂದೆ-ತಾಯಿ ಇಲ್ಲ. ಹೀಗಾಗಿ ಚಿಕ್ಕಂದಿನಿಂದ ಅಜ್ಜಿ ಲಕ್ಷ್ಮಮ್ಮ ಹಾಗೂ ಮಾವ ಮುರುಳಿ ಅವರ ಜತೆ ವಾಸವಿದ್ದ. ಕುಡಿತದ ಚಟ ಅಂಟಿಸಿಕೊಂಡಿದ್ದ ಅಜಯ್ ಶುಕ್ರವಾರ ಮದ್ಯ ಸೇವಿಸಿ ಮನೆಗೆ ಬಂದು ಅಜ್ಜಿ ಬಳಿ ₹ 2 ಲಕ್ಷ ನೀಡುವಂತೆ ಪೀಡಿಸುತ್ತಿದ್ದ. ಅಜ್ಜಿ ಹಣ ಇಲ್ಲ ಎಂದಿದ್ದಕ್ಕೆ ಹಲ್ಲೆ ಮಾಡಿದ್ದ. ಶನಿವಾರವೂ ಮದ್ಯ ಸೇವಿಸಿ ಬಂದು ದುಡ್ಡಿಗಾಗಿ ಗಲಾಟೆ ನಡೆಸಿದ್ದ. ಆಗ ಮುರುಳಿ ಬುದ್ಧಿಮಾತು ಹೇಳಿದ್ದ. ಆಗ ಇಬ್ಬರ ನಡುವೆ ಗಲಾಟೆ ನಡೆದಿತ್ತು. ಇದರಿಂದ ಕೋಪಗೊಂಡ ಮುರುಳಿ ಮನೆಯಲ್ಲಿದ್ದ ಚಾಕುವಿನಿಂದ ಅಜಯ್‌ಗೆ ಇರಿದು, ನಂತರ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ಹೇಳಿದರು.

ದೇಶಭಕ್ತಿ ಸಾರಿದ ಪುಟಾಣಿಗಳು

ವಿಶ್ವವಿದ್ಯಾಪೀಠ ಶಾಲೆಯ ಮಕ್ಕಳಿಂದ ಸೈನಿಕರ ಯಶೋಗಾಥೆಗಳ ಕಥಾರೂಪಕ

ಪ್ರಜಾವಾಣಿ ವಾರ್ತೆ

ಯಲಹಂಕ: ಮಕ್ಕಳಲ್ಲಿ ದೇಶಭಕ್ತಿ ಹಾಗೂ ಜವಾಬ್ದಾರಿಗಳ ಕುರಿತು ಅರಿವು ಮೂಡಿಸುವ ಸಲುವಾಗಿ 'ನನ್ನ ಸಮಾಜ–ನನ್ನ ಜವಾಬ್ದಾರಿ' ಎಂಬ ಘೋಷವಾಕ್ಯದಡಿಯಲ್ಲಿ ವಿಶ್ವವಿದ್ಯಾಪೀಠ ಶಾಲೆಯ ಮಕ್ಕಳು ಸೈನಿಕರ ಯಶೋಗಾಥೆಗಳನ್ನು ಕಥಾರೂಪಕದಲ್ಲಿ ಪ್ರಸ್ತುತಪಡಿಸಿದರು.

ಸಂದೀಪ್ ಉನ್ನಿಕೃಷ್ಣನ್ ವೃತ್ತದ ಬಳಿಯಿರುವ ಡಾ.ಬಿ.ಆರ್.ಅಂಬೇಡ್ಕರ್ ಉದ್ಯಾನದ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳು ದೇಶಭಕ್ತಿ ಮತ್ತು ಸಾಮಾಜಿಕ ಜವಾಬ್ದಾರಿಯನ್ನು, ಹಾಡು, ಕಥಾರೂಪಕ ಹಾಗೂ ನೃತ್ಯದ ಮೂಲಕ ಪ್ರಸ್ತುತಪಡಿಸಿದರು.

ಮುಂಬೈ ದಾಳಿ, ಪುಲ್ವಾಮ ದಾಳಿ ಸೇರಿ ಸೈನಿಕರ ತ್ಯಾಗ ಬಲಿದಾನಗಳನ್ನು ಸ್ಮರಿಸುವ ಕಥಾರೂಪಕ ಹಾಗೂ ಎಲ್ಲೆಂದರಲ್ಲಿ ಕಸ ಹಾಕದೆ ಸ್ವಚ್ಛತೆ ಕಾಪಾಡಬೇಕು. ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂಬ ಸಂದೇಶಗಳನ್ನು ಮಕ್ಕಳು ನೃತ್ಯ ರೂಪದಲ್ಲಿ ಪ್ರದರ್ಶಿಸಿದರು.

ಮಕ್ಕಳು ಸೈನಿಕರ ಯಶೋಗಾಥೆಗಳ ಕುರಿತು ನೃತ್ಯರೂಪಕ ಪ್ರಸ್ತುತಪಡಿಸಿದರು

ದೇಶದ ಧರ್ಮ, ಸಂಸ್ಕೃತಿ, ಆಚಾರ–ವಿಚಾರ ಹಾಗೂ ಕಲೆಗಳನ್ನು ಮಕ್ಕಳು ನೃತ್ಯ ಪ್ರಕಾರದ ಮೂಲಕ ಮನೋಜ್ಞವಾಗಿ ಅಭಿನಯಿಸಿದರು.

ಮಕ್ಕಳಲ್ಲಿ ಬದ್ಧತೆ, ಸಮರ್ಪಣಾ ಮನೋಭಾವವನ್ನು ಗಮನಿಸಿದ ಪೋಷಕರು ಹಾಗೂ ಸಭಿಕರ ಕಣ್ಣುಗಳು ಭಾವುಕರಾದರು.

ಈ ವೇಳೆ ಮಾತನಾಡಿದ ಶಾಲೆಯ ಶಿಕ್ಷಕಿ ಮಂಜುಳಾ, ಮಕ್ಕಳಲ್ಲಿ ಹಲವು ರೀತಿಯ ಪ್ರತಿಭೆಗಳು ಅಡಗಿರುತ್ತವೆ. ಅದನ್ನು ಹಾಡು, ನೃತ್ಯ ಹಾಗೂ ಕಥಾರೂಪಕಗಳ ಮೂಲಕ ಅನಾವರಣ ಮಾಡುವ ನಿಟ್ಟಿನಲ್ಲಿ ಶಾಲೆಯು ವೇದಿಕೆ ನೀಡಿರುವುದು ವಿಶೇಷವಾಗಿದೆ ಎಂದು ಶ್ಲಾಘಿಸಿದರು. ಶಾಲೆಯ ನಿರ್ದೇಶಕಿ ಸುಶೀಲ ಸಂತೋಷ್ ಮತ್ತಿತರರಿದ್ದರು.

ಯುವತಿಯೊಂದಿಗೆ ಅಸಭ್ಯ ವರ್ತನೆ

ಬೆಂಗಳೂರು: ವಿಜಯನಗರದ ಹೋಟೆಲ್‌ವೊಂದರಲ್ಲಿ ನಿಂತಿದ್ದ ಯುವತಿಗೆ ಹಿಂದಿನಿಂದ ಸ್ಪರ್ಶಿಸಿ ಅಸಭ್ಯವಾಗಿ ವರ್ತಿಸಿದ್ದ ಯುವಕನಿಗಾಗಿ ವಿಜಯನಗರ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ವಿಜಯನಗರದ ಆರ್‌ಪಿಸಿ ಬಡಾವಣೆಯಲ್ಲಿರುವ ಹೋಟೆಲ್‌ಗೆ ಮೂವರು ಯುವಕರು ಬಂದಿದ್ದರು. ಅದೇ ಸಮಯದಲ್ಲಿ ಯುವತಿ ಸಹ, ಹೋಟೆಲ್‌ನಿಂದ ತಿಂಡಿ ಪಾರ್ಸೆಲ್ ತೆಗೆದುಕೊಂಡು ಹೋಗಲು ಬಂದಿದ್ದರು. ಹಿಂದಿನಿಂದ ಬಂದ ಯುವಕನೊಬ್ಬ ಆ ಯುವತಿಯನ್ನು ಸ್ಪರ್ಶಿಸಿ, ಅನುಚಿತವಾಗಿ ವರ್ತಿಸಿದ್ದಾನೆ ಎಂಬ ಆರೋಪ ಕೇಳಿ ಬಂದಿದೆ. ಹೋಟೆಲ್ ನಲ್ಲಿದ್ದ ಸಿಸಿ ಟಿವಿ ಕ್ಯಾಮೆರಾದಲ್ಲಿ ಈ ದೃಶ್ಯ ಸೆರೆಯಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊವೊಂದು ಹರಿದಾಡುತ್ತಿದೆ.

'ಅನುಚಿತ ವರ್ತನೆಯನ್ನು ಪ್ರಶ್ನಿಸಿದ್ದ ಯುವತಿ ಮತ್ತು ಯುವಕನ ನಡುವೆ ಗಲಾಟೆ ನಡೆದಿದ್ದು, ಯುವತಿ ಕೂಗಾಟ ಕೇಳಿ ಸ್ಥಳೀಯರು ಜಮಾಯಿಸುತ್ತಿದ್ದಂತೆ ಯುವಕರ ಗುಂಪು ಅಲ್ಲಿಂದ ಪರಾರಿಯಾಗಿದೆ. ಹೋಟೆಲ್ ಸಿಬ್ಬಂದಿಯೇ ಪೊಲೀಸರಿಗೆ ದೂರು ನೀಡಿದ್ದಾರೆ.

ಇಂಡಿಯನ್ ಡೇರಿ ಅಸೋಸಿಯೇಷನ್ (ಐಡಿಎ) ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಲೀಮಾ ರೋಸ್ಲಿನ್, ಪರಿಮಳಾ ವಿಜಯರಮೇಶ್, ಎ.ಎನ್. ರಾಜೇಶ್ವರಿ, ಡಬ್ಬು ಪದ್ಮಾ ಹಾಗೂ ಅಲಗಿನೇನಿ ಶ್ರೀಪದ್ಮಾ ಅವರಿಗೆ 'ಅತ್ಯುತ್ತಮ ಹೈನುಗಾರ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಬೀದರ್‌ನ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಕೆ.ಸಿ. ವೀರಣ್ಣ, ಐಡಿಎ ದಕ್ಷಿಣ ವಲಯದ ಅಧ್ಯಕ್ಷ ಸತೀಶ್ ಕುಲಕರ್ಣಿ, ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳದ (ಕೆಎಂಎಫ್) ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್, ಐಡಿಎ ತೆಲಂಗಾಣ ವಿಭಾಗದ ಅಧ್ಯಕ್ಷ ರಾಜೇಶ್ವರ್ ರಾವ್ ಸಿ. ಹಾಗೂ ನವದೆಹಲಿಯ ಐಡಿಎ ಅಧ್ಯಕ್ಷ ಆರ್.ಎಸ್. ಸೋಧಿ ಪಾಲ್ಗೊಂಡಿದ್ದರು

– ಪ್ರಜಾವಾಣಿ ಚಿತ್ರ

ಮೊಬೈಲ್ ಕಳ್ಳನ ಬೆನ್ನಟ್ಟಿ ಹಿಡಿದ ಪೊಲೀಸ್

ಬೆಂಗಳೂರು: ಮತ್ತಿಕೆರೆ ಬಸ್ ನಿಲ್ದಾಣ ಬಳಿ ಕಳ್ಳನೊಬ್ಬ ಪಾದಚಾರಿಯಿಂದ ಮೊಬೈಲ್ ಕಸಿದುಕೊಂಡು ಪರಾರಿಯಾಗಲು ಯತ್ನಿಸಿದ್ದು, ಕಳ್ಳನನ್ನು ಪೊಲೀಸ್ ಸಿಬ್ಬಂದಿ ಬೆನ್ನಟ್ಟಿ ಹಿಡಿದಿದ್ದಾರೆ.

ಯಶವಂತಪುರ ಸಂಚಾರ ಪೊಲೀಸ್ ಠಾಣಾ ಸಿಬ್ಬಂದಿ ಅನಂತಕುಮಾರ್ ಅವರು ಮತ್ತಿಕೆರೆ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆಗ ಘಟನೆ ನಡೆದಿದ್ದು, ಕಳ್ಳನನ್ನು ಅನಂತಕುಮಾರ್ ಬೆನ್ನಟ್ಟಿ ಹಿಡಿದು ಯಶವಂತಪುರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ.

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ಜಾನಪದ ನೃತ್ಯ– ಸುಧೀರ್ ಎಸ್. ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8

ಸಂಕ್ರಾಂತಿ ಸಂಭ್ರಮ: ಉದ್ಘಾಟನೆ: ಎಸ್. ಮುನಿರಾಜು, ಅಧ್ಯಕ್ಷತೆ: ಎಂ. ಪ್ರಕಾಶ ಮೂರ್ತಿ, ಅತಿಥಿಗಳು: ದ್ವಾರನಕುಂಟೆ ಪಾತಣ್ಣ, ಹೇಮಾಪ್ರಸಾದ್, ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ, ಪೂರ್ಣಿಮಾ ರವಿ, ಆಯೋಜನೆ: ಸ್ನೇಹಜೀವಿ ಗೆಳೆಯರ ಬಳಗ ಸಾಹಿತ್ಯಿಕ ಘಟಕ, ಸ್ಥಳ: ರಂಗಮಂದಿರ, ಮಾರಮ್ಮ ದೇವಸ್ಥಾನದ ಹಿಂಭಾಗ, ಬಾಗಲಗುಂಟೆ, ಬೆಳಿಗ್ಗೆ 8.30ರಿಂದ

> **ಹಾಸ್ಯಮೇಳ; ನಗುವಿಗೇಕೆ ರೇಷನ್' ಉದ್ಘಾಟನೆ:** ಎಸ್. ಷಡಕ್ಷರಿ, ಉಪಸ್ಥಿತಿ: ಪತ್ತಿ ಶ್ರೀಧರ್, ಹಾಸ್ಯರಸಾಯನ: ಎಂ.ಎಸ್. ನರಸಿಂಹಮೂರ್ತಿ, ಗಂಗಾವತಿ ಪ್ರಾಣೇಶ್, ವೈ.ವಿ. ಗುಂಡೂರಾವ್, ರವಿ ಭಜಂತ್ರಿ, ಅಚ್ಯುತರಾವ್ ಪದಕಿ, ಆಯೋಜನೆ: ಅಂತರಂಗ, ಸ್ಥಳ: ಎಚ್.ಎನ್. ಕಲಾಕ್ಷೇತ್ರ, ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 10.30ರಿಂದ

'ಮೀಡಿಯಾಕಾನ್–2024' ಉದ್ಘಾಟನೆ: ಭಾಷಣಕಾರರು: ಸಿದ್ದಿಕ್ ಕಪ್ಪನ್, ರಾಜೀವ್ ಗೌಡ, ಐಶ್ವರ್ಯ ಮಹಾದೇವ್, ಪವನ್ ಖೇರಾ, ಪರಂಜಾಯ್ ಗುಹಾ ಠಾಕುರ್ತಾ, ಬ್ರಿಜೇಶ್ ಕಾಳಪ್ಪ, ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಬೆಳಿಗ್ಗೆ 9ರಿಂದ

13ನೇ ವಾರ್ಷಿಕೋತ್ಸವ: ಸಾನ್ನಿಧ್ಯ: ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ಅತಿಥಿಗಳು: ಎಂ.ಎನ್. ವೆಂಕಟಾಚಲಯ್ಯ, ಹಿರೇಮಗಳೂರು ಕಣ್ಣನ್, ಸನ್ಮಾನ: ಜಿ.ವಿ. ಗಿರಿ, ಆರ್. ಆನೂರು ಅನಂತಕೃಷ್ಣ ಶರ್ಮ, ಕೇಶವ್ ದೀಕ್ಷಿತ್, ನಾಗಶ್ರೀ ತ್ಯಾಗರಾಜ್ ಎನ್., ಎಸ್.ಆರ್. ವಿನಯ್ ಶರ್ವ, ಆಯೋಜನೆ: ಎಂ.ಕೆ. ಜಯಮ್ಮ, ಬಿ.ಎಸ್.ಆರ್. ಶಾಸ್ತ್ರಿ ಟ್ರಸ್ಟ್, ರಾಮಕೃಷ್ಣ ವಿವೇಕಾನಂದ ಆಶ್ರಮ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 9.30ರಿಂದ

ನಿಜಶರಣ ಅಂಬಿಗರ ಚೌಡಯ್ಯ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಎಚ್.ಎಸ್. ಶ್ರೀಮತಿ ಅವರ 'ಬಾರಯ್ಯ ಮಮಬಂಧು' ಪುಸ್ತಕ ಬಿಡುಗಡೆ: ಪುಸ್ತಕದ ಕುರಿತು: ರಾಜೇಂದ್ರ ಚೆನ್ನಿ, ಸಬಿತಾ ಬನ್ನಾಡಿ, ಅನಸೂಯ ಕಾಂಬಳೆ, ಉಪಸ್ಥಿತಿ: ಧನಂಜಯ ಎನ್., ಆಯೋಜನೆ: ಜೀರುಂಡೆ ಪುಸ್ತಕ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಶಿವರಾಜ ವಿ. ಪಾಟೀಲ ಅವರ ಆತ್ಮಕಥನ 'ಕಳೆದ ಕಾಲ ನಡೆದ ದೂರ' ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳ ಬಿಡುಗಡೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಎಂ.ಎನ್. ವೆಂಕಟಾಚಲಯ್ಯ, ಅತಿಥಿಗಳು: ಆರ್.ಎಫ್. ನಾರಿಮನ್, ಆಯೋಜನೆ: ಸ್ಪರ್ಶ ಫೌಂಡೇಶನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 10.30



ಶಿವರಾಜ ವಿ. ಪಾಟೀಲ

80ರ ಸಂಭ್ರಮ: ಸಾನ್ನಿಧ್ಯ: ಮಲ್ಲಿಕಾರ್ಜುನ ದೇವರು, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಲೀಲಾದೇವಿ ಆರ್. ಪ್ರಸಾದ್, ರಾಣಿ ಸತೀಶ್, ಎಚ್.ಕೆ. ಶಿವಾನಂದ, 'ಈಶ್ವರಶ್ರೀ ಪ್ರಶಸ್ತಿ' ಪುರಸ್ಕೃತರು: ಎನ್.ಆರ್. ಪಂಡಿತಾರಾಧ್ಯ, ಆರ್.ಬಿ.ಎಸ್. ಚನ್ನಬಸವರಾಧ್ಯ, ಆಯೋಜನೆ ಮತ್ತು ಸ್ಥಳ: ಈಶ್ವರ ಸೇವಾ ಮಂಡಲಿಯ ಸಮುದಾಯ ಭವನ, ಮಲ್ಲೇಶ್ವರ, ಬೆಳಿಗ್ಗೆ 10.30

'ಅನರ್ಘ್ಯ ರತ್ನಗಳು' ಪುಸ್ತಕ ಬಿಡುಗಡೆ: ಡಾ.ಸಿ. ಎನ್. ಮಂಜುನಾಥ್, ಅತಿಥಿಗಳು: ಎ.ವಿ. ಪ್ರಸನ್ನ, ಪಿ.ಜಿ. ದ್ವಾರಕನಾಥ್, ವಿ.ವೈ. ವೆಂಕಟೇಶ್, ಎಸ್. ಹರೀಶ್, ಅಧ್ಯಕ್ಷತೆ: ಎನ್. ಸತ್ಯಪ್ರಕಾಶ್, ಆಯೋಜನೆ: ಜ್ಞಾನದೀಪಿಕ ಶೈಕ್ಷಣಿಕ ದತ್ತಿ, ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10.30

'ಶ್ರೀ ಸಾಹಿತ್ಯ' ಪ್ರಶಸ್ತಿ ಪ್ರದಾನ: ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಪುರಸ್ಕೃತರು: ರಾಮೇಗೌಡ, ಅತಿಥಿ: ಕಮಲಿನಿ ಬಾಲುರಾವ್, ಉಪಸ್ಥಿತಿ: ಪಿ.ವಿ. ನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಬರಗೂರು ರಾಮಚಂದ್ರಪ್ಪ

ಜಯನಗರ ವಿಧಾನಸಭೆ ಕ್ಷೇತ್ರದ ಶಾಖೆ, ನಾಮಫಲಕ ಅನಾವರಣ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಸಿ.ಕೆ. ರಾಮಮೂರ್ತಿ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಕಾರ್ಪೊರೇಶನ್ ಕಾಲೊನಿ, ಜಯನಗರ, 9ನೇ ಬ್ಲಾಕ್, ಬೆಳಿಗ್ಗೆ 11

'ಬಾಪು ಕೆ ಲೋಗ್' ಪ್ರಣಾಳಿಕೆ ಬಿಡುಗಡೆ: ಅನಿಲ್ ಹೆಗಡೆ, ರಾಮಚಂದ್ರ ಗುಹಾ, ಪ್ರಸನ್ನ, ವಿನೋದ್ ವ್ಯಾಸುಲು, ಆಯೋಜನೆ: ಬಾಪು ಕೆ ಲೋಗ್, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ರಾಮಚಂದ್ರ ಗುಹಾ

ಲೆನಿನ್ ಸ್ಮರಣ ಶತಾಬ್ದಿ ಅಂಗವಾಗಿ ಪುಸ್ತಕ ಬಿಡುಗಡೆ: ಕೆ. ರಾಧಾಕೃಷ್ಣ, ಕೆ. ಉಮಾ, ಆಯೋಜನೆ: ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

> **ನೂತನ ಪದಾಧಿಕಾರಿಗಳ ಪದಗ್ರಹಣ: ಸಾನ್ನಿಧ್ಯ:** ಗುರುಬಸವ ಸ್ವಾಮೀಜಿ, ಅಧ್ಯಕ್ಷತೆ: ಎಚ್.ಎಸ್. ಹರೀಶ್ ನಾಯ್ಕ್, ಅತಿಥಿಗಳು: ಬಸವರಾಜು ವಿ. ಶಿವಗಂಗಾ, ಕೆ.ಎಸ್. ಬಸವರಾಜು, ಎಸ್. ರುದ್ರೇಗೌಡ, ಮಹಿಮ ಜೆ. ಪಟೇಲ್, ವಡ್ನಾಳ್ ರಾಜಣ್ಣ, ಮಾಡಾಳ್ ವಿರೂಪಾಕ್ಷಪ್ಪ, ಡಾ. ರಮೇಶ್ ಆರ್., ಡಾ.ಸಿ.ಎನ್. ಪಾಟೀಲ್, ಚಿನ್ಮಯಾನಂದ ಎ.ಸಿ., ಆಯೋಜನೆ: ಚನ್ನಗಿರಿ ತಾಲ್ಲೂಕಿನ ಬೆಂಗಳೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಟೌನ್‌ಹಾಲ್, ಜೆ.ಸಿ. ರಸ್ತೆ,

'ಸುಧನ್ವ ಮೋಕ್ಷ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ನಂದನ್ ಹೆಗಡೆ ದಂಟಕಲ್, ಗಜಾನನ ಹೆಗಡೆ ಕಲ್ಲಬ್ಬೆ, ಮದ್ದಳೆ: ರಘು ಶರ್ಮ ಹೊನ್ನೆಕುಡಿಗೆ, ನಾರಾಯಣ ಮೂರ್ತಿ ಹೊಸಬಾಳೆ, ಚಂಡೆ: ಭಾವನ ಹೆಗಡೆ ಮಳಗೀಮನೆ, ಮುಮ್ಮೇಳ: ರವಿ ಐತುಮನೆ, ಆದಿತ್ಯ ಹಲ್ಕೋಡು, ಕೃಷ್ಣಕುಮಾರ್ ನೆಗಳಗುಳಿ, ಚಂದನ್ ಕಲಾಹಂಸ, ಅಕ್ಷಯ್ ಹೆಗಡೆ, ಸಮರ್ಥ ಭಟ್ ಬೆಂಕಟಳ್ಳಿ, ಸಿರಿ ಹಳ್ಳದಾಚೆ, ಅತ್ರಿ ಹೆಗಡೆ ಜಂಬಾನಿ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ನವ್ಯಕಾವ್ಯ, ರಾಜೀವಗಾಂಧಿ ರಸ್ತೆ, ಜೆ.ಪಿ. ನಗರ, ಮಧ್ಯಾಹ್ನ 3

40 ಕೃತಿಗಳ ಅನಾವರಣ, 'ಕನ್ನಡ ತಿಲಕ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಆನಂದ್ ಕೊರಟಿ, ಅತಿಥಿಗಳು: ಆರ್.ಎಸ್. ರವೀಂದ್ರ, ನೀರಜಾ ನಾಗೇಂದ್ರ ಕುಮಾರ್, ಕೊಳ್ಳಪ್ಪೆ ಗೋವಿಂದ ಭಟ್, ಅಧ್ಯಕ್ಷತೆ: ಗಾಯತ್ರಿ ಸುರೇಂದ್ರ, ಪ್ರಶಸ್ತಿ ಪುರಸ್ಕೃತರು: ಅಜಯ್ ಕುಮಾರ್ ಶರ್ಮಾ, ದಿನೇಶ್ ಡಿ.ಎಸ್., ಕೆಂಪರಾಜು, ಶಾಂತಲ ರಾಜು, ಟಿ. ತ್ಯಾಗರಾಜು, ಗುಲಾಬಿ ರಾಘವೇಂದ್ರ, ಎಚ್. ಸುಂದರಮ್ಮ, ಸಾವಿತ್ರಿ ಬಿ. ಗೌಡ, ವಿಮಲಾ ಟಿ.ಜೆ., ಇಂದ್ರಮ್ಮ, ಆಯೋಜನೆ: ಕಥಾಬಿಂದು ಪ್ರಕಾಶನ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಸಂಗೀತ ಕಾರ್ಯಕ್ರಮ: ಗಾಯನ: ಅಂಜಲಿ ಶ್ರೀರಾಮ್, ಪಿಟೀಲು: ಅಚ್ಯುತ್ ರಾವ್, ಮೃದಂಗ: ರಂಜಿನಿ ವೆಂಕಟೇಶ್, ಘಟ: ರಮೇಶ್ ಆರ್., ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5ರಿಂದ

ಸಂಗೀತ ರಸ ಸಂಜೆ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಎನ್. ಸತೀಶ್ ಕುಮಾರ್, ಬಿ.ಎನ್. ರವಿಕಾಂತೇಗೌಡ, ಶೇಖರ್ ಟೆಕ್ಕಣ್ಣನವರ್, ಎನ್. ಸಿದ್ಧೇಶ್ವರ, ಎಸ್. ಪಿ. ದಯಾನಂದ್, ಆಯೋಜನೆ: ಮಾತೃಶ್ರೀ ಮನೋವಿಕಾಸ ಕೇಂದ್ರ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಸಂಜೆ 6

ನರಸಿಂಹಲು ವಡವಾಟಿ ಅವರ ಜನ್ಮದಿನದ ಅಂಗವಾಗಿ 'ಕಲಾವಿದರ ದಿನ', ಸುಗ್ಗಿಯ ಸೊಬಗಲ್ಲಿ ಸಂಗೀತ ಸಂಜೆ: ಉದ್ಘಾಟನೆ: ಧರಣಿದೇವಿ ಮಾಲಗತ್ತಿ, ಅತಿಥಿ: ವೇಮಗಲ್ ನಾರಾಯಣಸ್ವಾಮಿ, ಅಧ್ಯಕ್ಷತೆ: ವಡವಾಟಿ ಶಾರದಾ ಭರತ್, ಆಯೋಜನೆ ಮತ್ತು ಸ್ಥಳ: ಭಾರತ್ ಸಾಂಸ್ಕೃತಿಕ ಕಲಾ ಕೇಂದ್ರ, ಲಾಲ್‌ಬಹದ್ದೂರ್ ಶಾಸ್ತ್ರಿನಗರ, ಸಂಜೆ 6.30

'ರಾಮಮಯಂ' ಪುಸ್ತಕ ಬಿಡುಗಡೆ: ರಾಮಚಂದ್ರ ಭಟ್ ಕೋಟೆಮನೆ, ಅತಿಥಿ: ನಾ. ತಿಪ್ಪೇಸ್ವಾಮಿ, ಅಧ್ಯಕ್ಷತೆ: ಸತೀಶ್ ಕೈಲಾಸ್, ಆಯೋಜನೆ: ಭಾರತೀಯ ಶಿಕ್ಷಣ ಮಂಡಲ ಕರ್ನಾಟಕ ದಕ್ಷಿಣ ಉತ್ತರ ಪ್ರಾಂತ್ಯ, ಸ್ಥಳ: ವೇದ ವಿಜ್ಞಾನ ಗುರುಕುಲ, ಚನ್ನೇನಹಳ್ಳಿ, ಮಾಗಡಿ ರಸ್ತೆ, ಸಂಜೆ 7

'ಶ್ರೀಮದ್ರಾಮಾಯಣ' ಧಾರ್ಮಿಕ ಪ್ರವಚನ: ಅಂಬರೀಶಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

ನಮ್ಮ ಸಂಕಲ್ಪ ವಿಕಸಿತ ಭಾರತ

ಮೋದಿ ಸರ್ಕಾರದ ಗ್ಯಾರಂಟಿ

'ವೋಕಲ್ ಫಾರ್ ಲೋಕಲ್ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ

ಕಳೆದ 10 ವರ್ಷಗಳಲ್ಲಿ ಖಾದಿ ಮಾರಾಟದಲ್ಲಿ 4 ಪಟ್ಟು ಹೆಚ್ಚಳ, ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ಪ್ರೋತ್ಸಾಹದ ಮೂಲಕ ಹಳ್ಳಿಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದೆ

ಸ್ವಚ್ಛತಾ ವಾಹನದ ಜೊತೆಗೆ ವಾಹನ ಚಾಲಕಿ ಮಂಜುಳಾ (ಬಲಬದಿ) ಹಾಗೂ ಸಹಾಯಕಿ ಶಶಿಕಲಾ

ಗಣರಾಜ್ಯೋತ್ಸವ: ಸ್ವಚ್ಛತಾ ವಾಹನ ಚಾಲಕಿಯರು ವಿಶೇಷ ಅತಿಥಿ

ಪ್ರಜಾವಾಣಿ ವಾರ್ತೆ

ಕೋಲಾರ: ತಾಲ್ಲೂಕಿನ ಬೆಗ್ಲಿಹೊಸಹಳ್ಳಿ ಗ್ರಾಮ ಪಂಚಾಯಿತಿಯ ಸ್ವಚ್ಛ ವಾಹಿನಿ ವಾಹನದ ಚಾಲಕಿ ಮಂಜುಳಾ ಮತ್ತು ಸಹಾಯಕಿ ಶಶಿಕಲಾ ಅವರು ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ವಿಶೇಷ ಅತಿಥಿಗಳಾಗಿ ಭಾಗವಹಿಸಲು ಜಿಲ್ಲೆಯಿಂದ ಆಯ್ಕೆಯಾಗಿದ್ದಾರೆ.

ಜ.26ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು, ಆನಂತರ ರಾಷ್ಟ್ರಪತಿ, ಪ್ರಧಾನಿ ಜೊತೆಗಿನ ಚಹಾಕೂಟದಲ್ಲಿ ಭಾಗವಹಿಸಲಿದ್ದಾರೆ.

ಸ್ವಚ್ಛ ಭಾರತ್ ಯೋಜನೆಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಸಮರ್ಪಕವಾಗಿ ಅನುಷ್ಠಾನಕ್ಕೆ ತಂದವರನ್ನು ಆಯ್ಕೆ ಮಾಡಲಾಗುತ್ತದೆ. ಮಾದರಿ 4 ಪಂಚಾಯಿತಿಗಳ ಪೈಕಿ ಬೆಗ್ಲಿಹೊಸಹಳ್ಳಿ ಪಂಚಾಯಿತಿ ಕೂಡ ಆಯ್ಕೆಯಾಗಿದೆ.

'ಜ.25ಕ್ಕೆ ನವದೆಹಲಿಗೆ ತೆರಳಲಿದ್ದೇವೆ. ಗೃಹಿಣಿಯಾಗಿ ಕುಟುಂಬಕ್ಕೆ ಸೀಮಿತವಾಗಿದ್ದ ನನ್ನನ್ನು ಪಂಚಾಯಿತಿ ಅಧಿಕಾರಿಗಳು, ಸದಸ್ಯರು ಸಮಾಜದ ಮುಖ್ಯವಾಹಿನಿಗೆ ತಂದು ಚಾಲಕಿಯಾಗಿ ಮಾಡಿದ್ದಾರೆ. ಸಾಮಾನ್ಯ ಮಹಿಳೆಯಾಗಿ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿರುವುದು ಖುಷಿ ತಂದಿದೆ. ಅಧ್ಯಕ್ಷೆ ದೀಪಿಕಾ ಲೋಕೇಶ್, ಪಿಡಿಒ ಮಧುಮತಿ ಹಾಗೂ ಎಲ್ಲಾ ಸದಸ್ಯರ ಮಾರ್ಗದರ್ಶನದಲ್ಲಿ ಸ್ವಚ್ಛತೆ ಕಾರ್ಯ ಇಡೀ ಜಿಲ್ಲೆಗೆ ಮಾದರಿಯಾಗಿ ನಡೆಯುತ್ತಿದೆ' ಎಂದು ಚಾಲಕಿ ಮಂಜುಳಾ ಸಂತಸ ವ್ಯಕ್ತಪಡಿಸಿದ್ದಾರೆ.

ಬೆಗ್ಲಿಹೊಸಹಳ್ಳಿ ಗ್ರಾಮದ ಮಂಜುಳಾ ಎರಡೂವರೆ ವರ್ಷಗಳಿಂದ ಚಾಲಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಪತಿ ಲೋಕೇಶ್ ಖಾಸಗಿ ಕ್ಯಾಬ್ ಚಾಲಕರಾಗಿದ್ದು, ಪುತ್ರ ಮನಿಷ್ 4ನೇ ತರಗತಿ ಓದುತ್ತಿದ್ದಾರೆ. ಇದೇ ಗ್ರಾಮದ ಶಶಿಕಲಾ ಕೂಡ ಎರಡೂವರೆ ವರ್ಷಗಳಿಂದ ಕಾರ್ಯ-ನಿರ್ವಹಿಸುತ್ತಿದ್ದಾರೆ.

'ಸ್ವಚ್ಛ ಭಾರತ್ ಯೋಜನೆಯಡಿ ಸ್ವಚ್ಛವಾಹಿನಿ ಕಾರ್ಯಕ್ರಮವನ್ನು ಜಾರಿಗೆ ತರಲು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯಕೈಗೊಂಡು ವಾಹನ ಖರೀದಿಸಲಾಯಿತು. ಅದಕ್ಕೆ ಚಾಲಕರನ್ನು ನೇಮಕ ಮಾಡಿಕೊಂಡು ಕಸ ಸಂಗ್ರಹಿಸುವ ಕುರಿತು ವ್ಯಾಪಕ ಪ್ರಚಾರ ಮಾಡಲಾಯಿತು' ಎಂದು ಪಂಚಾಯಿತಿಯ ಮಾಜಿ ಅಧ್ಯಕ್ಷ ಕೂಟೇರಿ ಚರಣ್ ತಿಳಿಸಿದರು.

ಫೆ. 1ರಿಂದ ಕೊಬ್ಬರಿ ಖರೀದಿ

ತುಮಕೂರು: ನಾಫೆಡ್ ಖರೀದಿ ಕೇಂದ್ರ ತೆರೆದು ಬೆಂಬಲ ಬೆಲೆಯಲ್ಲಿ ಕೊಬ್ಬರಿ ಖರೀದಿಸುವ ಪ್ರಕ್ರಿಯೆ ಆರಂಭವಾಗಿಲ್ಲ. ಜನವರಿ 20ರಿಂದ ನಡೆಯಬೇಕಿದ್ದ ನೋಂದಣಿ ಹಾಗೂ ಖರೀದಿಯನ್ನು ಫೆ. 1ಕ್ಕೆ ಮುಂದೂಡಲಾಗಿದೆ.

ಸಹಕಾರ ಇಲಾಖೆ ಶನಿವಾರ ಹೊಸದಾಗಿ ಆದೇಶ ಹೊರಡಿಸಿದ್ದು, ಫೆ. 1ರಿಂದ ಖರೀದಿಸುವುದಾಗಿ ತಿಳಿಸಿದೆ. ಮುಂದೂಡಿಕೆಗೆ ಯಾವುದೇ ಕಾರಣಗಳನ್ನು ನೀಡಿಲ್ಲ.

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1969

ಪ್ರಧಾನ ಕಛೇರಿ: ನಂ: 24 "ಸುವರ್ಣ ಭವನ", 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು-560 104. ದೂರವಾಣಿ : 080- 41159606, 23300497, 23359600, 23503666 23402712,
website: www.jscbl.com, email : jscbinfo@jscbl.com

50 Janatha Seva Co-operative Bank Limited Celebrating Golden Jubilee

ಬ್ಯಾಂಕ್ ಸುವರ್ಣ ಮಹೋತ್ಸವ ಪೂರೈಸಿದ ಅಂಗವಾಗಿ ತನ್ನ ಗ್ರಾಹಕರಿಗೆ ಠೇವಣಿಯ ಹೊಸ ಯೋಜನೆಯನ್ನು "ಸುವರ್ಣ ಜನತಾ ಸೇವಾ ಠೇವಣಿ" ನೀಡಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಠೇವಣಿಯ ಹೆಸರು*	ಸುವರ್ಣ ಜನತಾ ಸೇವಾ ಠೇವಣಿ
ಠೇವಣಿಯ ಮೊತ್ತ*	ರೂ. 10,000/- ರಿಂದ ರೂ. 10,00,000/- ವರೆಗೆ ಮಾತ್ರ
ಠೇವಣಿಯ ಅವಧಿ*	450 ದಿನಗಳಿಗೆ
ಬಡ್ಡಿ ದರ *	9.01%
ಯೋಜನೆಯ ಪ್ರಾರಂಭ & ಮುಕ್ತಾಯದ ಅವಧಿ	ದಿನಾಂಕ: 22.01.2024 ರಿಂದ 29.02.2024ರ ವರೆಗೆ

ಮೇಲೆ ನಮೂದಿಸಿರುವ ಯೋಜನೆಯನ್ನು ಹೊರತುಪಡಿಸಿ ಠೇವಣಿಗಳ ಮೇಲಿನ ಬಡ್ಡಿದರ 15 ತಿಂಗಳಿನಿಂದ 24 ತಿಂಗಳವರೆಗೆ ಸಾಮಾನ್ಯರಿಗೆ ಶೇ. 8.00% ಮತ್ತು ಹಿರಿಯ ನಾಗರಿಕರಿಗೆ ಶೇ. 8.50% ಬಡ್ಡಿದರ ಇರುತ್ತದೆ.

ಸಾಲಗಳ ಮೇಲೆ ಕಡಿಮೆ ಬಡ್ಡಿ ದರಗಳು ಮತ್ತು ಅತ್ಯಾಧುನಿಕ ಸೌಲಭ್ಯಗಳು

ಬ್ಯಾಂಕ್ ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿದರಗಳನ್ನು ಕಡಿಮೆಗೊಳಿಸಿ ಸ್ಪರ್ಧಾತ್ಮಕ ಬಡ್ಡಿದರದಲ್ಲಿ ಸಾಲಗಳನ್ನು ನೀಡುತ್ತಿದ್ದು, ಈ ಸೌಲಭ್ಯಗಳ ಸದಪಯೋಗವನ್ನು ಪಡೆದುಕೊಳ್ಳಬೇಕೆಂದು ಹಾಗೂ ಇನ್ನೂ ಉತ್ತಮ ಸೇವೆಯನ್ನು ಒದಗಿಸುವ ಅವಕಾಶವನ್ನು ನಮಗೆ ನೀಡಬೇಕೆಂದು ವಿನಂತಿಸುತ್ತೇವೆ.

ಕ್ರ.ಸಂ.	ಸಾಲದ ವಿವರಗಳು	ಸಾಲದ ಮಿತಿ	ಬಡ್ಡಿ ದರ
1	ಸ್ಥಿರಾಸ್ತಿ ಮೇಲಿನ ಸಾಲಗಳಿಗೆ*	ರೂ. 35.00 ಲಕ್ಷದಿಂದ ರೂ. 140.00 ಲಕ್ಷದವರೆಗೆ	ಶೇ. 8.50% ರಿಂದ ಶೇ 9.50%
2	ಮಕ್ಕಳ ವಿದ್ಯಾಭ್ಯಾಸಕ್ಕೆ*	ರೂ. 20.00 ಲಕ್ಷದಿಂದ ರೂ. 50.00 ಲಕ್ಷದವರೆಗೆ	ಶೇ. 9.25% ರಿಂದ ಶೇ 9.50%
3	ಮದುವೆ ಉದ್ದೇಶಕ್ಕಾಗಿ*	ರೂ. 25.00 ಲಕ್ಷದವರೆಗೆ	ಶೇ. 10.00%
4	ವಾಹನ ಸಾಲಗಳಿಗೆ *	ರೂ. 50.00 ಲಕ್ಷದವರೆಗೆ	ಶೇ. 8.50% ರಿಂದ ಶೇ 9.50%
5	ಆಭರಣಗಳ ಮೇಲಿನ ಸಾಲಗಳಿಗೆ*	ರೂ. 20.00 ಲಕ್ಷದವರೆಗೆ	ಶೇ. 9.00% ರಿಂದ ಶೇ 10.00%
6	ಓ.ಡಿ ಸಾಲಕ್ಕೆ *	ರೂ. 500.00 ಲಕ್ಷದವರೆಗೆ	ಶೇ. 11.00% ರಿಂದ ಶೇ 11.50%
7	ವ್ಯಾಪಾರಾಭಿವೃದ್ಧಿ ಸಾಲ *	ರೂ. 1200.00 ಲಕ್ಷದವರೆಗೆ	ಶೇ. 10.00% ರಿಂದ ಶೇ 11.50%
8	ಅಡಮಾನ ಸಾಲ *	ರೂ. 1200.00 ಲಕ್ಷದವರೆಗೆ	ಶೇ. 13.00%
9	ಜಾಮೀನು ಸಾಲಗಳಿಗೆ*	ರೂ. 2,00,000/- ವರೆಗೆ	ಶೇ. 14.00%
10	"B" ಖಾತಾ ಸ್ಥಿರಾಸ್ತಿಗಳಿಗೆ (ಸ್ಥಿರಾಸ್ತಿ ಜೊತೆಗೆ ಕಟ್ಟಡದ* ಗೈಡ್‌ಲೈನ್ ಬೆಲೆಯ ಶೇ 50% ರಷ್ಟು) ಗರಿಷ್ಠ	ರೂ. 100.00 ಲಕ್ಷದವರೆಗೆ	ಶೇ. 12.00%

* ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಿರುತ್ತದೆ.

ಈ ಎಲ್ಲಾ ಸೌಲಭ್ಯಗಳನ್ನು ಹಾಗೂ ಹೆಚ್ಚಿನ ಮಾಹಿತಿ ಪಡೆಯಲು ಈ ಕೆಳಕಂಡ ನಿಮ್ಮ ಹತ್ತಿರದ ಬ್ಯಾಂಕಿನ ಶಾಖೆಗಳನ್ನು ಸಂಪರ್ಕಿಸಿ:

ವಿಜಯನಗರ ಶಾಖೆ: ದೂರವಾಣಿ: 23300497, 41159606, 23359600, 23402712 | ಮೂಡಲಪಾಳ್ಯ ಶಾಖೆ: ದೂರವಾಣಿ : 23110019, 23504924, 29776055
ಮಹಾಲಕ್ಷ್ಮೀಪುರಂ ಶಾಖೆ: ದೂರವಾಣಿ : 23592994, 23197492 | ರಾಜರಾಜೇಶ್ವರಿನಗರ ಶಾಖೆ: ದೂರವಾಣಿ : 28604162, 41259606
ಸುಂಕದಕಟ್ಟೆ ಶಾಖೆ: ದೂರವಾಣಿ : 23586055

ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ

A wonderful film, Must Watch. Rajat Sharma, India TV

One of the finest biopics made in recent times - Taran Adarsh

★★★½ Dhaval Roy, The Times of India	★★★★ Pankaj Shukla, Amar Ujala	★★★★ Ashwani Kumar, E24	★★★½ RJ Salil, Radio City
★★★★½ Filmibeat	★★★½ Bhawana Somaaya	★★★★ Nishant Bhuse	★★★½ Peepingmoon
★★★½ Sonil Dedhia, News18	★★★½ Anuraag Panday	★★★½ Vishal Verma, Cineblues	★★★½ Sana Farzeen, India Today
★★★ Lachmi Deb Roy, Firstpost	★★★ Manoj Vashisth, Jagran	★★★ Ashish Tiwari, Dainik Bhaskar	★★★ Upma Singh, Navbharat Times



PVR - INOX CINEMAS {NEXUS FORUM MALL, KORMANGALA, 9:20, 12:35, 4:45, 7:00, 10:00, 10:30 p.m. | ORION MALL, YESHWANTPUR, 8:55, 12:40, 3:30, 3:35, 7:15, 10:15 p.m. | VAISHNAVI, 9:40, 12:15, 3:15, 10:05 p.m. | VEGA CITY MALL, 9:40, 12:05, 4:30, 6:45, 7:30, 9:45 p.m. | MSR REGALIA, 9:25, 12:25, 4:00, 7:00, 10:00 p.m. | BHARATIYA, 8:50, 11:50, 7:30, 10:30 p.m. | PHOENIX MARKET CITY, K.R. PURAM, 9:25, 12:25, 3:25, 7:00, 10:00 p.m. | VR MALL, 8:50, 12:25, 3:40, 7:20, 10:00 p.m. | SPIRIT MALL, 9:45, 4:05, 10:10 p.m. | REX DIRECTORS CUT MG ROAD, 9:40, 12:40, 4:00, 10:20 p.m. | GT WORLD MALL, 10:15, 1:15, 7:30 p.m. | AURA MALL, 3:30, 9:50 p.m. | GLOBAL MALL, NAYANDALLI, 8:50, 3:25, 6:45, 10:00 p.m. | SUPERPLEX FORUM MALL, FALCON CITY, 9:45, 12:45, 3:55, 6:30, 7:20, 10:10 p.m. | ORION UPTOWN MALL, 10:15, 4:30, 7:30 p.m. | GARUDA MALL, 9:15, 12:25, 7:30, 10:30 p.m. | LIDO, 9:40, 12:40, 7:00, 10:30 p.m. | MANTRI MALL, 9:05, 12:50, 7:30, 10:10 p.m. | GARUDA SWAGATH MALL, 9:30, 3:50, 10:10 p.m. | CENTRAL MALL, J. P. NAGAR, 9:00, 12:00, 7:10 p.m. | FORUM NEIGHBOURHOOD MALL, 9:10, 12:35, 7:10, 10:10 p.m. | BROOKFIELD MALL, 9:00, 7:20, 10:30 p.m. | GARUDA, YELAHANKA, 9:10, 3:50, 10:30 p.m. | RMZ MALL, 9:00, 12:50, 7:30 p.m. | SBR HORIZON, 9:40, 12:40, 7:0, 10:00 p.m.} | **CINEPOLIS CINEMAS** {ROYAL MEENAKSHI MALL, 10:15, 4:40, 7:35 p.m. | ETA MALL, BINNY MILL, 10:15, 4:25, 7:20 p.m. | FORUM SHANTINIKETAN MALL, 10:30, 4:25, 10:20 p.m. | LULU MALL (TRD), 10:20, 4:10, 10:00 p.m. | LULU MALL (VIP), 1:00, 10:25 p.m. | ORION EAST MALL, 1:15, 7:25 p.m. | SJR SPECTRUM MALL, 10:45, 7:45, 10:30 p.m.} | **GOPALAN CINEMAS** {INNOVATION MALL, 11:00, 7:00, 10:00 p.m. | ARCH MALL, 10:30 a.m., 7:15 p.m. | LEGACY MALL, 10:30, 1:45, 7:15, 10:00 p.m. | SIGNATURE MALL, 4:30, 9:45 p.m. | GRAND MALL, 12:00, 7:30, 10:15 p.m.} | **CINE PHILE** {HSR LAYOUT, 1:30, 10:00 p.m.} | **INNOVATIVE** {MARATHHALLI, 4:00, 9:50 p.m.} | **DRC CINEMAS** {MYSORE, 4:30 p.m.} | **VISION CINEMAS** {MYSORE, 6:30, 9:15 p.m.} | **PVR - INOX CINEMAS** {FORUM MALL, MYSORE, 9:50, 4:10, 10:15 p.m. | GARUDA MALL MYSORE, 9:00, 12:55, 7:15 p.m. | SATYAM MALL OF MYSORE, 9:30, 12:10, 10:10 p.m. | CENTRO MALL MYSORE, 10:10, 7:30, 10:10 p.m. | FIZA MALL, MANGALORE, 9:55, 12:55, 4:30, 7:30, 10:30 p.m. | CENTRAL MALL MANIPAL, 10:10, 1:10, 4:10, 7:10 p.m. | S MALL, TUMKUR, 9:50, 12:20, 7:30, 10:20 p.m.} | **CINEPOLIS** {CITY CENTRE MALL, MANGALORE, 10:15, 4:10, 10:05 p.m.} | **BHARATH CINEMAS** {MANGALORE, 11:00, 4:15, 10:15 p.m. | SHIMOGA, 2:00, 10:30 p.m. | MANIPAL, 11:00, 1:45, 7:30, 10:15 p.m. | KUNDAPURA, 11:30 a.m., 10:15 p.m. | PUTTUR, 1:45, 10:00 p.m. | PADUBIDRE, 1:45, 7:30, 10:15 p.m.} | **MOVIE TIME** {DAVANGERE, 1:30, 7:30 p.m. | BELLARY, 10:30, 4:00, 10:45 p.m.} | **CINE GALAXY** {SURATKAL, 11:30, 3:00, 6:00, 9:00 p.m.}.

FARNAZ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಹೆಲ್ಮೆಟ್ ಜೀವ ಉಳಿಸುತ್ತವೆ

ಯಾವಾಗಲೂ ಹೆಲ್ಮೆಟ್ ಧರಿಸಿ ಜೊತೆಗೆ ಹೆಲ್ಮೆಟ್ ಬೆಲ್ಟ್ ಕಟ್ಟಿಕೊಳ್ಳಿ

- ಇಡೀ ಮುಖವನ್ನು ಮುಚ್ಚುವ ಅಥವಾ ಅರ್ಧ ಮುಖವನ್ನು ಮುಚ್ಚುವ ಹೆಲ್ಮೆಟ್ ಅನ್ನು ಧರಿಸಿ, ಅದರ ಬೆಲ್ಟ್ ಅನ್ನು ಕಟ್ಟಿಕೊಂಡರೆ ಮಾತ್ರ ಹೆಲ್ಮೆಟ್ ಅನ್ನು ಸರಿಯಾಗಿ ಧರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಅರ್ಧ ತಲೆ ಹೆಲ್ಮೆಟ್‌ಗೆ ಕಾನೂನು ಪ್ರಕಾರ ಮಾನ್ಯತೆ ಇಲ್ಲ.
- ಮೋಟಾರು ವಾಹನಗಳ ಕಾಯ್ದೆ 1988 ರ ಪರಿಚ್ಛೇದ 129 ಪ್ರಕಾರ ಹೆಲ್ಮೆಟ್‌ಗಳ ಬೆಲ್ಟ್ / ಸ್ಟ್ರಾಪ್‌ಗಳನ್ನು ಕಟ್ಟಿಕೊಳ್ಳುವುದು ಕಡ್ಡಾಯ. ದ್ವಿಚಕ್ರ ವಾಹನ ಚಲಾಯಿಸುವಾಗ ಹೆಲ್ಮೆಟ್‌ಗಳನ್ನು ಧರಿಸದೇ ಇರುವುದು ಮೋಟಾರು ವಾಹನಗಳ ಕಾಯ್ದೆ 1988 ರ ಪರಿಚ್ಛೇದ 194ಡಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭ

* https://ksp.karnataka.gov.in/storage/pdf-files/Road_Accident–Report_2022.pdf

25%* 2022ರಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಲಾಯಿಸಿದ್ದರಿಂದ ಉಂಟಾದ ಮರಣದ ಪ್ರಮಾಣ.

2,293* 2022ರಲ್ಲಿ ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನವನ್ನು ಚಲಾಯಿಸಿ ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪಿದ ಸವಾರರ ಸಂಖ್ಯೆ.

10%* 2021ಕ್ಕೆ ಹೋಲಿಸಿದರೆ 2022ರಲ್ಲಿ ಹೆಲ್ಮೆಟ್ ಧರಿಸದೇ ರಸ್ತೆ ಅಪಘಾತಗಳಲ್ಲಿ ಉಂಟಾದ ಮರಣ ಪ್ರಮಾಣದ ಹೆಚ್ಚಳ.

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ರಸ್ತೆ ಸುರಕ್ಷತೆ-ನಮ್ಮ ಆದ್ಯತೆ

ಡಾ. ಎನ್.ವಿ. ಪ್ರಸಾದ್ ಭಾ.ಆ.ಸೇ
ಕಾರ್ಯದರ್ಶಿಗಳು ಸಾರಿಗೆ ಇಲಾಖೆ

ಯೋಗೀಶ್ ಎ.ಎಂ. ಭಾ.ಆ.ಸೇ
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಬೆಂಗಳೂರು

ಜೆ. ಪುರುಷೋತ್ತಮ್
ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಕರ್ನಾಟಕದ ಅಂತರ್ಜಲ ಮರು ಪೂರಣ ಮತ್ತು ಹೊರ ತೆಗೆಯುವ ಪ್ರಮಾಣ (ಶತಕೋಟಿ ಘನಮೀಟರ್‌ಗಳಲ್ಲಿ)

18.93	9.22	4.95	1.12	3.64	11.32	10.09	0.13	1.10
ರಾಜ್ಯದಲ್ಲಿ ವಾರ್ಷಿಕ ಮರು ಪೂರಣ	ಮುಂಗಾರುವಿನಲ್ಲಿ ಮಳೆಯಿಂದ	ಮುಂಗಾರುವಿನಲ್ಲಿ ಇತರ ಮೂಲದಿಂದ	ಇತರ ಋತುಗಳಲ್ಲಿ ಮಳೆಯಿಂದ	ಇತರ ಋತುಗಳಲ್ಲಿ ಬೇರೆ ಮೂಲದಿಂದ	ವಾರ್ಷಿಕವಾಗಿ ಅಂತರ್ಜಲ ಹೊರ ತೆಗೆಯುತ್ತಿರುವುದು	ನೀರಾವರಿ ಉದ್ದೇಶಕ್ಕೆ ಬಳಕೆ	ಕೈಗಾರಿಕಾ ಉದ್ದೇಶಕ್ಕೆ ಬಳಕೆ	ಗೃಹ ಬಳಕೆಗೆ

ಮತ್ತಷ್ಟು ಆಳದತ್ತ ಅಂತರ್ಜಲ

ಒಂದನೇ ಪುಟದಿಂದ...

ಅಂತರ್ಜಲಕ್ಕೆ ಕೊಳ್ಳಿ : ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಬಿದ್ದ ಭಾರಿ ಮಳೆ ಮತ್ತು ಮಹಾಪೂರದಿಂದ ನದಿ, ಕೆರೆ, ಕಟ್ಟೆ ತುಂಬಿದ್ದರೂ ಅಂತರ್ಜಲ ಮಟ್ಟದಲ್ಲಿ ಭಾರಿ ಸುಧಾರಣೆಯಾಗಿಲ್ಲ. ಅತಿ ಬಳಕೆಯಿಂದ ರಾಜಧಾನಿ ಬೆಂಗಳೂರು ಹಾಗೂ ಸುತ್ತಲಿನ ಜಿಲ್ಲೆಗಳಲ್ಲಿ ಸ್ಥಿರ ಜಲಮಟ್ಟ ಪ್ರತಿವರ್ಷ ತಳಕ್ಕೆ ಕುಸಿಯುತ್ತಿದೆ.

ವರ್ಷದಲ್ಲಿ ಸರಾಸರಿ 1,779 ಮಿ.ಮೀ. ಮಳೆಯಾಗುವ ರಾಜ್ಯ ಕರ್ನಾಟಕ. ನಮ್ಮಲ್ಲಿ ವರ್ಷಕ್ಕೆ ಸರಾಸರಿ 408 ಮಿ.ಮೀ. ನಿಂದ 5,051 ಮಿ.ಮೀ ಮಳೆಯಾಗುವ ಪ್ರದೇಶಗಳಿವೆ. ಆದರೂ ರಾಜ್ಯದ ಸ್ಥಿರ ಜಲ ಮಟ್ಟದ ಸರಾಸರಿ ವರ್ಷದಿಂದ ವರ್ಷಕ್ಕೆ ಕುಸಿಯುತ್ತಲೇ ಸಾಗಿದೆ. ಮರುಪೂರಣ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಂತರ್ಜಲ ಬಳಸಿಕೊಳ್ಳುವುದೇ ಈ ಸಮಸ್ಯೆಗೆ ಮೂಲಕಾರಣ.

ಅರೆ ನೀರಾವರಿ, ನೀರಾವರಿ ಪ್ರದೇಶವೆಂಬ ವ್ಯತ್ಯಾಸವಿಲ್ಲದಂತೆ ಅಂತರ್ಜಲ ಬಳಕೆಯಾಗುತ್ತಿದೆ. ಎಲ್ಲಿಯೂ ಅಗತ್ಯಕ್ಕೆ ತಕ್ಕಂತೆ ವೈಜ್ಞಾನಿಕವಾಗಿ ಬಳಕೆಯಾಗುತ್ತಿಲ್ಲ ಎನ್ನುತ್ತಾರೆ ಮೈಸೂರಿನ ಎನ್‌ಐಇ ನಿವೃತ್ತ ಪ್ರಾಧ್ಯಾಪಕ ಯದುಪತಿ ಪುಟ್ಟಿ. ನೀರನ್ನು ಹಿಡಿದಿಡುವ ಇಂಗು ತಾಣಗಳಾಗಿದ್ದ ಕೆರೆಕಟ್ಟೆ ಕಡಿಮೆಯಾಗಿವೆ. ಭೂಮಿಯಿಂದ ಹೊರ ತೆಗೆದಷ್ಟೇ ಪ್ರಮಾಣದ ನೀರು ಇಂಗುವುದಕ್ಕೂ ಅವಕಾಶವಿರಬೇಕು ಎನ್ನುತ್ತಾರೆ.

‘ಕರ್ನಾಟಕದ 39,352 ಚದರ ಕಿ.ಮೀ. ಪ್ರದೇಶದಲ್ಲಿ ಅಂತರ್ಜಲದ ಅತಿಯಾದ ಬಳಕೆಯಾಗಿದೆ. 6,580 ಪ್ರದೇಶದಲ್ಲಿ ಸಮಸ್ಯೆ ಗಂಭೀರವಾಗಿದೆ. ಒಟ್ಟಾರೆಯಾಗಿ, ರಾಜ್ಯದ ಎಲ್ಲ ಕಡೆಗಳಲ್ಲಿ ಅಂತರ್ಜಲ ಬಳಸುವ ಪ್ರಮಾಣ ಗಣನೀಯವಾಗಿ ಹೆಚ್ಚಿದೆ’ ಎಂದು ರಾಜ್ಯ ಸರ್ಕಾರದ ವರದಿ ಹೇಳುತ್ತದೆ.

ಪಾತಾಳಕ್ಕೆ ಇಳಿಯುತ್ತಿರುವ ಅಂತರ್ಜಲ ಮಟ್ಟವನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ, ಒಂದೇ ತಿಂಗಳ ಅವಧಿಯಲ್ಲಿ ಎರಡು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಕರ್ನಾಟಕ ಸೇರಿದಂತೆ 19 ರಾಜ್ಯಗಳಿಗೆ ನೋಟಿಸ್ ಜಾರಿ ಮಾಡಿದೆ. ‘ಈ ದಯನೀಯ ಪರಿಸ್ಥಿತಿ ಕುರಿತು ರಾಜ್ಯಗಳು ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ದುರ್ದಿನಗಳನ್ನು ಎದುರಿಸಬೇಕಾದೀತು’ ಎಂದು ಚಾಟಿ ಬೀಸಿದೆ.

ಅಂತರ್ಜಲ ಅತಿ ಬಳಕೆಯ ತಾಲ್ಲೂಕುಗಳಲ್ಲಿ ಕೊಳವೆಬಾವಿ ಕೊರೆಯದಂತೆ ಸರ್ಕಾರ ನಿಷೇಧ ಹೇರಿದೆ. ನಿಷೇಧ ಹೆಸರಿಗಷ್ಟೇ. ಅಂತರ್ಜಲ ಅಭಿವೃದ್ಧಿಗಾಗಿ ಅಟಲ್ ಭೂಜಲ ಯೋಜನೆ ಜಾರಿಗೊಳಿಸಿದೆ. ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲೂ ಕೊಳವೆಬಾವಿ ತೋಡಲು ಅನುಮತಿ ಪಡೆಯಬೇಕು ಎನ್ನುವ ಕಾನೂನು, ಪಾಲನೆ ಆಗುತ್ತಿಲ್ಲ.

ಈ ವರ್ಷ ಮಳೆ ಕೊರತೆ ಮತ್ತು ಬರಗಾಲದಿಂದ ನೀರಿನ ಮಟ್ಟ ಮತ್ತಷ್ಟು ಕುಸಿದಿದೆ. ಬೇಸಿಗೆ ಆರಂಭಕ್ಕೂ ಮುನ್ನವೇ ಕೊಳವೆಬಾವಿ ಬತ್ತುತ್ತಿವೆ. ಬೇಕಾಬಿಟ್ಟಿಯಾಗಿ ಕೊಳವೆಬಾವಿ ಕೊರೆಯುವ ಪ್ರವೃತ್ತಿಗೆ ಸರ್ಕಾರ ಕಡಿವಾಣ ಹಾಕದಿರುವುದೇ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲು ಕಾರಣವಾಗಿದೆ. 300–400 ಅಡಿಗೆ ಸಿಗುತ್ತಿದ್ದ ನೀರು ಈಗ 1,500– 2,000 ಅಡಿ ಕೊರೆದರೂ ಸಿಗುತ್ತಿಲ್ಲ. ಪ್ರತಿವರ್ಷ ಉತ್ತಮ ಮುಂಗಾರು ಮಳೆ ಆಗದಿದ್ದರೆ ಪರಿಸ್ಥಿತಿ ಬಿಗಡಾಯಿಸಲಿದೆ. ಕುಡಿವ ನೀರಿಗೆ ಭಾರಿ ಕೊರತೆ ಎದುರಾಗಲಿದೆ ಎನ್ನುತ್ತವೆ ಭೂ ಜಲ ಇಲಾಖೆ ಮೂಲಗಳು.

ಹಲವರು ಕೊಳವೆಬಾವಿಯ ನೀರು ಮಾರಾಟ ಮಾಡುತ್ತ ‘ನೀರು ಮಾರುಕಟ್ಟೆ’ಯಲ್ಲಿ ತೊಡಗಿದ್ದಾರೆ. ಹಣ ಕೊಟ್ಟರೆ ನೀರು ಸಿಗುತ್ತದೆ ಎಂಬ ಅಹಂಕಾರವೇ ಮಿತಿ ಮೀರಿದ ಬಳಕೆಗೂ ದಾರಿ ಮಾಡಿದೆ. ನಗರೀಕರಣ, ಕಾಡು ನಾಶವೇ ಭೂಮಿ ಆಳಕ್ಕೆ ನೀರು ಇಳಿಯುವುದನ್ನು ತಡೆಯುತ್ತಿವೆ ಎನ್ನುವುದು ಸುರತ್ಕಲ್‌ನ ಎನ್‌ಐಟಿಕೆ ಜಲಸಂಪನ್ಮೂಲ ಮತ್ತು ಸಾಗರ ಎಂಜಿನಿಯರಿಂಗ್ ವಿಭಾಗದ ಪ್ರೊ.ಲಕ್ಷ್ಮಣ್ ನಂದಗಿರಿ ಅಭಿಪ್ರಾಯ.

ಏರಿದ ನೀರಿನ ಮಟ್ಟ: ಏತ ನೀರಾವರಿ ಯೋಜನೆ, ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ಹಾಸನ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಹೆಚ್ಚಳವಾಗಿದೆ. ಬೆಂಗಳೂರಿನ ಕೊಳಚೆ ನೀರನ್ನು ಕೆರೆಗಳಿಗೆ ತುಂಬಿಸುವ ಕೆ.ಸಿ. ವ್ಯಾಲಿ ಯೋಜನೆ ಮತ್ತು ಎರಡು ವರ್ಷ ಸುರಿದ ಧಾರಾಕಾರ ಮಳೆಯಿಂದ ಬಯಲುಸೀಮೆಯ ಕೋಲಾರ ಜಿಲ್ಲೆಯಲ್ಲೂ ಅಂತರ್ಜಲ ಮಟ್ಟ ಸುಧಾರಿಸಿದೆ.

ಅಂತರ್ಜಲ ನಿರ್ದೇಶನಾಲಯ ಮತ್ತು ಕರ್ನಾಟಕ ಅಂತರ್ಜಲ ಪ್ರಾಧಿಕಾರದ ಇತ್ತೀಚಿನ ವರದಿಯ ಪ್ರಕಾರ ಹಾಸನ ಜಿಲ್ಲೆಯಲ್ಲಿ ಸರಾಸರಿ 10.33 ಮೀಟರ್ ಮತ್ತು ಕೋಲಾರದಲ್ಲಿ ಅತಿ ಹೆಚ್ಚು ಅಂದರೆ 50.12 ಮೀಟರ್‌ಗಳಷ್ಟು ಅಂತರ್ಜಲ ಹೆಚ್ಚಿದೆ. ಕೆ.ಸಿ.ವ್ಯಾಲಿ ನೀರು ಹರಿದ ಕೆರೆಗಳ ಸುತ್ತಮುತ್ತ ಕೊಳವೆ ಬಾವಿ ಕೊರೆದರೆ 250–300 ಅಡಿಗೆ ನೀರು ಸಿಗುತ್ತಿದೆ.

ಹೆಚ್ಚು ಕೆರೆ ಹೊಂದಿರುವ ಕೋಲಾರ ಜಿಲ್ಲೆಯಲ್ಲಿ 2020- 22 ಅವಧಿಯಲ್ಲಿ ಎರಡು ವರ್ಷ ದಾಖಲೆ ಪ್ರಮಾಣದಲ್ಲಿ ಮಳೆ ಸುರಿದು ಬಹುತೇಕ ಜಲಾಶಯ, ಕೆರೆ, ಕಟ್ಟೆ ಕೋಡಿ ಹರಿದಿದ್ದವು. ಈಗಲೂ ಅದರಲ್ಲಿ ಹೆಚ್ಚಿನ ಕೆರೆಗಳು ತುಂಬಿವೆ. ಕೋಲಾರ ಜಿಲ್ಲೆಯ ಎರಡೂವರೆ ಸಾವಿರ ಕೆರೆಗಳ ಪೈಕಿ 139 ಕೆರೆಗಳಿಗೆ ಕೆ.ಸಿ.ವ್ಯಾಲಿ ನೀರು ಹರಿದ ಮೇಲೆ ಅಂತರ್ಜಲ ವೃದ್ಧಿಯಾಗಿದೆ. ಈ ಹಿಂದೆ ಸಾವಿರ ಅಡಿ ಕೊರೆದರೂ ನೀರು ಸಿಗುತ್ತಿರಲಿಲ್ಲ ಎನ್ನುವುದು ಅಧಿಕಾರಿಗಳ ವಾದ.

ಇದನ್ನು ಒಪ್ಪದ ರೈತ ಮತ್ತು ನೀರಾವರಿ ಹೋರಾಟಗಾರರು ‘ಎರಡು ವರ್ಷ ಸುರಿದ ಮಳೆಯಿಂದ ಅಂತರ್ಜಲ ಹೆಚ್ಚಿದೆಯೇ ಹೊರತು ಕೆ.ಸಿ. ವ್ಯಾಲಿ ಕಾರಣ ಅಲ್ಲ’ ಎನ್ನುತ್ತಾರೆ.

‘ವಿಷ’ವಾದ ಜೀವಜಲ: ನೀರಿಗಾಗಿ ಕೊಳವೆ ಬಾವಿ ಕೊರೆಯುವುದು ಹೊಸದಲ್ಲ. ಕೊಳವೆಬಾವಿ ಆಳಕ್ಕೆ ಕೊರೆದಂತೆಲ್ಲ ಫ್ಲೋರೈಡ್ ಮತ್ತು ಆರ್ಸೆನಿಕ್‌ನಂತಹ ವಿಷಕಾರಿ ಅಂಶ ಕಂಡು ಬರುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ನೀರಿನಲ್ಲಿ ಅಪಾಯಕಾರಿ ರಾಸಾಯನಿಕ ಹೆಚ್ಚುತ್ತಿರುವುದರಿಂದ ಕಲ್ಯಾಣ ಕರ್ನಾಟಕದಲ್ಲಿ ಅಂತರ್ಜಲ ವಿಷವಾಗುತ್ತಿದೆ.

ರಾಜ್ಯದ 44 ತಾಲ್ಲೂಕುಗಳಲ್ಲಿ ಅಂತರ್ಜಲಕ್ಕೆ ವ್ಯಾಪಕ ಕನ್ನ ಹಾಕಿದ ಪರಿಣಾಮ ಆಳಕ್ಕೆ ಕೊರೆದಂತೆಲ್ಲ ವಿಷಕಾರಿ ಅಂಶಗಳು ನೀರಿನೊಂದಿಗೆ ಮೇಲಕ್ಕೆ ಬರುತ್ತಿವೆ. ನೀರಿನ ಗುಣಮಟ್ಟ ವಿಷಮಿಸುತ್ತಿದೆ. ಪ್ರತಿ ಲೀಟರ್ ನೀರಿನಲ್ಲಿ 1 ಪಿಪಿಎಂಗಿಂತಲೂ ಹೆಚ್ಚು ಫ್ಲೋರೈಡ್ ಇದ್ದು ಕುಡಿಯುಲು ಯೋಗ್ಯವಾಗಿಲ್ಲ.

ಭಾರತೀಯ ವಿಜ್ಞಾನ ಸಂಸ್ಥೆಯ ಜಲತಜ್ಞರು ನಡೆಸಿದ ಸಮೀಕ್ಷೆಯಲ್ಲಿ ಕೊಳವೆಬಾವಿ ನೀರು ಮತ್ತು ಜಲಮೂಲಗಳಲ್ಲಿ ಅಪಾಯಕಾರಿ ಮಟ್ಟದಲ್ಲಿ ಯುರೇನಿಯಂ ಧಾತು ಪತ್ತೆಯಾಗಿದೆ. 13 ಜಿಲ್ಲೆಗಳ 73 ಗ್ರಾಮಗಳ ನೀರಿನಲ್ಲಿ ಯುರೇನಿಯಂ ಇದ್ದು ಕುಡಿಯಲು ಯೋಗ್ಯವಾಗಿಲ್ಲ. ಸುಮಾರು 48 ಹಳ್ಳಿಗಳಲ್ಲಿ ಯುರೇನಿಯಂ ಅಂಶ ಅಪಾಯದ ಮಟ್ಟ ಮೀರಿದ್ದು, ಸರ್ಕಾರ ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ತಜ್ಞರು ಸಲಹೆ ನೀಡಿದ್ದಾರೆ.

ಫ್ಲೋರೈಡ್ ನೀರು ಮೂಳೆ ಸವೆತ, ಹಲ್ಲು ಕಂದು, ಕೀಲು ನೋವು, ಮೊಣಕಾಲು ನೋವು ತಂದೊಡ್ಡುತ್ತಿದೆ. ಗರ್ಭಕೋಶದ ಸಮಸ್ಯೆಗಳಿಗೆ ಕಾರಣವಾಗುತ್ತವೆ. ಯುರೇನಿಯಂ ಕಿಡ್ನಿ ಕ್ಯಾನ್ಸರ್ ಮತ್ತು ಇತರ ಕ್ಯಾನ್ಸರ್ ಕಾಯಿಲೆಗಳಿಗೆ ದೂಡುತ್ತದೆ ಎನ್ನುತ್ತಾರೆ ರಾಯಚೂರಿನ ಮೂಳೆರೋಗ ತಜ್ಞ ಡಾ. ವಿರೂಪಾಕ್ಷ ರೆಡ್ಡಿ.

ಕೊಳವೆ ಬಾವಿಯ ನೀರಿನೊಂದಿಗೆ ಹೊರಬರುತ್ತಿರುವ ಫ್ಲೋರೈಡ್, ಆರ್ಸೆನಿಕ್ ವಿಷವಸ್ತುಗಳು ಒಡಿಸಾ, ಛತ್ತೀಸಗಡದಲ್ಲಿ ಜನರ ಮೇಲೆ ಭಯಾನಕ ಪರಿಣಾಮ ಬೀರಿವೆ. ನೀರಿನ ಸುರಕ್ಷಿತ ಗುಣಮಟ್ಟದ ಬಗ್ಗೆ ಯಾರೂ ಮಾತಾಡುತ್ತಿಲ್ಲ ಎಂದು ಸುರತ್ಕಲ್‌ನ ಎನ್‌ಐಟಿಕೆ ಜಲಸಂಪನ್ಮೂಲ ಮತ್ತು ಸಾಗರ ಎಂಜಿನಿಯರಿಂಗ್ ವಿಭಾಗದ ಪ್ರೊ.ಲಕ್ಷ್ಮಣ್ ನಂದಗಿರಿ ಕಳವಳ ವ್ಯಕ್ತಪಡಿಸುತ್ತಾರೆ.

‘ಅಂತರ್ಜಲದಲ್ಲಿ ಆರ್ಸೆನಿಕ್ ಮತ್ತು ಫ್ಲೋರೈಡ್‌ನಂತಹ ವಿಷಕಾರಿ ಅಂಶ ಹೆಚ್ಚಾಗುತ್ತಿವೆ. ಇದರಿಂದ ಮಾನವ ದೇಹದ ಮೇಲೆ ಗಂಭೀರ ದುಷ್ಪರಿಣಾಮವಾಗುತ್ತಿದೆ. ಕೇಂದ್ರ ಅಂತರ್ಜಲ ಮಂಡಳಿ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ. ಕುಡಿಯುವ ನೀರಿನ ಸುರಕ್ಷತೆ ರಾಜ್ಯದ ವಿಷಯ ಎಂದು ನೆಪ ಹೇಳುತ್ತಾ ಕಾಲಹರಣ ಮಾಡುತ್ತಿದೆ. ತನ್ನದೇ ಆದ ಶಾಸನಬದ್ಧ ಜವಾಬ್ದಾರಿ ಹಾಗೂ ಕಟ್ಟುಪಾಡುಗಳಿಂದ ಮಂಡಳಿ ನುಣುಚಿಕೊಳ್ಳುತ್ತಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ’ ಎಂದೂ ಎನ್‌ಜಿಟಿ ಎಚ್ಚರಿಕೆಯ ಸಂದೇಶ ರವಾನಿಸಿದೆ.

ಎಷ್ಟೇ ಅಂತರ್ಜಲ ಮರುಪೂರಣ ಯೋಜನೆ, ಜಾಗೃತಿ ಮೂಡಿಸಿದರೂ ನೀರಿನ ಮಹತ್ವ ಇಂದಿಗೂ ಅರಿವು ಮೂಡಿಲ್ಲ. ನೀರಿನ ಬೇಕಾಬಿಟ್ಟಿ ಬಳಕೆ ಹೆಚ್ಚಿದೆ. ಲಕ್ಷಾಂತರ ಹಣ ಖರ್ಚು ಮಾಡಿ ಸಾವಿರಾರು ಅಡಿ ಆಳ ಕೊಳವೆಬಾವಿ ಕೊರೆಸಲಾಗುತ್ತಿದೆ. ಆ ಕೊಳವೆಬಾವಿಗಳು ವಿಷದ ನೀರು ಉಗುಳುತ್ತಿವೆ. ❖

ಏಳು ನದಿಗಳನ್ನು ಹೊಂದಿರುವ ಬೆಳಗಾವಿ ಸೇರಿದಂತೆ ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ಹಳೆ ಮೈಸೂರು ಭಾಗದಲ್ಲಿ ಅಂತರ್ಜಲ ಇಳಿಕೆ ಆತಂಕಕ್ಕೆ ಕಾರಣವಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ ‘ಭವಿಷ್ಯದ ಬಳಕೆಗಾಗಿ ನಿವ್ವಳ ಅಂತರ್ಜಲ ಲಭ್ಯತೆ’ ಶೂನ್ಯಕ್ಕೆ ಇಳಿದಿವೆ. ಈ ಜಿಲ್ಲೆಗಳು ರಾಜಸ್ಥಾನದ ಹಾದಿ ತುಳಿದಿವೆ.

ಭೂಮಿ ಮೇಲಿನ ಎಲ್ಲ ಬಗೆಯ ಜಲಮೂಲಗಳ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಅವೈಜ್ಞಾನಿಕ ಅಭಿವೃದ್ಧಿಯಿಂದ ಹಳ್ಳ, ನದಿ ಜಾಲಗಳ ಕೊಂಡಿ ಕಳಚಿದ್ದು, ಜಲಾನಯನ ಪ್ರದೇಶ ಕುಗ್ಗಿದೆ. ಭೂಮಿ ಮೇಲಿನ ಸ್ವಾಭಾವಿಕ ಹೊದಿಕೆ ತೆರವುಗೊಳಿಸಿ, ಕಾಂಕ್ರೀಟ್ ಮುಚ್ಚಿಗೆ ಮಾಡುವುದು ಹಾಗೂ ಕಾಡು ನಾಶಗೊಳಿಸಿ, ಪ್ಲಾಂಟೇಶನ್ ಬೆಳೆಸುವುದು ಅಂತರ್ಜಲ ಮರುಪೂರಣೆಗೆ ದೊಡ್ಡ ಅಡ್ಡಿ. ನೀರು ಆಳಕ್ಕಿಳಿಯುವ ಮೊದಲೇ ಬಳಕೆಯಾಗುತ್ತಿರುವುದು ಮತ್ತೊಂದು ದುರಂತ. ಜಲಾನಯನ ಪ್ರದೇಶಗಳ ರಕ್ಷಣೆಯಾಗಬೇಕು.

ಲಿಂಗರಾಜು ಎಲೆ, ನದಿ ಪುನಃಶ್ಚೇತನ ತಜ್ಞ

ಅಂತರ್ಜಲವು ಸಿಕ್ಕವರಿಗೆ ಸೀರುಂಡೆ ಎಂಬಂತಾಗಿರುವುದರಿಂದಲೇ ಪಾತಾಳಕ್ಕೆ ಕುಸಿಯುತ್ತಿದೆ. ಹೀಗಿದ್ದರೂ ಅದೇ ನಮ್ಮ ಕೊನೆಯ ನೆಮ್ಮದಿಯ ತಾಣ. ಅತ್ಯಂತ ಕಡಿಮೆ ಅಂತರ್ಜಲ ಮಟ್ಟ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಆದರೆ ಅತಿವೃಷ್ಟಿಯನ್ನು ಹಿಡಿದಿಟ್ಟುಕೊಳ್ಳುವ ಮತ್ತು ಅನಾವೃಷ್ಟಿಯನ್ನು ಸಹಿಸಿಕೊಳ್ಳುವ ಯೋಜನೆಯೇ ನಮ್ಮಲ್ಲಿಲ್ಲ. ‘ಹರ್ ಘರ್ ಜಲ್’ ಎಂದು ಮನೆ ಮನೆಗೆ ನಲ್ಲಿ ಹಾಕಿಸುತ್ತಿರುವವರು ನೀರನ್ನು ಎಲ್ಲಿಂದ ತರುವುದು ಎಂದು ಯೋಚಿಸುತ್ತಿಲ್ಲ. ಅಂತರ್ಜಲ ಬಳಕೆ ನಿಯಂತ್ರಣಕ್ಕೆ ಕಾನೂನು ತರಲು ಸರ್ಕಾರಗಳು ಇಚ್ಛಾಶಕ್ತಿ ತೋರುವುದಷ್ಟೇ ಉಳಿದಿರುವ ದಾರಿ.

ಯು.ಎನ್.ರವಿಕುಮಾರ್, ಪರಿಸರ ತಜ್ಞ

ಅಂತರ್ಜಲ ದಕ್ಷಿಣದ ರಾಜ್ಯಗಳಲ್ಲಿ ಹೇಗಿದೆ ಪರಿಸ್ಥಿತಿ

ರಾಜ್ಯ	ಮರುಪೂರಣ	ಹೊರ ತೆಗೆಯುವಿಕೆ
ತಮಿಳುನಾಡು	21.59	14.42
ತೆಲಂಗಾಣ	23.14	8.09
ಕೇರಳ	5.53	2.73
ಆಂಧ್ರ ಪ್ರದೇಶ	27.83	7.48

*(ಶತಕೋಟಿ ಘನಮೀಟರ್‌ಗಳಲ್ಲಿ, ವಾರ್ಷಿಕ)

ಅಂತರ್ಜಲ ಮಟ್ಟ ಲೆಕ್ಕಾಚಾರ ಹೇಗೆ?

ಅಧ್ಯಯನ ನಿರೀಕ್ಷಣಾ ಕೊಳವೆ ಬಾವಿಗಳಲ್ಲಿ ಪ್ರತಿ ತಿಂಗಳು ಜಲಮಟ್ಟವನ್ನು ಭೂಜಲ ಇಲಾಖೆ ಮಾಪನ ಮಾಡುತ್ತದೆ. ಆಯಾ ವರ್ಷದ ಸರಾಸರಿಯ ಮಳೆಯ ಪ್ರಮಾಣ ಪರಿಗಣಿಸಿ ಅಂತರ್ಜಲ ಮಟ್ಟ ನಿರ್ಧರಿಸಲಾಗುತ್ತದೆ. ಈ ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಆಧರಿಸಿ ಅಂತರ್ಜಲದ ಪ್ರಮಾಣ ಹೆಚ್ಚಿದೆಯಾ ಅಥವಾ ಕುಸಿದಿದೆಯಾ ಎಂದು ಲೆಕ್ಕಾಚಾರ ಮಾಡಲಾಗುತ್ತದೆ.

ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಶಂಕೆ

ಪಿಎಸ್‌ಐ ಲಿಂಗಯ್ಯ ತೀವ್ರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇದೇ 21ರಂದು ನಡೆಯಲಿರುವ ವಾಣಿಜ್ಯ ತೆರಿಗೆ ಇಲಾಖೆಯ ಇನ್‌ಸ್ಪೆಕ್ಟರ್ (ಸಿಟಿಐ) ಹಾಗೂ ಇದೇ 23ರಂದು ನಡೆಯುವ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಯ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬ ಶಂಕೆ ವ್ಯಕ್ತವಾಗಿದೆ.

‘ಪ್ರಶ್ನೆ ಪತ್ರಿಕೆ ನೀಡುವುದಾಗಿ ಅಭ್ಯರ್ಥಿಗಳಿಗೆ ಆಮಿಷವೊಡ್ಡಿ ಹಣಕ್ಕೆ ಬೇಡಿಕೆ ಸಲ್ಲಿಸಿದ್ದರು’ ಎಂಬ ಆರೋಪದ ಮೇಲೆ ಗುಪ್ತಚರ ವಿಭಾಗದ ಪಿಎಸ್‌ಐ ಲಿಂಗಯ್ಯ ಅವರನ್ನು ವಶಕ್ಕೆ ಪಡೆದಿದ್ದ ಸಿಸಿಬಿ ಪೊಲೀಸರು, ಶನಿವಾರವೂ ತೀವ್ರ ವಿಚಾರಣೆಗೆ ಒಳಪಡಿಸಿದರು.

ಪಿಎಸ್‌ಐ ಮರು ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು ಆರೋಪಿಸಿ, ಅಭ್ಯರ್ಥಿಗಳು ಚಂದ್ರಾಲೇಔಟ್ ಠಾಣೆ ಎದುರು ಶುಕ್ರವಾರ ರಾತ್ರಿ ಪ್ರತಿಭಟನೆ ನಡೆಸಿದ್ದರು. ಪರೀಕ್ಷೆ ಮುಂದೂಡುವಂತೆ ಆಗ್ರಹಿಸಿದ್ದರು.

‘ರಹಸ್ಯ ಕಾರ್ಯಾಚರಣೆ?’: ‘ಕಳೆದ ಬಾರಿ ಪಿಎಸ್‌ಐ ಪರೀಕ್ಷೆಯಲ್ಲಿ ಅಕ್ರಮ ನಡೆದಿದ್ದು ಸಿಐಡಿ ತನಿಖೆಯಿಂದ ಗೊತ್ತಾಗಿತ್ತು. ಈ ಬಾರಿ ಪರೀಕ್ಷೆಯಲ್ಲೂ ಕೆಲವು ಅಭ್ಯರ್ಥಿಗಳು ಅಕ್ರಮ ಎಸಗಲು ಮುಂದಾಗಿದ್ದರು’ ಎಂಬ ಮಾಹಿತಿ ಮೇರೆಗೆ ಲಿಂಗಯ್ಯ ಅವರೇ ರಹಸ್ಯ ಕಾರ್ಯಾಚರಣೆ ನಡೆಸಲು ಹೋಗಿದ್ದರು ಎನ್ನಲಾಗಿದೆ. ಆದರೂ ಲಿಂಗಯ್ಯ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

‘ಪರೀಕ್ಷಾರ್ಥಿಗಳು ಅಕ್ರಮ ಎಸಗಲು ಮುಂದಾಗಿದ್ದಾರೆ ಎಂಬ ಮಾಹಿತಿ ದೊರೆತ ಮೇಲೆ ಲಿಂಗಯ್ಯ ಅವರು ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೇ? ಅವರ ಸೂಚನೆ ಮೇರೆಗೆ ರಹಸ್ಯ ಕಾರ್ಯಾಚರಣೆ ನಡೆಸಿದ್ದರೆ ಎಂಬುದರ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ. ವಾಟ್ಸ್‌ಆ್ಯಪ್ ಚಾಟಿಂಗ್, ಆಡಿಯೊ ಎಲ್ಲವನ್ನೂ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗುವುದು. ತಾಂತ್ರಿಕವಾಗಿ ಪರಿಶೀಲನೆ ನಡೆಲಾಗುವುದು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಆಡಿಯೊದಲ್ಲಿ ಇಬ್ಬರು ಅಭ್ಯರ್ಥಿಗಳ ಬಳಿ ಮುಂಗಡವಾಗಿ ₹10 ಲಕ್ಷ ಮುಂಗಡ ಹಣ ಪಡೆದುಕೊಳ್ಳಲಾಗಿದೆ ಎಂಬುದನ್ನು ಉಲ್ಲೇಖಿಸಲಾಗಿದೆ. ಹಣ ನೀಡಿದ ಅಭ್ಯರ್ಥಿಗಳು ಯಾರು ಎಂಬುದರ ಬಗ್ಗೆಯೂ ತನಿಖೆ ನಡೆಯುತ್ತಿದೆ’ ಎಂದು ಹೇಳಿದರು.

‘ಲಿಂಗಯ್ಯ ಅವರು ಮಾತನಾಡಿದ್ದಾರೆ ಎನ್ನಲಾದ ಆಡಿಯೊದಲ್ಲಿ, ಈ ಹಿಂದಿನ ಪಿಎಸ್‌ಐ ಪರೀಕ್ಷೆ ಅಕ್ರಮದ ಬಗ್ಗೆಯೂ ಚರ್ಚೆ ನಡೆದಿದೆ. ನೇಮಕಾತಿ ವಿಭಾಗದ ಡಿವೈಎಸ್‌ಪಿ ಆಗಿದ್ದ ಶಾಂತಕುಮಾರ್ ಹೆಸರು ಪ್ರಸ್ತಾಪಿಸಲಾಗಿದೆ. ಎಲ್ಲ ಆಯಾಮಗಳಲ್ಲೂ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಆತಂಕಬೇಡ: ಪರಮೇಶ್ವರ

‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಮರು ಪರೀಕ್ಷೆಗೆ ಸಂಬಂಧಿಸಿದಂತೆ ಗುಪ್ತದಳ ಪರಿಶೀಲನೆ ನಡೆಸಿದಾಗ ಪ್ರಶ್ನೆಪತ್ರಿಕೆ ಸೋರಿಕೆ ಮಾಹಿತಿ ಹೊರಬಿದ್ದಿದೆ. ಸಿಸಿಬಿ ಪೊಲೀಸರು ಕೂಲಂಕಷವಾಗಿ ವಿಚಾರಣೆ ನಡೆಸುತ್ತಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

‘ಯಾವುದೇ ರೀತಿಯ ಅಕ್ರಮ ನಡೆದಿಲ್ಲ. ಅಕ್ರಮದ ಬಗ್ಗೆ ಮಾಹಿತಿ ಸಂಗ್ರಹಿಸಲು ನಕಲಿ ಕರೆ ಮಾಡಿರುವುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ. ಸತ್ಯಾಸತ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ. ಸುರಕ್ಷಿತವಾಗಿ ಪರೀಕ್ಷೆ ನಡೆಯಲಿದ್ದು, ಅಭ್ಯರ್ಥಿಗಳು ಆತಂಕಪಡುವುದು ಬೇಡ’ ಎಂದರು.

ತುಂಗಭದ್ರಾ ಅವ್ಯವಹಾರ: 24 ಎಂಜಿನಿಯರ್‌ಗಳು ಅಮಾನತು

ಬೆಂಗಳೂರು: ತುಂಗಭದ್ರಾ ಎಡದಂಡೆ ಕಾಲುವೆ ಆಧುನೀಕರಣ ಕಾಮಗಾರಿಯ ಅವ್ಯವಹಾರದಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ 24 ಎಂಜಿನಿಯರ್‌ಗಳು ಸೇರಿದಂತೆ 28 ನೌಕರರನ್ನು ಅಮಾನತು ಮಾಡಿ ಜಲಸಂಪನ್ಮೂಲ ಇಲಾಖೆ ಆದೇಶ ಹೊರಡಿಸಿದೆ.

ಎಂಜಿನಿಯರ್‌ಗಳಾದ ಅನಂತಕುಮಾರ್ ಚೂರಿ, ವಿನೋದ್ ಕುಮಾರ್ ಗುಪ್ತ, ಎಂ.ಹನುಮಂತಪ್ಪ, ಬಿ.ಶಿವಮೂರ್ತಿ, ಸೂಗಪ್ಪ, ವಿ.ತಿಮ್ಮಣ್ಣ, ಈಶ್ವರ ನಾಯಕ್, ಕೆ.ಶಾಂತರಾಜು, ಬಸವರಾಜ ಹಳ್ಳಿ, ಸಿ.ಎಚ್.ಜಿ.ವೆಂಕಟೇಶ್ವರ ರಾವ್, ಜಿತೇಂದ್ರ, ರಾಜೀವ ನಾಯಕ್, ಎಚ್.ವಿಶ್ವನಾಥ್, ಕೃಷ್ಣಮೂರ್ತಿ, ದೇವೇಂದ್ರಪ್ಪ, ಯಲ್ಲಪ್ಪ, ಕೆ.ಬಿ.ರವಿ, ಜಗನ್ನಾಥ ಕುಲಕರ್ಣಿ, ಕನಕಪ್ಪ, ಅಬ್ದುಲ್ ರಶೀದ್ ಖಾನ್, ಗಜಾನನ, ಮೋಹನ್‌ಕುಮಾರ್, ಎಚ್.ಡಿ.ನಾಯಕ, ಮಲ್ಲಪ್ಪ ನಾಗಪ್ಪ, ದ್ವಿತೀಯ ದರ್ಜೆ ಸಹಾಯಕರಾದ ಮಹಿಮೂದ್, ನಾಗರಾಜ್, ಆರೀಫ್ ಹುಸೇನ್, ಅಬ್ದುಲ್ ಹಕ್ ಅಮಾನತುಗೊಂಡವರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ ತುಂಗಭದ್ರಾ ಎಡದಂಡೆ ಕಾಲುವೆ ಆಧುನೀಕರಣ ಕಾಮಗಾರಿ ಕೈಗೊಳ್ಳಲಾಗಿತ್ತು. 2009-11ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ ಎಂಜಿನಿಯರ್‌ಗಳು ಗುತ್ತಿಗೆದಾರರ ಜತೆ ಶಾಮೀಲಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಮಧ್ಯಸ್ಥಿಕೆ ಮೂಲಕ ದೊಡ್ಡ ಮೊತ್ತದ ಪರಿಹಾರ ಕೊಡಿಸಿದ್ದಾರೆ. ಇದರಿಂದ ಸರ್ಕಾರಕ್ಕೆ ₹650 ಕೋಟಿ ಆರ್ಥಿಕ ನಷ್ಟ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಜತೆಗೆ, ಇಲಾಖಾ ತನಿಖೆಗೆ ಆದೇಶಿಸಲಾಗಿದೆ.

ಆರೋಪಿತ ಎಂಜಿನಿಯರ್‌ಗಳು ಹಾಗೂ ಸಿಬ್ಬಂದಿ 2009–10ನೇ ಸಾಲಿನಲ್ಲಿ 9 ಪ್ರಕರಣಗಳು ಹಾಗೂ 2010–11ನೇ ಸಾಲಿನಲ್ಲಿ 4 ಪ್ರಕರಣಗಳಲ್ಲಿ ಲೋಪ ಎಸಗುವ ಮೂಲಕ ಹಣಕಾಸು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 21-1-1999

● ಗಿರೀಶ್ ಕಾರ್ನಾಡ್‌ಗೆ ಜ್ಞಾನಪೀಠ ಪ್ರಶಸ್ತಿ

ನವದೆಹಲಿ, ಜ. 20 (ಪಿಟಿಐ)– ಹೆಸರಾಂತ ನಾಟಕಕಾರ, ನಿರ್ದೇಶಕ ಹಾಗೂ ನಟ ಗಿರೀಶ್ ಕಾರ್ನಾಡ್ ಅವರನ್ನು 1998ರ ಸಾಲಿನ ಪ್ರತಿಷ್ಠಿತ ಜ್ಞಾನಪೀಠ ಸಾಹಿತ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕರ್ನಾಟಕಕ್ಕೆ ಇದು ಏಳನೆಯ ಜ್ಞಾನಪೀಠ ಪ್ರಶಸ್ತಿ. ಇದರೊಂದಿಗೆ ಭಾರತೀಯ ಸಾಹಿತ್ಯ ಲೋಕದಲ್ಲಿ ಕರ್ನಾಟಕ ಹೆಮ್ಮೆಯ ಸ್ಥಾನ ಪಡೆಯಿತು. ಇದುವರೆಗೆ ಕುವೆಂಪು, ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ, ವಿ.ಕೃ. ಗೋಕಾಕ್ ಹಾಗೂ ಯು.ಆರ್. ಅನಂತಮೂರ್ತಿ ಅವರು ಈ ಪ್ರತಿಷ್ಠಿತ ಪುಸ್ಕಾರ ಪಡೆದಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 21-1-1974

● ಭಾರತ– ಬಲ್ಗೇರಿಯ ಮಧ್ಯೆ ಸಹಕಾರಕ್ಕೆ ಒಪ್ಪಂದ

ನವದೆಹಲಿ, ಜ. 20– ಕೈಗಾರಿಕಾ ಕ್ಷೇತ್ರದಲ್ಲಿ ವ್ಯಾಪಕ ಸಹಕಾರದ ವಿನಿಮಯ ಕುರಿತು ಭಾರತ ಮತ್ತು ಬಲ್ಗೇರಿಯಗಳು ರೂಪುರೇಷೆ ಸಿದ್ಧಪಡಿಸಿಕೊಂಡಿವೆ. ಭಾರತಕ್ಕೆ ಭೇಟಿ ಕೊಟ್ಟಿದ್ದ ಬಲ್ಗೇರಿಯದ 12 ಜನರ ನಿಯೋಗ ಇಂದು ತನ್ನ ಒಂದು ವಾರದ ಮಾತುಕತೆಯನ್ನು ಅಂತ್ಯಗೊಳಿಸಿತು. ಕಬ್ಬಿಣೇತರ ಲೋಹ ತಾಂತ್ರಿಕತೆಯಲ್ಲಿ ಬಲ್ಗೇರಿಯದ ಸಾಧನಗಳ ಅಧ್ಯಯನ ನಡೆಸಲು ಭಾರತೀಯ ತಜ್ಞರ ತಂಡ ಬಲ್ಗೇರಿಯಕ್ಕೆ ಬರಬೇಕೆಂದು ಅವರು ಆಹ್ವಾನ ನೀಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಜನವರಿ 21, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ಏಕಾದಶಿ ಗಂ. 19-28 ನಕ್ಷತ್ರ: ರೋಹಿಣಿ ಗಂ. 27-52 ಯೋಗ: ಶುಕ್ಲ (ಶುಕ್ರ) ಗಂ. 09-47 **ಕರಣ:** ವಣಿಜ ಗಂ. 07-24, ಮಕರ ಮಾಸದ 06 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 4.
ರಾಹುಕಾಲ : ಸಾಯಂಕಾಲ 04-30 – 06-00, **ಸೂರ್ಯೋದಯ :** 07-01
ಸೂರ್ಯಾಸ್ತ : 06-22, ಮುಸ್ಲಿಂ ದಿನಾಂಕ : 09 ರಜಬ್
ದಿನ ವಿಶೇಷ : ಪುತ್ರದ ಏಕಾದಶಿ
ಅದೃಷ್ಟ ಸಂಖ್ಯೆ : 5, 8

ಮೇಷ: ಯಂತ್ರೋಪಕರಣಗಳ ರಿಪೇರಿ ಮತ್ತು ಮಾರಾಟದಿಂದ ಮತ್ತು ಪಶುಸಂಗೋಪನೆಯಿಂದ ಲಾಭ ಇರುವುದು. ಕೌಟುಂಬಿಕವಾಗಿ ಮೂಡಿದ್ದ ಅನುಮಾನಗಳು ದೂರವಾಗಲಿದೆ. ಸತ್ಕಾರ್ಯಗಳಿಂದ ಮನೆಯಲ್ಲಿ ಸಡಗರ.

ವೃಷಭ: ಹಿತ್ತಾಳೆ, ತಾಮ್ರದಂಥ ಲೋಹದ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚಳವಾಗಲಿದೆ. ಗಣ್ಯವ್ಯಕ್ತಿಗಳಿಗೆ ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ಉನ್ನತ ಸ್ಥಾನಮಾನ ಹಾಗೂ ಗೌರವಗಳು ಲಭಿಸಲಿವೆ.

ಮಿಥುನ: ನೂತನ ಮನೋಭಿಲಾಷೆ, ಯೋಚನೆಗಳು ಖರ್ಚಿಗೆ ದಾರಿ ಯಾದರೂ ಮುಂದಿನ ದಿನಗಳಲ್ಲಿ ಉಪಕಾರಿಯಾಗಿರುತ್ತದೆ. ಆಕಸ್ಮಿಕ ರೀತಿಯಲ್ಲಿ ಮದುವೆ ನಿಶ್ಚಯ ಕಾರ್ಯ ನಡೆಯಲಿದೆ.

ಕರ್ಕಾಟಕ: ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಹಿಂದಿನಿಂದ ಬಾಕಿ ಇರುವ ಮನೆ ದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರಕ್ಕೆ ಬರುವಂತಾಗುವುದು.

ಸಿಂಹ: ಖರ್ಚು-ವೆಚ್ಚದಲ್ಲಿ ಮಿತಿ ಇದ್ದರೆ ಉತ್ತಮ. ಮುಖ್ಯವಾಗಿ ವಾಹನ ಚಾಲನೆಯಲ್ಲಿ ಜಾಗರೂಕರಾಗಿರಿ. ಇನ್ನೊಬ್ಬರನ್ನು ಹೀಯಾಳಿಸುವುದು ಅಥವಾ ಅಪಹಾಸ್ಯ ಮಾಡುವುದು ನಿಮ್ಮ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ.

ಕನ್ಯಾ: ಮಗಳ ಮದುವೆಯ ಸಲುವಾಗಿ ಆಭರಣವನ್ನು ಕೊಳ್ಳುವ ಬಗ್ಗೆ ಅಥವಾ ಇನ್ನೇನಾದರೂ ತಯಾರಿ ಮಾಡಿಕೊಳ್ಳುವ ಬಗ್ಗೆ ಯೋಚಿಸಿ. ವಾಹನ ವಹಿವಾಟುಗಳಲ್ಲಿ ನಿರೀಕ್ಷೆಗೂ ಮೀರಿದ ಲಾಭ ಪಡೆಯಬಹುದು.

ತುಲಾ: ಜಟಿಲ ಸಮಸ್ಯೆಗಳು ಬಗೆಹರಿದು ನೆಮ್ಮದಿ ಉಂಟಾಗುವುದು. ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ. ಹಿರಿಯರ ಮಾತಿನ ಬಗ್ಗೆ ಗಮನವಿರಲಿ.

ವೃಶ್ಚಿಕ: ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ ಮರಳಿ ಪ್ರಯತ್ನ ಮಾಡುವುದರಿಂದ ಜಯಶಾಲಿಯಾಗಬಹುದು. ಮಕ್ಕಳ ವಿಚಾರದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಉತ್ತಮ. ಆರೋಗ್ಯದ ಬಗ್ಗೆ ನಿಗಾ ವಹಿಸಿ.

ಧನು: ಎಲ್ಲರೊಂದಿಗೆ ಎಲ್ಲ ವಿಚಾರದಲ್ಲಿ ಹೊಂದಿಕೊಳ್ಳುವ ನಿಮ್ಮ ಗುಣ ಹಾಗೂ ಸಾಮರ್ಥ್ಯ ಈ ದಿನ ಬಹಳಷ್ಟು ಮುಖ್ಯವೆನಿಸುವುದು. ವಿದ್ಯೆ ಮತ್ತು ಬುದ್ಧಿವಂತಿಕೆಯನ್ನು ಸರಿಯಾದ ಮಾರ್ಗದಲ್ಲಿ ಬಳಸುವ ಬಗ್ಗೆ ತೀರ್ಮಾನಿಸಿ.

ಮಕರ: ಮನೆ ಬದಲಾಯಿಸುವ ಯೋಚನೆಗೆ ಇಂದು ಸರಿಯಾದ ಸಮಯ. ನಾನಾ ರೀತಿಯಲ್ಲಿ ಹಣವು ನಿಮ್ಮ ಕೈ ಸೇರಲಿದೆ. ಮುಂದಿನ ದಿನಗಳಲ್ಲಿ ಯಾವುದೇ ಅವ್ಯವಹಾರ, ತಪ್ಪುಗಳು ನಡೆಯದಂತೆ ಜಾಗ್ರತೆ ವಹಿಸಿ.

ಕುಂಭ: ವಂಶ ಪಾರಂಪರ್ಯದಿಂದ ಬಂದ ನಿಮ್ಮ ವ್ಯಾಪಾರ ವ್ಯವಹಾರಗಳು ಈ ದಿನ ಮತ್ತಷ್ಟು ಏಳಿಗೆಯನ್ನು ಕಾಣಲಿದೆ. ವ್ಯವಹಾರಿಕ ಸಲಹೆಗಳಿಗೆ ಮನ್ನಣೆ ದೊರೆಯಲಿದೆ. ಯಾವುದೇ ಕಟ್ಟುಪಾಡಿಗೆ ಸಿಕ್ಕಿಕೊಳ್ಳಬೇಡಿ.

ಮೀನ: ಸಜ್ಜನರ ಒಡನಾಟದಿಂದ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ. ನೂತನ ವ್ಯಕ್ತಿಯ ಪರಿಚಯವು ಸರ್ಕಾರಿ ಕೆಲಸಕ್ಕೆ ಅನುಕೂಲವನ್ನು ಉಂಟು ಮಾಡಲಿದೆ. ವಿವಾಹದ ವಿಷಯಗಳು ಚರ್ಚೆಯಾಗುವುದು.

ಪದಬಂಧ 5567

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆರಂಭವಾದ ಹಬ್ಬ! (4)
3.ತುಸುವೇ ಬೀರಿದ ನಗು (4)
5.ವರ ನೀಡಿದ್ದು ವಿಸ್ತಾರ ಹೇಳಿಕೆ (3)
6.ನಿರ್ಜನ ಜಾಗದಲ್ಲಿರುವ ಕೆಟ್ಟವ್ಯಕ್ತಿ (3)
8.ಮರದ ಹತ್ತಿರದ ಚಮ್ಮಾರನ ಅಂತ್ಯ! (3)
9.ಏರುವಾಗ ಸಮತಟ್ಟಾಗಿಲ್ಲದ್ದು! (4)
10.ಅಕ್ಕನ ಗಂಡನೊಡನಿರುವ ನೈರ್ಮಲ್ಯ (4)
11.ಕೊನೆಗೆ ಹಣ್ಣನ್ನಿಟ್ಟರೇ ಯಶಸ್ವಿ! (3)
12.ಮಗನು ಕಲಿತಿರುವ ವೇದ (3)
14. ಆಸ್ತಿಯಲ್ಲಿ ಪಾಲುಪಡೆಯುವವ (3)
16.ಮಲಗುವ ಮನೆ ಇಲ್ಲಿದೆ (4)
17.ದಿನಾ ಕಾಣಿಸುವ ಹೊಳೆದಂಡೆ (4)

ಮೇಲಿಂದ ಕೆಳಕ್ಕೆ
1.ಸದನದಲ್ಲಿ ತೋರಿಸಿದ ಅಧಿಕಾರ ಪತ್ರ (3)
2.ಸಂಸಾರ ಬಂಧನಕ್ಕೊಳಗಾದವನು ಭವಿಷ್ಯದಲ್ಲಿದ್ದಾನಲ್ಲಾ! (2)
3.ನಗರ ನೋಡುತ್ತಿರುವ ಮನುಷ್ಯ (2)
4.ಮಲಗುವಾಗ ಕಾಣಿಸಿದ ಚಾರ (3)
7.ಪೇರಲ ಹಿಡಿದಿರುವವ ಕೈಲಾಗದವನು (5)
8.ಚಕ್ರ ಹಿಡಿದಿರುವ ಸಾಮ್ರಾಜ್ಞಿ (5)
11.ದೃಶ್ಯದಲ್ಲಿ ಸಮಾನವಾದುದು (3)
13.ಮರದೊಳಗಿರುವ ಸಿಹಿ (3)
14.ರಹದಾರಿ ಪಡೆವಾಗ ಆದ ನೀರಡಿಕೆ (2)
15.ದಿವಾನನ ಜೊತೆ ಕಳೆದಿರುವ ದಿವಸ (2)



5566ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ದುರಾಚಾರಿ 3.ಮನೋಗತ
5.ಪುಳಕ 6.ತಣಿ
7.ನೆಪ 9.ದಸರ
10.ದಾನವ 12.ತದಿ
14.ವಾರ 15.ಮೃತ್ತಿಕೆ
17.ನವರಂಗ 18.ರಸಾಯನ

ಮೇಲಿಂದ ಕೆಳಕ್ಕೆ:
1.ದುರ್ಘಟನೆ 2.ರಿಪು
3.ಮಕರಂದ 4.ತರುಣಿ
6.ತರಬೇತಿ 8.ಪತ್ತೇದಾರ
11.ವನ್ಯಮೃಗ 13.ದಿಟ್ಟತನ
14.ವಾಚನ 16.ಕೆರ

ಸುಡೊಕು 5952

	4				1		2	
8				3				9
	2	5			9		8	3
	6					3		8
	7	4	1	8	3			
3						5		1
	8		3		4		1	5
		1		9		8		4
4	3		5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5951 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಜಿಎಸ್‌ಡಿಪಿ: ಸಂಪನ್ಮೂಲ ಕೊರತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಸ್ವಂತ ತೆರಿಗೆ ಸಂಗ್ರಹ ಉತ್ತಮ ಇದ್ದರೂ, ಹೆಚ್ಚುತ್ತಿರುವ ಆರ್ಥಿಕ ಸವಾಲುಗಳನ್ನು ಎದುರಿಸಲು ಮತ್ತು 2032ರ ವೇಳೆಗೆ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆ (ಜಿಎಸ್‌ಡಿಪಿ) ಒಂದು ಟ್ರಿಲಿಯನ್ ಡಾಲರ್ ತಲುಪಲು ನಮ್ಮಲ್ಲಿರುವ ಸಂಪನ್ಮೂಲಗಳು ಸಾಕಾಗುತ್ತಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯದ ವತಿಯಿಂದ ಶನಿವಾರ ನಡೆದ ‘ಆರ್ಥಿಕ ಸಂಯುಕ್ತತೆ: 16ನೇ ಹಣಕಾಸು ಆಯೋಗದ ಮುಂದಿರುವ ಸವಾಲುಗಳು’ ಕುರಿತ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

‘ರಾಜ್ಯದ ಆರ್ಥಿಕ ಹಾಗೂ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಮಾನವ ಮತ್ತು ಭೌತಿಕ ಮೂಲಸೌಲಭ್ಯಗಳ ಮೇಲೆ ಗಮನಾರ್ಹ ಹೂಡಿಕೆಯ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

‘ಇಡೀ ದೇಶದಲ್ಲಿ ಅತಿ ಹೆಚ್ಚು ತೆರಿಗೆ ನೀಡುವ ಕರ್ನಾಟಕಕ್ಕೆ ತಾನು ನೀಡುವ ಪಾಲಿಗೆ ತಕ್ಕ ಪ್ರತಿಫಲ ಸಿಗದಿರುವುದು ವಿಪರ್ಯಾಸ. ಆರ್ಥಿಕ ದಕ್ಷತೆಗೆ ಪ್ರೋತ್ಸಾಹ ಹಾಗೂ ವಿತ್ತೀಯ ಕಾರ್ಯಕ್ಷಮತೆಗೆ ಪ್ರಾಧಾನ್ಯ ನೀಡುವಂತೆ 16ನೇ ಹಣಕಾಸು ಆಯೋಗವನ್ನು ಒತ್ತಾಯಿಸಲಾಗುವುದು’ ಎಂದ ಅವರು, ‘ಅತ್ಯುತ್ತಮ ವಿತ್ತೀಯ ಕಾರ್ಯಕ್ಷಮತೆ ಹೊಂದಿರುವ ರಾಜ್ಯ ಎಂದು ದಾಖಲೆ ಹೊಂದಿರುವ ಕರ್ನಾಟಕಕ್ಕೆ ಅದರ ದಕ್ಷತೆಗಾಗಿ ಯಾವುದೇ ಪ್ರೋತ್ಸಾಹ ಸಿಗುತ್ತಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಈ ಹಿಂದಿನ ಹಣಕಾಸು ಆಯೋಗದ ಶಿಫಾರಸುಗಳಿಂದ ಕರ್ನಾಟಕ ಭಾರಿ ನಷ್ಟ ಅನುಭವಿಸಬೇಕಾಗಿ ಬಂದಿದೆ. ರಾಜ್ಯ ಸರ್ಕಾರಗಳಿಗೆ ಪ್ರಮುಖ ವೆಚ್ಚ ಹೊಣೆಗಾರಿಕೆಗಳಿವೆ. ಬಹುತೇಕ ಸಂದರ್ಭದಲ್ಲಿ ಅಗತ್ಯ ರಾಜ್ಯ ಸಂಪನ್ಮೂಲ ಲಭ್ಯತೆ ಇರುವುದಿಲ್ಲ. ವಿತ್ತೀಯ ಸ್ವಾಯತ್ತೆ ಉಳಿಸಿಕೊಳ್ಳುತ್ತಲೇ ರಾಜ್ಯಮಟ್ಟದಲ್ಲಿ ವೆಚ್ಚ ಹೊಣೆಗಾರಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ನಿಟ್ಟಿನಲ್ಲಿ ಸಂಪನ್ಮೂಲ ವರ್ಗಾವಣೆಗೆ ಹಣಕಾಸು ಆಯೋಗಗಳು ಪ್ರಾಮುಖ್ಯತೆ ನೀಡಬೇಕು’ ಎಂದು ಹೇಳಿದರು.

ಕಂದಾಯ ಆಯುಕ್ತಾಲಯ

ಕಂದಾಯ ಆಯುಕ್ತಾಲಯ ಕಛೇರಿ, ಕೊಠಡಿ ಸಂಖ್ಯೆ-711, 7ನೇ ಮಹಡಿ, 2 ಗೇಟ್ ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.
ಇ-ಮೇಲ್: commrrd@gmail.com ದೂ: 080-22032691

ಸಂ: RC-CFSOADM(ADM)7/2023 ದಿನಾಂಕ: 20.01.2024

ಇ-ಟೆಂಡರ್ ಅಧಿಸೂಚನೆ

(Tender No: RD/2023-24/IND0084)
(Tender No: RC-CFSOADM(ADM)7/2023

ಕಂದಾಯ ಆಯುಕ್ತಾಲಯಕ್ಕೆ ಅಗತ್ಯವಿರುವ Desktop and Laptop ಗಳನ್ನು ಖರೀದಿಸಲು ಇ-ಟೆಂಡರ್ ದಾಖಲೆಗಳನ್ನು ದಿನಾಂಕ: **29.01.2024 ರ ಸಂಜೆ 5.30 ಗಂಟೆಯೊಳಗೆ** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸಹಿ/-
ತಹಶೀಲ್ದಾರ್ (ಆಡಳಿತ), ಕಂದಾಯ ಆಯುಕ್ತಾಲಯ,
ಕಂದಾಯ ಇಲಾಖೆ, ಬೆಂಗಳೂರು

ವಾಸಾಸಂಇ/ವಾಪ್ರ/ಸ್ಕ್ಯಾನ್/3140/2023-24

ಕರ್ನಾಟಕ ಸರ್ಕಾರದ ಸಚಿವಾಲಯ (ಭದ್ರತೆಗಳು)

ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು.

1. **ಒಟ್ಟು ಮೊತ್ತ : ರೂ. 5000 ಕೋಟಿ (ರೂ. 2000 ಕೋಟಿ (17 ವರ್ಷಗಳ ಅಧಿಕಾರಾವಧಿ) (ರೂ. 3000 ಕೋಟಿ (18 ವರ್ಷಗಳ ಅಧಿಕಾರಾವಧಿ)).**
2. ವಿತರಿಸುವ ವಿಧಾನ: ಹರಾಜು PDO, RBI, ಮುಂಬೈ (ಕೋಟೆ) ಮೂಲಕ.
3. ಹರಾಜಿನ ದಿನಾಂಕ : **ಜನವರಿ 23, 2024.**

ಕರ್ನಾಟಕ ಸರ್ಕಾರವು ಮೇಲಿನ ಭದ್ರತೆಗಳಿಗೆ ಚಂದಾದಾರಿಕೆಗಳನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ 10% ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ **www.rbi.org.in** ವೆಬ್‌ಸೈಟ್ ನಲ್ಲಿ ಲಭ್ಯವಿದೆ.

ಸಹಿ/- (ಡಾ. ಪಿ. ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ

DIPR/CP/RO/3111/2023-24

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ
ಬೈತ್‌ಖೋಲ್, ಕಾರವಾರ

ಕ್ರ.ಸಂ. ಕಜಮಂ-02/ಸಿಬ್ಬಂಧಿ-1/2024/1436 ದಿನಾಂಕ: 12.01.2024

ಪ್ರಕಟಣೆ

ವಿಷಯ: ಕರ್ನಾಟಕ ಜಲಸಾರಿಗೆ ಮಂಡಳಿಯ ಕಛೇರಿ, ಕಾರವಾರದಲ್ಲಿ ಕಾನೂನು ಸಲಹೆಗಾರರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ವಿವಿಧ ನ್ಯಾಯಾಲಯದ ಪ್ರಕರಣ / ಕಡತಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆ ನೀಡಲು ಹಾಗೂ ವ್ಯಾಜ್ಯಗಳನ್ನು ನಿರ್ವಹಿಸುಲು ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಸಿವಿಲ್ ನ್ಯಾಯಧೀಶರು, ಕಾನೂನು ಪದವೀಧರಾಗಿರುವ ಕಂದಾಯ ಇಲಾಖೆಯ ನಿವೃತ್ತ ವಿಶೇಷ ಜಿಲ್ಲಾಧಿಕಾರಿ / ನಿವೃತ್ತ ತಹಶೀಲ್ದಾರರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳಬೇಕಾಗಿರುವುದರಿಂದ ಅರ್ಹತೆಯುಳ್ಳವರು ತಮ್ಮ ಅರ್ಜಿಯನ್ನು BIO-DATA ದೊಂದಿಗೆ ದಿನಾಂಕ 31.01.2024 ರೊಳಗೆ ಮುಖ್ಯ ನಿರ್ವಾಹಣಾಧಿಕಾರಿಗಳು, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ ಕಛೇರಿಗೆ ಸಲ್ಲಿಸುವುವಂತೆ ಕೋರಿದೆ.

ಸಹಿ/- ನಿರ್ದೇಶಕರು, ಬಂದರು ಮತ್ತು ಸದಸ್ಯರು
ಜಲಸಾರಿಗೆ ಮತ್ತು ಒಳನಾಡು ಜಲಸಾರಿಗೆ ನಿರ್ವಹಣೆ)
ಕರ್ನಾಟಕ ಜಲಸಾರಿಗೆ ಮಂಡಳಿ ಕಾರವಾರ.

DIPR/KWR/KSMCA/568/23-24 Dt: 20.01.2024

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ

Pho: 08194-234488 Email:-eerdwsd.chd@gmail.com

ನಂ.ಗ್ರಾ.ನೀ.ಸ.&ನೈ./ವಿ/ಚಿ/ಕಾಇಂ/ಬಿ4/ಟೆಂಡರ್/2023-24/2035
ದಿನಾಂಕ:-19.01.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು-2&3 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್, ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ ದಾವಣಗೆರೆ/ಮುಖ್ಯ ಇಂಜಿನಿಯರ್ ಪಂಚಾಯುತ್ ರಾಜ್ ಇಂಜಿನಿಯುರಿಂಗ್ ಇಲಾಖೆ ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ-ಪ್ರಾಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಏಕ ಮತ್ತು ದ್ವಿ-ಲಕೋಟೆ ಪದ್ದತಿಯಲ್ಲಿ 2022-23 ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯಡಿ ಹೊಳಲ್ಕೆರೆ ತಾಲ್ಲೂಕು ವ್ಯಾಪ್ತಿಯ 03 ಕಾಮಗಾರಿ ರೂ. 124.20 ಲಕ್ಷಗಳು, ಹಿರಿಯೂರು ತಾಲ್ಲೂಕು ವ್ಯಾಪ್ತಿಯ 01 ಕಾಮಗಾರಿ ರೂ. 12.12 ಲಕ್ಷಗಳು ಮತ್ತು ಹೊಸದುರ್ಗ ತಾಲ್ಲೂಕು ವ್ಯಾಪ್ತಿಯ 01 ಕಾಮಗಾರಿಗಳು ರೂ. 29.91 ಲಕ್ಷಗಳಿಗೆ (05 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ಹೊಂದಿದ ಕಾಮಗಾರಿಯ ಮೊತ್ತ ರೂ. 62.50 ಲಕ್ಷ) ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 29.01.2024 ಸಂಜೆ 4-00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.01.2024 ರ ಸಂಜೆ 4-30 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 31.01.2024 ರ ಬೆಳಗ್ಗೆ 11.00 ಗಂಟೆ ಕಾಮಗಾರಿಗಳ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ. ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

DIPR/CTA/KSMCA/494/2023-24

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಆಯುಷ್ ಇಲಾಖೆ

ಧನ್ವಂತರಿ ರಸ್ತೆ, ಬೆಂಗಳೂರು-560 009, ದೂರವಾಣಿ ಸಂ: 080-22876553,
ಫ್ಯಾಕ್ಸ್: 080-22340139. ಇ-ಮೇಲ್: directorayush.eproc@gmail.com

ಸಂಖ್ಯೆ: ಆಯುಷ್/77/ಸಂಗ್ರಹಣಾ/2023-24 ದಿನಾಂಕ: 20-01-2024

ಇ-ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

2023-24ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಉಚಿತವಾಗಿ ವೈದ್ಯಕೀಯ ಉಪಕರಣಗಳು ಮತ್ತು ಪುಸ್ತಕಗಳನ್ನು ಖರೀದಿಸಿ ಸರಬರಾಜು ಮಾಡುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ನಿಯಮಗಳನ್ವಯ ದ್ವಿ-ಲಕೋಟಿ ಪದ್ಧತಿಯಲ್ಲಿ ಇ-ಪ್ರೊಕ್ಯೂಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಾಗಿ, ಇ.ಎಂ.ಡಿ ಬಗ್ಗೆ, ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್ ಸೈಟ್ **http://kppp.karnataka.gov.in** ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ನೋಡಬಹುದಾಗಿದೆ.

ಇ-ಟೆಂಡರ್ ಪ್ರಕ್ರಿಯೆ: 1. ಇ-ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಳ್ಳಲು ಪ್ರಾರಂಭ **ದಿನಾಂಕ: 20-01-2024 ಸಂಜೆ 5:30 ಗಂಟೆ. 2.** ಪೂರ್ವಬಾವಿ ಸಮಿತಿ ಸಭೆಯ **ದಿನಾಂಕ: 25-01-2024 ಬೆಳಿಗ್ಗೆ 11:30 ಗಂಟೆ. 3.** ಇ-ಪೋರ್ಟಲ್ ಮುಖಾಂತರ ಟೆಂಡರ್ ಅಪ್ಲೋಡ್ ಮಾಡಲು ಕೊನೆಯ **ದಿನಾಂಕ : 07-02-2024 ಸಂಜೆ 5:30 ಗಂಟೆ. 4.** ಟೆಂಡರ್ ತೆರೆಯುವ (ತಾಂತ್ರಿಕ ಬಿಡ್) **ದಿನಾಂಕ : 09-02-2024 ಬೆಳಿಗ್ಗೆ 11:30 ಗಂಟೆ. 5.** ಟೆಂಡರ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ : 12-02-2024 ಸಂಜೆ 3:30 ಗಂಟೆ.**

ಸಹಿ/-
ಲೆಕ್ಕಾಧಿಕಾರಿಗಳು ಅಧ್ಯಕ್ಷರು

DIPR/CP/RO3146/AAPL/2023-24

ಸಕಲೇಶಪುರದ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ

ಜಾರಿ ಕೇಸ್ ನಂ : 21/2022

ಅರ್ಜಿದಾರರು :ಮ್ಯಾನೇಜರ್ ಹೆಚ್ ಡಿ ಸಿ ಸಿ ಬ್ಯಾಂಕ್, ಹಾನುಬಾಳು ಬ್ರಾಂಚ್, ಹಾನುಬಾಳು, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ

ವಿರುದ್ಧ

ರೆಸ್ಪಾಂಡೆಂಟರು: 1. ಹೆಚ್ ಎನ್ ಗೌರಮ್ಮ, ಕೋಂ ಬಿ ಕೆ ನಂಜೇಗೌಡ, ಸುಮಾರು 80 ವರ್ಷ, 2 ಬಿ ಎನ್ ಯಶೋಧ ಬಿನ್ ಬಿ ಕೆ ನಂಜೇಗೌಡ ಸುಮಾರು 60 ವರ್ಷ, 3. ಬಿ ಎನ್ ಸುನಂದ ಬಿನ್ ಬಿ ಕೆ ನಂಜೇಗೌಡ ಸುಮಾರು 58 ವರ್ಷ 4. ಬಿ ಎನ್ ಸುಜಾತ ಬಿನ್ ಬಿ ಕೆ ನಂಜೇಗೌಡ ಸುಮಾರು 56 ವರ್ಷ, 5. ಬಿ ಎನ್ ಆನಂದ ಬಿನ್ ಬಿ ಕೆ ನಂಜೇಗೌಡ ಸುಮಾರು 54 ವರ್ಷ, 6. ಬಿ ಎನ್ ಅಶೋಕ್ ಬಿನ್ ಬಿ ಕೆ ನಂಜೇಗೌಡ ಸುಮಾರು 52 ವರ್ಷ, 1 ರಿಂದ 6 ರವರೆಗಿನ ರೆಸ್ಪಾಂಡೆಂಟರು ಬೈರಹಳ್ಳಿ ಗ್ರಾಮ, ದೇವಾಲದಕೆರೆ ಪೋಸ್ಟ್, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ ವಾಸವಾಗಿರುತ್ತಾರೆ. 7. ಪರಮೇಶ್ ಬಿನ್ ಅಣ್ಣೇಗೌಡ(ಜಾಮೀನುದಾರರು) ಸುಮಾರು 70 ವರ್ಷಗಳು ನೆಲಗಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು ಹಾಸನ ಜಿಲ್ಲೆ. 8. ಹೆಚ್ ಪಿ ದೇವರಾಜು ಬಿನ್ ಬಿಳಿಯಪ್ಪ (ಜಾಮೀನುದಾರರು) ಸುಮಾರು 75 ವರ್ಷ, ಹಾನುಬಾಳು ಗ್ರಾಮ ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು , ಹಾಸನ ಜಿಲ್ಲೆ ವಾಸವಾಗಿರುತ್ತಾರೆ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣವನ್ನು ಅರ್ಜಿದಾರರುಆದ ಮ್ಯಾನೇಜರ್ ,ಹೆಚ್ ಡಿ ಸಿ ಸಿ ಬ್ಯಾಂಕ್, ಹಾನುಬಾಳು ಶಾಖೆ ಇವರು ನಿಮ್ಮ ವಿರುದ್ಧ ಸಾಲ ಮರುಪಾವತಿಗಾಗಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರ ಬ್ಯಾಂಕ್‌ನಲ್ಲಿ ಪಡೆದಿರುವ ಸಾಲದ ಅಸಲು ಮತ್ತು ಬಡ್ಡಿಯ ಮರುಪಾವತಿ ಮಾಡಿಕೊಡುವಂತೆ ಕೋರಿದ್ದು, ಈ ಅರ್ಜಿಯು ಸಕಲೇಶಪುರದ ಹಿರಿಯ ಸಿವಿಲ್ ಜಡ್ಜ್‌ರವರ ನ್ಯಾಯಾಲಯದಲ್ಲಿ ದಿನಾಂಕ 29/1/2024 ರಂದು ನಿಮ್ಮ ಹಾಜರಾತಿಗೆಂದು ನಿಗದಿಪಡಿಸಿದೆ, ಆದುದ್ದರಿಂದ ಈ ಪತ್ರಿಕಾ ಪ್ರಕಟಣೆಯನ್ನು ಕೈಗೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದ ನೀವು ಖುದ್ದು ಅಥವಾ ನಿಮ್ಮ ವಕೀಲರ ಮೂಲಕ ದಿನಾಂಕ 29/1/2024 ರಂದು ಸರಿಯಾಗಿ ಬೆಳಗ್ಗೆ 11.00 ಗಂಟೆಗೆ ಮಾನ್ಯ ಸಕಲೇಶಪುರದ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ತಪ್ಪಿದಲ್ಲಿ ಏಕಪಕ್ಷೀಯವಾಗಿ ಆದೇಶ ಮಾಡಲಾಗುವುದು.
ಈ ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 11/1/2024 ರಂದು ನೀಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
ಶಾರದ, ವಕೀಲರು,
ಮೊ 9945286993
ಎಸ್ ಎಮ್ ಟವರ್ಸ್, ಸಕಲೇಶಪುರ

ಸಹಿ/-
ಆಡಳಿತ ಶಿರಸ್ತೆದಾರರು
ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ, ಸಕಲೇಶಪುರ

ಕರ್ನಾಟಕ ಸರಕಾರ

ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ. ರಜತಾದ್ರಿ, ಮಣಿಪಾಲ

Email ID: ad@udupitourism.com ದೂರವಾಣಿ ಸಂಖ್ಯೆ: 0820-2574868

ಸೆಕ್ಷನ್ 1. ಟೆಂಡರ್ ಆಹ್ವಾನ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ

ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನ ಆಸರೆ ಬೀಚ್ / ಕದಿಕೆ ಬೀಚಿನಿಂದ ಸೈಂಟ್ ಮೇರೀಸ್ ಐಲ್ಯಾಂಡ್ ಗೆ ಬೋಟಿಂಗ್ ಹಾಗೂ ಬೀಚಿನಲ್ಲಿ ವಿವಿಧ ಜಲಸಾಹಸ ಕ್ರೀಡೆ ಚಟುವಟಿಕೆಗಳನ್ನು ನಡೆಸಲು ದ್ವಿ- ಲಕೋಟೆ 3+2 ವರ್ಷಗಳ ಅವಧಿಗೆ ಟೆಂಡರ್ ಕರೆಯಲಾಗಿದೆ.

(1) ಟೆಂಡರ್ ಉಲ್ಲೇಖ: **ಸಂಖ್ಯೆ:ಪ್ರಇ/ಸನಿಕ/ಉಜಿ/ಮ/32/2023-24 ದಿನಾಂಕ: 08-01-2024** (2) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಸಲ್ಲಿಸುವ ಪ್ರಾರಂಭ **ದಿನಾಂಕ: 20-01-2024,** (3) ಟೆಂಡರ್ ಡಾಕ್ಯುಮೆಂಟ್ ಡೌನ್ಲೋಡ್ ಮಾಡಲು ಕೊನೆಯ **ದಿನಾಂಕ: 03-02-2024** (4) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಯನ್ನು ಸಲ್ಲಿಸುವ ಕೊನೆಯ **ದಿನಾಂಕ: 03-02-2024 ಸಂಜೆ 6.00 ಗಂಟೆ** (5) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **05-02-2024 ಬೆಳಿಗ್ಗೆ 11.00 ಗಂಟೆ,** (6) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **06-02-2024 ಸಂಜೆ 4.00 ಗಂಟೆ,** (7) ಟೆಂಡರ್ ತೆರೆಯುವ ಸ್ಥಳ: ಸಹಾಯಕ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಉಡುಪಿ ರಜತಾದ್ರಿ, (8) EMD ಮೊತ್ತ: **ರೂ.1,00,000/-** (9)ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ: **https://kppp.karnataka.gov.in**
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರಜತಾದ್ರಿ, ಮಣಿಪಾಲ “ಎ” ಬ್ಲಾಕ್, ಎರಡನೇ ಮಹಡಿ, ಕೊಠಡಿ ಸಂಖ್ಯೆ: 303 ದೂರವಾಣಿ: 0820-2574868

ಸಹಿ/- (ಡಾ.ಕೆ.ವಿದ್ಯಾ ಕುಮಾರಿ. ಭಾ.ಆ.ಸೇ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಉಡುಪಿ ಜಿಲ್ಲೆ, ಮಣಿಪಾಲ

ವಾಸಾಇ/ಉಡುಪಿ/ಕೆಎಸ್‌ಎಂಸಿಎ/666/23-24 ದಿ: 20.01.2024

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಬೆಂಗಳೂರು.

ಸಂಖ್ಯೆ:ಕಾ.ಇಂ(ವಿ)/ಲೋ.ಇ/ವಿದ್ಯುತ್/2023-24/2200 ದಿನಾಂಕ: 19.01.2024

ಅಲ್ಪಾವಧಿ ಕೊಟೇಷನ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು(ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ **ಬೆಂಗಳೂರು ಸಿಟಿ ಸಿವಿಲ್ ಕೋರ್ಟ್ ಕಟ್ಟಡಕ್ಕೆ 20 ಜನ ಸಾಮರ್ಥ್ಯದ 8Stop ಕ್ಯಾಪ್ಸ್ಯೂಲ್ ಲಿಫ್ಟ್ ಅಳವಡಿಸುವ ಹಾಗೂ ಸಿ.ಸಿ.ಟಿ.ವಿ. ಸಾಫ್ಟ್‌ವೇರ್‌ನ್ನು ಅಪ್‌ಗ್ರೇಡೇಷನ್ ಮಾಡುವ ಕಾಮಗಾರಿಯ ಕೊಟೇಷನ್‌ಗಳನ್ನು** Original Equipment Manufacture (OEM)/Authorized Dealers ರವರಿಂದ ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳ ವಿವರಣೆಗಳು ಈ ಕೆಳಕಂಡಂತಿವೆ.
(1) **Design, Supply, Erection, Testing & Commissioning of 2 Nos of 8 Stops, 20 Passenger Capacity Capsule Lift at City Civil Courts Complex, K.G.Road, Bengaluru.** (2) **Providing Up-gradation to The Existing CCTV Surveillance System by Providing New NVRs & Hard Disks, Replacement of all Non-working Dome, Box & PTZ Cameras & Providing New Network IP Cameras at City Civil Courts Complex, Bengaluru.**
ಮೇಲಿನ ಕಾಮಗಾರಿಗಳ ತಾಂತ್ರಿಕ ವಿವರಣೆಗೆ ಸಂಬಂಧಿಸಿದಂತೆ, ಈ ಕಛೇರಿಯಲ್ಲಿ ದಿನಾಂಕ: **24.01.2024, 16.00 ಗಂಟೆಯೊಳಗೆ** ತಾಂತ್ರಿಕ ವಿವರಣೆಗಳ ದಾಖಲೆಗಳನ್ನು ಪಡೆದು, ತಮ್ಮ ಕೊಟೇಷನ್ ದರಗಳನ್ನು (ಎಲ್ಲಾ ತೆರಿಗೆ ಒಳಗೊಂಡಂತೆ) ಮೊಹರು ಮಾಡಿದ ಲಕೋಟೆಯಲ್ಲಿ **ದಿನಾಂಕ:25.01.2024, 16.00 ಗಂಟೆಯೊಳಗೆ** ಈ ಕಛೇರಿಗೆ ಸಲ್ಲಿಸಲು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು (ವಿ)

ವಾಸಾಸಂಇ/ಉನಿ-ಸಿ.ಪಿ/3141/ಕೆಎಸ್‌ಎಂಸಿಎ/2023-24

ಅಲ್ಪಸಂಖ್ಯಾತರ ನಿರ್ದೇಶನಾಲಯ

ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು-560052.

2023-24ನೇ ಸಾಲಿನ ರಾಜ್ಯದಲ್ಲಿರುವ ನೋಂದಾಯಿತ ಮದರಸಾಗಳಿಗೆ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು ನೀಡಲು ಮದರಸಾ ಸಂಸ್ಥೆಗಳಿಂದ ಅರ್ಜಿ ಆಹ್ವಾನ ಪ್ರಕಟಣೆ.

ಅನ್‌ಲೈನ್ ಅಪ್ಲಿಕೇಶನ್

2023-24ನೇ ಸಾಲಿನ ರಾಜ್ಯದಲ್ಲಿರುವ ನೋಂದಾಯಿತ ಮದರಸಾಗಳಿಗೆ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು ನೀಡಲು ಮದರಸಾ ಸಂಸ್ಥೆಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆಗಳು

1. ಮದರಸಾ ಸಂಸ್ಥೆಗಳು ರಾಜ್ಯದಲ್ಲಿ ವಕ್ಫ್ ನೋಂದಾಯಿತ/ಇತರೆ ಸಂಘ ಸಂಸ್ಥೆ ಕಾಯ್ದೆಯಡಿ ನೋಂದಾಯಿತ ಮದರಸಾ ಸಂಸ್ಥೆಯಾಗಿರಬೇಕು.
2. ಮದರಸಾದಲ್ಲಿ 40 ಅರ್ಹ ವಿದ್ಯಾರ್ಥಿಗಳಿರಬೇಕು.
3. ಮದರಸಾಗಳು ತರಗತಿ ಕೊಠಡಿಗಳೊಂದಿಗೆ ವಸತಿ ಸೌಲಭ್ಯವನ್ನು ಹೊಂದಿರಬೇಕು.

ಕೊನೆಯ ದಿನಾಂಕ

ಅನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು **31/01/2024** ರವರೆಗೆ ವಿಸ್ತರಿಸಲಾಗಿದೆ.

ಅರ್ಜಿದಾರರಿಗೆ ಸೂಚನೆಗಳು

ಅರ್ಜಿದಾರರು https://dom.karnataka.gov.in ಈ ಲಿಂಕ್ ಮೂಲಕ “2023-24ನೇ ಸಾಲಿನ ರಾಜ್ಯದಲ್ಲಿರುವ ನೋಂದಾಯಿತ ಮದರಸಾಗಳಿಗೆ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು ನೀಡಲು ಮದರಸಾ ಸಂಸ್ಥೆಗಳು” ಕ್ಲಿಕ್ ಮಾಡಿ ಅರ್ಜಿ ಸಲ್ಲಿಸುವುದು ಹಾಗೂ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಲ್ಲಿಸುವುದು.

ದಿನಾಂಕ: 20.01.2024

ಸಹಿ/-
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/3160/ಎಂಎಎ/2023-24

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, 1ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು - 560 002.
ದೂರವಾಣಿ: 080-22107704, 22484516,
ಇ-ಮೇಲ್: kannadapradhikara@gmail.com

ಸಂಖ್ಯೆ: ಕಪುಪ್ರಾ/10/ಕೇ.ಪು.ಟೆಂ/2023-24 ದಿನಾಂಕ:19.01.2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕನ್ನಡ ಪುಸ್ತಕ ಪ್ರಾಧಿಕಾರದಿಂದ ಅಂದಾಜು 45 ವಿವಿಧ ಕನ್ನಡ ಪುಸ್ತಕಗಳ ಮುದ್ರಣಕ್ಕೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: **ರೂ. 59,00,000/-ಗಳು. ದಿನಾಂಕ : 20.01.2024** ರಿಂದ **19.02.2024ರ** ಒಳಗೆ ಇ-ಟೆಂಡರ್ ಭರ್ತಿ ಮಾಡಬಹುದು. ಟೆಂಡರ್ ದಸ್ತಾವೇಜು ಹಾಗೂ ಇತರೆ ಮಾಹಿತಿಗೆ http://www.kppp.karnataka. gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು - 560 002. ದೂರವಾಣಿ ಸಂಖ್ಯೆ : 080-22484516 / 22107704 ಹಾಗೂ https://www.kppp.karnataka.gov.in ಇಲ್ಲಿ ಸಂಪರ್ಕಿಸುವುದು.

ಸಹಿ/- ಆಡಳಿತಾಧಿಕಾರಿ
ಕನ್ನಡ ಪುಸ್ತಕ ಪ್ರಾಧಿಕಾರ

ವಾಸಾಸಂಇ/ವಾಪ್ರ/ಜಿಎ/3145/2023-24

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ|| ಬಿ. ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು-560001. ದೂರವಾಣಿ: 080-22867172/22866302
ಫ್ಯಾಕ್ಸ್: 080-22863576 /22861665
ಇ-ಮೇಲ್: dmablr@gmail.com Website: www.municipaladmn.gov.in

ಸಂಖ್ಯೆ : ಡಿಎಂಎ/ಯುಪಿಎ/ಇಂಕ್ಯಾ/ಸಿಆರ್/01/2023-24 ದಿನಾಂಕ : 20.01.2024

Expression of Interest/Quotation

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಅಸ್ತಿತ್ವದಲ್ಲಿರುವ ಅಡುಗೆ ಸಲಕರಣೆಗಳನ್ನು ಅಧ್ಯಯನ ನಡೆಸಿ **Schedule of requirement of Equipment** ನ್ನು ಸಿದ್ಧಪಡಿಸಲು ಮತ್ತು ಹೊಸ ಮೆನುವಿನಂತೆ ಅವಶ್ಯವಿರುವ ಅಡುಗೆ ಸಲಕರಣಗಳ **Specification** ಗಳನ್ನು ಸಲ್ಲಿಸಲು **EOI/Quotation** ಕರೆಯಲಾಗಿದೆ. ಆಸಕ್ತಿಯುಳ್ಳ ಕನ್ಸಲ್ಟೆನ್ಸಿಗಳು ಈ ಪ್ರಕಟಣೆ ನೀಡಿದ 07 ದಿನದೊಳಗೆ ಅಂದರೆ ದಿನಾಂಕ : 28.01.2024ರ ಸಂಜೆ 4.00 ಗಂಟೆಯ ಒಳಗಾಗಿ ತಮ್ಮ ಸೇವಾ ಶುಲ್ಕವನ್ನು ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ ಈ ಕಛೇರಿಗೆ ಸಲ್ಲಿಸಲು ಹಾಗೂ ಅವಧಿ ಮೀರಿ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಯಪಡಿಸಿದೆ.
ಹೆಚ್ಚಿನ ವಿವರಗಳಿಗೆ ಪೌರಾಡಳಿತ ನಿರ್ದೇಶನಾಲಯದ ನಗರ ಬಡತನಾ ನಿರ್ಮೂಲನಾ ಕೋಶ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ : 080-22861665.

ಸಹಿ/-
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು

DIPR/CP/3166/Zen/2023-24

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029. ಕರ್ನಾಟಕ
ಫೋನ್: 080-29753354/29653354 ಇ-ಮೇಲ್: karbuildworkerswelfare@gmail.com

ಸಂಖ್ಯೆ: ಸಿಡಬ್ಲ್ಯೂಬಿ/ಆಡಳಿತ/ವೈದ್ಯಾಧಿಕಾರಿ/ಸಿಆರ್-111/2023-24 ದಿನಾಂಕ:18.01.2024

ಅಧಿಸೂಚನೆ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸಂಚಾರಿ ಆರೋಗ್ಯ ಕ್ಲಿನಿಕ್ ಮತ್ತು ಪ್ರಿವೆಂಟಿವ್ ಹೆಲ್ತ್‌ಕೇರ್ ಯೋಜನೆಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನಿವೃತ್ತ ವೈದ್ಯಾಧಿಕಾರಿ ಹುದ್ದೆಗೆ ಈ ಕೆಳಕಂಡ ಅರ್ಹತೆಯಂತೆ ನೇಮಿಸಲು ಉದ್ದೇಶಿಸಿದೆ.
ಹುದ್ದೆ : **ವೈದ್ಯಕೀಯ ಸಲಹೆಗಾರರು**
ಹುದ್ದೆಗಳ ಸಂಖ್ಯೆ : **02**
ನಿಗದಿಪಡಿಸಿದ ಅರ್ಹತೆ : **ಸರ್ಕಾರಿ / ಇಎಸ್‌ಐ ಇಲಾಖೆಯ ನಿವೃತ್ತ ವೈದ್ಯಾಧಿಕಾರಿ**
ಮಾಹೆಯಾನ ಕ್ರೋಢೀಕೃತ ಸಂಭಾವನೆ : **ರೂ. 60,000/- (ಪ್ರಸ್ತುತ ಪಡೆಯುತ್ತಿರುವ ಪಿಂಚಣಿ ಹಾಗೂ ನಿಗಮದಿಂದ ಪಾವತಿಸಲಾಗುವ ಸಂಭಾವನೆ ಸೇರಿ ನಿವೃತ್ತ ಸಮಯದಲ್ಲಿ ಪಡೆಯುತ್ತಿದ್ದ ವೇತನಕ್ಕೆ ಮೀರದಂತೆ) Subject to deduction of Income tax as per rules.**
ವಯೋಮಿತಿ: **60 ರಿಂದ 70 ವರ್ಷಗಳು.** ಪ್ರತ್ಯೇಕ ವಾಹನ ಸೌಲಭ್ಯವಿರುತ್ತದೆ ಹಾಗೂ ಮಂಡಳಿಗೆ ಒಂದು ವರ್ಷದ ಸೇವೆ ತೃಪ್ತಿಕರವೆಂದು ಕಂಡು ಬಂದಲ್ಲಿ ಮತ್ತೊಂದು ವರ್ಷಕ್ಕೆ ನವೀಕರಿಸಲಾಗುವುದು.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ / ಸಮಯ: **03.02.2024, ಸಂಜೆ 5.30 ಗಂಟೆಯವರೆಗೆ.** ವಿಳಾಸ : ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಡೈರಿ ವೃತ್ತ, ಬೆಂಗಳೂರು - 560 029.

ಸಹಿ/-
ಜಂಟಿ ಕಾರ್ಯದರ್ಶಿಗಳು,
ಕ.ಕ.ಇ.ನಿ.ಕಾ.ಕ.ಮಂಡಳಿ

ವಾಸಾಸಂಇ/ವಾಪ್ರ/ಜಿಎ/3117/2023-24

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮಪಾ:ಕಾಅ1.ಕೊ:02:2023-24 ದಿನಾಂಕ : 20-01-2024

ದರವಾರು ಆಹ್ವಾನ ಪ್ರಕಟಣೆ

(ಕೆಪಿಪಿಪಿ ಪೋರ್ಟಲ್ ಮುಖಾಂತರ)

ದಾವಣಗೆರೆ ಹಾಗೂ ಚಿತ್ರದುರ್ಗ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೆಟೀರಿಯಲ್ ರಿಕವರಿ ಫೆಸಿಲಿಟಿ ಹಾಗೂ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ನಿರ್ವಹಿಸಲು ಅಗತ್ಯ ಇರುವ ವಾಹನ ಹಾಗೂ ಯಂತ್ರೋಪರಣಗಳನ್ನು ಖರೀದಿಸಲು ಉದ್ದೇಶಿಸಿದ್ದು, ಎಸ್.ಆರ್‌ಗಳಲ್ಲಿ ದರಗಳು ಲಭ್ಯವಿಲ್ಲದಿರುವುದರಿಂದ ದರ ಅನುಮೋದನೆಗಾಗಿ, ಮಾರುಕಟ್ಟೆಯ ತುಲಾನತ್ಮಕ ದರಗಳನ್ನು ಪಡೆಯಲು (ಇಂಡೆಂಟ್ ಸಂಖ್ಯೆ : DMA/2023-24/PREQUAL_TENDER_NUMBER_15, DMA/2023-24/PREQUAL_TENDER_NUMBER_16, DMA/2023-24 PREQUAL_TENDER_NUMBER_17, DMA/2023-24/PREQUAL_ TENDER_NUMBER_18, DMA/2023-24/PREQUAL_TENDER_ NUMBER_19, DMA/2023-24/PREQUAL_TENDER_NUMBER_20) ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕೊಟೇಷನ್ ಆಹ್ವಾನ ಮಾಡಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ಸರಬರಾಜುದಾರರು ಕೆ.ಪಿ.ಪಿ. ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಕೊಟೇಷನ್ ಮೂಲಕ ದರಗಳನ್ನು ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆ.ಪಿ.ಪಿ. ಸಹಾಯಕ ದೂರವಾಣಿ ಸಂಖ್ಯೆ: +91-8046010000+91-8068948777 ರಿಂದ ಮಾಹಿತಿ ಪಡೆಯಬಹುದಾಗಿದೆ ಹಾಗೂ ಕಛೇರಿ ವೇಳೆಯಲ್ಲಿ ಕಛೇರಿಗೆ ಬೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ. ಕೊಟೇಷನ್ ಆಹ್ವಾನದ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ :29-01-2024 ಸಮಯ : 16.30 ಕೊಟೇಷನ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ :29-01-2024 ಸಮಯ : 16.30 ಕೊಟೇಷನ್ ತೆರೆಯುವ ದಿನಾಂಕ & ವೇಳೆ :30-01-2024 ಸಮಯ : 16.30

ವಾಸಾಇ/ದಾವಣಗೆರೆ/513/ಕೆಎಸ್‌ಎಂಸಿಎ/2023-24

ಸಹಿ/- ಕಾರ್ಯಪಾಲಕ ಅಭಿಯಂತರರು (ಸಿವಿಲ್)
ಮಹಾನಗರ ಪಾಲಿಕೆ, ದಾವಣಗೆರೆ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ-1/KKRDB/Ten.Nofi/2023-24/2133
ದಿನಾಂಕ:17.01.2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ -2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಸಂಡೂರು ತಾಲ್ಲೂಕಿನ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:18-01-2024 ರಿಂದ 30-01-2024** ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ: 31-01-2024** ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ **ದಿನಾಂಕ: 24-01-2024** ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ:24-01-2024** ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ “ಇ-ಪ್ರೊಕ್ಯೂರಮೆಂಟ್” ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/737/ಕೆಎಸ್‌ಎಂಸಿಎ/2023-24

ಕಾರಾಗೃಹ ಮತ್ತು ಸುಧಾರಣಾ ಸೇವೆ

ಮಹಾನಿರ್ದೇಶಕರ ಕಛೇರಿ,
ನಂ. 4, ಶೇಷಾದ್ರಿ ರಸ್ತೆ, ಬೆಂಗಳೂರು - 560 009.
ದೂರವಾಣಿ : 080 - 2226 2263, ಇಮೇಲ್ : phq.prisons-kar@gov.in

ಸಂಖ್ಯೆ : ಎ.ಡಿ.ಎಂ.1/ಕಾ.ಆ.ಯೋ./ಸಿ.ಆರ್.-35/2023-24 ದಿನಾಂಕ : 19-01-2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ವಿವಿಧ ಕೇಂದ್ರ ಮತ್ತು ಜಿಲ್ಲಾ ಕಾರಾಗೃಹಗಳಲ್ಲಿ Towers of the Harmonious Call Blocking System (T-HCBS) ಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್‌ಗಳನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ ದಿನಾಂಕ	ಅಂದಾಜು ಮೌಲ್ಯ
01	PCSD/2023-24/SE0008, Date : 19-01-2024	Rs. 624 Lakhs

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು **https://kppp.karnataka.gov.in** ರಲ್ಲಿ ಪಡೆಯಬಹುದು. ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಮಹಾ ನಿರ್ದೇಶಕರು,
ಕಾರಾಗೃಹ ಮತ್ತು ಸುಧಾರಣಾ ಸೇವೆ,
ಕರ್ನಾಟಕ ರಾಜ್ಯ.

ವಾಸಾಇ/ಬೆಂ.ನ./3138/ಮಣಿಪಾಲ್/2023-24

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ

KEONICS ISO 9001 : 2008

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
2ನೇ ಮಹಡಿ, ಟಿಟಿಎಂಸಿ, ‘ಎ’ ಬ್ಲಾಕ್, ಬಿಎಂಟಿಸಿ ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್. ರಸ್ತೆ,
ಬೆಂಗಳೂರು-560027. ದೂ: 080-22225645, ಫ್ಯಾಕ್ಸ್: 080-22232652,

ಸಂಖ್ಯೆ: KSEDC/HR/107/2023-HR ದಿನಾಂಕ: 20.01.2024

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಬೆಂಗಳೂರು ಇಲ್ಲಿ ಅವಶ್ಯವಿರುವ ಈ ಕೆಳಕಂಡ ಭದ್ರತಾ ಸಿಬ್ಬಂದಿಯ ಸೇವೆಯನ್ನು ಒಂದು ವರ್ಷದ ಅವಧಿಗೆ ಅರ್ಹ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಸೇವಾ ಶುಲ್ಕ ಆಧಾರದ ಮೇಲೆ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್ದುದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು, ಮಾನವ ಸಂಪನ್ಮೂಲ ವಿಭಾಗ, ಕಿಯೋನಿಕ್ಸ್ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080-22225645 / 9731560740).

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಮೊತ್ತ (ರೂ.ಕೋಟಿಗಳಲ್ಲಿ)
1	KEONICS/2023-24/SE0074/CALL-3	ಭದ್ರತಾ ಮಾನವ ಸಂಪನ್ಮೂಲ ಸೇವೆಗಳು	0.68

DIPR/CP/BCPL/3159/2023-24

ಸಹಿ/- ನಿರ್ದೇಶಕರು (ನಿರ್ವಹಣೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560002, ದೂರವಾಣಿ - 080-22213530/22241325
ಇ-ಮೇಲ್: kanbhavblr@gmail.com ವೆಬ್‌ಸೈಟ್: www.kannadasiri.karnataka.gov.in

ಡಿಕೆಸಿ-27011/110/2022(ಭಾಗ-4) ದಿನಾಂಕ: 20.01.2024

ಟೆಂಡರ್ ಪ್ರಕಟಣೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮೈಸೂರು ವಿಭಾಗ, ಕಲಬುರ್ಗಿ ವಿಭಾಗ, ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿ ಹಾಗೂ ಬೆಂಗಳೂರಿನಲ್ಲಿ ಆಯೋಜಿಸುವ ದೇಸಿ ಹಬ್ಬ (ಬುಡಕಟ್ಟು, ಬಂಜಾರ ಮತ್ತು ಬಹುಸಂಸ್ಕೃತಿ ಉತ್ಸವ) ಕಾರ್ಯಕ್ರಮದ **ವೇದಿಕೆ, ಎಲ್.ಇ.ಡಿ, ಸೌಂಡ್-ಸಿಸ್ಟಮ್, ಲೈಟಿಂಗ್, ಬ್ಯಾನರ್, ಶಾಮಿಯಾನ, ಹೂವಿನ ಅಲಂಕಾರ ಮತ್ತು ಮಳಿಗೆಗಳು ಇತ್ಯಾದಿ ವ್ಯವಸ್ಥೆಗಳಿಗೆ** ಸೇವೆಯನ್ನು ಒದಗಿಸಲು ನೋಂದಾಯಿತ ಅರ್ಹ ಏಜೆನ್ಸಿ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ನಿಗದಿತ ನಮೂನೆಯಲ್ಲಿ 2 ಬಿಡ್ ದಸ್ತಾವೇಜು ವಿಧಾನದಲ್ಲಿ 4 ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆ ಸಂಖ್ಯೆ ಕೆಳಗಿನಂತಿರುತ್ತವೆ.

1. ಮೈಸೂರು ವಿಭಾಗ - ಟೆಂಡರ್ ಪ್ರಕಟಣೆ ಸಂಖ್ಯೆ: DKC/2023-24/SE0025
2. ಕಲಬುರಗಿ ವಿಭಾಗ - ಟೆಂಡರ್ ಪ್ರಕಟಣೆ ಸಂಖ್ಯೆ: DKC/2023-24/SE0026
3. ಬೆಳಗಾವಿ ವಿಭಾಗ - ಟೆಂಡರ್ ಪ್ರಕಟಣೆ ಸಂಖ್ಯೆ: DKC/2023-24/SE0027
4. ಬೆಂಗಳೂರು - ಟೆಂಡರ್ ಪ್ರಕಟಣೆ ಸಂಖ್ಯೆ: DKC/2023-24/SE0022

ಟೆಂಡರ್ ಫಾರಂ ಮತ್ತು ಇತರೆ ವಿವರಗಳು, ನಿಬಂಧನೆಗಳು ಮತ್ತು ಷರತ್ತುಗಳನ್ನು ವೆಬ್‌ಸೈಟ್ https://www.kppp.karnataka.gov.in ಅಂತರ್ಜಾಲದ ಮೂಲಕ ದಿನಾಂಕ: 21.01.2024ರಿಂದ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 30.01.2024ರ ಸಂಜೆ 5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಇಲಾಖೆಯ ದೂರವಾಣಿ ಸಂಖ್ಯೆ 080-22221271 & 080-22213530.

ಸಹಿ/-
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/3165/ಆಕಾರ್/2023-24

ಕರ್ನಾಟಕ ಸರ್ಕಾರ
ಕೊಡಗು ಜಿಲ್ಲಾ ಪಂಚಾಯತ್

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಮಡಿಕೇರಿ, ಕೊಡಗು-571201
ಇಮೇಲ್: dhokodagu@gmail.com, ಫೋನ್ ನಂ: 08272 225443

ಸಂಖ್ಯೆ/ಇ.ಎಸ್.ಟಿ(1)/120/2023-24, ದಿನಾಂಕ: 19/01/2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ವೇದಿಕೆ ಮೂಲಕ)

ವಿಷಯ: ಕೊಡಗು ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ಅಧಿನದಲ್ಲಿರುವ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ವಾಹನ ಚಾಲಕರು / ಗ್ರೂಪ್ ಡಿ ನೌಕರರು / ಭದ್ರತಾ ಸಿಬ್ಬಂದಿ / ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು / ಪಾರ್ಮಾಸಿಸ್ಟ್ ಹಾಗೂ ಬೆರಳಚ್ಚುಗಾರರನ್ನು ಹೊರ ಸಂಪನ್ಮೂಲ ಸಂಸ್ಥೆಗಳಿಂದ ನೇಮಿಸಲು ಟೆಂಡರ್ ಕರೆಯುವ ಬಗ್ಗೆ

*****

ಕೊಡಗು ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯ ಅಧೀನದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವಾಹನ ಚಾಲಕರು / ಗ್ರೂಪ್ ಡಿ ನೌಕರರು / ಭದ್ರತಾ ಸಿಬ್ಬಂದಿ / ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು / ಫಾರ್ಮಾಸಿಸ್ಟ್ ಹೊರ ಸಂಪನ್ಮೂಲ ಸಂಸ್ಥೆಯಿಂದ ಪಡೆಯಲು 2024-25ನೇ ಸಾಲಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ಮತ್ತು ಸರ್ಕಾರದಿಂದ ಹಾಗೂ ಕಾರ್ಮಿಕ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳ ಅನ್ವಯ ಟೆಂಡರುಗಳನ್ನು ನೋಂದಾಯಿತ ಹೊರ ಸಂಪನ್ಮೂಲ ಸಂಸ್ಥೆಗಳಿಂದ ದ್ವಿ ಲಕೋಟೆಯ ಪದ್ಧತಿಯಲ್ಲಿ KPP PORTAL ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರಿನ ಸಂಪೂರ್ಣ ವಿವರವನ್ನು www.https://KPPPORTAL.gov.inನಲ್ಲಿ ದಿನಾಂಕ: 19/01/2024 ನಂತರ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 03/02/2024 ಅಪರಾಹ್ನ 4.30 ಗಂಟೆ ಆಗಿರುತ್ತದೆ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 05/02/2024 ಸಂಜೆ 4.30 ಹಾಗೂ ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 07/02/2024 ಸಂಜೆ 4.30 ಗಂಟೆ ಆಗಿರುತ್ತದೆ.
ಹೆಚ್ಚಿನ ವಿವರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾದಿಕಾರಿ, ಮಡಿಕೇರಿ, ಕೊಡಗು ಜಿಲ್ಲೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ.8. “ಸಂಪರ್ಕ ಸೌಧ”, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು-560010. ಟೆಲಿಫ್ಯಾಕ್ಸ್: 080-22024000 Website: www.krdcl.in
ಇ-ಮೇಲ್: e-mail: mdkrdcl@gmail.com & cekrdcl@gmail.com

ಸಂ:ಕೆಆರ್‌ಡಿಸಿಎಲ್/ಐಎಫ್‌ಬಿ/2023-24/21 ದಿನಾಂಕ: 19.01.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್) ಪ್ರತಿಷ್ಠಿತ ಅನುಭವ ಹೊಂದಿರುವ ಕಂಪನಿ ಏಜೆನ್ಸಿಗಳಿಂದ **ಡೀಸೆಲ್ / ಪೆಟ್ರೋಲ್ Swift Dzire / Toyota ETIOS / Toyota Innova ಅಥವಾ ತತ್ಸಮಾನ ಸಾಮರ್ಥ್ಯದ ವಾಣಿಜ್ಯ ಪ್ರಯಾಣಿಕ ವಾಹನ (ಕಾರುಗಳು) ಗಳನ್ನು** ಕೆಆರ್‌ಡಿಸಿಎಲ್ ಬೇಡಿಕೆಯ ಅನುಸಾರ ಎರಡು ವರ್ಷದ ಅವಧಿಗೆ ಬಾಡಿಗೆ ಆಧಾರದ ಮೇಲೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅಂದಾಜು ವೆಚ್ಚ: **ರೂ.430.00 ಲಕ್ಷಗಳು. ಇಎಂಡಿ: ರೂ.6,45,000.00.** ಸೇವೆಯ ಕಾಲಾವಧಿ: **ಎರಡು ವರ್ಷಗಳು.** ಆಸಕ್ತ ಬಿಡ್ದುದಾರರು ಟೆಂಡರ್ ಸಲ್ಲಿಸುವ ಮೊದಲು ಸ್ಪಷ್ಟೀಕರಣಗಳನ್ನು ಪಡೆಯಲು ಕಛೇರಿ ಸಮಯದಲ್ಲಿ ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಡಿಸಿಎಲ್, ಬೆಂಗಳೂರು ಅವರನ್ನು ಸಂಪರ್ಕಿಸಬಹುದು. ಆಸಕ್ತ ಅರ್ಜಿದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **https://kppp.karnataka.gov.in** ನಿಂದ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು ಮತ್ತು ಬಿಡ್‌ಗಳು ಹಾಗೂ ಇಎಂಡಿ (ವಿದ್ಯುನ್ಮಾನವಾಗಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ವಿಚಾರಣೆಗಾಗಿ ಕೊನೆಯ **ದಿನಾಂಕ ಮತ್ತು ಸಮಯ: 24.01.2024ರ 17.30 ಗಂಟೆಯವರೆಗೆ.** ಅರ್ಜಿದಾರರು ತಮ್ಮ ವಿಚಾರಣೆಗಳನ್ನು ಇ-ಮೇಲ್: **cekrdcl@gmail.com, mfakrdcl@gmail.com** ಮೂಲಕ ಸಲ್ಲಿಸಬಹುದು. **2)** ಬಿಡ್ ಪೂರ್ವ ಸಭೆಯನ್ನು **ದಿನಾಂಕ: 25.01.2024ರ ಬೆಳಗ್ಗೆ 11:30 ಗಂಟೆಗೆ** ಕೆಆರ್‌ಡಿಸಿಎಲ್ ಬೋರ್ಡ್ ರೂಂ. ಬೆಂಗಳೂರಿನಲ್ಲಿ ಈ ಮೇಲ್ಕಂಡ ವಿಳಾಸದಲ್ಲಿ ನಡೆಸಲಾಗುವುದು. **3)** ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 31.01.2024** ರಂದು **17:30 ಗಂಟೆಯವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 02.02.2024** ರಂದು **ಬೆಳಗ್ಗೆ 11:30 ಗಂಟೆಗೆ** ತೆರೆಯಲಾಗುವುದು.

ಗಮನಿಸಿ: ಇನ್ನು ಮುಂದೆ ಈ ಪ್ರಕಟಣೆ ಕುರಿತಾದ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅವುಗಳನ್ನು ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ ನಲ್ಲಿ ಮಾತ್ರ ಅಪ್ ಡೇಟ್ ಮಾಡಲಾಗುವುದು.

ಸಹಿ/- ಮುಖ್ಯ ಅಭಿಯಂತರರು
ಕರಅನಿನಿ, ಬೆಂಗಳೂರು

DIPR/CP/RO3156/AAPL/2023-24

ವಿಜಯಪುರ ಲೋಕಸಭಾ ಕ್ಷೇತ್ರ: ಹಾಲಿ ಸಂಸದರ ಜೊತೆ ವೈದ್ಯ, ನಿವೃತ್ತ ಪೊಲೀಸ್ ಅಧಿಕಾರಿ ಆಕಾಂಕ್ಷಿ

ಬಿಜೆಪಿ ಟಿಕೆಟ್‌ಗೆ ಮೂವರ ಕಸರತ್ತು

• ಬಸವರಾಜ್ ಸಂಪಳ್ಳಿ

ರಮೇಶ ಜಿಗಜಿಣಗಿ

ಮಹೇಂದ್ರ ನಾಯಿಕ

ಡಾ.ಬಾಬು ರಾಜೇಂದ್ರ

ವಿಜಯಪುರ: ಪರಿಶಿಷ್ಟ ಜಾತಿಗೆ ಮೀಸಲಾದ ವಿಜಯಪುರ ಲೋಕಸಭಾ ಕ್ಷೇತ್ರದಿಂದ ನಾಲ್ಕನೇ ಬಾರಿಗೆ ಬಿಜೆಪಿಯಿಂದ ಸ್ಪರ್ಧಿಸಲು ಹಾಲಿ ಸಂಸದ ರಮೇಶ ಜಿಗಜಿಣಗಿ ಸಿದ್ಧತೆ ನಡೆಸಿದ್ದಾರೆ. ಆದರೆ, ಜಿಲ್ಲೆಯಲ್ಲಿ ಪ್ರಬಲವಾದ ಬಂಜಾರ ಸಮುದಾಯದ ಯುವ ಮುಖಂಡರಾದ ಡಾ.ರಾಜೇಂದ್ರ ನಾಯಿಕ ಮತ್ತು ಮಹೇಂದ್ರ ನಾಯಿಕ ಬಿಜೆಪಿ ಟಿಕೆಟ್‌ಗಾಗಿ ತೀವ್ರ ಕಸರತ್ತು ನಡೆಸಿದ್ದಾರೆ.

ವಿಜಯಪುರ ಕ್ಷೇತ್ರವು ಮೀಸಲು ಲೋಕಸಭಾ ಕ್ಷೇತ್ರವಾದಾಗಿನಿಂದ ರಮೇಶ ಜಿಗಜಿಣಗಿ ಸ್ಪರ್ಧಿಸಿ, ಸತತ ಮೂರು ಬಾರಿ ಗೆಲುವು ದಾಖಲಿಸಿದ್ದಾರೆ. ಈ ಹಿಂದೆ ಚಿಕ್ಕೋಡಿ ಮೀಸಲು ಕ್ಷೇತ್ರದಿಂದಲೂ ಮೂರು ಬಾರಿ ಸಂಸದರಾದ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಈ ಹಿಂದಿನ ಸಂಪುಟದಲ್ಲಿ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಈಗಾಗಲೇ ಅವರಿಗೆ 70 ವರ್ಷ ವಯಸ್ಸು ಆಗಿದೆ. ಅವರನ್ನು ಬದಲಿಸುವ ಮಾತು ಬಿಜೆಪಿ ವಲಯದಲ್ಲಿ ಕೇಳಿ ಬರುತ್ತಿದೆ.

‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಹೊರತುಪಡಿಸಿ ಜಿಲ್ಲೆಯಲ್ಲಿ ಬಿಜೆಪಿಯ ಇನ್ನುಳಿದ ಮಾಜಿ ಸಚಿವರು, ಶಾಸಕರು, ಮುಖಂಡರು ಸೇರಿ ಎಲ್ಲ ಪಕ್ಷದವರ ಜೊತೆಗೂ ಜಿಗಜಿಣಗಿ ಉತ್ತಮ ರಾಜಕೀಯ ಸ್ನೇಹ ಹೊಂದಿದ್ದಾರೆ. ಒಂದು ವೇಳೆ ಬಿಜೆಪಿ ಟಿಕೆಟ್ ಕೈತಪ್ಪಿದರೆ ಅವರು ಕಾಂಗ್ರೆಸ್‌ಗೆ ಸೇರಿ, ಸ್ಪರ್ಧಿಸಲು ತೆರೆಮರೆಯಲ್ಲಿ ವೇದಿಕೆ ಸಜ್ಜಾಗಿದೆ’ ಎಂಬ ಮಾತು ಕ್ಷೇತ್ರದಲ್ಲಿ ಬಲವಾಗಿ ಕೇಳಿಬರುತ್ತಿದೆ.

‘ಮೂಲತಃ ಜನತಾ ಪರಿವಾರದವರಾದ ಜಿಗಜಿಣಗಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಸೇರಿ ಕಾಂಗ್ರೆಸ್‌ನ ಪ್ರಮುಖರೊಂದಿಗೆ ಉತ್ತಮ ಸ್ನೇಹ, ಸಂಪರ್ಕ ಹೊಂದಿರುವುದರಿಂದ ಕಾಂಗ್ರೆಸ್ ಟಿಕೆಟ್ ಸುಲಭ’ ಎಂಬ ರಾಜಕೀಯ ವಿಶ್ಲೇಷಣೆಯು ವ್ಯಕ್ತವಾಗಿದೆ.

ವೈದ್ಯ, ಮಾಜಿ ಪೊಲೀಸ್ ಅಧಿಕಾರಿ ಕಸರತ್ತು: ಬಿಜೆಪಿಯ ಪ್ರಬಲ ಟಿಕೆಟ್ ಆಕಾಂಕ್ಷಿಯಾದ ಡಾ.ಬಾಬು ರಾಜೇಂದ್ರ ನಾಯಿಕ ಅವರು ಸದ್ಯ ಬಿಜೆಪಿ ವೈದ್ಯಕೀಯ ಪ್ರಕೋಷ್ಠದ ಜಿಲ್ಲಾ ಸಂಚಾಲಕರು. ಬಾಗಲಕೋಟೆ ಜಿಲ್ಲೆಯಲ್ಲಿ ರಾಜಕಾರಣ, ಸಮಾಜಸೇವೆ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಅವರು ನಾಲ್ಕು ವರ್ಷಗಳಿಂದ ವಿಜಯಪುರ ಜಿಲ್ಲೆಯಲ್ಲಿ ನೆಲೆ ಗಟ್ಟಿ ಮಾಡಿಕೊಳ್ಳುತ್ತಿದ್ದಾರೆ.

ವಿಜಯಪುರದಲ್ಲಿ ಮಧುಮೇಹ ಮತ್ತು ಹೃದ್ರೋಗ ಆಸ್ಪತ್ರೆಯನ್ನು ತೆರೆದು ಉಚಿತ ಆರೋಗ್ಯ ತಪಾಸಣೆ, ಚಿಕಿತ್ಸೆ ಮೂಲಕ ಮತದಾರರನ್ನು ತಲುಪುವ ಕೆಲಸ ಮಾಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಆಹಾರ ಕಿಟ್, ಉಚಿತ ವೈದ್ಯಕೀಯ ಚಿಕಿತ್ಸೆ ನೀಡಿದ್ದಾರೆ. ಪಕ್ಷದ ಸಂಘಟನಾ ಚಟುವಟಿಕೆಗಳ ಜೊತೆಗೆ ಜಿಲ್ಲೆಯಲ್ಲಿ ನಡೆಯುವ ಜಾತ್ರೆ, ಆಟೋಟ, ಧಾರ್ಮಿಕ ಕಾರ್ಯಕ್ರಮಗಳಿಗೆ ಧನಸಹಾಯ, ಪ್ರಾಯೋಜಕತ್ವ ಮಾಡುತ್ತಾ ಮತದಾರರನ್ನು ಸೆಳೆಯುವ ಕಾರ್ಯ ನಡೆಸಿದ್ದಾರೆ. ಅವರಿಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಬೆಂಬಲವಿದೆ.

ಬಿಜೆಪಿಯ ಇನ್ನೊಬ್ಬ ಟಿಕೆಟ್ ಆಕಾಂಕ್ಷಿ ಮಾಜಿ ಪೊಲೀಸ್ ಅಧಿಕಾರಿ (ಸಿಪಿಐ) ಮಹೇಂದ್ರ ನಾಯಿಕ ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆ ವೇಳೆ ನಾಗಠಾಣ ಮೀಸಲು ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದರು.

ನಾಗಠಾಣ ಕ್ಷೇತ್ರದ ಟಿಕೆಟ್ ಸಿಗುವುದು ಖಚಿತವಾದ ಬಳಿಕ ಪೊಲೀಸ್ ಹುದ್ದೆಗೆ ರಾಜೀನಾಮೆ ನೀಡಿ ಬಿಜೆಪಿ ಸೇರಿದರು. ಆದರೆ, ಮಹೇಂದ್ರ ಅವರಿಗೆ ಸಂಸದ ರಮೇಶ ಜಿಗಜಿಣಗಿ ಟಿಕೆಟ್ ತಪ್ಪಿಸಿ, ತಮ್ಮ ಹತ್ತಿರದ ಸಂಬಂಧಿ ಸಂಜೀವ ಐಹೊಳೆಗೆ ಟಿಕೆಟ್ ಕೊಡಿಸಿದರು ಎಂಬ ಆರೋಪ ಇದೆ. ಈ ಹಿನ್ನೆಲೆಯಲ್ಲಿ ತೀವ್ರ ಅಸಮಾಧಾನಗೊಂಡಿರುವ ಅವರು ಲೋಕಸಭಾ ಚುನಾವಣೆಯ ಟಿಕೆಟ್ ಕೇಳುವ ಮೂಲಕ ಜಿಗಜಿಣಗಿ ಅವರಿಗೆ ಅಡ್ಡಿಯಾಗಿದ್ದಾರೆ. ಬಿಜೆಪಿ ವರಿಷ್ಠರನ್ನು ಭೇಟಿಯಾಗಿ ಲಾಬಿ ನಡೆಸಿದ್ದಾರೆ. ಒಂದು ವೇಳೆ ತನಗೆ ಟಿಕೆಟ್ ಸಿಗದಿದ್ದರೂ ಪರವಾಗಿಲ್ಲ, ಜಿಗಜಿಣಗಿ ಅವರಿಗೆ ಟಿಕೆಟ್ ತಪ್ಪಿಸಬೇಕು ಎಂಬ ಗುರಿ ಹೊಂದಿರುವುದರ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಕಲಬುರಗಿ ಕ್ಷೇತ್ರದ ಟಿಕೆಟ್ ಆಧರಿಸಿ ವಿಜಯಪುರದ್ದು ನಿರ್ಣಯ

ರಾಜ್ಯದ ಐದು ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿಯ ಎಡ, ಬಲ ಹಾಗೂ ಪರಿಶಿಷ್ಟ ಪಂಗಡದವರಿಗೆ ಟಿಕೆಟ್ ಹಂಚಿಕೆ ಮಾಡುವ ಲೆಕ್ಕಾಚಾರದ ಮೇಲೆ ವಿಜಯಪುರ ಕ್ಷೇತ್ರದ ಟಿಕೆಟ್ ಯಾರಿಗೆ ಎಂಬುದು ನಿರ್ಧಾರವಾಗಲಿದೆ.

ನೆರೆಯ ಕಲಬುರಗಿ ಕ್ಷೇತ್ರದ ಟಿಕೆಟ್ ಈ ಸಲವೂ ಹಾಲಿ ಸಂಸದ ಡಾ.ಉಮೇಶ ಜಾದವ್ ಅವರಿಗೆ ಸಿಗುವುದು ಖಚಿತವಾದರೆ, ಜಾತಿ ಮೀಸಲಾತಿ ಲೆಕ್ಕಾಚಾರದ ಆಧಾರದ ಮೇಲೆ ಎಸ್‌ಸಿ ಎಡಗೈಗೆ ಸೇರಿದ ರಮೇಶ ಜಿಗಜಿಣಗಿ ಅವರಿಗೆ ವಿಜಯಪುರ ಟಿಕೆಟ್ ಖಚಿತ. ಒಂದು ವೇಳೆ ಕಲಬುರಗಿ ಕ್ಷೇತ್ರದಲ್ಲಿ ಬಂಜಾರ ಸಮುದಾಯದ ಬದಲಿಗೆ ಎಸ್‌ಸಿ ಅನ್ಯ ಸಮಾಜದವರಿಗೆ ಟಿಕೆಟ್ ನೀಡಿದರೆ ವಿಜಯಪುರದಲ್ಲಿ ಬಂಜಾರ ಸಮುದಾಯದ ಆಕಾಂಕ್ಷಿಗಳಿಗೆ ಟಿಕೆಟ್ ಖಚಿತ ಎಂಬುದು ರಾಜಕೀಯ ತಜ್ಞರ ವಿಶ್ಲೇಷಣೆಯಾಗಿದೆ.

ಟಿಕೆಟ್ ನಿರಾಕರಿಸಲು ಕಾರಣ ಬೇಕಲ್ಲ: ರಮೇಶ ಜಿಗಜಿಣಗಿ

‘ಬಿಜೆಪಿಯಿಂದಲೇ ಮತ್ತೊಮ್ಮೆ ನನಗೆ ಟಿಕೆಟ್ ಸಿಗುವುದು ನಿಶ್ಚಿತ. ಬಿಜೆಪಿಯಿಂದ ನನಗೆ ಟಿಕೆಟ್ ನೀಡುವುದಿಲ್ಲ ಎಂಬುದಕ್ಕೆ ಏನಾದರೂ ಕಾರಣ ಬೇಕಲ್ಲ? ನಾನೇನು ಭ್ರಷ್ಟನೇ? 75 ವರ್ಷ ವಯಸ್ಸಾಗಿದೆಯೇ? ಅಥವಾ ಪಕ್ಷ ವಿರೋಧಿಯೇ? ನಮ್ಮ ಪಕ್ಷದಲ್ಲೇ ಇರುವ ಕೆಲವು ವಿರೋಧಿಗಳು, ಆಕಾಂಕ್ಷಿಗಳು ನನಗೆ ಟಿಕೆಟ್ ಸಿಗುವುದಿಲ್ಲ ಎಂದು ಸುಳ್ಳು ಸುದ್ದಿ ಹರಡಿದ್ದಾರೆ. ಅಪಪ್ರಚಾರ ನಡೆಸಿದ್ದಾರೆ’ ಎಂದು ಸಂಸದ ರಮೇಶ ಜಿಗಜಿಣಗಿ ದೂರಿದರು.

‘ಒಂದು ವೇಳೆ ಬಿಜೆಪಿ ವರಿಷ್ಠರು ನನಗೆ ಟಿಕೆಟ್ ನೀಡದಿದ್ದರೆ ಮನೆಯಲ್ಲೇ ಇರುತ್ತೇನೆ ಹೊರತು ಕಾಂಗ್ರೆಸ್‌ಗೆ ಹೋಗಲ್ಲ. ಇವೆಲ್ಲವೂ ಊಹಾಪೋಹ. ನನಗೂ ಕಾಂಗ್ರೆಸ್ ಸಿದ್ಧಾಂತಕ್ಕೂ ಮೊದಲಿನಿಂದಲೂ ಹೊಂದಿಕೆಯಾಗಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

‘ಅನಂತಕುಮಾರಗೆ ಬಿಜೆಪಿ ಟಿಕೆಟ್ ನೀಡಲಿ; ಪಾಠ ಕಲಿಸುತ್ತೇವೆ’

ಶಿರಸಿ/ಕಾರವಾರ: ‘ನಾಲ್ಕು ವರ್ಷ ಮಲಗಿ ಈಗ ಎದ್ದಿರುವ ಸಂಸದ ಅನಂತಕುಮಾರ ಹೆಗಡೆಗೆ ಈ ಬಾರಿಯ ಲೋಕಸಭೆ ಚುನಾವಣೆಗೆ ಬಿಜೆಪಿ ಟಿಕೆಟ್ ನೀಡಲಿ. ಅವರಿಗೆ ತಕ್ಕ ಪಾಠ ಕಲಿಸುತ್ತೇವೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

‘ಪ್ರಜಾಪ್ರಭುತ್ವದಲ್ಲಿ ಜನರಿಂದ ಮತ ಪಡೆದು, ದ್ರೋಹ ಮಾಡಿದ ವ್ಯಕ್ತಿ ಅನಂತಕುಮಾರ. ನಾಲ್ಕು ವರ್ಷ ಜನರ ಮರೆತು ಮನೆಯಲ್ಲಿ ಮಲಗಿದ್ದವರು ಇಡೀ ದೇಶದಲ್ಲಿ ಯಾರೂ ಇಲ್ಲ. ಅಂಥವರಿಗೆ ಧಿಕ್ಕಾರ ವ್ಯಕ್ತಪಡಿಸಬೇಕು. ಚುನಾವಣೆಯಲ್ಲಿ ಅವರ ಸೋಲಿಗಾಗಿ ವ್ಯಾಪಕ ಪ್ರಚಾರ ಮಾಡುತ್ತೇವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಈ ದೇಶದ ಸಂಸ್ಕೃತಿಯಲ್ಲಿ ಬದುಕಲು ನಾವೆಲ್ಲರೂ ಅದೃಷ್ಟ ಮಾಡಿದ್ದೇವೆ. ಸಂಸ್ಕೃತಿ ಇಲ್ಲದೇ ಮಾತನಾಡುವುದು ಮನುಷ್ಯತ್ವ ವಲ್ಲ. ಸಂಸ್ಕೃತಿ ಮತ್ತು ಮಾನ ಇಲ್ಲದ ವ್ಯಕ್ತಿ ಅನಂತಕುಮಾರ. ಅವರು ಮನುಷ್ಯರೇ ಅಲ್ಲ. ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಅವರು ತಿಳಿಸಿದರು.

ಅಂಕೋಲಾದಲ್ಲಿ ಮಾತನಾಡಿದ ಅವರು, ‘ಜನರ ಧಾರ್ಮಿಕ ಭಾವನೆಯೊಂದಿಗೆ ಚೆಲ್ಲಾಟವಾಡಿ ರಾಜಕೀಯ ಲಾಭ ಪಡೆಯುವುದು ಬಿಜೆಪಿಯ ಕೆಟ್ಟ ಗುಣ. ಕೋಮು ಧ್ರುವೀಕರಣದ ಚಟುವಟಿಕೆಗೆ ಈ ಬಾರಿ ಅವಕಾಶ ಸಿಗದು’ ಎಂದರು.

ಶಿಕ್ಷಕರಿಗೆ ತರಬೇತಿ: ‘ಪ್ರತಿ ವರ್ಷ ರಾಜ್ಯದಲ್ಲಿ 20 ಸಾವಿರ ಶಿಕ್ಷಕರಿಗೆ ತಾಂತ್ರಿಕ ತರಬೇತಿ ನೀಡಲು ಅಜೀಂ ಪ್ರೇಮ್‌ಜಿ ಫೌಂಡೇಶನ್ ಜೊತೆ ಒಪ್ಪಂದವಾಗಿದೆ. ಮುಂಬರುವ ಶೈಕ್ಷಣಿಕ ವರ್ಷದಿಂದ ತರಬೇತಿ ಆರಂಭಗೊಳ್ಳಲಿದೆ’ ಎಂದು ಮಧು ಬಂಗಾರಪ್ಪ ತಿಳಿಸಿದರು.

‘ಶಿಕ್ಷಕರಿಗೆ ಮುಂಬಡ್ತಿಯನ್ನು ಶಾಲಾ ಅವಧಿಯಲ್ಲಿ ನೀಡುವುದರಿಂದ ಶಿಕ್ಷಕರ ಕೊರತೆ ಉಂಟಾಗುತ್ತದೆ ಎಂಬ ಮಾತೂ ಕೇಳಿ ಬಂದಿದೆ. ಈ ಬಗ್ಗೆ ಶಿಕ್ಷಣ ತಜ್ಞರೊಂದಿಗೆ ಸಮಾಲೋಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ’ ಎಂದರು.

ಹಿಂದೂರಾಷ್ಟ್ರ ನಿರ್ಮಾಣ ಬಿಜೆಪಿ ಗುರಿ: ಅನಂತಕುಮಾರ ಹೆಗಡೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): ‘ಹಿಂದೂರಾಷ್ಟ್ರ ನಿರ್ಮಾಣವೇ ಬಿಜೆಪಿಯ ಅಂತಿಮ ಗುರಿ ಮತ್ತು ಗೆಲುವು. ಜಗತ್ತಿಗೆ ಭಾರತ, ದೇಶಕ್ಕೆ ಬಿಜೆಪಿ ಬೇಕು. ಒಮ್ಮೆ ಗೆದ್ದರೆ ಸಾಲುವುದಿಲ್ಲ. ಅಂತಿಮ ಗುರಿ ತಲುಪುವವರೆಗೆ ನಮ್ಮದೇ ಗೆಲುವಾಗಬೇಕು’ ಎಂದು ಸಂಸದ ಅನಂತಕುಮಾರ ಹೆಗಡೆ ತಿಳಿಸಿದರು.

ಸಿದ್ದಾಪುರ ತಾಲ್ಲೂಕಿನ ಕಾನಸೂರಿನಲ್ಲಿ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯ ಅಂತಿಮ ಗೆಲುವಿನಂತೆ ಹಿಂದೂರಾಷ್ಟ್ರ ನಿರ್ಮಾಣವಾದರೆ ಈಗಿರುವ ಜಾತಿ, ಧರ್ಮ, ವ್ಯವಸ್ಥೆ ದೋಷ ಸರಿಯಾಗಲಿದೆ’ ಎಂದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ಬೇಕು. ಆದರೆ, ದೇಶದ್ರೋಹಿಗಳಿರುವ ವಿರೋಧ ಪಕ್ಷವಲ್ಲ. ಲಾಲ್ ಬಹದ್ದೂರ್ ಶಾಸ್ತ್ರಿ ಹತ್ಯೆ ನಂತರ 15 ದಿನಗಳಲ್ಲಿ ಜಹಂಗೀರ್ ಬಾಬಾ ಹತ್ಯೆಯಾಯಿತು. ಸಾರಾಬಾಯಿ ಅಂತ್ಯವಾಯಿತು. ಇದ್ಯಾವುದು ಕೂಡ ಸ್ವಾಭಾವಿಕ ಸಾವಲ್ಲ. ಇಂಥ ಘಟನೆಗಳು ಸರಣಿಯಾಗಿ ದೇಶದಲ್ಲಿ ನಡೆದಿದೆ’ ಎಂದರು.

ಕಾಂತಿಯ ಎಲೆ

ಗಣರಾಜ್ಯೋತ್ಸವದ ಅಂಗವಾಗಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದಲ್ಲಿ ಬಾಳೆ ಎಲೆಗಳಲ್ಲಿ ಅರಳಿದ ಸೂರ್ಯಕಾಂತಿ ಹೂವನ್ನು ಮಹಿಳೆಯರು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಎಂಎಸ್‌ಪಿ: 81 ರೈತರ ನೋಂದಣಿ

ಇಳುವರಿ ಕುಂಠಿತ: ಮುಕ್ತ ಮಾರುಕಟ್ಟೆಯಲ್ಲಿ ದರ ಏರಿಕೆ

• ಶಾಂತೇಶ ಬೆನಕನಕೊಪ್ಪ

ಮುಂಡಗೋಡ (ಉತ್ತರ ಕನ್ನಡ): ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ಸಾಮಾನ್ಯ ಭತ್ತ ಖರೀದಿ ಪ್ರಕ್ರಿಯೆ ಆರಂಭವಾಗಿ ಒಂದೂವರೆ ತಿಂಗಳಾದರೂ ರಾಜ್ಯದಲ್ಲಿ 81 ರೈತರು ಮಾತ್ರ ಭತ್ತ ಮಾರಾಟಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದಿಂದ ಕಳೆದ ಡಿಸೆಂಬರ್ ತಿಂಗಳಿಂದ ಭತ್ತ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. ಹಾಸನ, ಕೊಡಗು, ಮಂಡ್ಯ, ಮೈಸೂರು, ಉತ್ತರ ಕನ್ನಡ ಈ ಐದು ಜಿಲ್ಲೆಗಳ ಭತ್ತ ಖರೀದಿ ಕೇಂದ್ರದಲ್ಲಿ ಹೆಸರು ನೋಂದಣಿಯಾಗಿದೆ. ಜನವರಿ 19ರ ವರೆಗೆ ಲಭ್ಯವಾದ ಮಾಹಿತಿಯಂತೆ ರಾಜ್ಯದ 28 ಜಿಲ್ಲೆಗಳಲ್ಲಿ ರೈತರ ನೋಂದಣಿ ಪ್ರಕ್ರಿಯೆ ಶೂನ್ಯ ಇದೆ.

ಹೆಸರು ನೋಂದಾಯಿಸಿಕೊಂಡ ರೈತರಿಂದ ಪ್ರತಿ ಎಕರೆಗೆ 25 ಕ್ವಿಂಟಲ್‌ನಂತೆ ಗರಿಷ್ಠ 40 ಕ್ವಿಂಟಲ್ ಭತ್ತ ಖರೀದಿಸಲಾಗುತ್ತದೆ. ಕನಿಷ್ಠ ಬೆಂಬಲ ಬೆಲೆಯಡಿ ಸಾಮಾನ್ಯ ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ ₹2,183 ಹಾಗೂ ‘ಎ’ ಗ್ರೇಡ್ ಭತ್ತಕ್ಕೆ ₹2,203 ದರ ನಿಗದಿ ಮಾಡಲಾಗಿದೆ.

‘ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸರ್ಕಾರ ನಿಗದಿ ಮಾಡಿರುವ ದರಕ್ಕಿಂತ ಮುಕ್ತ ಮಾರುಕಟ್ಟೆಯಲ್ಲಿ ಭತ್ತಕ್ಕೆ ಹೆಚ್ಚಿನ ದರ ಸಿಗುತ್ತಿದೆ.

ಮುಂಡಗೋಡ ತಾಲ್ಲೂಕಿನ ಅಕ್ಕಿ ಗಿರಣಿ

ಜಿಲ್ಲೆ	ನೋಂದಣಿ ಮಾಡಿಸಿದ ರೈತರ ಸಂಖ್ಯೆ	ಭತ್ತ (ಕ್ವಿಂಟಲ್ ಗಳಲ್ಲಿ)
ಹಾಸನ	02	22
ಕೊಡಗು	15	573.50
ಮಂಡ್ಯ	22	620.50
ಮೈಸೂರು	37	1087
ಉತ್ತರ ಕನ್ನಡ	05	140.50

ಕುಚಲಕ್ಕಿ ಭತ್ತದ ತಳಿಗೆ ಈ ಹಿಂದೆ ನೀಡಲಾಗುತ್ತಿದ್ದ ಸಹಾಯಧನವೂ ನಿಂತಿದೆ. ಸಮೀಪದ ಅಕ್ಕಿ ಗಿರಣಿಗಳಲ್ಲೇ ಭತ್ತ ಖರೀದಿಗೆ ಅವಕಾಶ ನೀಡದಿರುವುದು, ತಾಲ್ಲೂಕು ಕೇಂದ್ರಕ್ಕೆ ರೈತರೇ ಸಾಗಾಣಿಕಾ ವೆಚ್ಚ ಭರಿಸಿ, ಭತ್ತ ನೀಡಬೇಕಿರುವುದು ರೈತರ ನಿರಾಸಕ್ತಿಗೆ ಕಾರಣವಾಗಿದೆ’ ಎಂದು ರಾಜ್ಯ ಅಕ್ಕಿಗಿರಣಿ ಮಾಲೀಕರ ಸಂಘದ ಸದಸ್ಯ ಶಿವಕುಮಾರ ಪಾಟೀಲ ಸಮಸ್ಯೆ ವಿವರಿಸಿದರು.

ಕಳೆದ ವರ್ಷಕ್ಕೆ ಹೋಲಿಸಿದರೆ ನೋಂದಣಿ ಪ್ರಕ್ರಿಯೆಯಲ್ಲಿ ರೈತರ ಪಾಲ್ಗೊಳ್ಳುವಿಕೆ ಕಡಿಮೆಯಿದೆ. ಭತ್ತ ಖರೀದಿ ನೋಂದಣಿಗೆ ಮಾರ್ಚ್ 31ರ ವರೆಗೆ ಅವಕಾಶ ಕಲ್ಪಿಸಲಾಗಿದೆ

ಮಂಜುನಾಥ ರೇವಣಕರ
ಉಪನಿರ್ದೇಶಕ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

‘ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ವರ್ಷ ಭತ್ತದ ಇಳುವರಿ ಶೇ 20ರಷ್ಟು ಕಡಿಮೆಯಾಗಿದೆ. ಇದರಿಂದ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್ ಭತ್ತಕ್ಕೆ ₹2,800 ರಿಂದ ₹3 ಸಾವಿರದವರೆಗೆ ದರ ಏರಿದೆ. ಕೆಲವೆಡೆ ರೈತರಿಂದಲೇ ನೇರವಾಗಿ ವ್ಯಾಪಾರಸ್ಥರು ಖರೀದಿ ಮಾಡುತ್ತಿದ್ದಾರೆ’ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಹೊನ್ನಪ್ಪ ಗೌಡ ಅವರು ಪ್ರತಿಕ್ರಿಯಿಸಿದರು.

ರಾಜ್ಯಪಾಲರಿಂದ ತಿಳಿವಳಿಕೆ ಕೊಡಿಸಿ: ಸಿಎಸ್‌ಗೆ ಪತ್ರ

ಒಂದನೇ ಪುಟದಿಂದ

‘ನ್ಯಾಯಾಲಯ ಹಾಗೂ ನ್ಯಾಯಾಂಗ ನಿಂದನಾ ಪ್ರಕರಣಗಳಲ್ಲಿಯೂ ಕಾರ್ಯದರ್ಶಿಯನ್ನೇ ಪ್ರತಿವಾದಿಯಾಗಿ ಮಾಡಲಾಗುತ್ತದೆ. ಎಚ್‌ಎಲ್‌ಸಿ ಹುದ್ದೆ ಭರ್ತಿಗೆ ಕಾರ್ಯದರ್ಶಿಯ ಸಹಮತ ಅಗತ್ಯ. ಆಯೋಗದ ಆಯ್ಕೆ ಸಮಿತಿ ನಡೆಸಿದ ಎಚ್‌ಎಲ್‌ಸಿ ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿರದ ಕಾರಣ ಕಡತವನ್ನು ಹಿಂದಿರುಗಿಸಿ, ವಿವರ ಕೇಳಲಾಗಿತ್ತು. ಇಂತಹ ಅಸಂಬದ್ಧ ಪ್ರಶ್ನೆಗಳನ್ನು ಕೇಳದೇ, ಸಮಿತಿಯ ನಿರ್ಣಯದಂತೆ ಎಚ್‌ಎಲ್‌ಸಿ ನೇಮಕಾತಿ ಆದೇಶ ಹೊರಡಿಸುವಂತೆ ಆಯೋಗದ ಅಧ್ಯಕ್ಷರು ಸೂಚಿಸಿದ್ದರು’ ಎಂದು ಕಾರ್ಯದರ್ಶಿ ಪತ್ರದಲ್ಲಿ ವಿವರಿಸಿದ್ದಾರೆ.

‘ಎಚ್‌ಎಲ್‌ಸಿ ನೇಮಕಾತಿಯನ್ನು ಮುಂದಿಟ್ಟು ಅಧ್ಯಕ್ಷರು ಮತ್ತು ಕೆಲವು ಸದಸ್ಯರು ಆಯ್ಕೆ ಪಟ್ಟಿಗೆ ಅನುಮೋದನೆ ನೀಡುವುದಿಲ್ಲ ಎಂದಿರುವುದು ಅಸಾಂವಿಧಾನಿಕ. ಅಭ್ಯರ್ಥಿಗಳ ಹಿತದೃಷ್ಟಿಯಿಂದ ಮತ್ತು ಕೆಪಿಎಸ್‌ಸಿ ಮತ್ತು ರಾಜ್ಯದ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಬಾಕಿ ಇರುವ ಕಡತಗಳನ್ನು ತಕ್ಷಣ ವಿಲೇ ಮಾಡಬೇಕಿದೆ’ ಎಂದೂ ಪತ್ರದಲ್ಲಿ ಕಾರ್ಯದರ್ಶಿ ತಿಳಿಸಿದ್ದಾರೆ ಎಂದೂ ಮೂಲಗಳು ಹೇಳಿವೆ.

‘ಭಯದ ವಾತಾವರಣವಿದೆ– ಸ್ವಯಂ ನಿವೃತ್ತಿ ಕೊಡಿ’: ‘ಜ. 12ರಂದು ನಡೆದ ಆಯೋಗದ ಸಭೆಯ ನಡಾವಳಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಅಧ್ಯಕ್ಷರು ಆದೇಶಿಸಿದ್ದ ಪ್ರತಿಯನ್ನು ಕಾರ್ಯದರ್ಶಿ ಮೂಲಕ ಕಳುಹಿಸದೆ ನೇರವಾಗಿ ಗಣಕ ಕೇಂದ್ರಕ್ಕೆ ಕಳುಹಿಸಲಾಗಿತ್ತು. ಎಲ್ಲ ಆಡಳಿತಾತ್ಮಕ ಕಾರ್ಯಗಳಿಗೆ ಕಾರ್ಯದರ್ಶಿಯೇ ಮುಖ್ಯಸ್ಥರಾಗಿರುವುದರಿಂದ, ಅವರ ಒಪ್ಪಿಗೆ ಪಡೆಯಲು ಗಣಕ ಕೇಂದ್ರದ ಮುಖ್ಯಸ್ಥೆ ಶೋಭಾ ಬಸವರಾಜು ಮುಂದಾಗಿದ್ದರು. ಆದರೆ, ಆಯೋಗದ ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ, ಎಂ.ಬಿ. ಹೆಗ್ಗಣ್ಣವರ್, ಬಿ.ವಿ. ಗೀತಾ ಮತ್ತು ಮುಸ್ತಫಾ ಹುಸೇನ್ ಸಯ್ಯದ್ ಅಜೀಜ್ ಅವರು ಗಣಕ ಕೇಂದ್ರಕ್ಕೆ ಏಕಾಏಕಿ ಬಂದು ತಕ್ಷಣವೇ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಒತ್ತಡ ಹೇರಿದ್ದಾರೆ.

ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಕಾರ್ಯದರ್ಶಿಗೆ ಕರೆ ಮಾಡಿದರೂ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

‘ಸ್ಪರ್ಧಿಸಲು ಒತ್ತಡವಿಲ್ಲ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಲೋಕಸಭೆ ಚುನಾವಣೆಗೆ ಸ್ಪರ್ಧಿಸುವಂತೆ ನನ್ನ ಮೇಲೆ ಯಾರೂ ಒತ್ತಡ ಹೇರಿಲ್ಲ. ನವದೆಹಲಿಯಲ್ಲಿ ನಡೆದ ಪಕ್ಷದ ಹೈಕಮಾಂಡ್ ಸಭೆಯಲ್ಲಿ ಇಂಥ ಯಾವುದೇ ಚರ್ಚೆ ಸಹ ನಡೆದಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಬೆಳಗಾವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋತರೆ ನಮ್ಮ ಸಚಿವ ಸ್ಥಾನಕ್ಕೆ ಕುತ್ತು ಬರುತ್ತದೆ ಎಂಬುದು ಬರೀ ಸುಳ್ಳು. ಇಂಥ ಯಾವುದೇ ಮಾತು ಯಾರೂ ಹೇಳಿಲ್ಲ. ಹೆಚ್ಚು ಸ್ಥಾನ ಗೆಲ್ಲಿಸಲು ಸಚಿವರು ಶ್ರಮಿಸಬೇಕು ಎಂಬುದು ನಿಜ’ ಎಂದು ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ರಾಜ್ಯದ ಎಲ್ಲ 28 ಸ್ಥಾನಗಳನ್ನೂ ಗೆಲ್ಲಬೇಕು ಎಂಬ ಹಂಬಲ ನಮಗಿದೆ. ಆದರೆ, ಎಂಟು ಕ್ಷೇತ್ರಗಳಲ್ಲಿ ನಮ್ಮ ಬಲ ಕಡಿಮೆ. 20ರಲ್ಲಿ ಗೆಲುವು ಸಾಧಿಸಲು ಶ್ರಮಿಸುತ್ತೇವೆ’ ಎಂದರು.

ದಲಿತರ ದಾರಿ ತಪ್ಪಿಸುವ ಕುತಂತ್ರ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿಯ ಪರಿಶೀಲನೆಗೆ ಕೇಂದ್ರ ಸರ್ಕಾರ ಸಂಪುಟ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಿರುವುದು ದಲಿತ ಸಮುದಾಯದ ದಾರಿ ತಪ್ಪಿಸುವ ಕುತಂತ್ರವಷ್ಟೇ. ಇದರ ಹಿಂದೆ ಯಾವುದೇ ಪ್ರಾಮಾಣಿಕ ಕಾಳಜಿ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

‘ಪರಿಶಿಷ್ಟ ಜಾತಿಗಳ ಉಪವರ್ಗೀಕರಣ ಮಾಡಿ ಒಳಮೀಸಲಾತಿ ನೀಡಲು ಸಂವಿಧಾನ ತಿದ್ದುಪಡಿಯೊಂದೇ ಪರಿಹಾರ ಎಂದು ಕೇಂದ್ರ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಉಷಾ ಮೆಹ್ರಾ ಆಯೋಗ ವರದಿ ನೀಡಿತ್ತು. ಆಂಧ್ರ ಪ್ರದೇಶದ ಪರಿಶಿಷ್ಟ ಜಾತಿಗಳ ಉಪವರ್ಗೀಕರಣದ ಬಗ್ಗೆ ಅಧ್ಯಯನ ನಡೆಸಿದ್ದ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ ಕೂಡಾ ಇದೇ ಅಭಿಪ್ರಾಯ ವ್ಯಕ್ತಪಡಿಸಿತ್ತು. ಹೀಗಿರುವಾಗ ಇನ್ನೊಂದು ಉನ್ನತ ಮಟ್ಟದ ಸಮಿತಿ ರಚಿಸುವ ಅಗತ್ಯವೇನಿದೆ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಬೇಡಿಕೆಯನ್ನು ಈಡೇರಿಸಬೇಕೆಂಬ ಪ್ರಾಮಾಣಿಕ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದ್ದರೆ, ಸಂವಿಧಾನ 341ನೇ ಪರಿಚ್ಛೇದದ ತಿದ್ದುಪಡಿಗೆ ಸಂಸತ್‌ನಲ್ಲಿ ಮಸೂದೆ ಮಂಡಿಸಿ ಅಂಗೀಕಾರ ಪಡೆಯಬೇಕು ಮತ್ತು ಶೀಘ್ರವಾಗಿ ಒಳಮೀಸಲಾತಿ ಜಾರಿಗೆ ತರಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ಕರ್ನಾಟಕ ಸಂಘ: ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘವು 2023ನೇ ಸಾಲಿನಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾದ ಕನ್ನಡ ಪುಸ್ತಕಗಳಿಗೆ ಬಹುಮಾನ ನೀಡಲು ಮುಂದಾಗಿದ್ದು, ಲೇಖಕರು ಮತ್ತು ಪ್ರಕಾಶಕರಿಂದ ಕೃತಿಗಳನ್ನು ಆಹ್ವಾನಿಸಿದೆ.

ಕಾದಂಬರಿ, ಅನುವಾದ, ಮಹಿಳಾ ಸಾಹಿತ್ಯ, ಮುಸ್ಲಿಂ ಬರಹಗಾರರ ಕೃತಿಗಳು, ಕವನ ಸಂಕಲನ, ಅಂಕಣ ಸಾಹಿತ್ಯ, ಸಣ್ಣ ಕಥಾ ಸಂಕಲನ, ನಾಟಕ, ಪ್ರವಾಸ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಮಕ್ಕಳ ಸಾಹಿತ್ಯ ಹಾಗೂ ವೈದ್ಯ ಸಾಹಿತ್ಯ ಪ್ರಕಾರಗಳ ಪುಸ್ತಕಗಳಿಗೆ ಬಹುಮಾನ ನೀಡಲಾಗುತ್ತಿದೆ.

ಆಯ್ಕೆಯಾದ ಕೃತಿಗಳಿಗೆ ₹10,000 ನಗದು ಬಹುಮಾನ ಮತ್ತು ಫಲಕ ನೀಡಲಾಗುವುದು. ಸಂಬಂಧಿಸಿದ ಸಾಹಿತ್ಯ ಕೃತಿಗಳ ನಾಲ್ಕು ಪ್ರತಿಗಳನ್ನು ಈ ವರ್ಷದ ಮಾರ್ಚ್ 20ರ ಒಳಗಾಗಿ ಗೌರವ ಕಾರ್ಯದರ್ಶಿ, ಕರ್ನಾಟಕ ಸಂಘ, ಬಿ.ಎಚ್.ರಸ್ತೆ, ಶಿವಮೊಗ್ಗ–577201 ಇಲ್ಲಿಗೆ ಕಳುಹಿಸಿಕೊಡಲು ಕೋರಿದೆ. ಹೆಚ್ಚಿನ ಮಾಹಿತಿಗೆ ಕರ್ನಾಟಕ ಸಂಘದ ಕಚೇರಿಗೆ (08182–277406/9980159696) ಸಂಪರ್ಕಿಸಬಹುದು.

7 ಸಾಧಕರು, ಜನಶಿಕ್ಷಣ ಟ್ರಸ್ಟ್‌ಗೆ ‘ಸಂದೇಶ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ‘ಸಂದೇಶ’ ಸಂಸ್ಕೃತಿ ಮತ್ತು ಶಿಕ್ಷಣ ಪ್ರತಿಷ್ಠಾನವು ವಾರ್ಷಿಕವಾಗಿ ನೀಡುವ ಸಂದೇಶ ಪ್ರಶಸ್ತಿಯನ್ನು ವಿವಿಧ ಕ್ಷೇತ್ರಗಳ ಏಳು ಸಾಧಕರು ಮತ್ತು ಒಂದು ಸಂಸ್ಥೆಗೆ ಪ್ರಕಟಿಸಲಾಗಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಂದೇಶ ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಪ್ರೊ. ಚಿನ್ನಪ್ಪ ಗೌಡ ಅವರು, ‘ಸಂದೇಶ ಸಾಹಿತ್ಯ ಪ್ರಶಸ್ತಿಗೆ ಪ್ರೊ. ಬಿ.ಎ.ವಿವೇಕ ರೈ (ಕನ್ನಡ), ವಲೇರಿಯನ್ ಕ್ವಾಡ್ರಸ್ (ಕೊಂಕಣಿ), ಮುದ್ದು ಮೂಡುಬೆಳ್ಳೆ (ತುಳು), ಸಂದೇಶ ಮಾಧ್ಯಮ ಪ್ರಶಸ್ತಿಗೆ ಅಬ್ದುಸ್ಸಲಾಮ್ ಪುತ್ತಿಗೆ, ಸಂದೇಶ ಕೊಂಕಣಿ ಸಂಗೀತ ಪ್ರಶಸ್ತಿಗೆ ಆಲ್ವಿನ್ ಡಿಕುನ್ಹಾ, ಸಂದೇಶ ಶಿಕ್ಷಣ ಪ್ರಶಸ್ತಿಗೆ ಹುಚ್ಚಮ್ಮ ಚೌದ್ರಿ, ಸಂದೇಶ ಕಲಾ ಪ್ರಶಸ್ತಿಗೆ ಚಂದ್ರನಾಥ ಆಚಾರ್ಯ ಹಾಗೂ ಸಂದೇಶ ವಿಶೇಷ ಪ್ರಶಸ್ತಿಗೆ ಜನಶಿಕ್ಷಣ ಸೇವಾ ಟ್ರಸ್ಟ್ ಅನ್ನು ಆಯ್ಕೆ ಮಾಡಲಾಗಿದೆ’ ಎಂದರು.

ಸಂದೇಶ ಪ್ರಶಸ್ತಿ ಪ್ರದಾನ ಸಮಾರಂಭವು ಫೆ.11ರಂದು ಸಂಜೆ 5.30ಕ್ಕೆ ಬಜ್ಜೋಡಿಯ ಸಂದೇಶ ಸಂಸ್ಥೆ ಆವರಣದಲ್ಲಿ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಆಯ್ಕೆ ಸಮಿತಿ ಸದಸ್ಯ ಬಿ.ಎ ಮೊಹಮ್ಮದ್ ಹನೀಫ್, ಸಂದೇಶ ಪ್ರತಿಷ್ಠಾನದ ವಿಶ್ವಸ್ಥ ರಾಯ್ ಕ್ಯಾಸ್ಟಲಿನೊ ಇದ್ದರು.

ಕಾಯ್ಕಿಣಿಗೆ ವಿಶ್ವಪ್ರಭಾ, ಚಿನ್ನಾಗೆ ಶಾರದಾ ಕೃಷ್ಣ ಪುರಸ್ಕಾರ

ಉಡುಪಿ: ಸಂಸ್ಕೃತಿ ವಿಶ್ವ ಪ್ರತಿಷ್ಠಾನದ ವತಿಯಿಂದ ಕೊಡಮಾಡುವ ಪ್ರಭಾವತಿ ಹಾಗೂ ವಿಶ್ವನಾಥ ಶೆಣೈ ಪ್ರಾಯೋಜಿತ ವಿಶ್ವಪ್ರಭಾ ಪುರಸ್ಕಾರಕ್ಕೆ ಸಾಹಿತಿ ಜಯಂತ್ ಕಾಯ್ಕಿಣಿ ಹಾಗೂ ಹೆಬ್ರಿಯ ರಾಘವೇಂದ್ರ ಚಾರಿಟೆಬಲ್ ಟ್ರಸ್ಟ್ ಪ್ರಾಯೋಜಿತ ಶಾರದಾ ಕೃಷ್ಣ ಪುರಸ್ಕಾರಕ್ಕೆ ಕಲಾವಿದ ಕಾಸರಗೋಡು ಚಿನ್ನಾ ಅವರನ್ನು ಆಯ್ಕೆ ಮಾಡಲಾಗಿದೆ.

ವಿಶ್ವಪ್ರಭಾ ಪುರಸ್ಕಾರ ₹1 ಲಕ್ಷ ನಗದು ಹಾಗೂ ಶಾರದಾ ಕೃಷ್ಣ ಪುರಸ್ಕಾರ ₹25 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಜ.23 ಹಾಗೂ 24ರಂದು ಉಡುಪಿಯ ಎಂಜಿಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ನಡೆಯುವ ಸಂಸ್ಕೃತಿ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿಶ್ವಪ್ರಭಾ ಪುರಸ್ಕಾರ ಸಮಿತಿಯ ಸಂಚಾಲಕ ನಾಗರಾಜ್ ಹೆಬ್ಬಾರ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಜಯಂತ್ ಕಾಯ್ಕಿಣಿ


ಕಾಸರಗೋಡು ಚಿನ್ನಾ

ಬ್ಯಾಡಗಿಯಲ್ಲೂ ಅನೈತಿಕ ಪೊಲೀಸ್‌ಗಿರಿ

ಏಳು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಹಾವೇರಿ: ಬ್ಯಾಡಗಿಯಲ್ಲೂ ಅನೈತಿಕ ಪೊಲೀಸ್‌ಗಿರಿ ನಡೆದಿದ್ದು, ಮುಸ್ಲಿಂ ಯುವತಿ ಮೇಲೆ ಮುಸ್ಲಿಂ ಯುವಕರ ಗುಂಪು ಹಲ್ಲೆ ಮಾಡಿದೆ. ಪ್ರಕರಣಕ್ಕೆ ಸಂಬಂಧಿದಂತೆ 9 ಆರೋಪಿಗಳ ಪೈಕಿ 7 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

‘ಬ್ಯಾಡಗಿಯ ಅಬ್ದುಲ್ ಖಾದರ್ ಮುದಗಲ್, ಮನ್ಸೂರ್ ತಾಂಡೂರ, ಮಹೆಬೂಬ್‌ಖಾನ್ ಬಡಿಗೇರ, ರಿಯಾಜ್ ಹಲಗೇರಿ, ಅಲ್ಫಾಜ್ ಬಳಿಗಾರ, ಅಬ್ದುಲ್ ದೇಸೂರ, ಖಾದರ್ ಕಣಕೆ, ಸಲೀಂಸಾಬ್ ಖಾಜಿ ಮತ್ತು ಮೆಹಬೂಬ್ ಅಲಿ ಹಲಗೇರಿ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬ್ಯಾಡಗಿ ತಾಲ್ಲೂಕಿನ ಅಗಸನಹಳ್ಳಿಗೆ ಹಬ್ಬಕ್ಕಾಗಿ ತನ್ನ ಜೊತೆ ಕೆಲಸ ಮಾಡುತ್ತಿದ್ದ ಹಿಂದೂ ಯುವಕನ ಜೊತೆ ಮುಸ್ಲಿಂ ಯುವತಿ ಬೈಕ್‌ನಲ್ಲಿ ತೆರಳಿದ್ದರು. ಮಾರ್ಗ ಮಧ್ಯೆ ಮಾತನಾಡುತ್ತಾ ನಿಂತಿದ್ದ ವೇಳೆ ಸ್ಥಳಕ್ಕೆ ಬಂದ ಮುಸ್ಲಿಂ ಯುವಕರ ಗುಂಪು, ಹಿಂದೂ ಯುವಕನ ಜೊತೆ ಬಂದಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಪಾಳಕ್ಕೆ ಹೊಡೆದು ಎಳೆದಾಡಿ, ಸಾರ್ವಜನಿಕವಾಗಿ ನಿಂದಿಸಿದ್ದಾರೆ’ ಎಂದು ಯುವತಿ ಪೊಲೀಸರಿಗೆ ದೂರು ನೀಡಿದ್ದಾರೆ.

ಅತ್ಯಾಚಾರ: ಆರೋಪಿಗಳ ಸಂಖ್ಯೆ 12ಕ್ಕೆ

ಹಾವೇರಿ: ಹಾನಗಲ್ ತಾಲ್ಲೂಕಿನ ನಾಲ್ಕರ್ ಕ್ರಾಸ್ ಬಳಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಅಕ್ಕಿಆಲೂರಿನ ತರಕಾರಿ ವ್ಯಾಪಾರಿ ಇಸ್ಮಾಯಿಲ್ ಹುಬ್ಬಳ್ಳಿ (27) ಎಂಬ ಆರೋಪಿಯನ್ನು ಬಂಧಿಸಲಾಗಿದೆ.

‘ಅತ್ಯಾಚಾರದಲ್ಲಿ ಭಾಗಿಯಾದ 7 ಆರೋಪಿಗಳು ಹಾಗೂ ಹಲ್ಲೆ ಇತರೆ ಅಪರಾಧಗಳಲ್ಲಿ ಭಾಗಿಯಾದ 5 ಆರೋಪಿಗಳು ಸೇರಿ ಈವರೆಗೆ 12 ಆರೋಪಿಗಳ ಬಂಧನವಾಗಿದೆ. ಇತರೆ ಆರೋಪಿಗಳನ್ನು ಬಂಧಿಸುವ ಕಾರ್ಯ ಮುಂದುವರಿದಿದೆ’ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಗೋಪಾಲ್ ಸಿ. ತಿಳಿಸಿದ್ದಾರೆ.

ಇಸ್ಮಾಯಿಲ್ ಹುಬ್ಬಳ್ಳಿ

ಬ್ಯಾಡಗಿಯಲ್ಲಿ ಅನೈತಿಕ ಪೊಲೀಸ್‌ಗಿರಿ ಮೆರೆದ 9 ಮಂದಿ ವಿರುದ್ಧ ಪ್ರಕರಣ ದಾಖಲಾಗಿದ್ದು, 7 ಆರೋಪಿಗಳನ್ನು ಬಂಧಿಸಿದ್ದೇವೆ. ತಲೆಮರೆಸಿಕೊಂಡ ಇಬ್ಬರ ಬಂಧನಕ್ಕೆ ತಂಡ ರಚಿಸಲಾಗಿದೆ

ಅಂಶುಕುಮಾರ್
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹಾವೇರಿ

ಆರ್‌. ಅಶೋಕ ನೇತೃತ್ವದಲ್ಲಿ ಎಸ್ಪಿ ಕಚೇರಿಗೆ ಮುತ್ತಿಗೆ: 80ಕ್ಕೂ ಹೆಚ್ಚು ಕಾರ್ಯಕರ್ತರು ವಶಕ್ಕೆ

ಅತ್ಯಾಚಾರ: ಎಸ್‌ಐಟಿ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಹಾವೇರಿ: ಹಾನಗಲ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸುವಂತೆ ಆಗ್ರಹಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಬಿ.ಸಿ. ಪಾಟೀಲ ಸೇರಿ 80ಕ್ಕೂ ಹೆಚ್ಚು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರನ್ನು ಶನಿವಾರ ಪೊಲೀಸರು ವಶಕ್ಕೆ ಪಡೆದರು.

ಇಲ್ಲಿನ ಕಾಗಿನೆಲೆ ರಸ್ತೆಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಿಂದ ಪ್ರತಿಭಟನಾ ಮೆರವಣಿಗೆಯಲ್ಲಿ ಬಂದ ಬಿಜೆಪಿ ಮುಖಂಡರು, ಕಾರ್ಯಕರ್ತರು ಎಸ್‌ಪಿ ಕಚೇರಿ ಮುಂಭಾಗ ರಸ್ತೆ ಸಂಚಾರಕ್ಕೆ ತಡೆಯೊಡ್ಡಿ ಪ್ರತಿಭಟಿಸಿದರು.

‘ರಾಜ್ಯದಲ್ಲಿ ಜೂಜು, ಅತ್ಯಾಚಾರ, ಮಹಿಳೆಯರ ಮೇಲೆ ದೌರ್ಜನ್ಯ ಮುಂತಾದ ದುಷ್ಕೃತ್ಯಗಳು ನಿತ್ಯ ನಡೆಯುತ್ತಿವೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಇದೆಲ್ಲವನ್ನು ನೋಡಿದರೆ, ರಾಜ್ಯ ಸರ್ಕಾರ ಬದುಕಿದೆಯಾ ಎಂಬ ಅನುಮಾನ ಬರುತ್ತದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಛೇಡಿಸಿದರು.

ಪಿಎಫ್‌ಐ ನಂಟು: ‘ಹಾನಗಲ್ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗಳಿಗೆ ಪಿಎಫ್‌ಐ ಮತ್ತು ಇತರ ಭಯೋತ್ಪಾದನಾ ಸಂಘಟನೆಗಳ ನಂಟು ಇರುವ ಶಂಕೆ ವ್ಯಕ್ತವಾಗಿದೆ. ಇದು ಬಹಿರಂಗವಾದರೆ, ಸರ್ಕಾರದ ಬಣ್ಣ ಬಯಲಾಗುತ್ತದೆ. ಗೋವಾದಿಂದ ಕರೆ ಮಾಡಿ, ಪೊಲೀಸರ ಮೇಲೆ ಒತ್ತಡ ಹಾಕಿದವರು ಯಾರು ಎಂಬ ಬಗ್ಗೆ ತನಿಖೆಯಾಗಬೇಕು. ಬೆಳಗಾವಿ ಬೆತ್ತಲೆ ಪ್ರಕರಣ ಮತ್ತು ಹಾನಗಲ್ ಅತ್ಯಾಚಾರ ಪ್ರಕರಣಗಳನ್ನು ಮುಚ್ಚಿ ಹಾಕುವ ಯತ್ನ ನಡೆದಿದೆ’ ಎಂದು ಅವರು ಆರೋಪಿಸಿದರು.

ಸಿಸ್ಟರ್‌ಗೆ ಅನ್ಯಾಯ– ಡಿಕೆಶಿ ಮಾತನಾಡಲಿ: ‘ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟವಾದಾಗ ಆರೋಪಿಗಳನ್ನು ‘ಬ್ರದರ್ಸ್’ ಎಂದು ಡಿ.ಕೆ.ಶಿವಕುಮಾರ್ ಕರೆದರು. ಈಗ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ‘ಸಿಸ್ಟರ್’ ಮೇಲೆ ಅತ್ಯಾಚಾರ ನಡೆದರೂ ಯಾಕೆ ಮಾತನಾಡುತ್ತಿಲ್ಲ’ ಎಂದು ಪ್ರಶ್ನಿಸಿದರು. ಮಾಜಿ ಸಚಿವ ಬಿ.ಸಿ. ಪಾಟೀಲ, ಮಾಜಿ ಶಾಸಕರಾದ ಶಿವರಾಜ ಸಜ್ಜನರ್, ವಿರೂಪಾಕ್ಷಪ್ಪ ಬಳ್ಳಾರಿ, ಮುಖಂಡರಾದ ಭೋಜರಾಜ ಕರೂದಿ, ಶೋಭಾ ನಿಸ್ಸೀಮಗೌಡ್ರ, ಗವಿಸಿದ್ದಪ್ಪ ದ್ಯಾಮಣ್ಣನವರ್ ಇದ್ದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ, ಶಾಸಕ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಶನಿವಾರ ಮುತ್ತಿಗೆ ಹಾಕಿದರು –ಪ್ರಜಾವಾಣಿ ಚಿತ್ರ

ಇಡೀ ದೇಶ ಕಾಯುತ್ತಿರುವ ಐತಿಹಾಸಿಕ ಸಮಾರಂಭ ನಾಳೆ; ಅಯೋಧ್ಯೆಯಲ್ಲಿ ಸಡಗರ

ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಕ್ಷಣಗಣನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಅಯೋಧ್ಯೆ: ರಾಮ ಮಂದಿರದಲ್ಲಿ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಗೆ ಕ್ಷಣಗಣನೆ ಶುರುವಾಗಿದ್ದು, ಇಡೀ ಅಯೋಧ್ಯೆಯನ್ನು 'ಧಾರ್ಮಿಕ ಉತ್ಸಾಹ' ಆವರಿಸಿಕೊಂಡಿದೆ. ದೇಶದ ವಿವಿಧ ಭಾಗಗಳಲ್ಲೂ ಸಡಗರ ಮನೆಮಾಡಿದೆ.

ಪ್ರಾಣ ಪ್ರತಿಷ್ಠಾಪನಾ ಸಮಾರಂಭ ಸೋಮವಾರ (ಜನವರಿ 22) ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ನೂರಾರು ಗಣ್ಯರು ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿ ಆಗಲಿದ್ದಾರೆ.

ಮಂದಿರವನ್ನು ಹೂವುಗಳು ಮತ್ತು ವಿಶೇಷ ದೀಪಗಳಿಂದ ಅಲಂಕರಿಸಲಾಗಿದೆ. 'ಇಡೀ ಮಂದಿರದ ಅಲಂಕಾರಕ್ಕೆ ನೈಸರ್ಗಿಕ ಹೂವುಗಳನ್ನು ಮಾತ್ರ ಬಳಸಲಾಗಿದೆ. ಚಳಿಗಾಲ ಆದ್ದರಿಂದ ಹೂವುಗಳು ಬೇಗ ಬಾಡಿ ಹೋಗವು. ಪ್ರಾಣ ಪ್ರತಿಷ್ಠಾಪನೆಯ ದಿನದವರೆಗೂ ತಾಜಾ ಆಗಿ ಇರಲಿವೆ. ಹೂಗಳ ಪರಿಮಳ ಮತ್ತು ಸೌಂದರ್ಯದಿಂದ ಮಂದಿರದಲ್ಲಿ ದೈವತ್ವದ ಇನ್ನೊಂದು ಪದರ ರೂಪುಗೊಂಡಂತೆ ಭಾಸವಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ವಿದ್ಯುತ್ ದೀಪಾಲಂಕಾರಕ್ಕೆ ಹಣತೆ ಮಾದರಿಯ ದೀಪಗಳನ್ನು ಬಳಸಲಾಗಿದೆ. ಇದು ಮಂದಿರಕ್ಕೆ ಸಾಂಪ್ರದಾಯಿಕ ನೋಟವನ್ನು ನೀಡುತ್ತದೆ ಎಂದು ಟ್ರಸ್ಟ್ ಅಧಿಕಾರಿಯೊಬ್ಬರು ತಿಳಿಸಿದರು. 'ಗರ್ಭಗುಡಿಯ ಒಳಭಾಗದಲ್ಲಿ ಸಾಂಪ್ರದಾಯಿಕ ಹಣತೆಗಳನ್ನು ಬಳಸಲಾಗುವುದು' ಎಂದು ಹೇಳಿದರು.

'ದೇವಾಲಯದ ಒಳಭಾಗದಲ್ಲಿ ಅಳವಡಿಸಿರುವ ದೀಪಗಳು ಮಂದವಾದ ಬೆಳಕು ಹೊರಸೂಸಲಿದ್ದು, ವಾಸ್ತುಶಿಲ್ಪದ ವೈಭವವನ್ನು ಸ್ಪಷ್ಟವಾಗಿ ತೆರೆದಿಡಲಿದೆ. ಹೊರ ಭಾಗದಲ್ಲಿನ ದೀಪಗಳನ್ನು ಸಂಜೆ ಬಳಿಕವಷ್ಟೇ ಉರಿಸಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದರು.

ಮಂದಿರದ ಆವರಣದ ಮುಖ್ಯ ದ್ವಾರವನ್ನು ಆಕರ್ಷಕವಾದ ಹೂವಿನ ವಿನ್ಯಾಸದಿಂದ ಅಲಂಕರಿಸಲಾಗಿದೆ. ದ್ವಾರದ ಎರಡೂ ಬದಿಗಳಲ್ಲಿ ಆನೆಗಳ ಪ್ರತಿಕೃತಿ ನಿಲ್ಲಿಸಲಾಗಿದೆ.

ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ದೇವಾಲಯದ ಒಳಗೆ ಮತ್ತು ಹೊರಗೆ ನಡೆಯುತ್ತಿರುವ ಅಂತಿಮ ಹಂತದ ತಯಾರಿಯ ಚಿತ್ರಗಳನ್ನು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಶನಿವಾರ ಬಿಡುಗಡೆಗೊಳಿಸಿದೆ.

'ಮೇರೆ ಪ್ರಭು 500 ಸಾಲ್ ಬಾದ್ ಅಯೋಧ್ಯಾಜಿ ಆ ರಹಾ ಹೆ... ಖುಷಿ ತೋ ಹೋಗಿ ಹಿ' (ಭಗವಾನ್ ಶ್ರೀರಾಮ 500 ವರ್ಷಗಳ ಬಳಿಕ ಅಯೋಧ್ಯೆಗೆ ಬರುತ್ತಿದ್ದಾನೆ. ನನಗೆ ಖುಷಿಯಾಗುತ್ತಿದೆ) ಎಂದು ಇಲ್ಲಿನ ನಿವಾಸಿ 65 ವರ್ಷದ ಶಾಂತಿ ದೇವಿ ಸಂತಸ ವ್ಯಕ್ತಪಡಿಸಿದರು.

ಸಾಕೇತ್ ಪದವಿ ಕಾಲೇಜಿನಿಂದ ಆರಂಭಗೊಂಡು ಸರಯೂ ನದಿ ದಡದಲ್ಲಿರುವ ನಯಾ ಘಾಟ್‌ವರೆಗೆ ಹರಡಿಕೊಂಡಿರುವ ಇಡೀ ಪಟ್ಟಣದಲ್ಲಿ 'ಜೈ ಶ್ರೀರಾಮ್' ಘೋಷಣೆ ಪ್ರತಿಧ್ವನಿಸುತ್ತಿದೆ. ಭಗವಾನ್ ರಾಮನ ಜೀವನ ಮತ್ತು ಆದರ್ಶಗಳನ್ನು ತಿಳಿಸುವ ಮಹಾಕಾವ್ಯ 'ರಾಮಚರಿತ ಮಾನಸ'ದ ಸಾಲುಗಳು, ಭಜನೆ ಹಾಗೂ ಕೀರ್ತನೆಗಳು ಇಲ್ಲಿನ ಮನೆ, ಅಂಗಡಿ ಹಾಗೂ ದೇವಾಲಯಗಳಿಂದ ಕೇಳಿಬರುತ್ತಿವೆ.

ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ಬಾಲರಾಮನ ವಿಗ್ರಹವನ್ನು ಗುರುವಾರವೇ ಗರ್ಭಗುಡಿಯಲ್ಲಿ ಇಡಲಾಗಿದೆ. ಪ್ರಾಣ ಪ್ರತಿಷ್ಠಾಪನೆಗೆ ಪೂರ್ವಭಾವಿ ಧಾರ್ಮಿಕ ಆಚರಣೆಗಳು ಶನಿವಾರವೂ ನಡೆದವು.

ಪೂರ್ವ ಭಾಗದ ದ್ವಾರದ ಮೂಲಕ ದೇವಾಲಯ ಪ್ರವೇಶಕ್ಕೆ ಹಾಗೂ ದಕ್ಷಿಣ ಭಾಗದ ದ್ವಾರದ ಮೂಲಕ ನಿರ್ಗಮನಕ್ಕೆ ವ್ಯವಸ್ಥೆ ಮಾಡಲಾಗಿದೆ. ಪೂರ್ವ ಭಾಗದಿಂದ ಬರುವಾಗ ದೇವಾಲಯದ ಮುಖ್ಯ ಆವರಣ ತಲುಪಲು 32 ಮೆಟ್ಟಿಲುಗಳನ್ನು ಹತ್ತಬೇಕು.

ರಾಮ ಮಂದಿರವು ಮೂರು ಮಹಡಿಗಳನ್ನು ಹೊಂದಿದೆ. ಪ್ರತಿಯೊಂದು ಮಹಡಿ 20 ಅಡಿ ಎತ್ತರ ಇದೆ. ಮಂದಿರವು ಒಟ್ಟು 380 ಅಡಿ ಉದ್ದ (ಪೂರ್ವದಿಂದ ಪಶ್ಚಿಮ ಭಾಗಕ್ಕೆ), 250 ಅಡಿ ಅಗಲ ಹಾಗೂ 161 ಅಡಿ ಎತ್ತರ ಇದೆ.

ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಅಯೋಧ್ಯೆಯ ಬಾಲರಾಮ ಮಂದಿರದ ಆವರಣವನ್ನು ಕೆಲಸಗಾರರು ಅಲಂಕರಿಸಿದರು —ಪಿಟಿಐ ಚಿತ್ರ

ಬಿಗಿ ಭದ್ರತೆ

ಹಿಂದೆಂದೂ ಕಂಡರಿಯದ ಭದ್ರತಾ ವ್ಯವಸ್ಥೆ ಮತ್ತು ಸಾವಿರಾರು ಭದ್ರತಾ ಸಿಬ್ಬಂದಿಯ ನಿಯೋಜನೆಯೊಂದಿಗೆ ಅಯೋಧ್ಯೆಯು ಭದ್ರ ಕೋಟೆಯಾಗಿ ಮಾರ್ಪಟ್ಟಿದೆ. ಹೊರಗಿನವರು ನಗರರ ಪ್ರವೇಶಿಸುವುದಕ್ಕೆ ಶುಕ್ರವಾರ ರಾತ್ರಿಯಿಂದಲೇ ನಿರ್ಬಂಧ ಹೇರಲಾಗಿದೆ. ಆಹ್ವಾನಿತರು ಮತ್ತು ಪಾಸ್ ಹೊಂದಿರುವವರಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ.

ಅಯೋಧ್ಯೆಗೆ ತಿರುಪತಿ ಲಡ್ಡು

- ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ತಿರುಪತಿ ತಿರುಮಲ ದೇವಸ್ಥಾನದಿಂದ 1 ಲಕ್ಷ ಲಡ್ಡುಗಳನ್ನು ಪೂರೈಸಲಾಗಿದೆ. ಲಡ್ಡುಗಳನ್ನು 350 ಬಾಕ್ಸ್‌ಗಳಲ್ಲಿ ತುಂಬಿಸಿ ತಿರುಪತಿಯಿಂದ ಶುಕ್ರವಾರ ರಾತ್ರಿ ಸರಕು ಸಾಗಣೆ ವಿಮಾನದ ಮೂಲಕ ಅಯೋಧ್ಯೆಗೆ ಕಳುಹಿಸಲಾಗಿದೆ ಎಂದು ಟಿಟಿಡಿ ಅಧಿಕಾರಿಯೊಬ್ಬರು ತಿಳಿಸಿದರು.
- ಹೈದರಾಬಾದ್‌ನ ದಾನಿಯೊಬ್ಬರು ನೀಡಿದ 1,200 ಕೆ.ಜಿ ತೂಕದ ದೈತ್ಯ ಲಡ್ಡು ಕೂಡಾ ಅಯೋಧ್ಯೆಗೆ ತಲುಪಿದೆ.
- ಉತ್ತರಪ್ರದೇಶದ ಅಲೀಗಢದಿಂದ 400 ಕೆ.ಜಿ ತೂಕದ ಬೀಗ ತಯಾರಿಸಿ ಶನಿವಾರ ಅಯೋಧ್ಯೆಗೆ ತರಲಾಗಿದೆ. ಈ ಬೀಗದ ಕೀಲಿಕೈ 30 ಕೆ.ಜಿ. ತೂಕವಿದೆ. ಬೀಗವು 6 ಅಡಿ ಉದ್ದ ಮತ್ತು 3ಕ್ಕೂ ಹೆಚ್ಚು ಅಡಿ ಅಗಲವಿದೆ. 65 ಕೆಜಿ ಹಿತ್ತಾಳೆಯನ್ನು ಬೀಗಕ್ಕೆ ಬಳಸಲಾಗಿದೆ. ಸತ್ಯಪ್ರಕಾಶ್ ಶರ್ಮಾ ಮತ್ತು ಅವರ ಪತ್ನಿ ರುಕ್ಮಿಣಿ ಶರ್ಮಾ ಇದನ್ನು 6 ತಿಂಗಳು ಕೆಲಸ ಮಾಡಿ ತಯಾರಿಸಿದ್ದಾರೆ.
- ರಾಮ ಮಂದಿರದಲ್ಲಿರುವ 18 ಮರದ ಬಾಗಿಲುಗಳನ್ನು ತೆಲಂಗಾಣದ ಸಿಕಂದರಾಬಾದ್‌ನಲ್ಲಿರುವ ಅನುರಾಧಾ ಟಿಂಬರ್ ಇಂಟರ್‌ನ್ಯಾಷನಲ್ ಕಂಪನಿಯು ನಿರ್ಮಿಸಿದೆ. ಈ ಕಂಪನಿ 100 ವರ್ಷಗಳ ಇತಿಹಾಸ ಹೊಂದಿದೆ.
- 22 ಸಾವಿರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ಜ.22ರ ಬಳಿಕ ಭೇಟಿ: ಜೆ.ಪಿ.ನಡ್ಡಾ

ನವದೆಹಲಿ (ಪಿಟಿಐ): ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ಸಾಕ್ಷಿಯಾಗಲು ಅಯೋಧ್ಯೆಗೆ ತೆರಳುತ್ತಿಲ್ಲ. ಅದರ ಬದಲು ಇಲ್ಲಿನ ಝುಂಡೇವಾಲಾನ್ ದೇವಾಲಯದಲ್ಲಿ ಕಾರ್ಯಕರ್ತರ ಜತೆ ಸಮಾರಂಭದ ನೇರ ಪ್ರಸಾರ ವೀಕ್ಷಿಸಲಿದ್ದಾರೆ. ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ಆಹ್ವಾನ ನೀಡಿದ ಟ್ರಸ್ಟ್‌ಗೆ ಧನ್ಯವಾದ ಸಲ್ಲಿಸಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜೆ.ಪಿ. ನಡ್ಡಾ

'500 ವರ್ಷಗಳ ಹೋರಾಟದ ಬಳಿಕ ಭವ್ಯ ಮಂದಿರ ನಿರ್ಮಾಣ ಆಗಿದೆ. ಕುಟುಂಬ ಸದಸ್ಯರ ಜತೆ ಜ.22ರ ಬಳಿಕ ಬಾಲರಾಮನ ದರ್ಶನಕ್ಕೆ ತೆರಳುವೆ' ಎಂದು ಹೇಳಿದ್ದಾರೆ. ನಡ್ಡಾ ಅವರಂತೆ ಬಿಜೆಪಿಯ ಇತರ ಹಲವು ನಾಯಕರು ತಾವಿರುವ ಸ್ಥಳದಿಂದಲೇ ಸಮಾರಂಭದ ನೇರ ಪ್ರಸಾರ ವೀಕ್ಷಿಸಲಿದ್ದಾರೆ.

ಶ್ರೀರಂಗಂ: ಪೂಜೆ ಸಲ್ಲಿಸಿದ ಮೋದಿ

ಚೆನ್ನೈ: ಪ್ರಧಾನಿ ನರೇಂದ್ರ ಮೋದಿ ತಮಿಳುನಾಡಿನ ಶ್ರೀರಂಗಂನಲ್ಲಿ ಶ್ರೀರಂಗನಾಥ ಸ್ವಾಮಿ ಮತ್ತು ರಾಮೇಶ್ವರದಲ್ಲಿ ರಾಮನಾಥಸ್ವಾಮಿ ದೇವಾಲಯಕ್ಕೆ ಶನಿವಾರ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಅಲ್ಲಿಂದ ಅವರು, ಶ್ರೀರಾಮನ ಪಾದಗಳ ಮುದ್ರೆಯಿರುವ ರಾಮರ್ ಪಾದಮ್ ದೇವಾಲಯಕ್ಕೆ ಭೇಟಿ ನೀಡಿದರು.

ಭಾನುವಾರ ಅವರು ಧನುಷ್ಕೋಟಿಯ ಅರಿಸಲ್ ಮುನ್ನೈಗೆ ತೆರಳಲಿದ್ದಾರೆ.

ಸುಳ್ಳು, ತಿರುಚಿದ ಸುದ್ದಿ ಪ್ರಕಟಿಸದಂತೆ ಸಲಹೆ

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿ ಬಾಲರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ಸುಳ್ಳು ಅಥವಾ ತಿರುಚಿದ ಸುದ್ದಿಗಳನ್ನು ಪ್ರಕಟಿಸದಂತೆ ಎಚ್ಚರವಹಿಸಲು ಕೇಂದ್ರ ಸರ್ಕಾರವು ಮಾಧ್ಯಮ ಸಂಸ್ಥೆಗಳು ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಶನಿವಾರ ಸಲಹೆ ನೀಡಿದೆ.

ಸಾಮಾಜಿಕ ಮಾಧ್ಯಮದಲ್ಲಿ ಕೆಲವೊಂದು ಸುಳ್ಳು ಮತ್ತು ಪ್ರಚೋದನಕಾರಿ ಸಂದೇಶಗಳನ್ನು ಹರಡುವುದು ಗಮನಕ್ಕೆ ಬಂದಿದೆ. ಇದರಿಂದ ಕೋಮು ಸೌಹಾರ್ದ, ಶಾಂತಿ ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗಬಹುದು ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೊರಡಿಸಿದ ಸಲಹೆಯಲ್ಲಿ ಹೇಳಿದೆ.

ದಿನಪತ್ರಿಕೆಗಳು, ಖಾಸಗಿ ಟಿ.ವಿ ಚಾನೆಲ್‌ಗಳು, ಡಿಜಿಟಲ್ ಮಾಧ್ಯಮಗಳಲ್ಲಿ ಸುದ್ದಿ ಮತ್ತು ಪ್ರಚಲಿತ ವಿದ್ಯಮಾನಗಳನ್ನು ಪ್ರಕಟಿಸುವವರು ಹಾಗೂ ಸಾಮಾಜಿಕ ಮಾಧ್ಯಮಗಳ ವೇದಿಕೆಗಳು ಈ ಬಗ್ಗೆ ಎಚ್ಚರ ವಹಿಸಬೇಕು ಎಂದಿದೆ.

ವಿಗ್ರಹದ ಚಿತ್ರ ಬಹಿರಂಗ ತನಿಖೆಗೆ ಟ್ರಸ್ಟ್ ನಿರ್ಧಾರ

ಲಖನೌ: ಅಯೋಧ್ಯೆ ರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆಗೊಳ್ಳಲಿರುವ ಬಾಲರಾಮನ ವಿಗ್ರಹದ ಚಿತ್ರ ಬಹಿರಂಗಗೊಂಡು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದರ ಬಗ್ಗೆ ತನಿಖೆ ನಡೆಸಲಾಗುವುದು ಎಂದು ರಾಮ ಮಂದಿರದ ಪ್ರಧಾನ ಅರ್ಚಕ ಸತ್ಯೇಂದ್ರ ದಾಸ್ ಹೇಳಿದ್ದಾರೆ.

ಗುರುವಾರ ಬಹಿರಂಗಗೊಂಡಿದ್ದ ಚಿತ್ರದಲ್ಲಿ ವಿಗ್ರಹದ ಕಣ್ಣುಗಳಿಗೆ ಹಳದಿ ಬಟ್ಟೆ ಕಟ್ಟಲಾಗಿತ್ತು. ಆದರೆ ಸಾಮಾಜಿಕ ಮಾಧ್ಯಮಗಳಲ್ಲಿ ಶುಕ್ರವಾರ ಹರಿದಾಡಿದ್ದ ಚಿತ್ರದಲ್ಲಿ ವಿಗ್ರಹ ಸಂಪೂರ್ಣ ಕಾಣುತ್ತಿತ್ತು. ಕಣ್ಣುಗಳಿಗೆ ಬಟ್ಟೆ ಕಟ್ಟಿರಲಿಲ್ಲ. 'ಕಣ್ಣು ಒಳಗೊಂಡಂತೆ ಮುಖ ಸಂಪೂರ್ಣವಾಗಿ ಕಾಣುವ ಚಿತ್ರ ವಿಗ್ರಹದ ನೈಜ ಚಿತ್ರ ಅಲ್ಲ' ಎಂದು ದಾಸ್ ಸ್ಪಷ್ಟಪಡಿಸಿದ್ದಾರೆ.

'ಪ್ರಾಣ ಪ್ರತಿಷ್ಠಾಪನೆಗೂ ಮುನ್ನ ವಿಗ್ರಹದ ಕಣ್ಣುಗಳನ್ನು ಯಾರಿಗೂ ತೋರಿಸುವಂತಿಲ್ಲ' ಎಂದು ಅವರು ಶನಿವಾರ ತಿಳಿಸಿದರು. 'ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು ಹೇಗೆ? ಅದನ್ನು ಯಾರು ಸೋರಿಕೆ ಮಾಡಿದ್ದು ಎಂಬುದರ ಬಗ್ಗೆ ತನಿಖೆ ನಡೆಸಲಾಗುವುದು' ಎಂದರು.

ರಾಮ ಮಂದಿರಕ್ಕೆ ಮುಹೂರ್ತ ನೀಡಿದ್ದು ಬೆಳಗಾವಿ ಪಂಡಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅಯೋಧ್ಯೆಯಲ್ಲಿ ಜ. 22ರಂದು ಮಧ್ಯಾಹ್ನ 12.20ರಿಂದ 1 ಗಂಟೆಯವರೆಗಿನ ಅಭಿಜಿತ್ ಮುಹೂರ್ತದಲ್ಲಿ ರಾಮಮಂದಿರ ಉದ್ಘಾಟನಾ ಕಾರ್ಯ ನಡೆಯಲಿದೆ. ಈ ಮುಹೂರ್ತವನ್ನು ನಿಖರವಾಗಿ ಹಾಕಿಕೊಟ್ಟವರು ಬೆಳಗಾವಿಯ ಪಂಡಿತ ವಿಜಯೇಂದ್ರ ಶರ್ಮಾ ನಾಗರಹಳ್ಳಿ.



ವಿಜಯೇಂದ್ರ ಶರ್ಮಾ ನಾಗರಹಳ್ಳಿ

ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಕೋಶಾಧ್ಯಕ್ಷ ಸ್ವಾಮಿ ಗೋವಿಂದಗಿರಿ ಮಹಾರಾಜ ಅವರು ಕಳೆದ ವರ್ಷ ಏಪ್ರಿಲ್ 13ರಂದು ವಿಜಯೇಂದ್ರ ಶರ್ಮಾ ಅವರನ್ನು ಸಂಪರ್ಕಿಸಿ ರಾಮಲಲ್ಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೆ ಮೂರು ಮುಹೂರ್ತ ನೀಡುವಂತೆ ಕೋರಿದ್ದರು. ಜ.18, ಜ.22 ಮತ್ತು ಜ.25 ಈ ಮೂರು ಮುಹೂರ್ತಗಳನ್ನು ಶರ್ಮಾ ನೀಡಿದ್ದರು. ಅದರಲ್ಲೂ ಜನವರಿ 22ರ ಮುಹೂರ್ತವೇ ಅತ್ಯಂತ ಶ್ರೇಯಸ್ಕರ ಎಂದಿದ್ದರು. ದೇಶದ ಬೇರೆಬೇರೆ ಕಡೆಯಿಂದ ಪಂಡಿತರು ಮುಹೂರ್ತಗಳನ್ನು ನೀಡಿದ್ದರು.

60 ವರ್ಷಗಳಿಗೊಮ್ಮೆ ಬರುವ ಮುಹೂರ್ತ: 'ರಾಮ ಹುಟ್ಟಿದ್ದು ಸೂರ್ಯವಂಶದಲ್ಲಿ. ಸೂರ್ಯ ನೆತ್ತಿಗೆ ಬಂದಾಗ ಮುಹೂರ್ತ ಕೂಡಿಬಂದಿದೆ. ಅಭಿಜಿತ್ ಮುಹೂರ್ತ, ಮೇಷ ಲಗ್ನ, ಅಮೃತಸಿದ್ಧಿ ಯೋಗ, ಮೃಗಶಿರ ನಕ್ಷತ್ರ, ಕೂರ್ಮ ದ್ವಾದಶಿ ಯೋಗಗಳಲ್ಲಿ ಮೂರ್ತಿ ಪ್ರತಿಷ್ಠಾಪನೆ ಆಗುತ್ತಿರುವುದು ಬಹಳ ಸಮಾಧಾನದ ಸಂಗತಿ. 60 ವರ್ಷಗಳಿಗೊಮ್ಮೆ ಬರುವ ಅತ್ಯಂತ ಒಳ್ಳೆಯ ಮುಹೂರ್ತ ಇದು' ಎಂದು ಪಂಡಿತ ವಿಜಯೇಂದ್ರ ಶರ್ಮಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸ್ವಾಮಿ ಗೋವಿಂದಗಿರಿ ಮಹಾರಾಜರ ನೇತೃತ್ವದಲ್ಲಿ ಟ್ರಸ್ಟ್‌ನ ಎಲ್ಲ ಪಂಡಿತರು ಚರ್ಚಿಸಿ ಈ ಮುಹೂರ್ತ ಒಪ್ಪಿಕೊಂಡರು. ಪ್ರಧಾನಿ ನರೇಂದ್ರ ಮೋದಿ ಅವರೂ ಸಮ್ಮತಿಸಿದ ಬಗ್ಗೆ ಮರಳಿ ನಮಗೆ ಸಂದೇಶ ಕಳುಹಿಸಿದ್ದಾರೆ' ಎಂದರು.

1947ರಲ್ಲಿ ಜನಿಸಿದ ವಿಜಯೇಂದ್ರ ಶರ್ಮಾ ಅವರು ಕನ್ನಡ, ಹಿಂದಿ, ಇಂಗ್ಲಿಷ್, ಉರ್ದು, ಸಂಸ್ಕೃತ ಹಾಗೂ ಮರಾಠಿ ಭಾಷೆಗಳಲ್ಲಿ ಪಾಂಡಿತ್ಯ ಸಾಧಿಸಿದ್ದಾರೆ.

ಭೂಮಿಪೂಜೆಗೂ ಮುಹೂರ್ತ: '2023ರ ಏಪ್ರಿಲ್ 15ರಂದು 'ಭದ್ರಯೋಗ'ದಂದು ಅಯೋಧ್ಯೆಯಲ್ಲಿ ರಾಮ ಮಂದಿರಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು. ಆ ಮುಹೂರ್ತವನ್ನೂ ನಾನೇ ನೀಡಿದ್ದೆ. ಮಂದಿರ ಉದ್ಘಾಟನೆ ದಿನ ಹಾಗೂ ಬಾಲರಾಮನ ಮೂರ್ತಿ ಗರ್ಭಗುಡಿ ಪ್ರವೇಶ ಮಾಡುವ ಮುಹೂರ್ತಗಳನ್ನು ಕೂಡ ನಾನು ನೀಡಿದ್ದೇನೆ' ಎಂದೂ ವಿಜಯೇಂದ್ರ ಶರ್ಮಾ ಹೇಳಿದರು.

'550 ವರ್ಷಗಳ ನಂತರ ಅಯೋಧ್ಯೆಯಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆ ಆಗುತ್ತಿದೆ. ಸಾಕಷ್ಟು ಜನರು ಈ ಯತ್ನ ಮಾಡಿದ್ದಾರೆ. ಅಪಾರ ಜನ ಬಲಿದಾನ ಮಾಡಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಬೇಕು. ಇಡೀ ಜಗತ್ತಿನಲ್ಲಿ ಶಾಂತಿ– ಸಮಾಧಾನ ನೆಲೆಸಬೇಕು. ಯುದ್ಧಾದಿ ಪಾಪಗಳು ನಿಲ್ಲಬೇಕೆಂದು ಪ್ರಾರ್ಥಿಸಿ ಮುಹೂರ್ತ ಇಟ್ಟಿದ್ದೇನೆ' ಎಂದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂಖ್ಯೆ : (0831) 2463850 ಫ್ಯಾಕ್ಸ್ ಸಂಖ್ಯೆ : (0831) 2423008
No. EE/MI&GWDDD/BGM/TND/AE-1/JE/2023-24/310 Date: 19-01.2024
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ-4)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ದ್ವೀ-ಲಕೋಟೆ ಪದ್ಧತಿಯಲ್ಲಿ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಬೆಳಗಾವಿ/ಗೋಕಾಕ/ಅಥಣಿ ಉಪವಿಭಾಗಡಿಯ 4702/ನಬಾರ್ಡ/ಅಟಲ ಭೂಜಲ ಲೆಕ್ಕ ಶೀರ್ಷಿಕೆಯ ಒಟ್ಟು 20 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ. 370.00 ಲಕ್ಷಗಳು ಹಾಗೂ ಕನಿಷ್ಠ ರೂ. 110.00 ಲಕ್ಷಗಳು ಸದರಿ ಕಾಮಗಾರಿಗಳ ವಿವರಗಳನ್ನು "ಕೆಪಿಪಿಪಿ" ನಲ್ಲಿ ದಿನಾಂಕ 09-02-2024 ರಿಂದ ದಿನಾಂಕ 16-02-2024 ಸಾಯಂಕಾಲ 4-00 ಗಂಟೆಯ ಅವದಿಯಲ್ಲಿ ಪಡೆಯಬಹುದು. 1. ಪೂರ್ವ ಟೆಂಡರ್ ಸಭೆ : ದಿನಾಂಕ 15-02-2024 ಬೆಳಿಗ್ಗೆ 11-00 ಗಂಟೆಗೆ. 2. ಟೆಂಡರ್ ಸ್ವೀಕರಿಸುವ ಕೊನೆಯ : ದಿನಾಂಕ 16-02-2024 ಸಾಯಂಕಾಲ 4-00 ಗಂಟೆಯವರಿಗೆ. 3. ಟೆಂಡರ್ ತೆರೆಯುವ : ದಿನಾಂಕ 17-02-2024 ಸಾಯಂಕಾಲ 4-30 ಮುಂದುವರದು (ಸಾಧ್ಯವಾದಲ್ಲಿ). 4. ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ. 5. ಅಂತರಜಾಲ ತಾಣದ ವಿಳಾಸ : www.kppp.gov.in.
ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ಡಿಐಪಿಆರ್/ಬೆಳಗಾವಿ/979/ಅಡ್ವರ್ಟೋ/23-24 ಸ.ನೀ ಮತ್ತು ಅಂ. ಅ. ಇ ವಿಭಾಗ, ಬೆಳಗಾವಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಮಹದೇವಪುರ ವಿಭಾಗ,
ಐಟಿಪಿಎಲ್ ಮುಖ್ಯರಸ್ತೆ, ಮಹದೇವಪುರ, ಬೆಂಗಳೂರು–560 048.
ಸಂಖ್ಯೆ: ಬೃಬೆಂಮಪಾ/ಕಾಅ/ಮವಿ/ಟೆಂಡರ್/11/2023–24 ದಿನಾಂಕ: 20–01–2024
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಇವರು ಐಟಂದರದ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಗುತ್ತಿಗೆದಾರರು ತಾವು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ/ ಎಂಇಎಸ್ / ರೈಲ್ವೇಸ್ / ಯಾವುದೇ ಕೇಂದ್ರ / ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತರಾಗಿರಬೇಕು.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
	ದ್ವಿ ಲಕೋಟೆ ಪದ್ಧತಿ		
1.	ಹೂಡಿ ಮತ್ತು ದೊಡ್ಡೇನಕ್ಕುಂದಿ ಉಪವಿಭಾಗದ ವಾರ್ಡ್ ರಸ್ತೆಗಳ ಸುಧಾರಣೆ.	905.00	ರೂ.13,57,500/– (ರೂ.1.00 ಲಕ್ಷ ಇ-ಪೇಮೆಂಟ್ ಮೂಲಕ ಹಾಗೂ ಉಳಿಕೆ ಮೊತ್ತವನ್ನು ರೂ.12,57,000/- ಬ್ಯಾಂಕ್ ಗ್ಯಾರಂಟಿ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸಬೇಕು)
2.	ವೈಟ್‌ಫೀಲ್ಡ್ ಮತ್ತು ವರ್ತೂರು ಉಪವಿಭಾಗದಲ್ಲಿ ವಾರ್ಡ್ ರಸ್ತೆಗಳಿಗೆ ಸುಧಾರಣೆ.	724.00	ರೂ.10,86,000/– (ರೂ.1.00 ಲಕ್ಷ ಇ-ಪೇಮೆಂಟ್ ಮೂಲಕ ಹಾಗೂ ಉಳಿಕೆ ಮೊತ್ತವನ್ನು ರೂ.9,86,000/- ಬ್ಯಾಂಕ್ ಗ್ಯಾರಂಟಿ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸಬೇಕು)
3.	ಮಾರತಹಳ್ಳಿ ಉಪವಿಭಾಗದ ವಾರ್ಡ್ ರಸ್ತೆಗಳ ಸುಧಾರಣೆ	371.00	ರೂ.10,86,000/– (ರೂ.1.00 ಲಕ್ಷ ಇ-ಪೇಮೆಂಟ್ ಮೂಲಕ ಹಾಗೂ ಉಳಿಕೆ ಮೊತ್ತವನ್ನು ರೂ.9,86,000/- ಬ್ಯಾಂಕ್ ಗ್ಯಾರಂಟಿ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸಬೇಕು)

ಕ್ರ. ಸಂ.	ಏಕ ಲಕೋಟೆ ಪದ್ಧತಿ — ಕೆಲಸದ ಹೆಸರು / ವರ್ಗ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1.	ವಾರ್ಡ್ ನಂ.98 ಹೂಡಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.27ರ ಮದ್ದೂರಮ್ಮ ದೇವಸ್ಥಾನ ರಸ್ತೆಯ ಒಳಚರಂಡಿಗಳ ಅಭಿವೃದ್ಧಿ ಮತ್ತು ಸಿಮೆಂಟ್ ಕಾಂಕ್ರಿಟ್ ರಸ್ತೆ ಒದಗಿಸುವುದು (ಪರಿಶಿಷ್ಟ ಜಾತಿ).	23.86	29,825/–
2.	ವಾರ್ಡ್ ನಂ.98 ಹೂಡಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.18/1ರ 6ನೇ ಅಡ್ಡರಸ್ತೆ ದಿನ್ನೂರು ಗ್ರಾಮ ಒಳಚರಂಡಿಗಳ ಅಭಿವೃದ್ಧಿ ಮತ್ತು ಸಿಮೆಂಟ್ ಕಾಂಕ್ರಿಟ್ ರಸ್ತೆ ಒದಗಿಸುವುದು (ಇತರೆ)	23.86	59,650/–
3.	ವಾರ್ಡ್ ನಂ.98 ಹೂಡಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.36ರ 5ನೇ ಅಡ್ಡರಸ್ತೆ ದಿನ್ನೂರು ಗ್ರಾಮ ಒಳಚರಂಡಿಗಳ ಅಭಿವೃದ್ಧಿ ಮತ್ತು ಸಿಮೆಂಟ್ ಕಾಂಕ್ರಿಟ್ ರಸ್ತೆ ಒದಗಿಸುವುದು (ಇತರೆ)	23.86	59,650/–
4.	ವಾರ್ಡ್ ನಂ.98 ಹೂಡಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.24ರ ದಿನ್ನೂರು ಗ್ರಾಮದ 1ನೇ ಅಡ್ಡರಸ್ತೆಯ ಒಳಚರಂಡಿಗಳ ಅಭಿವೃದ್ಧಿ (ಪರಿಶಿಷ್ಟ ಜಾತಿ)	23.86	29,825/–
5.	ವಾರ್ಡ್ ನಂ.98 ಹೂಡಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.162ರ ಪತ್ತಂದೂರು ಅಗ್ರಹಾರದ ಏಳುಮಂದಮ್ಮ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು ಮತ್ತು ಒಳಚರಂಡಿಗಳ ಅಭಿವೃದ್ಧಿ (ಇತರೆ)	23.86	59,650/–
6.	ವಾರ್ಡ್ ನಂ.98 ಹೂಡಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.154ರ ತಿಗಳರಪಾಳ್ಯದ ಒಳಚರಂಡಿಗಳ ಅಭಿವೃದ್ಧಿ (ಇತರೆ)	23.86	59,650/–
7.	ವಾರ್ಡ್ ನಂ.99 ಬೈರತಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.21ರ ರುಕ್ಮಿಣಿ ದೇವಸ್ಥಾನದ ಮುಂದಿನಿಂದ ಸರಕಾರಿ ಪ್ರಾಥಮಿಕ ಶಾಲೆ ರಸ್ತೆಗಳ ಒಳಚರಂಡಿಗಳ ಅಭಿವೃದ್ಧಿ (ಪರಿಶಿಷ್ಟ ಪಂಗಡ)	23.86	29,825/–
8.	ವಾರ್ಡ್ ನಂ.100 ಗರುಡಾಚಾರ್ ಪಾಳ್ಯದ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.121ರ ಅಂಬೇಡ್ಕರ್ ನಗರದಲ್ಲಿ ಒಳಚರಂಡಿಗಳ ಅಭಿವೃದ್ಧಿ ಮತ್ತು ಮುಚ್ಚುವ ಸ್ಲಾಬ್‌ಗಳನ್ನು ಒದಗಿಸುವುದು (ಪರಿಶಿಷ್ಟ ಜಾತಿ)	23.86	29,825/–
9.	ವಾರ್ಡ್ ನಂ.100 ಗರುಡಾಚಾರ್ ಪಾಳ್ಯದ ಜನಗಣತಿ 2011ರ ಪ್ರಕಾರ ಕಾವೇರಿನಗರದ ಬ್ಲಾಕ್ ನಂ.106ರ ವೆಂಕಟೇಶ್ವರ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ ಮತ್ತು ಮುಚ್ಚುವ ಸ್ಲಾಬ್‌ಗಳನ್ನು ಒದಗಿಸುವುದು (ಇತರೆ)	23.86	59,650/–
10.	ವಾರ್ಡ್ ನಂ.100 ಗರುಡಾಚಾರ್ ಪಾಳ್ಯದ ಜನಗಣತಿ 2011ರ ಪ್ರಕಾರ ಕಾವೇರಿನಗರದ ಬ್ಲಾಕ್ ನಂ.118ರ ಪಿಲ್ಲರೆಡ್ಡಿ ರಸ್ತೆಯ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ (ಇತರೆ)	23.86	59,650/–
11.	ವಾರ್ಡ್ ನಂ.101 ದೊಡ್ಡನೆಕುಂದಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.106ರ ದೊಡ್ಡನೆಕುಂದಿ ಗ್ರಾಮದ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ (ಇತರೆ)	23.86	59,650/–
12.	ವಾರ್ಡ್ ನಂ.101 ದೊಡ್ಡನೆಕುಂದಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.23ರ ಸಂಜಯ್ ನಗರದ ಜಿಆರ್‌ಎಸ್ ಶಾಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ (ಇತರೆ)	23.86	59,650/–
13.	ವಾರ್ಡ್ ನಂ.102 ಎಇಸಿಎಸ್ ಬಡಾವಣೆಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.107/2ರ ಲಕ್ಷ್ಮೀನಾರಾಯಣಪುರ ಮುಖ್ಯರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ (ಪರಿಶಿಷ್ಟ ಪಂಗಡ)	23.86	29,825/–
14.	ವಾರ್ಡ್ ನಂ.102 ಎಇಸಿಎಸ್ ಬಡಾವಣೆಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.109ರ ತಿಗಳರಪಾಳ್ಯ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ (ಇತರೆ)	22.00	59,650/–
15.	ವಾರ್ಡ್ ನಂ.102 ಎಇಸಿಎಸ್ ಬಡಾವಣೆಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.206ರ ಸತ್ಯಸಾಯಿ ದೇವಸ್ಥಾನ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು ಹಾಗೂ ಒಳಚರಂಡಿಗಳ ಅಭಿವೃದ್ಧಿ (ಇತರೆ)	23.42	59,650/–
16.	ವಾರ್ಡ್ ನಂ.103 ವೈಟ್‌ಫೀಲ್ಡ್‌ನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.55ರ ಅಂಬೇಡ್ಕರ್‌ಗುಟ್ಟದ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಇತರೆ)	23.08	59,650/–
17.	ವಾರ್ಡ್ ನಂ.103 ವೈಟ್‌ಫೀಲ್ಡ್‌ನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.56/2ರ ವಿಜಯನಗರದ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಇತರೆ)	23.86	59,650/–
18.	ವಾರ್ಡ್ ನಂ.104 ವರ್ತೂರಿನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.106ರ ವರ್ತೂರ್ ಕಾಲೋನಿ ಮತ್ತು ಕಾವೇರಿ ನಗರದ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಇತರೆ)	23.86	59,650/–
19.	ವಾರ್ಡ್ ನಂ.104 ವರ್ತೂರಿನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.112ರ ಸೋರಹುಣಸೆ ಮತ್ತು ಮಧುರಾನಗರದ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಇತರೆ)	23.86	59,650/–
20.	ವಾರ್ಡ್ ನಂ.104 ವರ್ತೂರಿನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.150ರ ಬಲಗೆರೆಯ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಪರಿಶಿಷ್ಟ ಜಾತಿ)	23.86	29,825/–
21.	ವಾರ್ಡ್ ನಂ.104 ವರ್ತೂರಿನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.118ರ ಗುಂಜೂರು ಮತ್ತು ಗುಂಜೂರು ಪಾಳ್ಯ ಕಾಲೋನಿಯ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಇತರೆ)	23.86	59,650/–
22.	ವಾರ್ಡ್ ನಂ.104 ವರ್ತೂರಿನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.107ರ ಪಣತ್ತೂರು ಮತ್ತು ಪಣತ್ತೂರು ದಿನ್ನೆ ಕಾಲೋನಿಯ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಇತರೆ)	23.86	59,650/–
23.	ವಾರ್ಡ್ ನಂ.104 ವರ್ತೂರಿನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.120ರ ಚಿಕ್ಕಬೆಳಂದೂರಿನ ಎಸ್‌ಸಿ/ಎಸ್‌ಟಿ ಪ್ರದೇಶದಲ್ಲಿ ಸಿಸಿ ರಸ್ತೆಗಳ ನಿರ್ಮಾಣ ಕಾಮಗಾರಿ (ಇತರೆ)	23.86	59,650/–
24.	ವಾರ್ಡ್ ನಂ.106 ಮಾರುತಹಳ್ಳಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.103ರ ಸಂಜಯ್‌ನಗರದ ರಸ್ತೆಗಳು ಮತ್ತು ಒಳಚರಂಡಿಗಳ ಅಭಿವೃದ್ಧಿ ಕಾಮಗಾರಿ (ಇತರೆ)	23.86	59,650/–
25.	ವಾರ್ಡ್ ನಂ.106 ಮಾರುತಹಳ್ಳಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.65ರ ಅಂಬೇಡ್ಕರ್ ನಗರದ ರಸ್ತೆಗಳ ಅಭಿವೃದ್ಧಿ, ಮುಚ್ಚುವ ಸ್ಲಾಬ್‌ಗಳನ್ನು ಒದಗಿಸುವುದು ಮತ್ತು ಒಳಚರಂಡಿಗಳ ಹೂಳು ತೆಗೆಯುವುದು (ಪರಿಶಿಷ್ಟ ಜಾತಿ)	23.86	29,825/–
26.	ವಾರ್ಡ್ ನಂ.106 ಮಾರುತಹಳ್ಳಿಯ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.45ರ ಎಕೆ ಕಾಲೋನಿಯ ರಸ್ತೆಗಳು ಮತ್ತು ಒಳಚರಂಡಿಗಳ ಅಭಿವೃದ್ಧಿ (ಇತರೆ)	23.86	59,650/–
27.	ವಾರ್ಡ್ ನಂ.107 ಬೆಳಂದೂರಿನ ಜನಗಣತಿ 2011ರ ಪ್ರಕಾರ ಬ್ಲಾಕ್ ನಂ.154ರ ಕಸವನಹಳ್ಳಿ ಬೋವಿ ಕಾಲೋನಿಯ ರಸ್ತೆಗಳು ಮತ್ತು ಒಳಚರಂಡಿಗಳ ಅಭಿವೃದ್ಧಿ (ಇತರೆ)	23.86	59,650/–

ಟೆಂಡರ್‌ನ ಕಾರ್ಯಸೂಚಿ: 1) ವಿಚಾರಣೆಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 23–01–2024ರ ಸಂಜೆ 3:00 ಗಂಟೆಯೊಳಗೆ.** 2) ಪೂರ್ವ ಬಿಡ್ ಸಭೆ **ದಿನಾಂಕ: 25–01–2024ರ ಬೆಳಗ್ಗೆ 11:00 ಗಂಟೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 06–02–2024ರ ಸಂಜೆ 4:00** ಗಂಟೆಯವರೆಗೆ. 4) ಆರ್ಥಿಕ / ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 07–02–2024ರ ಸಂಜೆ 4:30 ಗಂಟೆಗೆ. 5)** ಆರ್ಥಿಕ ಬಿಡ್‌ನ್ನು ತೆರೆಯುವ (ಎರಡು ಲಕೋಟೆ) **ದಿನಾಂಕ: 15–02–2024ರ ಸಂಜೆ 4:00 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ದಿನದಂದು ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ ವೆಬ್‌ಸೈಟ್‌ಗೆ **https://kppp.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬೃಬೆಂಮಪಾ.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ (ಘವನಿ), ಸಾಂಸ್ಕೃತಿಕ ಭವನ, ನ್ಯೂ ಕಾಟನ್ ಮಾರ್ಕೆಟ, ಹುಬ್ಬಳ್ಳಿ–580029
ಅಲ್ಪಾವದಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ

ಕ್ರ ಸಂ	ಟೆಂಡರ ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) / ಇಎಂಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2023-24/SE0697/CALL-3	49,50,000.00 / 50,000.00	29–01–2024 ಸಮಯ ಸಂಜೆ 4.30 ಘಂಟೆ	31–01–2024 ಸಮಯ ಬೆಳಿಗ್ಗೆ 10.30 ಘಂಟೆ
2	DMA/2023-24/IND1248	40,92,180.00 / 50,000.00		

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ದಿನಾಂಕ: 22–01–2024 ರಿಂದ www.kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಘವನಿ)
ದಿನಾಂಕ:20–01–2024 ವಾ.ಸಾ.ಇ/ಧಾ/697/ದೇಶಪಾಂಡೆಪಬ್ಲಿಸಿಟಿ/2023–24 ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿ/ಇಟಿಎನ್‌ಡಿ–ಇಪಿ–39/532/2023–24 ದಿನಾಂಕ: 20.01.2024
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ ಐ ಡಿ ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಕರ್ನಾಟಕ ಸರಕಾರದ ಕೆಸಿಇಐ ನಲ್ಲಿ ನೋಂದಾಯಿತ ದರ್ಜೆ 2 ಮತ್ತು ಮೇಲ್ಪಟ್ಟ (ವಿದ್ಯುತ್) ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ಪ್ರಕಾರ ಇ–ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಡಿ ಐಟಂ ದರದಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: (1) ತುಮಕೂರು ಜಿಲ್ಲೆ, ಹೌಸಿಂಗ್ ಲೇಔಟ್ ಹಾಗೂ ಜಪಾನಿಸ್ ಇಂಡಸ್ಟ್ರೀಯಲ್ ಪಾರ್ಕ್, ವಸಂತನರಸಾಪುರ 1ನೇ, 2ನೇ ಮತ್ತು 3ನೇ ಹಂತ ಕೈಗಾರಿಕಾ ಪ್ರದೇಶಗಳಲ್ಲಿ ಬೀದಿ ದೀಪಗಳನ್ನು ದುರಸ್ಥಿ, ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ. 2ನೇ ಕರೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 06.02.2024 ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
DIPR/CP/3163/Zen/2023-24 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಬ್ಬಾಳ ವಿಭಾಗ,
2ನೇ ಮಹಡಿ, ಬಿಬಿಎಂಪಿ ಕಟ್ಟಡ, ಜೆ.ಸಿ. ನಗರ ಮುಖ್ಯರಸ್ತೆ, ಮುನಿರೆಡ್ಡಿಪಾಳ್ಯ, ಬೆಂಗಳೂರು – 560032.
ಸಂಖ್ಯೆ: ಕಾಅ/ಹೆಚ್‌ಬಿಎಲ್/ಟೆಂಡರ್/11/2023–24 ದಿನಾಂಕ: 20–01–2024
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯೂ–3)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1	ವಾರ್ಡ್ ಸಂಖ್ಯೆ. 20 (ಹೊಸ ವಾರ್ಡ 67), ಗಂಗಾನಗರ ಇಲ್ಲಿನ ಹೆಚ್.ಜಿ.ಹೆಚ್. ಲೇಔಟ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು.	100.00	ರೂ. 2,00,000/- (ರೂ. 1.00 ಲಕ್ಷ ಇ–ಪಾವತಿ ಮೂಲಕ ಬಾಕಿ ರೂ. 1,00,000/- ಬಿಜಿ ಮೂಲಕ, ಬಿಜಿಯನ್ನು ತಾಂತ್ರಿಕ ಬಿಡ್ ತೆರೆಯುವುದಕ್ಕೆ ಮುಂಚಿತವಾಗಿ ಸಲ್ಲಿಸಬೇಕು)
2	ವಾರ್ಡ್ ಸಂಖ್ಯೆ. 22 (ಹೊಸ ವಾರ್ಡ 64), ವಿಶ್ವನಾಥ ನಾಗೇನಹಳ್ಳಿ ಇಲ್ಲಿನ ಕನಕನಗರ 10ನೇ ಮತ್ತು 16ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು.	100.00	ರೂ. 2,00,000/- (ರೂ. 1.00 ಲಕ್ಷ ಇ–ಪಾವತಿ ಮೂಲಕ ಬಾಕಿ ರೂ. 1,00,000/- ಬಿಜಿ ಮೂಲಕ, ಬಿಜಿಯನ್ನು ತಾಂತ್ರಿಕ ಬಿಡ್ ತೆರೆಯುವುದಕ್ಕೆ ಮುಂಚಿತವಾಗಿ ಸಲ್ಲಿಸಬೇಕು)
3	ವಾರ್ಡ್ ಸಂಖ್ಯೆ. 46 (ಹೊಸ ವಾರ್ಡ 68), ಜೆ.ಸಿ. ನಗರ ಇಲ್ಲಿನ 2ನೇ ಮುಖ್ಯ ಎ.ಕೆ.ಆಶ್ರಮ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು.	100.00	ರೂ. 2,00,000/- (ರೂ. 1.00 ಲಕ್ಷ ಇ–ಪಾವತಿ ಮೂಲಕ ಬಾಕಿ ರೂ. 1,00,000/- ಬಿಜಿ ಮೂಲಕ, ಬಿಜಿಯನ್ನು ತಾಂತ್ರಿಕ ಬಿಡ್ ತೆರೆಯುವುದಕ್ಕೆ ಮುಂಚಿತವಾಗಿ ಸಲ್ಲಿಸಬೇಕು)
4	ವಾರ್ಡ್ ಸಂಖ್ಯೆ. 46 (ಹೊಸ ವಾರ್ಡ 68), ಜೆ.ಸಿ. ನಗರ ಇಲ್ಲಿನ ತಿಮ್ಮಯ್ಯ ಗಾರ್ಡನ್ 2ನೇ, 9ನೇ, 10ನೇ, 11ನೇ, 11ನೇಎ ಮತ್ತು 1ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸಮಗ್ರ ಅಭಿವೃದ್ಧಿಗಳು.	100.00	ರೂ. 2,00,000/- (ರೂ. 1.00 ಲಕ್ಷ ಇ–ಪಾವತಿ ಮೂಲಕ ಬಾಕಿ ರೂ. 1,00,000/- ಬಿಜಿ ಮೂಲಕ, ಬಿಜಿಯನ್ನು ತಾಂತ್ರಿಕ ಬಿಡ್ ತೆರೆಯುವುದಕ್ಕೆ ಮುಂಚಿತವಾಗಿ ಸಲ್ಲಿಸಬೇಕು)

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **24–01–2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **31–01–2024 ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಬ್ಬಾಳ ವಿಭಾಗ, ಜೆ.ಸಿ. ನಗರ ಮುಖ್ಯರಸ್ತೆ, ಬೆಂಗಳೂರು – 560032 ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **06–02–2024 ರಂದು 16.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **07–02–2024 ರಂದು 16.30 ಗಂಟೆ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ಬಿಬಿಎಂಪಿ.

ಅವಘಡ ಸಿಇಒ ಸಾವು

ಹೈದರಾಬಾದ್ (ಪಿಟಿಐ): ಇಲ್ಲಿನ ರಾಮೋಜಿ ಫಿಲಂ ಸಿಟಿಯಲ್ಲಿ ಅಮೆರಿಕ ಮೂಲದ ಐಟಿ ಕಂಪನಿ ವಿಸ್ಟೆಕ್ಸ್‌ನ ಬೆಳ್ಳಿ ಹಬ್ಬದ ಸಂಭ್ರಮಾಚರಣೆ ವೇಳೆ ಕಬ್ಬಿಣದ ಸರಪಳಿ ತುಂಡಾಗಿ ಬಿದ್ದು ಗಾಯಗೊಂಡಿದ್ದ ಕಂಪನಿಯ ಸಂಸ್ಥಾಪಕ-ಸಿಇಒ ಸಂಜಯ್ ಶಾ (56) ಮೃತಪಟ್ಟಿದ್ದಾರೆ.

ಕಂಪನಿಯ ಅಧ್ಯಕ್ಷ ವಿಶ್ವನಾಥ್ ರಾಜ್ ಅವರು ಗಾಯಗೊಂಡಿದ್ದು, ಸ್ಥಿತಿ ಗಂಭೀರವಾಗಿದೆ. ಗುರುವಾರ ಸಂಜೆ 7.40ರ ಸುಮಾರಿಗೆ ಸಂಭ್ರಮಾಚರಣೆ ನಡೆಯುವಾಗ ಸಂಜಯ್ ಶಾ ಮತ್ತು ವಿಶ್ವನಾಥ್ ರಾಜ್ ಅವರು, ಎತ್ತರದಿಂದ ಕೆಳಗಿಳಿಸುವ ಕಬ್ಬಿಣದ ಪಂಜರ ಪ್ರವೇಶಿಸಿದಾಗ ಒಂದು ಬದಿಯ ಸರಪಳಿ ತುಂಡಾಗಿ, ಇಬ್ಬರೂ ಬಿದ್ದಿದ್ದರು. ಅವರನ್ನು ನಗರದ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಅನಾವರಣಗೊಳ್ಳದ ಪ್ರತಿಮೆ

ರಾಜಾಜಿನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ವೆಸ್ಟ್ ಆಫ್ ಕಾರ್ಡ್ ರಸ್ತೆಯ ಸ್ವಾತಿ ಹೋಟೆಲ್ ಸಮೀಪದ ಮೇಲ್ಸೇತುವೆ ಮೇಲೆ ಅನಾವರಣವಾಗದೆ ಇರುವ ಬಸವೇಶ್ವರ ಪ್ರತಿಮೆ. 2019ರ ಜುಲೈ 10ರಂದು ಅಂದಿನ ಮೇಯರ್ ಗಂಗಾಂಬಿಕೆ, ಶಾಸಕ ಸುರೇಶ್ ಕುಮಾರ್ ಅವರು ಪ್ರತಿಮೆ ಸ್ಥಾಪನೆಗೆ ಗುದ್ದಲಿಪೂಜೆ ಮಾಡಿದ್ದರು. ಆರು ತಿಂಗಳ ಹಿಂದೆ ಪ್ರತಿಮೆಯನ್ನು ಇಲ್ಲಿ ತಂದಿಟ್ಟಿದ್ದರೂ ಅನಾವರಣಗೊಂಡಿಲ್ಲ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 03/2024
ದಿನಾಂಕ : 13-01-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : 25 ಕೆವಿ ಎಸಿ ಟ್ರ್ಯಾಕ್ಷನ್‌ನಲ್ಲಿ ಸ್ಟಾಟಿಕ್ / ಎಲೆಕ್ಟ್ರೋಮ್ಯಾಗ್ನೆಟಿಕ್ / ಮೈಕ್ರೋಪ್ರೋಸೆಸರ್ ಆಧಾರಿತ ನ್ಯೂಮರಿಕಲ್ ರಿಲೇಯ ಪರೀಕ್ಷೆಗಾಗಿ ರಿಲೇ ಟೆಸ್ಟಿಂಗ್ ಕಿಟ್ (ಟೆಂಡರ್ ಸಂ. ಎಲ್8245079) (ಪ್ರಮಾಣ : 04 ಸಂಖ್ಯೆಗಳು)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08-02-2024 ರಂದು 10:30 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು
ಪಿಯುಬಿ/633/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24 ಬೆಂಗಳೂರು
South Western Railway - SWR SWRRLY SWRRLY

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಈ ಕೆಳಕಂಡ 'ಷೆಡ್ಯೂಲ್' ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನು ಮುಂದೆ **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಸದರಿ ಸ್ವತ್ತಿನ ಮಾಲೀಕರಾದ ಎನ್‌ಸಿಸಿ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ [ಸಿಐಎನ್ U45200TG2005PLC048375] **('ಮಾಲೀಕರು')** ಇವರಿಂದ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟ ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಷೆಡ್ಯೂಲ್ ಸ್ವತ್ತಿಗೆ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **7 (ಏಳು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತಿನ ವಿವರಗಳು)

ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ವಡೇರಪುರ ಗ್ರಾಮದಲ್ಲಿರುವ ಸರ್ವೆ ನಂ. 18/1 ಮತ್ತು 19ರ ಜಮೀನುಗಳಲ್ಲಿ ನಿರ್ಮಿಸಿರುವ 'ಎನ್‌ಸಿಸಿ ಅರ್ಬನ್ ಮಿಸ್ಟಿ ವುಡ್ಸ್' ನ ಪ್ಲಾಟ್ ನಂ. 3 ರ ವಿಸ್ತೀರ್ಣ 3,990 ಚದರ ಅಡಿಗಳು ಜೊತೆಗೆ ಅದರಲ್ಲಿ ನಿರ್ಮಿಸಿರುವ ವಿಲ್ಲಾ ದ ಸೂಪರ್ ನಿರ್ಮಿತ ಪ್ರದೇಶದ ವಿಸ್ತೀರ್ಣ 4,398 ಚದರ ಅಡಿಗಳಲ್ಲಿ ಒಳಗೊಂಡಿರುವ ನೆಲ ಮಹಡಿ, ಮೊದಲನೇ ಮಹಡಿ ಮತ್ತು ಎರಡನೇ ಮಹಡಿ ಜೊತೆಗೆ 360 ಚದರ ಅಡಿಗಳ ವಿಸ್ತೀರ್ಣದಲ್ಲಿ ಕಾರ್ ಪಾರ್ಕಿಂಗ್ ಜಾಗವನ್ನು ಹೊಂದಿದ್ದು, ಪ್ರಸ್ತುತ ಬಿಬಿಎಂಪಿ ಖಾತ ನಂ. 78/61/18/1 & 19/38/ಎ/3 ಹೊಂದಿರುತ್ತದೆ. ಸದರಿ ವಿಲ್ಲಾ ಚಕ್ಕುಬಂದಿ ಈ ಕೆಳಕಂಡತಿರುವುದು:

ಪೂರ್ವಕ್ಕೆ : ಖಾಸಗಿ ಸ್ವತ್ತು;
ಪಶ್ಚಿಮಕ್ಕೆ : ರಸ್ತೆ;
ಉತ್ತರಕ್ಕೆ : ಸೈಟ್ ನಂ. 04; ಮತ್ತು
ದಕ್ಷಿಣಕ್ಕೆ : ಸೈಟ್ ನಂ. 02.

ಸಹಿ/-
ಶ್ರೀನಿವಾಸ್ ಜಿ.ಆರ್. ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ. 7/1 & 7/7, ಬ್ರೈಂಟನ್ ರಸ್ತೆ,
ಕ್ರೈಗ್ ಪಾರ್ಕ್ ಲೇಔಟ್, ಬೆಂಗಳೂರು – 560025, ದೂ. ಸಂ. 080-69548770

ಸ್ಥಳ: ಬೆಂಗಳೂರು
ದಿನಾಂಕ: 21-01-2024

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯುಲ್ ಸ್ವತ್ತನ್ನು ಮಾಲೀಕರಾದ ದಿವಂಗತ ನಾರಾಯಣಸ್ವಾಮಿ ನವರ ಹೆಂಡತಿ 1) ಶ್ರೀಮತಿ. ನರಸಮ್ಮ ಮತ್ತು ಅವರ ಮಕ್ಕಳಾದ 2) ಶ್ರೀ. ಮುನಿಕೃಷ್ಣಪ್ಪ. ಎನ್, 3) ಶ್ರೀಮತಿ. ಅಂಬಿಕ, 4) ಶ್ರೀ. ಎನ್. ಗೀತಾ, 5) ಶ್ರೀ. ನವೀನ್ ಕುಮಾರ್, 6) ಶ್ರೀಮತಿ. ರತ್ನಮ್ಮ, 7) ಶ್ರೀಮತಿ. ಆಂಜಿನಮ್ಮ, ದಿವಂಗತ ನಾರಾಯಣಪ್ಪ ನವರ ಹೆಂಡತಿ 8) ಶ್ರೀಮತಿ. ಗೌರಮ್ಮ ಮತ್ತು ಅವರ ಮಕಳಾದ 9) ಶ್ರೀಮತಿ. ಮುನಿನರಸಮ್ಮ, 10) ಶ್ರೀಮತಿ. ಮುನಿಲಕ್ಷ್ಮಮ್ಮ, 11) ಶ್ರೀಮತಿ. ಮುನಿತಾಯಮ್ಮ, 12) ಶ್ರೀಮತಿ. ಹನುಮಕ್ಕ, 13) ಶ್ರೀ. ಎಂ. ಲೋಕೇಶ್, ಮತ್ತು ದಿವಂಗತ ನರಸಿಂಹಪ್ಪ ನವರ ಮಗ 14) ಶ್ರೀ. ಎನ್. ಮುನಿಯಪ್ಪ ಮತ್ತು ಅವರ ಮಕ್ಕಳಾದ 15) ಶ್ರೀ. ನರಸಿಂಹಮೂರ್ತಿ 16) ಶ್ರೀಮತಿ. ಎಂ. ಗಾಯಿತ್ರಿ ಉರುಫ್ ಗಾಯಿತ್ರಿಮ್ಮ, 17) ಶ್ರೀಮತಿ. ನಿರ್ಮಲ. ಎಂ, 18) ಶ್ರೀಮತಿ. ಶೋಭ. ಎಂ, 19) ಶ್ರೀಮತಿ. ಸುಮಿತ್ರ. ಎಂ; ಮತ್ತು ಶ್ರೀ. ಕೆ. ವೇಣುರೆಡ್ಡಿಯಾರ್ ರವರ ಮಗ 20) ಶ್ರೀ.ವಿ. ಟಿ. ರಾಮನ್ ("ಮಾಲೀಕರು") ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯುಲ್ ಸ್ವತ್ತು ಸದರಿ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾರಾಟದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯುಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 10 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿಯವರ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯುಲು ಸ್ವತ್ತನು ಖರೀದಿಸಲು ಮುಂದಾಗುವರು.

ಷೆಡ್ಯುಲು ಸ್ವತ್ತಿನ ವಿವರ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕು, ಕಸಬಾ ಹೋಬಳಿ, ನೀಲೇರಿ ಗ್ರಾಮದಲ್ಲಿರುವ 2 ಎಕರೆ 30 ಗುಂಟೆ (ಮತ್ತು 5 ಗುಂಟೆ ಖರಾಬು) ವಿಸ್ತೀರ್ಣವುಳ್ಳ ಸರ್ವೆ ನಂ. 17 ರ ಸ್ವತ್ತಿಗೆ ಚಕ್ಕುಬಂದಿ: **ಪೂರ್ವಕ್ಕೆ** : ನಂದಿ ಬೆಟ್ಟಕ್ಕೆ ಹೋಗುವ ರಸ್ತೆ; **ಪಶ್ಚಿಮಕ್ಕೆ** : ಮಾಳಿಗೇನಹಳ್ಳಿ ಗ್ರಾಮ ಗಡಿ; **ಉತ್ತರಕ್ಕೆ** : ಮಾಳಿಗೇನಹಳ್ಳಿ ಗ್ರಾಮ ಗಡಿ; ಮತ್ತು **ದಕ್ಷಿಣಕ್ಕೆ** : ಸರ್ವೆ ನಂ. 16 ರ ಜಮೀನು.

ಬೆಂಗಳೂರು — ದಿನಾಂಕ : ಜನವರಿ 21, 2024

ಸಹಿ./- ಎ. ಸುಪ್ರೀತ್, ವಕೀಲರು, ಕ್ರೆಸ್ಟ್ ಲಾ ಪಾರ್ಟ್ನರ್ಸ್, ವಕೀಲರು,
33, ಝುವಿಯರ್ ಲೇಔಟ್, 1 ನೆ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು– 560 047.
ದೂ: 41473535 / 41473536

PUBLIC NOTICE

REGARDING CENTURY ETHOS

This is to inform the general public that my clients Smt.Geetha J Malli and 27 others have filed a suit in O.S.No.8222/2023, on the file of the Honble XLIII Additional City Civil and Sessions Judge, Bangalore City, Bangalore (CCH-44) against **M/s.Century Sheltors Developers Pvt Ltd., M/s.Century Shelters Developers Pvt Ltd., and M/s.Century Real Estate Holdings Pvt Ltd.,** and others who are developing the residential project **CENTURY ETHOS APARTMENTS** in the Schedule Property mentioned hereunder. The Honble Court was pleased to grant an order of temporary injunction restraining them from alienating / creating any encumbrance with respect to any portion of the Schedule Property. Therefore the general Public are hereby called upon not to enter into any nature of sale transaction with respect to the Schedule Property. In case any such transactions are entered into the same would be at their own risk and will be subject to the result of the said suit.

SCHEDULE PROPERTY

All that piece and parcel of residentially converted land property bearing Sy.No.107/3 measuring 0-36 ½ Guntas, Sy.No.116/3 measuring 0-22 Guntas and Sy.No.108/1 measuring 1 Acre 21 ½ Guntas totally measuring 3-00 Acres situated at Amruthahalli Village, Yalahanka Hobli, Bangalore North Additional Taluk, which is bounded on:

East by: Remaining portion of Sy.No.108/3 and 108/1
West by: Road & Byatarayanapura Gadi
North by: Part of Sy.Nos.116/2 & 107/2
South by: Remaining portion of Sy.No.108/1, 107/4, 107/5 & 107/6

B. S. RADHANANDAN Advocate
No.239/1, 4th Main, Chamarajpet, Bangalore-560 018.
Phone: 26500612 Mobile: 9845009885
Email:nandaradha@yahoo.com

ಒಂಬತ್ತು ಕಚೇರಿಗಳಲ್ಲಿ ಲೋಕಾಯುಕ್ತ ಅಧಿಕಾರಿಗಳ ತಪಾಸಣೆ

ತಹಶೀಲ್ದಾರ್ ಕಚೇರಿ: ಕಳ್ಳಾಟ ಬಯಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಹಶೀಲ್ದಾರ್ ಸೇರಿದಂತೆ ಕಂದಾಯ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಕೆಲಸದ ಅವಧಿಯಲ್ಲಿ ಅನಧಿಕೃತವಾಗಿ ಹೊರ ಹೋಗುವುದು, ಆಟೋಟಗಳಲ್ಲಿ ಪಾಲ್ಗೊಂಡು, ಕೆಲಸ ಮಾಡಿಕೊಡಲು ಜನರನ್ನು ಸತಾಯಿಸುತ್ತಿರುವುದು ಲೋಕಾಯುಕ್ತ ಅಧಿಕಾರಿಗಳು ಶನಿವಾರ ನಡೆಸಿದ ದಿಢೀರ್ ತಪಾಸಣೆಯಲ್ಲಿ ಪತ್ತೆಯಾಗಿದೆ.

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ತಹಶೀಲ್ದಾರ್ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಸರ್ಕಾರಿ ಸೇವೆ ಒದಗಿಸಲು ಉದ್ದೇಶಪೂರ್ವಕ ವಿಳಂಬ ಮಾಡುತ್ತಿರುವುದು, ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿರುವ ದೂರುಗಳು ಲೋಕಾಯುಕ್ತರಿಗೆ ಬಂದಿದ್ದವು. ಈ ಕುರಿತು ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿರುವ ಲೋಕಾಯುಕ್ತರು, ಎರಡೂ ಜಿಲ್ಲೆಗಳ ಒಂಬತ್ತು ತಹಶೀಲ್ದಾರ್ ಕಚೇರಿಗಳಲ್ಲಿ ದಿಢೀರ್ ತಪಾಸಣೆಗೆ ಆದೇಶಿಸಿದ್ದರು.

ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ಮತ್ತು ನ್ಯಾಯಾಂಗ ಅಧಿಕಾರಿಗಳನ್ನು ಒಳಗೊಂಡ ಒಂಬತ್ತು ತಂಡಗಳು ಈ ಎಲ್ಲ ತಹಶೀಲ್ದಾರ್ ಕಚೇರಿಗಳ ಮೇಲೆ ಶನಿವಾರ ಏಕಕಾಲಕ್ಕೆ ದಾಳಿ ಮಾಡಿ, ಶೋಧ ನಡೆಸಿದವು. ಹಲವು ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಾತಿ ಕಡತಕ್ಕೆ ಸಹಿ ಮಾಡಿ ಹೊರ ಹೋಗಿರುವುದು ಕಂಡುಬಂದಿದೆ. ಸಾರ್ವಜನಿಕರು ಕಾಯುತ್ತಾ ಕುಳಿತಿದ್ದರೂ ಕಚೇರಿಗೆ ಬಾರದೇ ಹೊರಗೆ ಅಡ್ಡಾಡುತ್ತಿದ್ದ ಹಲವು ಅಧಿಕಾರಿಗಳ ವಿವರಗಳನ್ನು ತನಿಖಾ ತಂಡಗಳು ಸಂಗ್ರಹಿಸಿವೆ.

> **599 ಪ್ರಕರಣ ಬಾಕಿ**
>
> ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ತಾಲ್ಲೂಕು ಕಚೇರಿಗಳಲ್ಲಿ ವ್ಯಾಪಕ ದುರಾಡಳಿತ, ಭ್ರಷ್ಟಾಚಾರ ನಡೆಯುತ್ತಿರುವ ದೂರುಗಳು ಬರುತ್ತಿವೆ. ಅಂತಹ 599 ದೂರುಗಳು ಲೋಕಾಯುಕ್ತದಲ್ಲಿ ವಿಚಾರಣೆಗೆ ಬಾಕಿ ಇವೆ ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಯಲಹಂಕ ತಾಲ್ಲೂಕು ಕಚೇರಿಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಖುದ್ದಾಗಿ ಭೇಟಿನೀಡಿ ಕಾರ್ಯಾಚರಣೆ ಪರಿಶೀಲಿಸಿದರು. ದೊಡ್ಡಬಳ್ಳಾಪುರ ಸೇರಿದಂತೆ ಕೆಲವು ತಾಲ್ಲೂಕು ಕಚೇರಿಗಳಿಗೆ ಭೇಟಿ ನೀಡಿದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಕಾರ್ಯಾಚರಣೆಯ ಮಾಹಿತಿ ಪಡೆದರು.

ಸಂಪರ್ಕಕ್ಕೆ ಸಿಗದ ತಹಶೀಲ್ದಾರ್: 'ಬೆಂಗಳೂರು ಉತ್ತರ ತಾಲ್ಲೂಕು ಕಚೇರಿಗೆ ನಾನು ಖುದ್ದಾಗಿ ಭೇಟಿನೀಡಿ ಪರಿಶೀಲಿಸಿದೆ. ಅಲ್ಲಿನ ತಹಶೀಲ್ದಾರ್ ವಿಜಯಕುಮಾರ್ ಬೆಳಿಗ್ಗೆಯಿಂದಲೂ ಕಚೇರಿಯಲ್ಲಿ ಇರಲಿಲ್ಲ. ನಮ್ಮ ಪೊಲೀಸ್ ಅಧಿಕಾರಿಗಳು ಮೊಬೈಲ್‌ಗೆ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ಕಚೇರಿಯಿಂದ ಹೊರ ಹೋಗುವ ಕುರಿತು ಅಧಿಕೃತವಾದ ಮಾಹಿತಿಯನ್ನು ದಾಖಲು ಮಾಡಿರಲಿಲ್ಲ' ಎಂದು ಬಿ.ಎಸ್. ಪಾಟೀಲ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಕರ್ತವ್ಯದ ಅವಧಿಯಲ್ಲಿ ಅನಧಿಕೃತವಾಗಿ ಕಚೇರಿಯಿಂದ ಹೊರ ಹೋಗಿರುವ ಕುರಿತು ತಹಶೀಲ್ದಾರ್ ಅವರಿಂದ ವಿವರಣೆ ಪಡೆಯಲಾಗುವುದು. ಅಲ್ಲಿ ಕೆಲವು ಕಡತಗಳನ್ನು ವಶಕ್ಕೆ ಪಡೆದಿದ್ದು, ಆ ಬಗ್ಗೆಯೂ ವಿಚಾರಣೆ ನಡೆಸಲಾಗುವುದು ಎಂದರು.

ಕ್ರಿಕೆಟ್ ಆಟಕ್ಕೆ ಹಾಜರು: ಯಲಹಂಕ ತಾಲ್ಲೂಕು ಕಚೇರಿಗೆ ಲೋಕಾಯುಕ್ತರು ಭೇಟಿನೀಡಿದಾಗ ಅಲ್ಲಿನ 14 ಅಧಿಕಾರಿಗಳು, ಸಿಬ್ಬಂದಿ ಕರ್ತವ್ಯದಲ್ಲಿ ಇರಲಿಲ್ಲ. ಎಲ್ಲರೂ ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ತೆರಳಿದ್ದರು ಎಂಬ ಮಾಹಿತಿ ತನಿಖಾ ತಂಡಕ್ಕೆ ಲಭಿಸಿದೆ.

'ಯಲಹಂಕ ತಾಲ್ಲೂಕು ಕಚೇರಿಯಲ್ಲಿ 35ಕ್ಕೂ ಹೆಚ್ಚು ಮಂದಿ ಸಾರ್ವಜನಿಕರು ತಮ್ಮ ಕೆಲಸಗಳಿಗಾಗಿ ಕಾಯುತ್ತಿದ್ದರು. ಅಧಿಕಾರಿಗಳು ಮತ್ತು ಸಿಬ್ಬಂದಿ ಮಾತ್ರ ಅಲ್ಲಿರಲಿಲ್ಲ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಈ ರೀತಿ ಜನರನ್ನು ಸತಾಯಿಸುವವರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಲೋಕಾಯುಕ್ತರು ತಿಳಿಸಿದರು.

ಇನ್ನೂ ಕೆಲವು ತಾಲ್ಲೂಕು ಕಚೇರಿಗಳಲ್ಲಿ ಅಧಿಕಾರಿಗಳು, ಸಿಬ್ಬಂದಿ ಅನಧಿಕೃತವಾಗಿ ಕಚೇರಿಯಿಂದ ಹೊರ ಹೋಗಿರುವುದು ಪತ್ತೆಯಾಗಿದೆ. ಕೆಲವೆಡೆ ಸಾರ್ವಜನಿಕರ ಅರ್ಜಿಗಳನ್ನು ವಿಲೇವಾರಿ ಮಾಡದೆ ಸತಾಯಿಸುತ್ತಿರುವ ದೂರುಗಳು ಬಂದಿವೆ. ಕೆಲವು ದೂರುಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಲಾಗಿದೆ. ಹಲವು ಕಡತಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

₹38 ಸಾವಿರದ ಲ್ಯಾಪ್‌ಟಾಪ್‌ಗೆ ₹71 ಸಾವಿರ

● ಮನೋಜಕುಮಾರ್ ಗುದ್ದಿ

ಕಲಬುರಗಿ: ಕಟ್ಟಡ ಹಾಗೂ ಇತರ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ವಿತರಿಸಲು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಮುಕ್ತ ಮಾರುಕಟ್ಟೆಯಲ್ಲಿ ₹38 ಸಾವಿರಕ್ಕೆ ಸಿಗುವ ಲ್ಯಾಪ್‌ಟಾಪ್‌ಗೆ ₹71 ಸಾವಿರ ತೆತ್ತು ಖರೀದಿ ಮಾಡಿದೆ.

2023ರ ಆಗಸ್ಟ್ 11ರಂದು ಮಂಡಳಿಯು ಟೆಂಡರ್‌ನಲ್ಲಿ ಅತಿ ಕಡಿಮೆ ದರಕ್ಕೆ ಬಿಡ್ ಮಾಡಿದ ಬೆಂಗಳೂರಿನ ನೈನ್‌ರಿಚ್ ಇನ್ಫೊಟೆಕ್ ಸಂಸ್ಥೆಯೊಂದಿಗೆ ಎಚ್‌ಪಿ ಕಂಪನಿಯ 7,000 ಲ್ಯಾಪ್‌ಟಾಪ್‌ಗಳನ್ನು ಪೂರೈಕೆ ಮಾಡುವಂತೆ ಒಪ್ಪಂದ ಮಾಡಿಕೊಂಡಿತ್ತು. ಕಲಬುರಗಿ, ಬೆಳಗಾವಿ, ಹಾಸನ, ಬೆಂಗಳೂರು ಪ್ರಾದೇಶಿಕ ಕಚೇರಿ 1 ಹಾಗೂ 2ರ ವ್ಯಾಪ್ತಿಯಲ್ಲಿ ತಲಾ 1,400 ಲ್ಯಾಪ್‌ಟಾಪ್‌ಗಳನ್ನು ಒದಗಿಸುವಂತೆ ಸೂಚಿಸಿತ್ತು. ಇದಕ್ಕಾಗಿ ಪ್ರತಿ ಪ್ರಾದೇಶಿಕ ಕಚೇರಿ ವ್ಯಾಪ್ತಿಯಲ್ಲಿ ₹9.94 ಕೋಟಿ ಮೊತ್ತ ಪಾವತಿಸಿದೆ.

ಈ ಕುರಿತು ಮಾಹಿತಿ ಹಕ್ಕು ಕಾಯ್ದೆಯಡಿ ವಿವರಗಳನ್ನು ಪಡೆದಿರುವ ಕಲಬುರಗಿಯ ಕಾರ್ಮಿಕ ಮುಖಂಡ ಹಣಮಂತರಾಯ ಪೂಜಾರಿ ಅವರು, ನೈನ್‌ರಿಚ್ ಸಂಸ್ಥೆ ಪೂರೈಸಿರುವ ಲ್ಯಾಪ್‌ಟಾಪ್‌ನ ತಾಂತ್ರಿಕ ವಿವರಗಳನ್ನು ನೀಡಿ ಕಲಬುರಗಿಯ ಲ್ಯಾಪ್‌ಟಾಪ್ ಪೂರೈಸುವ ಇಬ್ಬರು ಡೀಲರ್‌ಗಳಿಂದ ದರಪಟ್ಟಿ ತರಿಸಿಕೊಂಡಿದ್ದಾರೆ. ಅದರಲ್ಲಿ ಒಬ್ಬ ಡೀಲರ್ ಪ್ರತಿ ಲ್ಯಾಪ್‌ಟಾಪ್‌ಗೆ ₹38,200 ಹಾಗೂ ಮತ್ತೊಬ್ಬರು ₹38 ಸಾವಿರಕ್ಕೆ ಇದೇ ಮಾದರಿಯ ಲ್ಯಾಪ್‌ಟಾಪ್‌ಗಳನ್ನು ನೀಡುವುದಾಗಿ ದರಪಟ್ಟಿಯಲ್ಲಿ ತಿಳಿಸಿದ್ದಾರೆ. ಅಧಿಕಾರಿಗಳು ದುಬಾರಿ ದರಕ್ಕೆ ಲ್ಯಾಪ್‌ಟಾಪ್ ಖರೀದಿಸುವ ಮೂಲಕ ಮಂಡಳಿಯ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಹಣಮಂತರಾಯ ಪೂಜಾರಿ ಆರೋಪಿಸಿದ್ದಾರೆ.

ಎಚ್‌ಪಿ ಕಂಪನಿಯ ಪ್ರೊಸೆಸರ್ ಇಂಟೆಲ್ i3 (10ನೇ ಜನರೇಶನ್), 14 ಇಂಚಿನ ಪರದೆ, 1 ಟಿಬಿ ಹಾರ್ಡ್ ಡಿಸ್ಕ್, 3 ಯುಎಸ್‌ಬಿ ಪೋರ್ಟ್, ಇಂಟಿಗ್ರೇಟೆಡ್ ಎಚ್‌ಡಿ ಗ್ರಾಫಿಕ್ಸ್, ಎಚ್‌ಡಿ ವೆಬ್‌ಕ್ಯಾಮ್ ಒಳಗೊಂಡ ವಿಂಡೋಸ್ 10 ಸರಣಿಯ ಲ್ಯಾಪ್‌ಟಾಪ್ ಒದಗಿಸುವ ಜೊತೆಗೆ 128 ಜಿ.ಬಿ. ಸಾಮರ್ಥ್ಯದ ಪೆನ್‌ಡ್ರೈವ್ ನೀಡುವ ಕುರಿತು ಒಪ್ಪಂದ ಮಾಡಿಕೊಳ್ಳಲಾಗಿದೆ. ಕಂಪನಿ ನಮೂದಿಸಿರುವ ಬೆಲೆಗಿಂತ ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಲ್ಯಾಪ್‌ಟಾಪ್ ಲಭ್ಯವಿದ್ದರೂ ದುಬಾರಿ ದರಕ್ಕೆ ಖರೀದಿ ಮಾಡಲಾಗಿದೆ ಎಂದು ಹಣಮಂತರಾಯ ಆರೋಪಿಸಿದ್ದಾರೆ.

ಲ್ಯಾಪ್‌ಟಾಪ್‌ಗಳು ಈಗಾಗಲೇ ಕಾರ್ಮಿಕ ಅಧಿಕಾರಿಗಳ ಕಚೇರಿಗಳಿಗೆ ಪೂರೈಕೆಯಾಗಿದ್ದು, ವಿದ್ಯಾರ್ಥಿಗಳಿಗೆ ಇನ್ನಷ್ಟೇ ವಿತರಿಸಬೇಕಿದೆ.

> **'ಖರೀದಿಯಲ್ಲಿ ಅಕ್ರಮ ನಡೆದಿಲ್ಲ'**
>
>
>
> 'ಹಿಂದಿನ ಸರ್ಕಾರದ ಅವಧಿಯಲ್ಲಿಯೇ ಅತಿ ಕಡಿಮೆ ದರ ನಮೂದಿಸಿದವರೊಂದಿಗೆ 7 ಸಾವಿರ ಲ್ಯಾಪ್‌ಟಾಪ್‌ಗಳ ಪೂರೈಕೆಗೆ ಒಪ್ಪಂದವಾಗಿತ್ತು. ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆದಿದ್ದರಿಂದ ನಾವೂ ಲ್ಯಾಪ್‌ಟಾಪ್ ಖರೀದಿಗೆ ಒಪ್ಪಿಗೆ ನೀಡಿದ್ದೇವೆ. ಇದರಲ್ಲಿ ಅಕ್ರಮ ನಡೆದಿಲ್ಲ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಸ್ಪಷ್ಟಪಡಿಸಿದರು.
>
> ಈ ಕುರಿತು 'ಪ್ರಜಾವಾಣಿ'ಗೆ ಸ್ಪಷ್ಟನೆ ನೀಡಿದ ಅವರು, 'ಲ್ಯಾಪ್‌ಟಾಪ್‌ನ ಮೂಲಬೆಲೆ ₹42 ಸಾವಿರ. ವಾರಂಟಿಗೆ ₹3600, ಆಂಟಿವೈರಸ್ ಅಳವಡಿಕೆಗೆ ₹1330, 128 ಜಿಬಿ ಪೆನ್‌ಡ್ರೈವ್‌ಗೆ ₹1 ಸಾವಿರ, ಲ್ಯಾಪ್‌ಟಾಪ್‌ನಲ್ಲಿ ಸಿಲಬಸ್ ಅಳವಡಿಸಲು ₹7686, ಎಂಡಿಎಂ ಸಾಫ್ಟ್‌ವೇರ್‌ಗೆ ₹2,370 ಹಾಗೂ ಜಿಎಸ್‌ಟಿ ಶುಲ್ಕ ಸೇರಿ ಪ್ರತಿ ಲ್ಯಾಪ್‌ಟಾಪ್‌ಗೆ ₹71 ಸಾವಿರ ಆಗಲಿದೆ' ಎಂದರು.
>
> 'ಮಂಡಳಿಯಿಂದ ಇನ್ನು ಮುಂದೆ ಲ್ಯಾಪ್‌ಟಾಪ್ ಖರೀದಿಸುವ ಪ್ರಸ್ತಾವ ನಮ್ಮ ಮುಂದೆ ಇಲ್ಲ' ಎಂದು ಸಚಿವರು ತಿಳಿಸಿದರು.
>
> 

ಸೊರೇನ್ ವಿಚಾರಣೆ

ರಾಂಚಿ (ಪಿಟಿಐ): ಭೂ ಹಗರಣದ ನಂತರ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ವಿಚಾರಣೆಯನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶನಿವಾರ ನಡೆಸಿದರು.

ಈ ಹಿಂದೆ ಇ.ಡಿ ಏಳು ಬಾರಿ ಸಮನ್ಸ್‌ಗಳನ್ನು ನೀಡಿದ್ದರೂ ಸೊರೇನ್ ಅವರು ವಿಚಾರಣೆಗೆ ಗೈರಾಗಿದ್ದರು. ಎಂಟನೇ ಬಾರಿಗೆ ಸಮನ್ಸ್ ನೀಡಿದ ನಂತರ ತಮ್ಮ ಅಧಿಕೃತ ನಿವಾಸದಲ್ಲೇ ವಿಚಾರಣೆಗೆ ಹಾಜರಾಗಲು ಸಮ್ಮತಿಸಿದರು.

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯುಲ್ ಸ್ವತ್ತನ್ನು ಮಾಲೀಕರಾದ ದಿವಂಗತ ಮದನಲಾಲ್ ರವರ ಮಗ ಶ್ರೀ ಅನಿಲ್ ಕುಮಾರ್ ರವರಿಂದ ಖರೀದಿಸಲು ಇಚ್ಚಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತು ಸದರಿಯವರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಷೆಡ್ಯೂಲ್ ಸ್ವತ್ತಿನ ಮೇಲೆ ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರೂ ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿಯವರ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯುಲು ಸ್ವತ್ತನು ಖರೀದಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಚೀಮಾಸಂದ್ರ ಗ್ರಾಮದಲ್ಲಿರುವ ಒಟ್ಟು ವಿಸ್ತೀರ್ಣ 9 ಎಕರೆ 30½ ಗುಂಟೆ ಉಳ್ಳ ಈ ಕೆಳಗೆ ವಿವರಿಸಿರುವ ಸ್ಥಿರ ಸ್ವತ್ತು :

ನಂ.	ಸರ್ವೆ ನಂ.	ವಿಸ್ತೀರ್ಣ (ಎ =ಗು)	ಚಕ್ಕುಬಂದಿ: ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	106/1	2 ಎ 22¼ ಗು	ಬೂದಿಗೆರೆ ಮುಖ್ಯ ರಸ್ತೆ	ಸರ್ವೆ ನಂ. 107/1 ರ ಜಮೀನು	ಸರ್ವೆ ನಂ. 106/2 ರ ಜಮೀನು	ಸರ್ವೆ ನಂ. 96 ರ ಜಮೀನು
2	107/1	2 ಎ 8¼ ಗು	ಸರ್ವೆ ನಂ. 106/1 ರ ಜಮೀನು	ಸರ್ವೆ ನಂ. 108 ರ ಜಮೀನು	ಸರ್ವೆ ನಂ. 107/2	ಸರ್ವೆ ನಂ. 97 ಮತ್ತು ಸರ್ವೆ ನಂ. 112 ರ ಜಮೀನುಗಳು
3	108	3 ಎ	ಸರ್ವೆ ನಂ. 107/1 ಮತ್ತು ಸರ್ವೆ ನಂ. 107/2 ರ ಜಮೀನುಗಳು	ಸರ್ವೆ ನಂ. 100 ಮತ್ತು ಸರ್ವೆ ನಂ. 77 ರಲ್ಲಿ ಉಳಿಕೆ ಜಮೀನುಗಳು	ಸರ್ವೆ ನಂ. 77 ರಲ್ಲಿ ಉಳಿಕೆ ಜಮೀನು	ಸರ್ವೆ ನಂ. 112 ರ ಜಮೀನು
4	77	2 ಎ	ಸರ್ವೆ ನಂ. 108 ಮತ್ತು ಸರ್ವೆ ನಂ. 77 ರಲ್ಲಿ ಉಳಿಕೆ ಜಮೀನುಗಳು	ಸರ್ವೆ ನಂ. 101 ರ ಜಮೀನು	ಸರ್ವೆ ನಂ. 77 ರಲ್ಲಿ ಉಳಿಕೆ ಜಮೀನು	ಸರ್ವೆ ನಂ. 108 ರ ಜಮೀನು

ಬೆಂಗಳೂರು — ದಿನಾಂಕ : ಜನವರಿ 21, 2024

ಸಹಿ./- ಎ. ಸುಪ್ರೀತ್, ವಕೀಲರು, ಕ್ರೆಸ್ಟ್ ಲಾ ಪಾರ್ಟ್ನರ್ಸ್, ವಕೀಲರು,
33, ಝುವಿಯರ್ ಲೇಔಟ್, 1 ನೆ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು– 560 047. ದೂ: **41473535 / 41473536**

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬಿ.ಎಂ.ಆರ್.ಡಿ.ಎ ಕಛೇರಿ ಆವರಣ ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 080–2226 3479, E-Mail: gbbscpa@gmail.com

ಸಂಖ್ಯೆ : GBDA/CLU/03/2023-24 — ದಿನಾಂಕ: 20.01.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು 'ವಸತಿ' ವಲಯದಿಂದ 'ವಾಣಿಜ್ಯ' ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಆಯುಕ್ತರು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೃಷ್ಣಮೂರ್ತಿ ಎಸ್ ಬಿನ್ ಎಂ. ಶ್ರೀನಿವಾಸ ಮತ್ತು ಶ್ರೀ ನಾಗೇಶ ಎಸ್. ಬಿನ್ ಎಂ. ಶ್ರೀನಿವಾಸ ಮನೆ ನಂ. 01, 1ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಮಾರುತಿ ಬಡಾವಣೆ, ಬೆಂಗಳೂರು–560021.	ರಾಮನಗರ	ಬಿಡದಿ–1	ಕೆಂಚನಕುಪ್ಪೆ	61/2	0-7.08	ವಸತಿ	ವಾಣಿಜ್ಯ
					60/13	0-28		
					ಒಟ್ಟು	0-35.08		

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವ್ಯವಸಾಯ ಮಾಡಲು ಸೂಕ್ತವಾಗಿರುವುದಿಲ್ಲ ಹಾಗೂ ಪರಿಸರದಲ್ಲಿ ವಾಣಿಜ್ಯ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ. ಅಲ್ಲದೇ ಪ್ರಸ್ತಾಪಿತ ಜಮೀನಿನಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವಸತಿ'** ವಲಯದಿಂದ **'ವಾಣಿಜ್ಯ'** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛೆಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಯೋಜಕ ಸದಸ್ಯರು,
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

DIPR/CP/RO3164/AAPL/2023-24

ಗೃಹ ಸಚಿವ ಜಿ.ಪರಮೇಶ್ವರ ಅವರ ರಾಜೀನಾಮೆಗೆ ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದವರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ಗೃಹ ಸಚಿವರ ರಾಜೀನಾಮೆಗೆ ಆಗ್ರಹ

ಬೆಂಗಳೂರು: 'ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವಲ್ಲಿ ಗೃಹಸಚಿವ ಜಿ. ಪರಮೇಶ್ವರ ಅವರು ವಿಫಲರಾಗಿದ್ದಾರೆ' ಎಂದು ಆರೋಪಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ನೇತೃತ್ವದಲ್ಲಿ ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು. ಗೃಹ ಸಚಿವರ ರಾಜೀನಾಮೆಗೆ ಆಗ್ರಹಿಸಲಾಯಿತು.

'ರಾಜ್ಯದಲ್ಲಿ ಅಕ್ರಮ ದಂಧೆಗಳು ಯಾವುದೇ ಅಡೆತಡೆಯಿಲ್ಲದೆ ನಡೆಯುತ್ತಿವೆ. ಈ ದಂಧೆಗೆ ಪೊಲೀಸರ ಕೃಪಾ ಕಟಾಕ್ಷ ಇದೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಪೊಲೀಸರು ತಕ್ಷಣವೇ ಸ್ಪಂದಿಸಲು ವಿಫಲರಾಗಿದ್ದಾರೆ. ಪ್ರಕರಣವು ಸಾರ್ವಜನಿಕವಾಗಿ ಮಾಧ್ಯಮದಲ್ಲಿ ವರದಿಯಾದ ನಂತರ ಪೊಲೀಸರು ಎಚ್ಚೆತ್ತು ತನಿಖೆ ಮಾಡಿದ್ದಾರೆ. ಈ ಪ್ರಕರಣವು ಸೇರಿದಂತೆ ರಾಜ್ಯದಲ್ಲಿ ನಿರಂತರವಾಗಿ ಹಲವು ಪ್ರಕರಣಗಳು ನಡೆಯುತ್ತಿವೆ. ಇವುಗಳನ್ನು ತಡೆಯಲು ಹಾಗೂ ಆರೋಪಿಗಳ ವಿರುದ್ಧ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ' ಎಂದು ಪ್ರತಿಭಟನಕಾರರು ಆಪಾದಿಸಿದರು.

ಕೆಆರ್‌ಎಸ್ ಪಕ್ಷದ ಉಪಾಧ್ಯಕ್ಷ ಲಿಂಗೇಗೌಡ ಮಾತನಾಡಿ, 'ಪರಮೇಶ್ವರ ಅವರಿಗೆ ತಮ್ಮ ಇಲಾಖೆಯ ಮೇಲೆ ಹಿಡಿತವಿಲ್ಲ. ತಮಗೂ ಗೃಹ ಇಲಾಖೆಗೂ ಸಂಬಂಧವಿಲ್ಲ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಅವರು ತಕ್ಷಣವೇ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು. ರಾಜ್ಯ ಕಾರ್ಯದರ್ಶಿ ರಘು ಜಾಣಗೆರೆ ಮಾತನಾಡಿದರು.

ಪ್ರತಿಭಟನೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್., ರಾಜ್ಯ ಕಾರ್ಯಾದರ್ಶಿಗಳಾದ ಮಂಜುನಾಥ ಎಸ್, ವಿ.ಅರ್.ಮರಾಠೆ, ಸೊಣ್ಣಪ್ಪಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಎಲ್.ಜೀವನ್, ಬಿ.ಜಿ.ಕುಂಬಾರ್, ಕೇಶವಮೂರ್ತಿ, ರಾಜ್ಯ ಯುವ ಘಟಕದ ರಾಜ್ಯ ಅಧ್ಯಕ್ಷರಾದ ಜನನಿ ವತ್ಸಲ ಪಾಲ್ಗೊಂಡಿದ್ದರು.

ದಿ ರಾಜಾಜಿನಗರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ,
ನಂ. 136-1/1, 17ನೇ ಮುಖ್ಯ ರಸ್ತೆ, 47ನೇ ಅಡ್ಡರಸ್ತೆ, 3ನೇ ವಿಭಾಗ,
ರಾಜಾಜಿನಗರ, ಬೆಂಗಳೂರು–560010.

ಚುನಾವಣೆ ಪ್ರಕಟಣೆ

ದಿ ರಾಜಾಜಿನಗರ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ. 136-1/1, 17ನೇ ಮುಖ್ಯ ರಸ್ತೆ, 47ನೇ ಅಡ್ಡರಸ್ತೆ, 3ನೇ ವಿಭಾಗ, ರಾಜಾಜಿನಗರ, ಬೆಂಗಳೂರು–560010. ಇದರ ಅರ್ಹ ಮತದಾರರ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯನ್ನು ದಿನಾಂಕ: 04.02.2024 ರಂದು ಭಾನುವಾರ ಬೆಳಿಗ್ಗೆ 9:00 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘದ ಬಸವ ಸಭಾಂಗಣ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು–10 ಇಲ್ಲಿ ಚುನಾವಣೆ ನಡೆಸಲು ಚುನಾವಣಾ ಪ್ರಕಟಣೆ ಹೊರಡಿಸಲಾಗಿದೆ.

ಈ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹತೆಯುಳ್ಳ ಅಭ್ಯರ್ಥಿಗಳಿಂದ ನಾಮ ಪತ್ರ ಸಲ್ಲಿಸಲು ಕೊನೆಯ ದಿನಾಂಕ: 27.01.2024 ರಂದು ಸಮಯ ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:00 ಗಂಟೆಯವರೆಗೆ ಅವಕಾಶವಿರುತ್ತದೆ.

ವಿಶೇಷ ಸೂಚನೆ

ಮತ ಚಲಾಯಿಸಲು ಸಂಘವು ನೀಡಿರುವ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

ಸ್ಥಳ: ಬೆಂಗಳೂರು
ಸಹಿ/– (ಚಿಕ್ಕಮಾದಯ್ಯ)
ಮುಖ್ಯಕಾರ್ಯನಿವಾಹಕರು
ರಿಟರ್ನಿಂಗ್ ಆಫೀಸರ್‌ರವರ ಆದೇಶದ ಮೇರೆಗೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ,
ಎ.ವಿ.ಕೆ.ಕಾಂಪ್ಲೆಕ್ಸ್, 2ನೇ ಮಹಡಿ, ಬೂಸಾಲಕುಂಟೆ,
ಮುಳಬಾಗಿಲು, ದೂ: 08159–200181
ಇ–ಮೇಲ್: mulbagalcdpo@gmail.com

ಸಂಖ್ಯೆ:ಶಿಅಯೋ.ಮು:ತೂ.ಯಂ.ಸ:ಟೆಂಡರ್:2023–24/421 ದಿನಾಂಕ: 19.01.2024

"ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ"

2023–24 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನೆ, ಮುಳಬಾಗಿಲು ಈ ಯೋಜನಾ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿನ ತೂಕದ ಯಂತ್ರಗಳಿಗೆ 25 ಕೆ.ಜಿ ಸಾಮರ್ಥ್ಯದ ವಯಸ್ಕರ ತೂಕದ ಯಂತ್ರಗಳು, 120 ಕೆ.ಜಿ ಸಾಮರ್ಥ್ಯದ ಸಾಲ್ಟರ್, ಕಿಶೋರಿಯರ ತೂಕದ ಯಂತ್ರಗಳು, 130 ಕೆ.ಜಿ ಸಾಮರ್ಥ್ಯದ ವಯಸ್ಕರ ತೂಕದ ಯಂತ್ರಗಳು, 2.13 ಮೀಟರ್ ಸಾಮರ್ಥ್ಯದ ಸೇಡಿಯೋ ಮೀಟರ್ ಹಾಗೂ 300 ಕೆ.ಜಿ ಸಾಮರ್ಥ್ಯದ ಪ್ಲಾಟ್ ಫಾರಂ ಸ್ಕೇಲ್‌ನ್ನು ಸತ್ಯಾಪನೆ ಮಾಡಿಸಲು ಇಚ್ಚೆ ಉಳ್ಳವರು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, Karnataka Public Procurement Portal Website address: https://kppp.karnataka.gov.in ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಎ.ವಿ.ಕೆ ಕಾಂಪ್ಲೆಕ್ಸ್, 2ನೇ ಮಹಡಿ, ಬೂಸಾಲಕುಂಟೆ, ಮುಳಬಾಗಿಲು ರವರನ್ನು ಕಛೇರಿಯ ಸಮಯದಲ್ಲಿ ದೂರವಾಣಿ ಸಂಖ್ಯೆ: 9740422335** ಸಂಪರ್ಕಿಸಬಹುದಾಗಿದೆ. (1) ಇ–ಪ್ರಕ್ಯೂರ್‌ಮೆಂಟ್ ಮೂಲಕ ಅರ್ಜಿ ಸ್ವೀಕರಿಸುವ ಪ್ರಾರಂಭ ದಿನಾಂಕ: **19.01.2024. (2)** ಇ–ಪ್ರಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **02.02.2024** ಸಮಯ **ಸಂಜೆ 5.30 ಗಂಟೆಗೆ. (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03.02.2024 ಸಮಯ **ಬೆಳಗ್ಗೆ 11.00 ಗಂಟೆಗೆ. (4)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **05.02.2024** ಸಮಯ **ಬೆಳಗ್ಗೆ 11.00 ಗಂಟೆಗೆ.** (5) ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ: ರೂ. 13,000/– (ಹದಿಮೂರು ಸಾವಿರ ರೂಪಾಯಿ) ಗಳು. (6)ಟೆಂಡರ್ ಅಂದಾಜು ಮೊತ್ತ: **ರೂ. 420000/–.**

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮುಳಬಾಗಿಲು.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 320/ಕೆ.ಎಸ್.ಎಂ.ಸಿ.ಎ/2023–24.

ಅಧ್ಯಕ್ಷರಾಗಿ ಶಿವಕುಮಾರ್ ಆಯ್ಕೆ

ಶಿವಕುಮಾರ್ ಮೇಟಿ

ಶಂಕರ ಪಾಗೋಜಿ

ಬೆಂಗಳೂರು: 'ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆ' ಅಧ್ಯಕ್ಷರಾಗಿ ಶಿವಕುಮಾರ್ ಮೇಟಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಬಸವರಾಜ ಬೀಳೂರು, ಪ್ರಧಾನ ಕಾರ್ಯದರ್ಶಿಯಾಗಿ ಶಂಕರ ಪಾಗೋಜಿ, ಕಾರ್ಯದರ್ಶಿಯಾಗಿ ಬಸಯ್ಯ ನಂದಿಕೋಲ, ಸಂಘಟನಾ ಕಾರ್ಯದರ್ಶಿಯಾಗಿ ತೋಟಪ್ಪ ಶೇಖ, ಖಜಾಂಚಿಯಾಗಿ ಜಯಪ್ರಕಾಶ ಜಾಲಿಗಿಡದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿವೃತ್ತ ಐಪಿಎಸ್ ಅಧಿಕಾರಿ ಶಂಕರ ಬಿದರಿ ಅವರನ್ನು ಗೌರವಾಧ್ಯಕ್ಷರಾಗಿ ಮುಂದುವರಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಬಿಬಿಎಂಪಿ 8 ವಲಯಗಳಲ್ಲಿ 200 ಶೌಚಾಲಯ ಮೇಲ್ದರ್ಜೆಗೆ

ಆಗಸ್ಟ್ ಅಂತ್ಯಕ್ಕೆ 159 ಶೌಚಾಲಯ

• ಆರ್. ಮಂಜುನಾಥ್

ಬೆಂಗಳೂರು: ನಗರಲ್ಲಿ ಹೊಸದಾಗಿ 159 ಸಾರ್ವಜನಿಕ ಶೌಚಾಲಯಗಳನ್ನು ಆಗಸ್ಟ್ ಅಂತ್ಯಕ್ಕೆ ನಿರ್ಮಿಸಲು ಬಿಬಿಎಂಪಿ ಸಿದ್ಧತೆ ನಡೆಸಿದ್ದು, ₹46 ಕೋಟಿ ವೆಚ್ಚದ ಟೆಂಡರ್ ಆಹ್ವಾನಿಸಿದೆ.

ಹೊಸದಾಗಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಹಾಗೂ ನಿರ್ವಹಣೆಗೆ ಮುಖ್ಯ ಆಯುಕ್ತರ ನೇತೃತ್ವದಲ್ಲಿ ನವೆಂಬರ್‌ನಲ್ಲಿ ಸಮಿತಿ ರಚಿಸಲಾಗಿತ್ತು. ನಗರದಲ್ಲಿ ಈಗಿರುವ 360 ಶೌಚಾಲಯಗಳ ಜೊತೆಗೆ ಹೊಸದಾಗಿ 225 ಶೌಚಾಲಯಗಳನ್ನು ನಿರ್ಮಿಸಲು ಯೋಜಿಸಲಾಗಿತ್ತು.

ಮೊದಲ ಹಂತದಲ್ಲಿ 159 ಹೊಸ ಶೌಚಾಲಯ ನಿರ್ಮಾಣ ಹಾಗೂ ಈಗಿರುವ 200 ಶೌಚಾಲಯಗಳನ್ನು ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ. ಜನವರಿ ಅಂತ್ಯದವರೆಗೆ ಟೆಂಡರ್ ಸಲ್ಲಿಸಲು ಅವಕಾಶವಿದ್ದು, ಫೆಬ್ರುವರಿ ಮಧ್ಯಭಾಗದಲ್ಲಿ ಕಾರ್ಯಾದೇಶ ನೀಡಲು ಯೋಜಿಸಲಾಗಿದೆ. ನಂತರದ ಆರು ತಿಂಗಳಲ್ಲಿ ಹೊಸ ಶೌಚಾಲಯಗಳ ನಿರ್ಮಾಣ ಹಾಗೂ ಉನ್ನತೀಕರಣ ಕಾಮಗಾರಿಗಳು ಮುಗಿಯಲಿವೆ ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ಎಂಜಿನಿಯರ್‌ಗಳು ತಿಳಿಸಿದರು.

ಯಾವ ವಲಯದಲ್ಲಿ ಎಷ್ಟು ಶೌಚಾಲಯ ನಿರ್ಮಾಣ?

ವಲಯ	ಹೊಸದು	ಮೇಲ್ದರ್ಜೆ	ವೆಚ್ಚ*
ಪೂರ್ವ, ಯಲಹಂಕ	30	10	₹10
ಮಹದೇವಪುರ	28	-	₹10
ದಕ್ಷಿಣ, ಬೊಮ್ಮನಹಳ್ಳಿ	17	11	₹10
ಆರ್. ಆರ್. ನಗರ	17	33	₹10
ಪಶ್ಚಿಮ, ದಾಸರಹಳ್ಳಿ	67	146	₹6

* (ಕೋಟಿಗಳಲ್ಲಿ)

'ಸ್ವಚ್ಛ ಭಾರತ್, ಶುಭ್ರ ಬೆಂಗಳೂರು, ನಗರೋತ್ಥಾನ ಮತ್ತು ಬಿಬಿಎಂಪಿ ಅನುದಾನಗಳನ್ನು ಬಳಸಿಕೊಳ್ಳಲಾಗುತ್ತಿದೆ. ಶೌಚಾಲಯ ಬಳಕೆಗೆ ಶುಲ್ಕ ವಸೂಲಿ ಮಾಡಿ ನಿರ್ವಹಣೆ ಮಾಡಲಾಗುತ್ತದೆ. ಸಾರ್ವಜನಿಕ– ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಶೌಚಾಲಯ ನಿರ್ಮಿಸಲು ಹಲವು ಸಂಸ್ಥೆಗಳು ಮುಂದೆ ಬಂದಿದ್ದು ಅವುಗಳ ಪ್ರಸ್ತಾಪವನ್ನು ಸಮಿತಿ ಮುಂದಿರಿಸಿ ಸಮ್ಮತಿ ಪಡೆದುಕೊಳ್ಳಲಾಗುತ್ತದೆ. ನಂತರ ಅವುಗಳ ನಿರ್ಮಾಣ– ನಿರ್ವಹಣೆಗೆ ಅನುಮತಿ ನೀಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ಹೊಸದಾಗಿ 159 ಶೌಚಾಲಯ ನಿರ್ಮಿಸಲು ಇದೀಗ ಟೆಂಡರ್ ಕರೆಯಲಾಗಿದ್ದು, ಇನ್ನೂ ಹಲವೆಡೆ ನಿರ್ಮಾಣ ಮಾಡಲಾಗುತ್ತದೆ. ಹೊಸ ಶೌಚಾಲಯ ನಿರ್ಮಾಣ ಮಾಡುವ ಅವಕಾಶವನ್ನೂ ಈ ಟೆಂಡರ್‌ನಲ್ಲೇ ನೀಡಲಾಗಿದ್ದು, ಸ್ಥಳಾವಕಾಶವಿದ್ದರೆ ಇದೇ ಟೆಂಡರ್‌ನಡಿ ಇನ್ನೂ ಹಲವು ಶೌಚಾಲಯಗಳನ್ನು ನಿರ್ಮಿಸಲಾಗುತ್ತದೆ' ಎಂದರು.

ಇ ಶೌಚಾಲಯ ಆರಂಭ ಶೀಘ್ರ: ನಗರದಲ್ಲಿರುವ 229 ಇ–ಶೌಚಾಲಯಗಳು ನಿರ್ವಹಣೆ ಇಲ್ಲದೆ ಸ್ಥಗಿತಗೊಂಡಿವೆ. ನಿರ್ವಹಣೆಗೆ ಎರಡು ಬಾರಿ ಟೆಂಡರ್ ಆಹ್ವಾನಿಸಿದ್ದರೂ ಯಾರೂ ಮುಂದೆ ಬಂದಿರಲಿಲ್ಲ. ಮೂರನೇ ಬಾರಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ತಾಂತ್ರಿಕ ಬಿಡ್ ತೆರೆಯಲಾಗಿದೆ. ಶೀಘ್ರ ಕಾರ್ಯಾದೇಶ ನೀಡಲಾಗುತ್ತದೆ. ಇದಲ್ಲದೆ, 100 ಶಿ–ಶೌಚಾಲಯ ನಿರ್ಮಾಣಕ್ಕೆ ಮತ್ತೆ ಟೆಂಡರ್ ಕರೆಯಲಾಗುವುದು ಎಂದು ಎಂಜಿನಿಯರ್‌ಗಳು ತಿಳಿಸಿದರು.

ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿರುವ ಶೌಚಾಲಯಗಳನ್ನೂ ಸಾರ್ವಜನಿಕರ ಬಳಕೆಗೆ ನೀಡಲಾಗುತ್ತದೆ ಎಂದರು.

117 ಕೇಂದ್ರಗಳಲ್ಲಿ ಪಿಎಸ್‌ಐ ನೇಮಕಾತಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 117 ಪರೀಕ್ಷಾ ಕೇಂದ್ರಗಳಲ್ಲಿ ಜ.23ರಂದು ಪಿಎಸ್‌ಐ (ಸಿವಿಲ್– ಪುರುಷ ಹಾಗೂ ಮಹಿಳಾ) ನೇಮಕಾತಿಗೆ ಮರು ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಕೇಂದ್ರದ ಸುತ್ತಮುತ್ತಲ 200 ಮೀಟರ್ ಪ್ರದೇಶವನ್ನು ನಿಷೇಧಿತ ಸ್ಥಳವೆಂದು ಘೋಷಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಆದೇಶಿಸಿದ್ದಾರೆ.

ಪರೀಕ್ಷೆಯನ್ನು ಸುಗಮ ಹಾಗೂ ಸುವ್ಯವಸ್ಥಿತವಾಗ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಅಂದು ಬೆಳಿಗ್ಗೆ 7ರಿಂದ ಪರೀಕ್ಷೆ ಮುಕ್ತಾಯ ಆಗುವವರೆಗೆ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಎಲ್ಲ 'ಜೆರಾಕ್ಸ್' ಅಂಗಡಿಗಳನ್ನು ಮುಚ್ಚುವಂತೆ ಆದೇಶದಲ್ಲಿ ಸೂಚಿಸಲಾಗಿದೆ.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಸ್ಥಾಪನೆ : 1969
ಪ್ರಧಾನ ಕಛೇರಿ: ನಂ: 24 "ಸುವರ್ಣ ಭವನ", 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560 104. ದೂರವಾಣಿ : 080– 41159606, 23300497, 23359600, 23503666 23402712,
website: www.jscbl.com, email : jscbinfo@jscbl.com

–:ಪ್ರಕಟಣೆ:–

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ದಿನಾಂಕ 21.12.2023 ರಂದು ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾದ ಸ್ಥಿರಾಸ್ತಿ ಬಹಿರಂಗ ಹರಾಜನ್ನು ದಿನಾಂಕ 24.01.2024 ರಂದು ನಿಗಧಿಪಡಿಸಿದ್ದು, ಈ ನಿಗಧಿತ ದಿನಾಂಕವನ್ನು ಕಾರಣಾಂತರಗಳಿಂದ 08.02.2024 ರ ಗುರುವಾರ ಬೆಳಿಗ್ಗೆ 11.30 ಗಂಟೆಗೆ ಮರು ನಿಗಧಿಪಡಿಸಲಾಗಿರುತ್ತದೆ. ಆಸಕ್ತರು ಕೆಳಗೆ ನಮೂದಿಸಲಾಗಿರುವ ವಿಳಾಸದಲ್ಲಿ ಟೆಂಡರ್ ಫಾರಂ ಪಡೆದು ದಿನಾಂಕ 07.02.2024 ಒಳಗಾಗಿ ಸಲ್ಲಿಸಬೇಕಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ. 24, ಸುವರ್ಣ ಭವನ, ಹಕ್ಕ ರಸ್ತೆ, 1ನೇ ಮುಖ್ಯ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104. ದೂರವಾಣಿ: 23300497, 41159606, 23359600, 9845022879, 9945052783 ಗಳನ್ನು ಸಂಪರ್ಕಿಸತಕ್ಕದ್ದು, ತುರ್ತು ಕಾರಣದಿಂದ ಹರಾಜು ದಿನಾಂಕವನ್ನು ಮುಂದೂಡಲಾಗಿದ್ದು ಇದಕ್ಕಾಗಿ ವಿಷಾಧಿಸುತ್ತೇವೆ.

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಇವಿಎಂಗೆ ₹10 ಸಾವಿರ ಕೋಟಿ ಅಗತ್ಯ

ಏಕಕಾಲದಲ್ಲಿ ಚುನಾವಣೆ: ಕೇಂದ್ರಕ್ಕೆ ಆಯೋಗ ಮಾಹಿತಿ

ನವದೆಹಲಿ (ಪಿಟಿಐ): ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು ನಡೆದರೆ ಚುನಾವಣಾ ಆಯೋಗವು ಹೊಸ ವಿದ್ಯುನ್ಮಾನ ಮತ ಯಂತ್ರಗಳ (ಇವಿಎಂ) ಖರೀದಿಗಾಗಿ ಪ್ರತಿ 15 ವರ್ಷಗಳಿಗೊಮ್ಮೆ ಅಂದಾಜು ₹10,000 ಕೋಟಿ ವಿನಿಯೋಗಿಸಬೇಕಾಗಲಿದೆ.

ಇವಿಎಂಗಳ ಬಳಕೆಯ ಅವಧಿ 15 ವರ್ಷಗಳಾಗಿದ್ದು, ಏಕಕಾಲದಲ್ಲಿ ಚುನಾವಣೆಗಳು ('ಒಂದು ದೇಶ, ಒಂದು ಚುನಾವಣೆ')ನಡೆದರೆ ಪ್ರತಿ ಇವಿಎಂಗಳನ್ನು ಮೂರು ಚುನಾವಣೆಗಳಲ್ಲಿ ಮಾತ್ರ ಬಳಸಬಹುದು ಎಂದು ಚುನಾವಣಾ ಆಯೋಗವು ಸರ್ಕಾರಕ್ಕೆ ಮಾಹಿತಿ ನೀಡಿದೆ.

ಈ ವರ್ಷ ಲೋಕಸಭಾ ಚುನಾವಣೆಗೆ ದೇಶದಾದ್ಯಂತ ಒಟ್ಟು 11.80 ಲಕ್ಷ ಮತಗಟ್ಟೆಗಳನ್ನು ಸ್ಥಾಪಿಸುವ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ.

ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳು ಏಕಕಾಲದಲ್ಲಿ ನಡೆದರೆ ಪ್ರತಿ ಮತಗಟ್ಟೆಗೆ ಎರಡು ಸೆಟ್ ಇವಿಎಂಗಳು ಬೇಕಾಗುತ್ತವೆ. ಅಲ್ಲದೆ, ಹಲವು ಕಂಟ್ರೋಲ್ ಯುನಿಟ್ (ಸಿಯು), ಬ್ಯಾಲೆಟ್ ಯುನಿಟ್ (ಬಿಯು) ಮತ್ತು ವಿವಿಪ್ಯಾಟ್ ಯಂತ್ರಗಳನ್ನು ಮೀಸಲಾಗಿ ಇಟ್ಟುಕೊಳ್ಳಬೇಕು. ಮತದಾನದ ದಿನ ಸೇರಿ ವಿವಿಧ ಸಂದರ್ಭದಲ್ಲಿ ಈ ಯಂತ್ರಗಳಲ್ಲಿ ದೋಷಗಳು ಕಂಡು ಬಂದರೆ ಅವುಗಳನ್ನು ಬದಲಾಯಿಸುವುದಕ್ಕಾಗಿಯೇ ಮೀಸಲು ಯಂತ್ರಗಳ ಅಗತ್ಯ ಇದೆ ಎಂದು ಆಯೋಗ ಪತ್ರದಲ್ಲಿ ಉಲ್ಲೇಖಿಸಿದೆ.

ಪ್ರತಿ ಇವಿಎಂ ಕನಿಷ್ಠ ಒಂದೊಂದು ಬಿಯು, ಸಿಯು ಮತ್ತು ವಿವಿಪ್ಯಾಟ್ ಹೊಂದಿರುತ್ತದೆ. ಏಕಕಾಲದಲ್ಲಿ ಚುನಾವಣೆ ನಡೆದರೆ 46,75,100 ಬಿಯು, 36,63,300 ಸಿಯು ಹಾಗೂ 36,62,600 ವಿವಿಪ್ಯಾಟ್‌ಗಳ ಅಗತ್ಯವಿರುತ್ತದೆ ಎಂದು ಆಯೋಗವು ಕಳೆದ ಫೆಬ್ರುವರಿಯಲ್ಲಿ ಕಾನೂನು ಸಚಿವಾಲಯಕ್ಕೆ ಬರೆದಿದ್ದ ಪತ್ರದಲ್ಲಿ ಉಲ್ಲೇಖಿಸಿತ್ತು.

ಪ್ರತಿ ಇವಿಎಂಗೆ ಖರ್ಚು ಎಷ್ಟು?: 2023ರ ಆರಂಭದಲ್ಲಿ ಪ್ರತಿ ಇವಿಎಂ ಖರೀದಿಗೆ ತಗಲುವ ತಾತ್ಕಾಲಿಕ ವೆಚ್ಚವನ್ನು ಲೆಕ್ಕ ಹಾಕಲಾಗಿತ್ತು. ಅದರ ಪ್ರಕಾರ, ಪ್ರತಿ ಬಿಯುಗೆ ₹7,900, ಪ್ರತಿ ಸಿಯುಗೆ ₹9,800 ಹಾಗೂ ಪ್ರತಿ ವಿವಿಪ್ಯಾಟ್ ಘಟಕಕ್ಕೆ ₹16,000 ತಗುಲುತ್ತದೆ ಎಂದು ಚುನಾವಣಾ ಆಯೋಗವು ಕಾನೂನು ಸಚಿವಾಲಯದ ಪ್ರಶ್ನೆಗೆ ಪ್ರತಿಕ್ರಿಯಿಸಿತ್ತು.

ಜತೆಗೆ, ಚುನಾವಣಾ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಇವಿಎಂಗಳ ಸಂಗ್ರಹಕ್ಕೆ ಬೇಕಾಗುವ ಶೇಖರಣಾ ಸೌಲಭ್ಯ, ವಾಹನಗಳಿಗೂ ಹೆಚ್ಚುವರಿಯಾಗಿ ಖರ್ಚುವೆಚ್ಚಗಳು ಆಗುತ್ತವೆ ಎಂದು ಆಯೋಗ ಒತ್ತಿಹೇಳಿತ್ತು.

ಐದು ವಿಧಿಗಳಿಗೆ ತಿದ್ದುಪಡಿ ಅಗತ್ಯ

ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಸಂವಿಧಾನದ ಐದು ವಿಧಿಗಳಿಗೆ ತಿದ್ದುಪಡಿಗಳ ಅಗತ್ಯವಿದೆ ಎಂಬುದನ್ನು ಆಯೋಗ ಹೇಳಿದೆ.

ಸಂಸತ್ತಿನ ಸದನಗಳ ಅವಧಿಗೆ ಸಂಬಂಧಿಸಿದ 83ನೇ ವಿಧಿ, ರಾಷ್ಟ್ರಪತಿಯಿಂದ ಲೋಕಸಭೆ ವಿಸರ್ಜನೆಗೆ ಸಂಬಂಧಿಸಿದ 85ನೇ ವಿಧಿ, ರಾಜ್ಯ ಶಾಸಕಾಂಗಗಳ ಅವಧಿಗೆ ಸಂಬಂಧಿಸಿದ 172ನೇ ವಿಧಿ, ರಾಜ್ಯ ಶಾಸಕಾಂಗಗಳ ವಿಸರ್ಜನೆಗೆ ಸಂಬಂಧಿಸಿದ 174ನೇ ವಿಧಿ ಹಾಗೂ ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವುದಕ್ಕೆ ಸಂಬಂಧಿಸಿದ 356ನೇ ವಿಧಿಗಳಿಗೆ ತಿದ್ದುಪಡಿ ತರಬೇಕಾದ ಅಗತ್ಯವಿದೆ ಎಂಬುದನ್ನು ಆಯೋಗ ಪ್ರಸ್ತಾಪಿಸಿದೆ.

ಕೇಂದ್ರ ಸರ್ಕಾರ ರಚಿಸಿರುವ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ನೇತೃತ್ವದ ಸಮಿತಿಯು ದೇಶದಾದ್ಯಂತ ಏಕಕಾಲದಲ್ಲಿ ಚುನಾವಣೆ ನಡೆಸುವ 'ಒಂದು ದೇಶ, ಒಂದು ಚುನಾವಣೆ' ಕಾರ್ಯಸಾಧ್ಯತೆಗಳ ಪರಿಶೀಲನೆ ನಡೆಸುತ್ತಿದೆ.

ಬಾಗೇಪಲ್ಲಿ ತಾಲ್ಲೂಕಿನ ಗೂಳೂರು ಮಠದ ಜಚನಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ನಿಡುಮಾಮಿಡಿ ಮಠದ ಚನ್ನಮಲ್ಲ ವೀರಭದ್ರ ಸ್ವಾಮೀಜಿ ಬಿಸಿಯೂಟ ಬಡಿಸಿದರು

ರಾಜ್ಯ ಸರ್ಕಾರದ ವಿರುದ್ಧ ನಿಡುಮಾಮಿಡಿ ಶ್ರೀ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ): ಸಮಾನತೆ, ಜಾತ್ಯತೀತ, ಸೈದ್ಧಾಂತಿಕ ನಿಲುವಿನ ಮತ್ತು ನಾಡಿನ ಪ್ರಮುಖ ಮಠಗಳಲ್ಲಿ ಒಂದಾದ ನಿಡುಮಾಮಡಿ ಮಠಕ್ಕೆ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮಿಜಿ ಅಸಮಾಧಾನ ಹೊರಹಾಕಿದ್ದಾರೆ.

ತಾಲ್ಲೂಕಿನ ಗೂಳೂರು ಗ್ರಾಮದ ನಿಡುಮಾಮಿಡಿ ಮಠದ ಡಾ.ಶ್ರೀ ಜಚನಿ ವಸತಿ ಪ್ರೌಢಶಾಲೆಯ ವಿದ್ಯಾರ್ಥಿಗಳ ಮಧ್ಯಾಹ್ನದ ಬಿಸಿಯೂಟ ಪ್ರಾರಂಭೋತ್ಸವಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಕೆಲ ಮಠಗಳಿಗೆ ಸರ್ಕಾರದಿಂದ ಬಹಳಷ್ಟು ಸೌಲಭ್ಯ ಹಾಗೂ ಅನುದಾನ ಸಿಗುತ್ತಿದೆ. ಆದರೆ, ನಮ್ಮ ಮಠಕ್ಕೆ ಸರ್ಕಾರದಿಂದ ಯಾವುದೇ ನೆರವು ದೊರೆಯುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ನಿಡುಮಾಮಿಡಿ ಮಠ ಮೊದಲಿನಿಂದಲೂ ಸಮಾನತೆ, ಜಾತ್ಯತೀತ ಮತ್ತು ಸೈದ್ಧಾಂತಿಕ ನಿಲುವು ಹೊಂದಿದೆ. ಶೋಷಿತರು, ಹಿಂದುಳಿದವರು ಮತ್ತು ದಲಿತರಪರವಾಗಿಜನಪರಹೋರಾಟದ ಕೇಂದ್ರವಾಗಿದೆ. ಸಮಾಜದಲ್ಲಿ ಬೇರು ಬಿಟ್ಟಿರುವ ಕಂದಾಚಾರ, ಮೌಢ್ಯ ನಿವಾರಣೆಗೆ ಮಠ ಶ್ರಮಿಸುತ್ತಿದೆ. ನಾವು ಮಾನವೀಯ ನೆಲೆಗಟ್ಟಿನಲ್ಲಿ ಧ್ವನಿ ಎತ್ತುವುದು ಕೆಲವರಿಗೆ ಅಪಥ್ಯ ಆಗಿದೆ' ಎಂದರು.

'ಮೌಢ್ಯಗಳನ್ನು ವಿರೋಧಿಸದೇ, ಯಥಾಸ್ಥಿತಿ ಕಾಯ್ದುಕೊಂಡರೆ ಒಳ್ಳೆಯದು ಎನ್ನುವ ಪರಿಸ್ಥಿತಿಯಲ್ಲಿ ನಾವಿದ್ದೇವೆ' ಎಂದು ಸ್ವಾಮೀಜಿ ವಿಷಾದದಿಂದ ನುಡಿದರು.

12 ಹಾಸಿಗೆಗಳ ಡಯಾಲಿಸಿಸ್ ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಹೇರೋಹಳ್ಳಿ ವಾರ್ಡ್‌ನ ಬಿಇಎಲ್ ಬಡಾವಣೆಯಲ್ಲಿ ಬಿಬಿಎಂಪಿ ವತಿಯಿಂದ ₹ 7.50 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ 12 ಹಾಸಿಗೆಗಳ ಡಯಾಲಿಸಿಸ್ ಕೇಂದ್ರವನ್ನು ಶಾಸಕ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು.

ಈ ಘಟಕದಲ್ಲಿ ತಳ ಮಹಡಿಯಲ್ಲಿ 'ನಮ್ಮ ಕ್ಲಿನಿಕ್', ಮೊದಲ ಮಹಡಿಯಲ್ಲಿ ಡಯಾಲಿಸಿಸ್ ಚಿಕಿತ್ಸಾ ಘಟಕ, ಎರಡನೇ ಮಹಡಿಯಲ್ಲಿ ಹೆರಿಗೆ ವಾರ್ಡ್ ಬರಲಿದೆ. ಬಿಬಿಎಂಪಿ, ವಿಕ್ಟೋರಿಯಾ ಆಸ್ಪತ್ರೆಯ 'ಇನ್ಸ್ಟಿಟ್ಯೂಟ್ ಆಫ್ ನೆಫ್ರೊಯುರಾಲಜಿ' ಸಹಯೋಗದೊಂದಿಗೆ ಡಯಾಲಿಸಿಸ್ ಘಟಕ ಕಾರ್ಯನಿರ್ವಹಿಸಲಿದೆ.

ಡಯಾಲಿಸಿಸ್ ಕೇಂದ್ರದಲ್ಲಿ ಮೂರು ಪಾಳಿಯಲ್ಲಿ ಮೂವರು ತಜ್ಞ ವೈದ್ಯರು, ಮೂವರು ಶುಶ್ರೂಷಕರು ಮತ್ತು ಏಳು ಟೆಕ್ನೀಷಿಯನ್‌ಗಳು ಕಾರ್ಯನಿರ್ವಹಿಸಲಿದ್ದಾರೆ. ವೈದ್ಯರು, ಶುಶ್ರೂಕರು ಸಿಬ್ಬಂದಿ ಸೇರಿ 27 ಜನ ಕಾರ್ಯ ನಿರ್ವಹಿಸುತ್ತಾರೆ.

ಮಾಗಡಿ ರಸ್ತೆಯ ತಿಪ್ಪಗೊಂಡನಹಳ್ಳಿ, ಮಂಚನಬೆಲೆ ಸಮೀಪದ ಚಿಕ್ಕನಹಳ್ಳಿ ಸೇರಿದಂತೆ ಬಿಬಿಎಂಪಿ ವ್ಯಾಪ್ತಿಯ ದಾಸರಹಳ್ಳಿ, ಆರ್.ಆರ್.ನಗರ, ಯಶವಂತಪುರ ಕ್ಷೇತ್ರ, ಯಲಹಂಕ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳ ಸುತ್ತಮುತ್ತಲಿನ ನಾಗರಿಕರು ಈ ಕೇಂದ್ರದ ಪ್ರಯೋಜನ ಪಡೆಯಬಹುದು.

ವಿಕ್ಟೋರಿಯಾ ಆಸ್ಪತ್ರೆಯ ಯುರಾಲಜಿ ವಿಭಾಗದ ನಿರ್ದೇಶಕ ಡಾ.ಕೇಶವ ಮೂರ್ತಿ.ಆರ್ ಮಾತನಾಡಿ, 'ವಿಕ್ಟೋರಿಯಾ ಆಸ್ಪತ್ರೆಯ ತಜ್ಞ ವೈದ್ಯರಿಂದ ಚಿಕಿತ್ಸೆ ಕೊಡಿಸಲಾಗುತ್ತಿದೆ. ಬಿಪಿಎಲ್, ಆಯುಷ್ಮಾನ್ ಕಾರ್ಡ್‌ದಾರರಿಗೆ ಉಚಿತ ಚಿಕಿತ್ಸೆ ನೀಡಲಾಗುವುದು' ಎಂದರು.

ನಿಧನ ವಾರ್ತೆ

ಬಿ.ಕೆ. ಕಾಳೆ



ಬೆಂಗಳೂರು: ನಗರದ ಬನಶಂಕರಿ 6ನೇ ಹಂತದ ನಿವಾಸಿ ಬಿ.ಕೆ. ಕಾಳೆ (89) ಅವರು ಶುಕ್ರವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಧಾರವಾಡದ ಕಾಳೆ ಅವರ ಸಂಘಟನಾ ಸಾಮರ್ಥ್ಯ ಗುರುತಿಸಿ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ಬನಶಂಕರಿ ವಿದ್ಯುತ್ ಚಿತಾಗಾರದಲ್ಲಿ ಮೃತರ ಅಂತ್ಯಕ್ರಿಯೆ ಶನಿವಾರ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಸತ್ಯಮೇವ ಜಯತೆ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಭಾರತ ಸರ್ಕಾರ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಘೋಷಿಸುತ್ತಿದೆ

ಸನ್ 2023–24ನೇ ಸಾಲಿನ ಎಸ್‌ಸಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಶಿಷ್ಯವೇತನಗಳ ಯೋಜನೆ ಅಡಿಯಲ್ಲಿ ಉನ್ನತ ಶಿಕ್ಷಣ ಪಡೆಯುವುದಕ್ಕಾಗಿ

69 ಲಕ್ಷ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ

ಅರ್ಹತೆ
- ಪಾಲಕರ/ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷ ಮೀರಕೂಡದು
- ಮಾನ್ಯತೆಯುಳ್ಳ ಶಾಲಾ/ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು

ಸ್ವರೂಪ
- 11ನೇ ತರಗತಿಯಿಂದ ಮಾನ್ಯತೆಯುಳ್ಳ ಎಲ್ಲಾ ಕೋರ್ಸ್‌ಗಳು
- ರಾಜ್ಯ ಸರ್ಕಾರ / ಕೇಂದ್ರಾಡಳಿತ ಪ್ರದೇಶದಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ ಮತ್ತು ಪರಿಶೀಲನೆ ಮಾಡಲಾಗುತ್ತದೆ
- ಕಡುಬಡವ ಕುಟುಂಬಗಳಿಗೆ ಆದ್ಯತೆ

ಹಕ್ಕುದಾರಿಕೆ
- ಕಡ್ಡಾಯವಾಗಿ ಹಿಂದಿರುಗಿಸಲಾಗದ ಶುಲ್ಕಗಳು (ಟ್ಯೂಷನ್ ಶುಲ್ಕ ಸೇರಿದಂತೆ)
- ವಾರ್ಷಿಕ ರೂ. 2500 ರಿಂದ ರೂ.13500 ವರೆಗೆ ಅಕಾಡೆಮಿಕ್ ಭತ್ಯೆಗಳು
- ದಿವ್ಯಾಂಗ (ವಿಶೇಷಚೇತನರು) ವಿದ್ಯಾರ್ಥಿಗಳಿಗೆ 10% ಹೆಚ್ಚುವರಿ ಭತ್ಯೆ

- ವಿದ್ಯಾರ್ಥಿಗಳು ತಮಗೆ ಸಂಬಂಧಿತ ರಾಜ್ಯದ ಸ್ಕಾಲರ್‌ಶಿಪ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು
- ವಿದ್ಯಾರ್ಥಿಗಳು ಕಡ್ಡಾಯವಾಗಿ ಮೊಬೈಲ್ ನಂಬರ್, ಆಧಾರ್ ನಂಬರ್ (ಯುಐಡಿ), ಆಧಾರ್ ಸೀಡೆಡ್ ಬ್ಯಾಂಕ್ ಖಾತೆ, ಆದಾಯ ಪ್ರಮಾಣಪತ್ರ ಹಾಗೂ ಜಾತಿ ಪ್ರಮಾಣಪತ್ರ ಹೊಂದಿರಬೇಕು.

- ಯೋಜನೆಯ ಮಾರ್ಗಸೂಚಿಗಳು ಮತ್ತು ಅರ್ಹತಾ ಮಾನದಂಡ ವಿವರಗಳು ಇಲ್ಲಿ ಲಭ್ಯವಿರುತ್ತದೆ.
http://socialjustice.gov.in/schemes/25

CBC 38101/11/0057/2324

64 ಪೀಠೋಪಕರಣ ಮತ್ತು ಡೇಕೋರ್ ಕಂಪನಿಗಳು ಒಂದೇ ಸೂರಿನಡಿ! ಕೊನೆಯ 2 ದಿನಗಳು ಬೆಳಿಗ್ಗೆ 10.00–ರಾತ್ರಿ 8.30 ಗಂಟೆ

FURNITURE FAIR

ನಮ್ಮ ಸ್ಥಳವನ್ನು ಇಲ್ಲಿ ಗುರುತಿಸಿ

19 | 20 | 21 | 22 ಜನವರಿ 2024
ತ್ರಿಪುರವಾಸಿನಿ ಅರಮನೆ ಮೈದಾನ
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು

• ಲಿವಿಂಗ್ ರೂಮ್ • ಡೈನಿಂಗ್ ಸೆಟ್ • ಬೆಡ್‌ರೂಮ್ • ಔಟ್‌ಡೋರ್ ಫರ್ನೀಚರ್ • ಲೆದರ್ ಸೋಫಾ • ಬ್ರಾಸ್ & ಆರ್ಟ್‌ಕ್ರಾಫ್ಟ್ • ಹೋಮ್ ಡೆಕೋರ್ • ರಿಕ್ಲೈನರ್ ಸೋಫಾ ಸೆಟ್ಸ್ • ಕಾರ್ಪೆಟ್ & ಕುಷನ್ಸ್ • ಮ್ಯಾಟ್ರೆಸ್ಸ್ • ಕರ್ಟನ್ಸ್ • ವಾಟರ್ ಫೌಂಟೇನ್ಸ್ ಮತ್ತು ಇನ್ನೂ ಅನೇಕ...

www.iadsandevents.com exhibitions_iadsnevents iadsnevents ಪ್ರವೇಶ ಉಚಿತ +91 93425 77908 AN EVENT BY iads & events COMPLETE BUSINESS SOLUTIONS

ಕೊನೆಯ 2 ದಿನಗಳು

THAILAND SHOPPING FESTIVAL

ಇಂಟರ್‌ನ್ಯಾಷನಲ್ ಪೆವಿಲಿಯನ್

THAILAND BANGLADESH TURKEY KOREA
AFGHANISTAN IRAN NEPAL

ನಮ್ಮ ಸ್ಥಳವನ್ನು ಇಲ್ಲಿ ಗುರುತಿಸಿ

19 | 20 | 21 | 22 ಜನವರಿ 2024
ಬೆಳಗ್ಗೆ 10.00 – ರಾತ್ರಿ 8.30 ಗಂಟೆ
ತ್ರಿಪುರವಾಸಿನಿ ಅರಮನೆ ಮೈದಾನ
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು

• ಥೈಲ್ಯಾಂಡ್ ಸ್ಪಾ ಆಯಿಲ್ಸ್ • ಹರ್ಬಲ್ ಪ್ರಾಡಕ್ಟ್ • ಥೈಲ್ಯಾಂಡ್ ಪರ್ಲ್ ಜ್ಯುವೆಲ್ಲರಿ • ಮಹಿಳಾ ಅಕ್ಸೆಸರಿಗಳು • ಟರ್ಕಿ ಲೈಟ್ಸ್ • ನೇಪಾಳ್ ಟೆಂಪಲ್ ವೈಬ್ಸ್ • ಬಾಂಗ್ಲಾದೇಶದ ಸೀರೆಗಳು • ಮಕ್ಕಳ ಅಕ್ಸೆಸರಿಗಳು • ಮೇಕಪ್ ಪ್ರಾಡಕ್ಟ್ • ಕೃತಕ ಹೂವುಗಳು • ಅಫಘಾನಿಸ್ತಾನ್ ಡ್ರೈಫ್ರೂಟ್ಸ್ • ಮತ್ತು ಇನ್ನೂ ಅನೇಕ...

exhibitions_iadsnevents
iadsnevents
ಎಲ್ಲಾ ಪ್ರಮುಖ ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ
ಪ್ರವೇಶ ಉಚಿತ +91 93425 77908

ಷೇರುಪೇಟೆ ವಹಿವಾಟು

▼ 259



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,462
ಇಂದಿನ ಅಂತ್ಯ	21,571
▼	50
ದಿನದ ಗರಿಷ್ಠ	21,720

ವಿನಿಮಯ ದರ

$ ಡಾಲರ್	83.12
£ ಪೌಂಡ್	105.60
€ ಯುರೊ	90.41
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹555
12 ಕ್ಕೆ	₹72
ಮೈಸೂರು	
100ಕ್ಕೆ	₹555

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1560 (1560)
ಸೋಯಾ (ರಿಫೈನ್ಡ್)	₹905 (905)
ಸೂರ್ಯಕಾಂತಿ (ರಿಫೈನ್ಡ್)	₹920 (925)
ಪಾಮೋಲಿನ್	₹850 (853)

ಬಂಟ್ವಾಳ (ಅಡಿಕೆ)

ಕೋಕ	18000–28500
ಹೊಸತು	28500–36500
ಹಳತು	42000–44500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹156.50
ಆರ್‌ಎಸ್‌ಎಸ್-5	₹150
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹134

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹247-495
ದ್ವಿತಳಿ (ಬಿ.ವಿ)	₹309-587

ಮುಂಬೈ ಧಾರಣೆ

ಶೇಂಗಾ

20-1-2024

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11400-11500
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1570)
ಒಂದು ವಾರದ ಡೆಲಿವರಿ	1550 (1565)
ಸೋಯಾ ಕಚ್ಚಾ	860 (865)
ಪಾಮ್ ವಾರದ ಡೆಲಿವರಿ	852 (855)
ಸೂರ್ಯಕಾಂತಿ ಎಣ್ಣೆ ಕಚ್ಚಾ	875 (875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹62,100 (62,200)

ಬೆಳ್ಳಿ ಕೆ.ಜಿ ₹70,850 (71,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಹು ಆಯಾಮಗಳ ಬಡತನ ಸೂಚ್ಯಂಕ ವರದಿ ಪ್ರಕಟ: ಕರ್ನಾಟಕದಲ್ಲಿ ಶೇ 5.67ಕ್ಕೆ ಇಳಿಕೆ

73 ಲಕ್ಷ ಕನ್ನಡಿಗರು ಬಡತನ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ 2013–14ರಿಂದ 2022–23ರ ನಡುವಿನ ಅವಧಿಯಲ್ಲಿ ಒಟ್ಟು 73.64 ಲಕ್ಷ ಜನರು ಬಹು ಆಯಾಮಗಳ ಬಡತನದಿಂದ ಹೊರಬಂದಿದ್ದಾರೆ ಎಂದು ನೀತಿ ಆಯೋಗದ ರಾಷ್ಟ್ರೀಯ ಬಹು ಆಯಾಮಗಳ ಬಡತನ ಸೂಚ್ಯಂಕ (ಎಂಪಿಐ) ವರದಿಯು ಹೇಳಿದೆ.

ಪೋಷಕಾಂಶ, ಶಿಶು ಮತ್ತು ಮಕ್ಕಳ ಮರಣ ಪ್ರಮಾಣ, ಗರ್ಭಿಣಿಯರು ಮತ್ತು ತಾಯಂದಿರ ಆರೋಗ್ಯ, ಶಾಲಾ ಶಿಕ್ಷಣ, ಮಕ್ಕಳ ಹಾಜರಾತಿ, ಅಡುಗೆ ಅನಿಲ ಸಂಪರ್ಕ, ನೈರ್ಮಲ್ಯ, ಕುಡಿಯುವ ನೀರು, ವಸತಿ, ವಿದ್ಯುತ್, ಆಸ್ತಿ ಹಾಗೂ ಬ್ಯಾಂಕ್ ಖಾತೆಯನ್ನು ಸೂಚಕಗಳಾಗಿ ಪರಿಗಣಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ದೇಶದಲ್ಲಿ ವರದಿ ಅನ್ವಯ 2013–14ರಿಂದ 2022–23ರ ಅವಧಿಯಲ್ಲಿ ಒಟ್ಟು 24.82 ಕೋಟಿ ಜನರು ಬಡತನದಿಂದ ಹೊರಕ್ಕೆ ಬಂದಿದ್ದಾರೆ.

ಕರ್ನಾಟಕದ ಬಹು ಆಯಾಮ ಬಡತನ ಪ್ರಮಾಣ



ಕರ್ನಾಟಕದಲ್ಲಿ 2013-14ರಲ್ಲಿ ಶೇ 16.55ರಷ್ಟಿದ್ದ ಬಡತನ ಪ್ರಮಾಣವು 2022–23ರಲ್ಲಿ ಶೇ 5.67ಕ್ಕೆ ಇಳಿಕೆ ಆಗಿದೆ. ಕಳೆದ ಎರಡು ದಶಕಗಳಲ್ಲಿ ರಾಜ್ಯದಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ ಎಂದು ವರದಿ ಹೇಳಿದೆ.

2005-06ರಲ್ಲಿ ಕರ್ನಾಟಕದ ಒಟ್ಟು ಜನಸಂಖ್ಯೆಯ ಶೇ 46.71ರಷ್ಟು ಬಡವರಿದ್ದರು. ಬಡತನದ ಪ್ರಮಾಣವು 2015–16ರಲ್ಲಿ ಶೇ 12.77 ಹಾಗೂ 2019–21ರಲ್ಲಿ ಶೇ 7.58ರಷ್ಟು ಇಳಿಕೆಯಾಗಿದೆ ಎಂದು ವಿವರಿಸಿದೆ.

ಇಳಿಕೆಗೆ ಕಾರಣ ಏನು?: ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಲಕ್ಷಾಂತರ ಜನರ ಜೀವನಮಟ್ಟ ಸುಧಾರಣೆಯಾಗಿರುವುದರಿಂದ ದೇಶದಲ್ಲಿ ಒಂಬತ್ತು ವರ್ಷಗಳ ಅವಧಿಯಲ್ಲಿ 24.82 ಕೋಟಿ ಜನರು ಬಡತನದಿಂದ ಹೊರಬರಲು ಸಾಧ್ಯವಾಗಿದೆ ಎಂದು ವರದಿ ಹೇಳಿದೆ.

ಪೋಷಣ್ ಅಭಿಯಾನ, ರಕ್ತಹೀನತೆ ಮುಕ್ತ ಭಾರತ, ಆಹಾರದ ಭದ್ರತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡಿರುವ ಹಲವು ಅಭಿವೃದ್ಧಿ ಕಾರ್ಯಗಳು ಬಡತನದ ನಿರ್ಮೂಲನೆಗೆ ಸಹಕಾರಿಯಾಗಿವೆ ಎಂದು ವಿಶ್ಲೇಷಿಸಿದೆ.

ದೇಶದ 14 ಲಕ್ಷ ಅಂಗನವಾಡಿ ಕೇಂದ್ರಗಳ ಮೂಲಕ ಸಮರ್ಪಕವಾಗಿ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. 6 ವರ್ಷದೊಳಗಿನ 8.87 ಕೋಟಿ ಮಕ್ಕಳು, 1.1 ಕೋಟಿ ಗರ್ಭಿಣಿಯರು ಮತ್ತು ತಾಯಂದಿರು ಸರ್ಕಾರದ ಆರೋಗ್ಯ ಯೋಜನೆಗಳ ಪ್ರಯೋಜನ ಪಡೆದಿದ್ದಾರೆ ಎಂದು ವಿವರಿಸಿದೆ.

ಉಜ್ವಲ ಯೋಜನೆಯಡಿ ದೇಶದಲ್ಲಿ 10 ಕೋಟಿ ಅಡುಗೆ ಅನಿಲ ಸಿಲಿಂಡರ್ ಸಂಪರ್ಕ ಕಲ್ಪಿಸಲಾಗಿದೆ. ಹೊಗೆ ಮುಕ್ತ ಅಡುಗೆ ಮನೆ ಆಶಯ ಸಾಕಾರಗೊಂಡಿದೆ. ಮಹಿಳೆಯರ ಆರೋಗ್ಯದ ಸುಧಾರಣೆಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದೆ.

ಸ್ವಚ್ಛ ಭಾರತ್ ಮಿಷನ್, ಜಲಜೀವನ್ ಮಿಷನ್‌ನಡಿ ನೈರ್ಮಲ್ಯಕ್ಕೆ ಒತ್ತು ನೀಡಲಾಗಿದೆ. ದೇಶದಲ್ಲಿ 14 ಕೋಟಿ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. 11.33 ಕೋಟಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿದೆ.

ಪ್ರಧಾನ ಮಂತ್ರಿ ಜನಧನ ಯೋಜನೆಯಡಿ 50 ಕೋಟಿಗೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ತೆರೆಯಲಾಗಿದೆ. ಆ ಮೂಲಕ ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಸಹಕಾರಿಯಾಗಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ 4 ಕೋಟಿ ಮನೆಗಳನ್ನು ನಿರ್ಮಿಸಲಾಗಿದೆ ಎಂದು ವಿವರಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	580

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14300	-	181.15 ಸೆಂಟ್ಸ್
ಎಸಿ	-	7,800	-	
ಆರ್‌ಪಿ	-	12,100	-	ಲಂಡನ್
ಆರ್‌ಸಿ	-	7,200	-	3,128 ಡಾಲರ್ಸ್

ಸೆನ್ಸೆಕ್ಸ್, ನಿಫ್ಟಿ ಕುಸಿತ

ಮುಂಬೈ (ಪಿಟಿಐ): ಎಫ್‌ಎಂಸಿಜಿ ಹಾಗೂ ಐ.ಟಿ ಷೇರುಗಳ ಕುಸಿತದಿಂದಾಗಿ ಷೇರುಪೇಟೆಯಲ್ಲಿ ಶನಿವಾರ ಸೂಚ್ಯಂಕಗಳು ಇಳಿಕೆಯ ಹಾದಿ ಹಿಡಿದವು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 259 ಅಂಶ ಕುಸಿತ ಕಂಡು 71,423 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ಸೆನ್ಸೆಕ್ಸ್ ಗುಚ್ಛದಲ್ಲಿ 24 ಕಂಪನಿಗಳ ಷೇರುಗಳು ಕುಸಿದಿವೆ.

50 ಅಂಶ ಇಳಿಕೆ ಕಂಡ ನಿಫ್ಟಿ 21,571 ಅಂಶಗಳಲ್ಲಿ ವಹಿವಾಟನ್ನು ಅಂತ್ಯಗೊಳಿಸಿತು. ಕೋಟಕ್ ಬ್ಯಾಂಕ್, ಪವರ್‌ಗ್ರಿಡ್, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್ ಬ್ಯಾಂಕ್ ಷೇರುಗಳು ಲಾಭ ಕಂಡಿವೆ. ಎಚ್‌ಯುಎಲ್, ಟಿಸಿಎಸ್, ಇಂಡಸ್‌ಇಂಡ್ ಬ್ಯಾಂಕ್, ಎಚ್‌ಸಿಎಲ್ ಷೇರುಗಳು ನಷ್ಟ ಕಂಡಿವೆ. ಎಚ್‌ಯುಎಲ್ ಕಂಪನಿಯ ಷೇರಿನ ಮೌಲ್ಯ ಶೇ 3.72ರಷ್ಟು ಇಳಿಕೆ ಕಂಡಿದೆ.

ರಿಲಯನ್ಸ್ ಷೇರಿನ ಮೌಲ್ಯ ಇಳಿಕೆ

ಮುಂಬೈ (ಪಿಟಿಐ): 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದ ವರದಿ ಬಿಡುಗಡೆ ಬೆನ್ನಲ್ಲೇ ಶನಿವಾರ ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಕುಸಿದಿದೆ. ರಿಲಯನ್ಸ್‌ನ ಒ2ಸಿ (ತೈಲದಿಂದ ರಾಸಾಯನಿಕ ತನಕ) ವಿಭಾಗವು ₹17,265 ಕೋಟಿ ಲಾಭ ಗಳಿಸಿದೆ.

ಸೆನ್ಸೆಕ್ಸ್‌ನ ಆರಂಭಿಕ ವಹಿವಾಟಿನಲ್ಲಿ ಷೇರಿನ ಮೌಲ್ಯ ಶೇ 1.30ರಷ್ಟು ಕುಸಿತ ಕಂಡಿತ್ತು. ಬಳಿಕ ವಹಿವಾಟಿನ ಮುಕ್ತಾಯದ ಹಂತದಲ್ಲಿ ಶೇ 0.80ರಷ್ಟು ಇಳಿಕೆಯಾಗಿದ್ದು, ಷೇರಿನ ಬೆಲೆ ₹2,713.20 ಆಗಿದೆ. ನಿಫ್ಟಿಯಲ್ಲಿ ಷೇರಿನ ಮೌಲ್ಯ ಶೇ 0.69ರಷ್ಟು ಕುಸಿದಿದ್ದು, ಷೇರಿನ ಬೆಲೆ ₹2,716 ಆಗಿದೆ.

ಕೋಟಕ್, ಐಸಿಐಸಿಐ ಲಾಭ ಹೆಚ್ಚಳ

ಮುಂಬೈ (ಪಿಟಿಐ): 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕೋಟಕ್ ಮಹೀಂದ್ರ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಹಾಗೂ ಸರ್ಕಾರಿ ಸ್ವಾಮ್ಯದ ಯೂನಿಯನ್ ಬ್ಯಾಂಕ್ ಇಂಡಿಯಾದ ನಿವ್ವಳ ಲಾಭದಲ್ಲಿ ಏರಿಕೆಯಾಗಿದೆ.

ಕೋಟಕ್ ಮಹೀಂದ್ರ ಬ್ಯಾಂಕ್‌ನ ಲಾಭದಲ್ಲಿ ಶೇ 6.75ರಷ್ಟು ಏರಿಕೆಯಾಗಿದೆ. 2022–23ನೇ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹3,995 ಕೋಟಿ ಲಾಭಗಳಿಸಿತ್ತು. 2023–24ರ ಅವಧಿಯಲ್ಲಿ ₹4,264 ಕೋಟಿಗೆ ಏರಿಕೆಯಾಗಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ವರಮಾನವು ₹10,947 ಕೋಟಿಯಿಂದ ₹14,096 ಕೋಟಿಗೆ ಏರಿಕೆ ಕಂಡಿದೆ. ನಿರ್ವಹಣಾ ವೆಚ್ಚವು ₹3,751 ಕೋಟಿಯಿಂದ ₹4,284 ಕೋಟಿಗೆ ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಸ್ಥಿರವಾಗಿದೆ. 2023ರ ಸೆಪ್ಟೆಂಬರ್‌ನಲ್ಲಿ ನಿವ್ವಳ ಎನ್‌ಪಿಎ ಶೇ 1.72ರಷ್ಟು ಇತ್ತು. ಈ ಅವಧಿಯಲ್ಲಿ ಶೇ 1.73ಕ್ಕೆ ಏರಿಕೆಯಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿ ಅನ್ವಯ ಈ ತ್ರೈಮಾಸಿಕದಲ್ಲಿ ₹190.13 ಕೋಟಿಯನ್ನು ನಿರ್ದಿಷ್ಟ ಉದ್ದೇಶಕ್ಕೆ ಸ್ಥಾಪಿಸಲಾಗುವ ಪರ್ಯಾಯ ಹೂಡಿಕೆ ನಿಧಿಯಲ್ಲಿ (ಎಐಎಫ್) ಹೂಡಿಕೆ ಮಾಡಲಾಗಿದೆ ಎಂದು ತಿಳಿಸಿದೆ.

ಐಸಿಐಸಿಐ ಬ್ಯಾಂಕ್ ಲಾಭ ವೃದ್ಧಿ: ಐಸಿಐಸಿಐ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 25.7ರಷ್ಟು ಹೆಚ್ಚಳವಾಗಿದೆ.

ಹಿಂದಿನ ವರ್ಷದ ತ್ರೈಮಾಸಿಕದಲ್ಲಿ ಬ್ಯಾಂಕ್ ₹8,792.42 ಕೋಟಿ ಆದಾಯ ಗಳಿಸಿತ್ತು. 2023–24ರ ಅವಧಿಯಲ್ಲಿ ₹11,052 ಕೋಟಿಗೆ ಏರಿಕೆಯಾಗಿದೆ. ನಿವ್ವಳ ಬಡ್ಡಿ ವರಮಾನವು ಶೇ 13.4ರಷ್ಟು ಹೆಚ್ಚಾಗಿದೆ. ಬ್ಯಾಂಕ್‌ನ ಠೇವಣಿಗಳ ಬೆಳವಣಿಗೆ ಶೇ.18.7ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ

ಯೂನಿಯನ್ ಬ್ಯಾಂಕ್‌ಗೆ ಶೇ 60 ಲಾಭ

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಲಾಭದಲ್ಲಿ ಶೇ 60ರಷ್ಟು ಏರಿಕೆಯಾಗಿದೆ. 2022–23ನೇ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹2,249 ಕೋಟಿ ಆದಾಯಗಳಿಸಿತ್ತು. 2023–24ರ ಅವಧಿಯಲ್ಲಿ ₹3,590 ಕೋಟಿ ಲಾಭಗಳಿಸಿದೆ.

ಮೂರನೇ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹24,154 ಕೋಟಿಯಿಂದ ₹29,137 ಕೋಟಿಗೆ ಏರಿಕೆಯಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿದ್ದ ಶೇ 7.93ರಿಂದ ಶೇ 4.83ಕ್ಕೆ ಕುಗ್ಗಿದೆ. ನಿವ್ವಳ ಎನ್‌ಪಿಎ ಶೇ 2.4ರಿಂದ ಶೇ 1.08ಕ್ಕೆ ಇಳಿದಿದೆ.

ಕೆಎಸ್‌ಡಿಎಲ್ 21 ಹೊಸ ಉತ್ಪನ್ನ ಬಿಡುಗಡೆ

ಗುಣಮಟ್ಟ ಕಾಯ್ದುಕೊಂಡರಷ್ಟೇ ಲಾಭ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಸಂಸ್ಥೆಗಳ ಜತೆಗೆ ಪೈಪೋಟಿ ನಡೆಸುವಂತಹ ಗುಣಮಟ್ಟ ಕಾಯ್ದುಕೊಂಡರೆ ಸರ್ಕಾರಿ ಸ್ವಾಮ್ಯದ ಎಲ್ಲ ಸಂಸ್ಥೆಗಳೂ ಲಾಭದತ್ತ ಸಾಗಬಹುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಮತ್ತು ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ಸಿದ್ಧಪಡಿಸಿದ ಪ್ರೀಮಿಯಂ ಮೈಸೂರು ಸ್ಯಾಂಡಲ್ ಸಾಬೂನುಗಳು, ಶವರ್ ಜೆಲ್, ಸೋಪ್ ಕಿಟ್, ಹ್ಯಾಂಡ್ ವಾಶ್, ಕುಡಿಯುವ ನೀರಿನ ಬಾಟಲ್ ಸೇರಿದಂತೆ 21 ನೂತನ ಉತ್ಪನ್ನಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕೆಎಸ್‌ಡಿಎಲ್ ಗುಣಮಟ್ಟ ಕಾಪಾಡಿಕೊಳ್ಳುವ ಜತೆಗೆ, ಗ್ರಾಹಕರ ಅಭಿರುಚಿಗೆ ತಕ್ಕಂತೆ ಉತ್ಪನ್ನಗಳನ್ನು ಸಿದ್ಧಗೊಳಿಸುತ್ತಿದೆ. ಹಿಂದಿನ ಹಣಕಾಸು ವರ್ಷದಲ್ಲಿ ₹132 ಕೋಟಿ ಲಾಭ ಮಾಡಿತ್ತು. ಎಂ.ಬಿ. ಪಾಟೀಲರ ಆಸಕ್ತಿ, ಶ್ರಮದ ಫಲವಾಗಿ ಕಳೆದ ಎಂಟು ತಿಂಗಳಲ್ಲಿ ₹182 ಕೋಟಿ ಲಾಭಗಳಿಸಿದೆ ಎಂದು ಶ್ಲಾಘಿಸಿದರು.

ಕೆಎಸ್‌ಡಿಎಲ್ ಉತ್ಪನ್ನಗಳನ್ನು ನಕಲು ಮಾಡುವ ಜಾಲವನ್ನು ಹೈದರಾಬಾದ್‌ನಲ್ಲಿ ಈಚೆಗೆ ಪತ್ತೆ ಮಾಡಲಾಗಿದೆ. ಇಂತಹ ಜಾಲಗಳ ಮೇಲೆ ನಿಗಾ ಇಡಬೇಕು. ಇಲ್ಲದಿದ್ದರೆ ನಿಗಮಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಎಚ್ಚರಿಸಿದರು.

ಬೆಂಗಳೂರಿನಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಎಸ್‌ಡಿಎಲ್ ಸಿದ್ಧಪಡಿಸಿದ ನೂತನ ಉತ್ಪನ್ನಗಳನ್ನು ಬಿಡುಗಡೆ ಮಾಡಿದರು. ಸಚಿವ ಎಂ.ಬಿ. ಪಾಟೀಲ ಇದ್ದರು —ಪ್ರಜಾವಾಣಿ ಚಿತ್ರ

ಕೆಎಸ್‌ಡಿಎಲ್ ಅಧ್ಯಕ್ಷರೂ ಆದ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ನಿಗಮದ ವಹಿವಾಟು ಸದ್ಯಕ್ಕೆ ₹1,400 ಕೋಟಿ ಇದೆ. ಮುಂದಿನ ಎರಡು ವರ್ಷಗಳಲ್ಲಿ ₹3 ಸಾವಿರ ಕೋಟಿ ವಹಿವಾಟಿನ ಗುರಿ ಹೊಂದಲಾಗಿದೆ. ಉತ್ಪಾದನೆಯ ಪ್ರಮಾಣ ಈಗಾಗಲೇ ಶೇ 25ರಷ್ಟು ಹೆಚ್ಚಾಗಿದೆ. ಸುಗಂಧ ಭರಿತ ಉತ್ಪನ್ನಗಳ ತಯಾರಿಕೆ ಶೀಘ್ರ ಆರಂಭವಾಗಲಿದೆ ಎಂದರು.

ಅಮೆರಿಕ, ಯೂರೋಪ್ ಮತ್ತು ದಕ್ಷಿಣ ಆಫ್ರಿಕಾಗಳಲ್ಲೂ ಬೇಡಿಕೆ ಇದೆ. ಅಂತರರಾಷ್ಟ್ರೀಯ ವಹಿವಾಟು ₹25 ಕೋಟಿ ಇದೆ. ಸಂಸ್ಥೆಯ ಉತ್ಪನ್ನಗಳ ನಕಲು ತಡೆಯಲು ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತಿದೆ ಎಂದರು.

ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್, ಸಮಾಲೋಚಕ ರಜನೀಕಾಂತ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಉಪಸ್ಥಿತರಿದ್ದರು.

ನೆತನ್ಯಾಹು ನಿವಾಸದ ಎದುರು ಪ್ರತಿಭಟನೆ

ಜೆರುಸಲೇಂ (ಎಪಿ): ಹಮಾಸ್ ಬಂಡುಕೋರರು ಒತ್ತೆಯಾಳಾಗಿ ಇರಿಸಿಕೊಂಡಿರುವವರ ಬಿಡುಗಡೆಗೆ ಆಗ್ರಹಿಸಿ ಅವರ ಸಂಬಂಧಿಕರು ಶನಿವಾರ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ನಿವಾಸದ ಎದುರು ಪ್ರತಿಭಟನೆ ನಡೆಸಿದರು.

‘100ಕ್ಕೂ ಹೆಚ್ಚು ಜನರನ್ನು ಹಮಾಸ್ ಒತ್ತೆಯಾಳಾಗಿ ಇರಿಸಿಕೊಂಡಿದ್ದು, ಅವರ ಬಿಡುಗಡೆಗೆ ಇಸ್ರೇಲ್ ಸರ್ಕಾರ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಿಲ್ಲ’ ಎಂದು ತಮ್ಮ ಆಕ್ರೋಶವನ್ನು ಹೊರಹಾಕಿದರು.

‘105 ದಿನಗಳಿಂದ ಗೋಗರೆಯುತ್ತಿದ್ದೇವೆ. ಈಗಲಾದರೂ ಸರ್ಕಾರ ಮುಂದಾಳತ್ವ ವಹಿಸಿ, ಒತ್ತೆಯಾಳುಗಳ ಬಿಡುಗಡೆಗೆ ದಿಟ್ಟ ಹೆಜ್ಜೆ ಇಡಬೇಕು’ ಎಂದು ಸಂಬಂಧಿಕರು ಕೋರಿದರು.

ಹಮಾಸ್ ಬಂಡುಕೋರರು ಅ. 7ರಂದು ಇಸ್ರೇಲ್ ಮೇಲೆ ಹಠಾತ್ ದಾಳಿ ನಡೆಸಿದ್ದು, ಈ ವರೆಗೆ 1,200ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು ಮತ್ತು 250ಕ್ಕೂ ಹೆಚ್ಚು ಜನರನ್ನು ಹಮಾಸ್ ಒತ್ತೆಯಾಳಾಗಿ ಇರಿಸಿಕೊಂಡಿದೆ.

ಸೋಮಶೇಖರ್ ರಾಜ್ಯಸಭೆ ಹೆಚ್ಚುವರಿ ಕಾರ್ಯದರ್ಶಿ

ನವದೆಹಲಿ: ರಾಜ್ಯಸಭೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ ಕನ್ನಡಿಗ ಅಧಿಕಾರಿ ಕೆ.ಎಸ್. ಸೋಮಶೇಖರ್ ಅವರನ್ನು ನೇಮಕ ಮಾಡಲಾಗಿದೆ.

ಕೋಲಾರದ ಶ್ರೀನಿವಾಸಪುರದವರಾದ ಇವರು ರಾಜ್ಯಸಭೆಯ ಇಂಟರ್‌ಪ್ರಿಟರ್ (ಏಕಕಾಲಿಕ ವ್ಯಾಖ್ಯಾನಕಾರ) ಆಗಿ 1993ರಲ್ಲಿ ಸೇವೆಗೆ ಸೇರಿದ್ದರು. ಹೆಚ್ಚುವರಿ ಕಾರ್ಯದರ್ಶಿ ಹುದ್ದೆಗೆ ಏರಿದ ಮೊದಲ ಕನ್ನಡಿಗ ಅಧಿಕಾರಿ. ಈ ಮೊದಲು ರಾಜ್ಯಸಭೆಯ ನಿರ್ದೇಶಕರಾಗಿದ್ದರು.

ಈ ಹಿಂದೆ ಕೇಂದ್ರದ ರೈಲ್ವೆ ಹಾಗೂ ಜವಳಿ ಸಚಿವರ ಆಪ್ತ ಕಾರ್ಯದರ್ಶಿಯಾಗಿದ್ದರು. ಕರ್ನಾಟಕ ರಾಜ್ಯ ಸೇವೆಗೆ ನಿಯೋಜನೆಯಲ್ಲಿ ಬಂದಿದ್ದ ಅವರು, ಪರಮೇಶ್ವರ ಉಪಮುಖ್ಯಮಂತ್ರಿಯಾಗಿದ್ದ ವೇಳೆ ವಿಶೇಷ ಕರ್ತವ್ಯ ಅಧಿಕಾರಿಯಾಗಿದ್ದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕಾರ್ಯದರ್ಶಿಯಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಗಣರಾಜ್ಯೋತ್ಸವ: ಸೇನೆ ಪರೇಡ್‌ನಲ್ಲಿ ದಂಪತಿ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ಅಂಗವಾಗಿ ಜನವರಿ 26ರಂದು ಕರ್ತವ್ಯಪಥದಲ್ಲಿ ನಡೆಯುವ ಪಥಸಂಚಲನದಲ್ಲಿ ಮೇಜರ್ ಜೆರ್ರಿ ಬ್ಲೈಜ್ ಮತ್ತು ಕ್ಯಾಪ್ಟನ್ ಸುಪ್ರೀತಾ ಸಿ.ಟಿ ದಂಪತಿ ಎರಡು ಪ್ರತ್ಯೇಕ ತಂಡಗಳ ಸದಸ್ಯರಾಗಿ ಭಾಗಿಯಾಗಲಿದ್ದಾರೆ.

‘ದಂಪತಿ ಭಾಗಿಯಾಗುತ್ತಿರುವುದು ಗಣರಾಜ್ಯೋತ್ಸವ ಪಥಸಂಚಲನದ ಇತಿಹಾಸದಲ್ಲಿಯೇ ಮೊದಲು’ ಎಂದು ಮೇಜರ್ ಬ್ಲೈಜ್ ತಿಳಿಸಿದರು.

‘ಇದು ಕಾಕತಾಳೀಯ ಅಷ್ಟೇ. ಮೊದಲಿಗೆ ನಾನು ಪಥಸಂಚಲನದಲ್ಲಿ ಭಾಗಿಯಾಗಲು ಆಯ್ಕೆಯಾದೆ, ಬಳಿಕ ಪತಿಯೂ ಆಯ್ಕೆಯಾದರು’ ಎಂದು ಸುಪ್ರೀತಾ ತಿಳಿಸಿದರು.

ಸುಪ್ರೀತಾ ಅವರು ಕರ್ನಾಟಕದ ಮೈಸೂರಿನವರು. ಇಲ್ಲಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ. ಮೇಜರ್ ಬ್ಲೈಜ್ ಅವರು ತಮಿಳುನಾಡಿನ ವೆಲ್ಲಿಂಗ್ಟನ್‌ನವರು. ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿದ್ದಾರೆ. ಜೂನ್ 2023ರಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟಿರುವ ದಂಪತಿ ಸದ್ಯ ದೆಹಲಿಯಲ್ಲಿ ನೆಲೆಸಿದ್ದಾರೆ.

ಬ್ಲೈಜ್ ಅವರು ಮದ್ರಾಸ್ ರೆಜಿಮೆಂಟ್‌ನಲ್ಲಿ ಕರ್ತವ್ಯದಲ್ಲಿದ್ದಾರೆ. ಸುಪ್ರೀತಾ ಅವರು ಸೇನೆಯ ಪೊಲೀಸ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮೇಜರ್ ಜೆರ್ರಿ ಬ್ಲೈಜ್, ಕ್ಯಾಪ್ಟನ್ ಸುಪ್ರೀತಾ ಸಿ.ಟಿ

ನಟಿ ರಶ್ಮಿಕಾ ಡೀಪ್‌ಫೇಕ್ ವಿಡಿಯೊ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ರಶ್ಮಿಕಾ ಮಂದಣ್ಣ

ನವದೆಹಲಿ: ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊ ಸೃಷ್ಟಿಸಿದ ಆರೋಪದ ಮೇರೆಗೆ ಆಂಧ್ರ ಪ್ರದೇಶದ 24 ವರ್ಷದ ಬಿ.ಟೆಕ್ ಪದವೀಧರನನ್ನು ದೆಹಲಿ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಗುಂಟೂರಿನ ಈಮನಿ ನವೀನ್ ಎಂಬಾತ ಬಂಧಿತನಾಗಿದ್ದು, ರಶ್ಮಿಕಾ ಅವರ ಫ್ಯಾನ್‌ಪೇಜ್‌ನ ಫಾಲೋವರ್‌ಗಳ ಸಂಖ್ಯೆ ಹೆಚ್ಚಿಸಲು ಈ ಕೃತ್ಯ ಎಸಗಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಇನ್‌ಸ್ಟಾಗ್ರಾಮ್ ಚಾನೆಲ್‌ಗಳ ಪ್ರಚಾರದಂತಹ ಸೇವೆಗಳನ್ನು ಒದಗಿಸುವ ಕೆಲಸವನ್ನು ಮನೆಯಿಂದಲೇ ನಿರ್ವಹಿಸುತ್ತಿದ್ದ ಈಮನಿ ನವೀನ್, ಡೀಪ್‌ಫೇಕ್ ವಿಡಿಯೊ ಪ್ರಕರಣ ದಾಖಲಾದ ಮೂರು ತಿಂಗಳ ಬಳಿಕ ಪೊಲೀಸರ ಬಲೆಗೆ ಬಿದ್ದಿದ್ದಾನೆ.

ಬ್ರಿಟನ್‌ನ ಸಾಮಾಜಿಕ ಮಾಧ್ಯಮ ಇನ್‌ಫ್ಲುಯೆನ್ಸರ್‌ನಲ್ಲಿ ಬ್ರಿಟಿಷ್- ಭಾರತೀಯ ಯುವತಿಯೊಬ್ಬರು ಕಳೆದ ವರ್ಷದ ಅಕ್ಟೋಬರ್ 9ರಂದು ತಮ್ಮ ವಿಡಿಯೊ ಹಂಚಿಕೊಂಡಿದ್ದರು. ಈ ಮೂಲ ವಿಡಿಯೊಗೆ ರಶ್ಮಿಕಾ ಅವರ ಮುಖವನ್ನು ಜೋಡಿಸಿ ಡೀಪ್‌ಫೇಕ್ ವಿಡಿಯೊ ತಯಾರಿಸಿದ ಆರೋಪಿ, ಮೂರು ದಿನಗಳ ಬಳಿಕ ಅದನ್ನು ಇನ್‌ಸ್ಟಾಗ್ರಾಮ್ ಚಾನೆಲ್‌ನಲ್ಲಿ ಪೋಸ್ಟ್ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ನಟಿಯ ಅಭಿಮಾನಿ: ‘ಆರೋಪಿ ನವೀನ್, ನಟಿ ರಶ್ಮಿಕಾ ಅವರ ದೊಡ್ಡ ಅಭಿಮಾನಿ. ಈತ ಮೂವರು ಸೆಲೆಬ್ರಿಟಿಗಳ ಫ್ಯಾನ್‌ಪೇಜ್‌ಗಳನ್ನು ನಿರ್ವಹಿಸುತ್ತಿದ್ದಾನೆ. ಡೀಪ್‌ಫೇಕ್ ವಿಡಿಯೊ ಅಪ್ಲೋಡ್ ಮಾಡುವುದಕ್ಕೂ ಮುನ್ನ ಈತ ಮೂಲ ವಿಡಿಯೊಗಳನ್ನೇ ಅಪ್ಲೋಡ್ ಮಾಡಿದ್ದಾನೆ’ ಎಂದು ದೆಹಲಿಯ ಡಿಸಿಪಿ (ವಿಶೇಷ ಘಟಕ–ಗುಪ್ತಚರ) ಹೇಮಂತ್ ತಿವಾರಿ ಮಾಹಿತಿ ನೀಡಿದರು.

‘ತಾನು ನಡೆಸುತ್ತಿದ್ದ ಸೆಲೆಬ್ರಿಟಿಗಳ ಫ್ಯಾನ್‌ಪೇಜ್‌ಗಳ ಪೈಕಿ ಇಬ್ಬರು ನಟಿಯರದ್ದಕ್ಕೆ ಲಕ್ಷಕ್ಕೂ ಹೆಚ್ಚು ಫಾಲೋವರ್‌ಗಳಿದ್ದಾರೆ. ಆದರೆ, ರಶ್ಮಿಕಾ ಅವರ ಫಾಲೋವರ್ ಸಂಖ್ಯೆ 90 ಸಾವಿರ ಇತ್ತು. ಹೀಗಾಗಿ ರಶ್ಮಿಕಾ ಅವರ ಫ್ಯಾನ್‌ಪೇಜ್‌ನ ಅಭಿಮಾನಿಗಳ ಸಂಖ್ಯೆಯನ್ನು ಹೆಚ್ಚಿಸಲು ಆತ ಈ ಕೃತ್ಯ ಎಸಗಿದ್ದಾನೆ’ ಎಂದು ಅವರು ಹೇಳಿದರು.

‘ನಟಿಯ ಡೀಪ್‌ಫೇಕ್ ವಿಡಿಯೊ ಅನ್ನು ಈತ ಅಕ್ಟೋಬರ್ 13ರಂದು ಅಪ್ಲೋಡ್ ಮಾಡಿದ್ದ. ಆದಾದ ಎರಡು ವಾರಗಳಲ್ಲಿಯೇ ಈ ಫ್ಯಾನ್‌ಪೇಜ್‌ನ ಫಾಲೋವರ್ ಸಂಖ್ಯೆ 90 ಸಾವಿರದಿಂದ 1.08 ಲಕ್ಷಕ್ಕೆ ಏರಿತ್ತು’ ಎಂದು ಅವರು ಮಾಹಿತಿ ನೀಡಿದರು.

‘ಡೀಪ್‌ಫೇಕ್ ವಿಡಿಯೊ ಕುರಿತ ವಿವಾದ ರಾಷ್ಟ್ರಮಟ್ಟದಲ್ಲಿ ಧ್ವನಿಸಿ, ಪ್ರಸಿದ್ಧ ನಟರು, ಖ್ಯಾತನಾಮರು ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳನ್ನು ವ್ಯಕ್ತಪಡಿಸಿದ ಬಳಿಕ ಆತಂಕಕ್ಕೆ ಒಳಗಾದ ಆರೋಪಿ ನವೀನ್, ತನ್ನ ಇನ್‌ಸ್ಟಾಗ್ರಾಮ್ ಚಾನೆಲ್‌ನ ಪೋಸ್ಟ್‌ಗಳನ್ನು ಅಳಿಸಿದ ಹಾಗೂ ಚಾನೆಲ್ ಹೆಸರನ್ನು ಬದಲಿಸಿದ. ಅಲ್ಲದೆ ತನ್ನ ಡಿವೈಸ್‌ನಲ್ಲಿದ್ದ ಡಿಜಿಟಲ್ ದತ್ತಾಂಶವನ್ನೂ ಅಳಿಸಿಹಾಕಿದ್ದಾನೆ’ ಎಂದು ಅವರು ವಿವರಿಸಿದರು.

500ಕ್ಕೂ ಹೆಚ್ಚು ಖಾತೆಗಳ ಪರಿಶೀಲನೆ: ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ಸಾಮಾಜಿಕ ಮಾಧ್ಯಮಗಳ 500ಕ್ಕೂ ಹೆಚ್ಚು ಖಾತೆಗಳನ್ನು ಪರಿಶೀಲಿಸಿ, ಹಲವರನ್ನು ವಿಚಾರಣೆಗೆ ಒಳಪಡಿಸಿದ ಬಳಿಕ ನವೀನ್ ಅವರನ್ನು ಬಂಧಿಸಿದ್ದಾರೆ.

ಚೆನ್ನೈನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಟೆಕ್ ಪದವಿ ಪಡೆದಿರುವ ಈತ ಗೂಗಲ್ ಗ್ಯಾರೇಜ್‌ನಿಂದ ಡಿಜಿಟಲ್ ಮಾರ್ಕೆಂಟಿಂಗ್ ಕೋರ್ಸ್ ಅನ್ನು ಪೂರ್ಣಗೊಳಿಸಿದ್ದಾನೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಬೈಯಿಂಗ್

Sites

Kempegowda Layout

WANTED COMERCIAL or Residential BDA Site Genuine Sellers immediately Settlement in KempeGowda Layout. Contact: 9986447735

ಉದ್ಯೋಗಾವಕಾಶ

General

ಕೂಡಲೇ ಬೇಕಾಗಿದ್ದಾರೆ: ಮಂಗಳೂರಿನಲ್ಲಿ ಅಡುಗೆ ಮತ್ತು ಮನೆಕೆಲಸಕ್ಕೆ ಅನುಭವಸ್ಥ ಮಹಿಳೆ. ಉಳಕೊಳ್ಳುವವರಿಗೆ ಆದ್ಯತೆ. Ph: 9632620237

Wanted

ಭದ್ರತಾ ಸಿಬ್ಬಂದಿ, ಭದ್ರತಾ ಮೇಲ್ವಿಚಾರಕರು, ವಾಹನ ಚಾಲನೆ ಜೊತೆಗೆ ಭದ್ರತಾ ಕೆಲಸ ಮಾಡುವವರು ಹುಮನಾಬಾದ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. 8 ಗಂಟೆಯ ಕೆಲಸ. ತಿಂಗಳಿಗೆ 4 ವಾರದ ರಜೆ.ವೇತನ: ರೂ.17,900 ರಿಂದ 20,900ರ ವರೆಗೆ. ಫೋನ್: 8019443600, 6309665988

ITI FRESHERS ಬೇಕಾಗಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡಲು ಸುವರ್ಣಾವಕಾಶ. Mobile: 9916664549- Harish, 9482690555- Uday Kumar Email : kamadhenucncsolutions@gmail.com

ಬೇಕಾಗಿದ್ದಾರೆ: ಮಂಗಳೂರಿನ ಸ್ಟೀಲ್ ಪ್ಲಾಂಟ್ ಗೆ ಮ್ಯಾನ್ ಪವರ್ ಲೇಬರ್(ಹೆಲ್ಪರ್ಸ್) ವಾರದ ರಜೆ, ಊಟ, ವಸತಿಯುಚಿತ. ಪಿಎಫ್, ಬೋನಸ್ ಸೌಲಭ್ಯವಿದೆ. 9353479116, 9362128458

ಭವಿಷ್ಯ

Astrology

★ಮಹಾಮಾಂತ್ರಿಕ ಜ್ಯೋತಿಷ್ಯ★ ವಿದ್ವಾನ್.ಗುರು ಶ್ರೀ.ದೇವಾನಂದ್ ರವರಿಂದ ಅಂಡ,ಪಿಂಡ,ಬ್ರಹ್ಮಾಂಡದ 100008 ಅತೀಂದ್ರಿಯ 888 ಚಾರಣಮಾರಣ ಸಂಮೋಹನ ಸ್ತಂಭನ,ವಶೀಕರಣ,ಉಚ್ಛಾಟನಾ ಕ್ರಿಯಾಕರ್ಮಗಳಿಂದ ಸಂಸಾರಿಕ ವೈಯಕ್ತಿಕ,ಆರ್ಥಿಕ,ಆರೋಗ್ಯ ಸಂಬಂಧಿಕ ಕರ್ಮಗಳ ಇಂದೇ ಪರಿಹಾರಕ್ಕೆ ಸಂಪರ್ಕಿಸಿ:9845005009

ಇತರೆ

Medical

ಸಂಪೂರ್ಣ ಉಚಿತ ಶಿಬಿರ. ದಿನಾಂಕ 19/01/2024 ರಿಂದ 31 /01/2024 ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು. ಮೊಬೈಲ್: 9019626612. ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ.

ವೈವಾಹಿಕ

Grooms Wanted

Brahmin

ಬ್ರಾಹ್ಮಣ/ ಲಿಂಗಾಯತ ವಧು, ವಯಸ್ಸು 27, SSLC ಕಲಿತಿರುವ/ ವಯಸ್ಸು 30, PUC/ ವಯಸ್ಸು 34, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. 7338276199

ಪ್ರವಾಸ

Travel

ವಿಮಾನ/ A/C ಬಸ್ಸಿನಲ್ಲಿ 05.02.2024 ರಿಂದ 11 ದಿನಗಳು ಉಜ್ಜಯಿನಿ ನಿಷ್ಕಳಂಕ ಮಹಾದೇವ ಸರ್ದಾರ್ ವಲ್ಲಭಾಯ್ ಪಟೇಲರ ಪ್ರತಿಮೆ ಸೋಮನಾಥ್ ದ್ವಾರಕ ಇತ್ಯಾದಿ. 05.02.2024 ರಿಂದ 8 ದಿನಗಳು ಕಾಶಿ,ಗಯಾ,ಅಲಹಾಬಾದ್ ಅಯೋಧ್ಯ,ನೈಮಿಶಾರಣ್ಯ ಸಂಪರ್ಕಿಸಿ: ಅನಿತಾ ಟ್ರಾವಲ್ಸ್ ಶೇಷಾದ್ರಿಪುರ, ಬೆಂಗಳೂರು20. 9448602641 7760884305

Holiday Package Tours

ರಾಮಕಮಲ್ ಟೂರಿಸಮ್ 25.01.2024 ಮಧುರೈ, ರಾಮೇಶ್ವರ, ಕನ್ಯಾಕುಮಾರಿ, 23.02.2024 ಕಾಶಿ, ಪ್ರಯಾಗರಾಜ್, ಅಯೋಧ್ಯೆ, 8.02.2024 ಅಹೋಬಲ, ಮಂತ್ರಾಲಯ, ಶ್ರೀಶೈಲ. 9481226296

Pilgrimage Tours

★ಆರ್.ಗಾಂಧಿ ಟೂರ್ಸ್★ 1.02.2024 13ದಿನಗಳು ಕಾಶಿ ಹರಿದ್ವಾರ, 9ದಿನಗಳು ಆಂಧ್ರ ಭದ್ರಾಚಲಂ. 22.02.2024 10ದಿನಗಳು ಗುಜರಾತ್ ಉಜ್ಜೈನ್,ಓಂಕಾರೇಶ್ವರ. 9945445809/ 9902433500

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!

ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

... ಸವಿನೆನಪು ...

ಶ್ರೀ ಡಿ. ಕೃಷ್ಣಾರೆಡ್ಡಿ ಮತ್ತು ಶ್ರೀಮತಿ ಅಮರಾವತಮ್ಮ

ದೊಮ್ಮಲೂರು, ಬೆಂಗಳೂರು

ನಿಧನ: 21-1-1992 ನಿಧನ 12-7-2007

ನಿಮ್ಮ ಪ್ರೀತಿ, ಆದರ್ಶಗಳೇ ನಮ್ಮ ಜೀವನಕ್ಕೆ ದಾರಿದೀಪ, ನಿಮ್ಮಗಳ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ

ಕೆ. ಹೇಮಾರೆಡ್ಡಿ,
ಎಚ್. ಸುನಿಲ್‌ಕುಮಾರ್ ಮತ್ತು ದೀಕ್ಷಾ ಎಂ.,
ರಿಯಾ ಎಸ್. ರೆಡ್ಡಿ, ಮಾ॥ ದಕ್ಷ್.ಎಸ್.,
ಎಚ್.ಭರತ್ ಮತ್ತು ಕಾವ್ಯ,
ಎಚ್. ಶೋಭ ಮತ್ತು ಡಾ॥ ವಿ.ರಾಜೀವ್ ಎಂ.ಡಿ.,
ಆರ್. ಪ್ರಣವ್ ಸ್ವರೂಪ್, ಆರ್. ಹರಿತ್ರ ರೆಡ್ಡಿ
ಹಾಗೂ ಬಂಧು-ಮಿತ್ರರು

ವೈಕುಂಠ ಸಮಾರಾಧನೆ

ಶ್ರೀ ಎನ್. ಹನುಮಪ್ಪ

ನಿವೃತ್ತ ಮುಖ್ಯೋಪಾಧ್ಯಾಯರು M.Sc, M.A, M.Ed

08-02-1930 - 14.01.2024

ದಿ॥ 25-01-2024, ಗುರುವಾರ ಮಧ್ಯಾಹ್ನ 12:30ಕ್ಕೆ

ಸ್ಥಳ: ಹಂಪಿನಗರ, ಬೆಂಗಳೂರು-560104

ಇಂತಿ ದುಃಖತಪ್ತರು:

ಶ್ರೀಮತಿ ಬಿ.ಸಿ.ಹೊನ್ನಮ್ಮ ಮತ್ತು ಕುಟುಂಬ

LOOKING FOR JOB OPPORTUNITY

Refer Classifieds on Wednesday

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ರಣಜಿ ಕ್ರಿಕೆಟ್: ಪ್ರವಾಸಿ ಗೋವಾ ತಂಡದ ವಿರುದ್ಧ ಇನಿಂಗ್ಸ್ ಮುನ್ನಡೆಯತ್ತ ಕರ್ನಾಟಕ

ಮಯಂಕ್– ಪಡಿಕ್ಕಲ್ ಜುಗಲ್‌ಬಂದಿ

• ಆರ್.ಜಿತೇಂದ್ರ

ಮೈಸೂರು: ನಾಯಕ ಮಯಂಕ್ ಅಗರವಾಲ್ (114, 178ಎ, 4X10) ಹಾಗೂ ದೇವದತ್ತ ಪಡಿಕ್ಕಲ್ (103, 144 ಎ, 4X13) ಶನಿವಾರ ಮಾನಸ ಗಂಗೋತ್ರಿಯಲ್ಲಿ ಸೇರಿದ್ದ ಕ್ರಿಕೆಟ್ ಪ್ರಿಯರಿಗೆ ರಸದೌತಣ ಉಣಬಡಿಸಿದರು. ಅವರಿಬ್ಬರ ಜೊತೆಯಾಟದಿಂದ ಕರ್ನಾಟಕ ತಂಡವು ಮೊದಲ ಇನಿಂಗ್ಸ್ ಮುನ್ನಡೆಯ ಸನಿಹ ಸಾಗಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟೂರ್ನಿಯ ಸಿ ಗುಂಪಿನ ಪಂದ್ಯದ ಎರಡನೇ ದಿನವಾದ ಶನಿವಾರ ಈ ಇಬ್ಬರೂ ಗೋವಾ ಎದುರು ಶತಕಗಳ ಮೂಲಕ ಸೊಗಸಾದ ಇನಿಂಗ್ಸ್ ಕಟ್ಟಿದರು.

204 ನಿಮಿಷಗಳ ಕಾಲ ಜೊತೆಯಾಗಿ ಕ್ರೀಸ್‌ನಲ್ಲಿದ್ದ ಈ ಜೋಡಿಯು ಎರಡನೇ ವಿಕೆಟ್‌ಗೆ 298 ಎಸೆತಗಳಲ್ಲಿ 211 ರನ್ ಕಲೆಹಾಕಿತು. ಮೊದಲ ಇನಿಂಗ್ಸ್‌ನಲ್ಲಿ ಗೋವಾದ 321 ರನ್‌ಗಳಿಗೆ ಪ್ರತಿಯಾಗಿ ದಿನದಂತ್ಯಕ್ಕೆ ಕರ್ನಾಟಕ 4 ವಿಕೆಟ್‌ಗೆ 253 ರನ್ ಗಳಿಸಿದ್ದು, 68 ರನ್‌ಗಳ ಹಿನ್ನಡೆಯಲ್ಲಿದೆ. ಗೋವಾ ತಂಡವು ಎರಡನೇ ದಿನದ ಕಡೆಯ ಅವಧಿಯಲ್ಲಿ 3 ವಿಕೆಟ್ ಉರುಳಿಸುವ ಮೂಲಕ ತಿರುಗೇಟು ನೀಡುವ ಪ್ರಯತ್ನ ಮಾಡಿತು.

ಸೊಗಸಾದ ಜೊತೆಯಾಟ: ಹುಬ್ಬಳ್ಳಿಯಲ್ಲಿ ಪಂಜಾಬ್ ವಿರುದ್ಧ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 193 ರನ್ ಗಳಿಸಿದ್ದ ಪಡಿಕ್ಕಲ್ ಮೈಸೂರಿನಲ್ಲೂ ಶತಕ ದಾಖಲಿಸಿದರು.

ಆರಂಭದಿಂದಲೂ ಆಕ್ರಮಣಕಾರಿ ಆಟವಾಡಿದ ಅವರು, 52ನೇ ಓವರ್‌ನಲ್ಲಿ ಅರ್ಜುನ್ ತೆಂಡೂಲ್ಕರ್ ಎಸೆತದಲ್ಲಿ ಎರಡು ರನ್ ಗಳಿಸುವ ಮೂಲಕ ಶತಕ ಪೂರೈಸಿದರು. ಎರಡೂ ಕೈ ಮೇಲಕ್ಕೆತ್ತಿ ಬ್ಯಾಟ್ ಬೀಸಿ ಸಂಭ್ರಮಿಸಿದರು. 137 ಎಸೆತಗಳಲ್ಲಿ ಈ ಶತಕ ಮೂಡಿಬಂತು.

ಆದರೆ ಮರು ಓವರ್‌ನಲ್ಲೇ ಮೋಹಿತ್ ರೆಡಕರ್ ಎಸೆತದಲ್ಲಿ ಸ್ಲಿಪ್‌ನಲ್ಲಿದ್ದ ದರ್ಶನ್ ಮಿಸಾಳ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ಹೋದ ವಾರ ಅಹಮದಾಬಾದ್‌ನಲ್ಲಿ ಗುಜರಾತ್ ವಿರುದ್ಧದ ಮೊದಲ ಇನಿಂಗ್ಸ್‌ನಲ್ಲಿ ಶತಕ ಸಿಡಿಸಿದ್ದ ಮಯಂಕ್ ಇಲ್ಲಿಯೂ ತಮ್ಮ ಉತ್ತಮ ಫಾರ್ಮ್ ಮುಂದುವರಿಸಿದರು. ಒಂದೆಡೆ ಪಡಿಕ್ಕಲ್ ಅಬ್ಬರಿಸುತ್ತಿದ್ದರೆ, ಮತ್ತೊಂದೆಡೆ ನಾಯಕ ತಾಳ್ಮೆಯಿಂದ ಆಡಿದರು. ಕ್ರಮೇಣ ರನ್ ಗತಿ ಹೆಚ್ಚಿಸಿಕೊಂಡರು.

ಗೋವಾ ಎದುರಿನ ರಣಜಿ ಪಂದ್ಯದಲ್ಲಿ ಶನಿವಾರ 211 ರನ್‌ಗಳ ಜೊತೆಯಾಟದದಲ್ಲಿ ಭಾಗಿಯಾದ ಮಯಂಕ್ ಅಗರವಾಲ್ ಹಾಗೂ ದೇವದತ್ತ ಪಡಿಕ್ಕಲ್ ಪ್ರಜಾವಾಣಿ ಚಿತ್ರ/ಅನೂಪ್ ರಾಘು .ಟಿ.

243 ನಿಮಿಷ ಕ್ರೀಸ್‌ನಲ್ಲಿದ್ದ ಅವರು, 161 ಎಸೆತಗಳಲ್ಲಿ 9 ಬೌಂಡರಿ ಸಹಿತ ಶತಕ ಪೂರೈಸಿದರು.

58ನೇ ಓವರ್‌ನಲ್ಲಿ ದರ್ಶನ್ ಮಿಸಾಳ್ ಓವರ್‌ನಲ್ಲಿ ಪಾಯಿಂಟ್‌ನಲ್ಲಿ ಈಶಾನ್ ಗಡೇಕರ್‌ಗೆ ಕ್ಯಾಚಿತ್ತು ನಿರ್ಗಮಿಸಿದಾಗ ಮೈದಾನದಲ್ಲಿ ತುಂಬ ಚಪ್ಪಾಳೆ ಸದ್ದು ಪ್ರತಿಧ್ವನಿಸಿತು.

ಮನೀಷ್ ಪಾಂಡೆ ಶುಕ್ರವಾರ ಫೀಲ್ಡಿಂಗ್ ವೇಳೆ ಕೈಗೆ ಗಾಯ ಮಾಡಿಕೊಂಡಿದ್ದು, ಸದ್ಯ ಹೊಲಿಗೆ ಹಾಕಿರುವ ಕಾರಣ ಬ್ಯಾಟಿಂಗ್‌ಗೆ ಬರಲಿಲ್ಲ. ಮಯಂಕ್–ಪಡಿಕ್ಕಲ್ ಹೊರತುಪಡಿಸಿ ಕರ್ನಾಟಕದ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಬರಲಿಲ್ಲ. ಆರಂಭಿಕ ಡಿ. ನಿಶ್ಚಲ್ (16) ದರ್ಶನ್ ಮಿಸಾಳ್ ಹಾಕಿದ ಆರನೇ ಓವರ್‌ನ ಮೊದಲ ಎಸೆತದಲ್ಲಿ ಸ್ವಲ್ಪ ಅಂತರದಲ್ಲಿ ರನೌಟ್‌ನಿಂದ ಪಾರಾದರು. ಆದರೆ ಮರುಎಸೆತದಲ್ಲೇ ಎಲ್‌ಬಿಡಬ್ಲ್ಯು ಆಗಿ ನಿರ್ಗಮಿಸಿದರು.

ಆಲ್‌ರೌಂಡರ್ ಎ.ಸಿ. ರೋಹಿತ್ ಕುಮಾರ್ (2) ಬಂದಷ್ಟೇ ವೇಗವಾಗಿ ನಿರ್ಗಮಿಸಿದರು. ದಿನದಂತ್ಯಕ್ಕೆ ಉಪನಾಯಕ ನಿಕಿನ್ ಜೋಸ್ (3) ಹಾಗೂ ವಿಕೆಟ್ ಕೀಪರ್ ಎಸ್. ಶರತ್ ಕ್ರೀಸ್‌ನಲ್ಲಿದ್ದಾರೆ.

ಅರ್ಜುನ್ ಅರ್ಧಶತಕ: ಶುಕ್ರವಾರ ಕ್ರೀಸ್‌ನಲ್ಲಿ ಉಳಿದಿದ್ದ ಅರ್ಜುನ್ ತೆಂಡೂಲ್ಕರ್ (52) ಹಾಗೂ ಹೇರಂಭ ಪರಬ್ (53) ಜೋಡಿಯು ಶನಿವಾರ ಮುಂಜಾನೆ ಇನಿಂಗ್ಸ್ ಮುಂದುವರಿಸಿದ್ದು, ಒಟ್ಟಾರೆ 93 ರನ್ ಜೊತೆಯಾಟದ ಮೂಲಕ ಕರ್ನಾಟಕದ ಬೌಲರ್‌ಗಳನ್ನು ಕಾಡಿತು.

ಒಂದೂವರೆ ಗಂಟೆ ಕಾಲ ಕ್ರೀಸ್‌ನಲ್ಲಿದ್ದ ಜೋಡಿಯು ವೇಗವಾಗಿ ರನ್ ಗಳಿಕೆ ಮೂಲಕ ಸ್ಕೋರ್ ಹೆಚ್ಚಿಸುವತ್ತ ಗಮನ ನೀಡಿತು. ಇನಿಂಗ್ಸ್‌ನ 109ನೇ ಓವರ್‌ನಲ್ಲಿ ಸ್ಥಳೀಯ ಪ್ರತಿಭೆ ಎಂ. ವೆಂಕಟೇಶ್ ಹೇರಂಭ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. ನಂತರದ ಓವರ್‌ನಲ್ಲಿ ಅರ್ಜುನ್ ವಿಕೆಟ್ ಪಡೆಯುವ ಮೂಲಕ ಗೋವಾ ಇನಿಂಗ್ಸ್‌ಗೆ ಮಂಗಳ ಹಾಡಿದರು.

ಅರ್ಜುನ್–ನಿಶ್ಚಲ್‌ಗೆ ಸಮನ್ಸ್

ಮೈದಾನದಲ್ಲಿ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಗೋವಾ ಆಲ್‌ರೌಂಡರ್ ಅರ್ಜುನ್ ತೆಂಡೂಲ್ಕರ್ ಹಾಗೂ ಕರ್ನಾಟಕದ ಬ್ಯಾಟರ್ ಡಿ. ನಿಶ್ಚಲ್‌ಗೆ ಪಂದ್ಯದ ರೆಫ್ರಿ ಅರಿಂದಮ್ ಸರ್ಕಾರ್ ಸಮನ್ಸ್ ನೀಡಿದರು ಎಂದು ಮೂಲಗಳು ತಿಳಿಸಿವೆ.

ಶನಿವಾರ ಬೆಳಿಗ್ಗೆ ಬ್ಯಾಟಿಂಗ್ ವೇಳೆ ಅರ್ಜುನ್ ಕ್ಯಾಚ್ ಔಟ್ ನೀಡಿದ್ದ ಅಂಪೈರ್ ನಿರ್ಣಯವನ್ನು ಕೈ ಸನ್ನೆ ಮೂಲಕ ಪ್ರಶ್ನಿಸಿದ್ದರು. ಅಂತೆಯೇ ಎಲ್‌ಬಿಡಬ್ಲ್ಯು ನೀಡಿದ ಅಂಪೈರ್ ತೀರ್ಪಿನ ವಿರುದ್ಧ ನಿಶ್ಚಲ್ ಬ್ಯಾಟ್ ತೋರಿಸಿ ಅಸಮಾಧಾನ ವ್ಯಕ್ತಪಡಿಸಿದ್ದರು ಎನ್ನಲಾಗಿದೆ.

ಶುಭಾಂಗ್ ‘ಅಮಾನತು’

ಒಂದೇ ಇನಿಂಗ್ಸ್‌ನಲ್ಲಿ ಎರಡು ಹೈ ಫುಲ್‌ಟಾಸ್ ಎಸೆತಗಳನ್ನು ಎಸೆದಿದ್ದಕ್ಕಾಗಿ ಕರ್ನಾಟಕದ ಎಡಗೈ ಸ್ಪಿನ್ನರ್ ಶುಭಾಂಗ್ ಹೆಗಡೆ ಅವರನ್ನು ಅಂಪೈರ್‌ಗಳು ಮೊದಲ ಇನಿಂಗ್ಸ್‌ನ ಬೌಲಿಂಗ್‌ನಿಂದ ಅಮಾನತುಗೊಳಿಸಿದರು. ಶನಿವಾರ ಮುಂಜಾನೆ ಮೊದಲ ಅವಧಿಯಲ್ಲಿ ಬೌಲ್ ಮಾಡುತ್ತಿದ್ದ ವೇಳೆ ಶುಭಾಂಗ್ ಈ ಪ್ರಮಾದ ಎಸಗಿದರು. ಇದರಿಂದ ಬೌಲಿಂಗ್ ಅವಕಾಶ ಕಳೆದುಕೊಂಡರು. ನಿಕಿನ್ ಜೋಸ್ ಅವರು ಶುಭಾಂಗ್ ಓವರ್ ಅನ್ನು ಪೂರ್ಣಗೊಳಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಗೋವಾ: 321 (110.1 ಓವರ್‌ಗಳಲ್ಲಿ) (ಶುಕ್ರವಾರ: 8 ವಿಕೆಟ್‌ಗಳಿಗೆ 228)

ತೆಂಡೂಲ್ಕರ್ ಸಿ ಶರತ್ ಬಿ ವೆಂಕಟೇಶ್ 52 (112 ಎ, 4X3, 6X1)
ಪರಬ್ ಬಿ ವೆಂಕಟೇಶ್ 53 (81 ಎ, 4X8, 6X1)
ಫಿಲಿಕ್ಸ್ ಔಟಾಗದೆ 3 (3 ಎ)
ಇತರೆ: 24 (ಬೈ4, ಲೆಗ್‌ಬೈ12, ವೈಡ್2, ನೋಬಾಲ್ 6)
ವಿಕೆಟ್ ಪತನ: 9-314 (ಹೇರಂಬ ಪರಬ್; 108.5), 10-321 (ಅರ್ಜುನ್ ತೆಂಡೂಲ್ಕರ್; 110.1)
ಬೌಲಿಂಗ್: ವಿ. ಕೌಶಿಕ್ 26–8–49–1, ವಿ.ವೈಶಾಖ 25–5–76–3, ಎಂ. ವೆಂಕಟೇಶ 19.1–3–41–3, ಎ.ಸಿ. ರೋಹಿತ್ ಕುಮಾರ್ 29–5–90–3, ಶುಭಾಂಗ್ ಹೆಗಡೆ 8.1–0–28–0, ಮಯಂಕ್ ಅಗರವಾಲ್ 2–0–13–0, ನಿಕಿನ್ ಜೋಸ್ 0.5–0–8–0
ಬೌಲಿಂಗ್: ವಿ. ಕೌಶಿಕ್ 26–8–49–1, ವಿ.ವೈಶಾಖ 25–5–76–3, ಎಂ. ವೆಂಕಟೇಶ 19.1–3–41–3, ಎ.ಸಿ. ರೋಹಿತ್ ಕುಮಾರ್ 29–5–90–3, ಶುಭಾಂಗ್ ಹೆಗಡೆ 8.1–0–28–0, ಮಯಂಕ್ ಅಗರವಾಲ್ 2–0–13–0, ನಿಕಿನ್ ಜೋಸ್ 0.5–0–8–0

ಮೊದಲ ಇನಿಂಗ್ಸ್ ಕರ್ನಾಟಕ: 4 ವಿಕೆಟ್‌ಗೆ 253 (64 ಓವರ್‌ಗಳಲ್ಲಿ)

ಡಿ. ನಿಶ್ಚಲ್ ಎಲ್‌ಬಿಡಬ್ಲ್ಯು ದರ್ಶನ್ ಮಿಸಾಳ್ 16 (20 ಎ, 4X2)
ಮಯಂಕ್ ಅಗರವಾಲ್ ಸಿ ಇಶಾನ್ ಗಡೇಕರ್ ಬಿ ದರ್ಶನ್ ಮಿಸಾಳ್ 114 (178 ಎ, 4X10)
ದೇವದತ್ತ ಪಡಿಕ್ಕಲ್ ಸಿ ದರ್ಶನ್ ಮಿಸಾಳ್ ಬಿ ಮೋಹಿತ್ ರೆದ್ಕರ್ 103 (144 ಎ, 4X13)
ಎಸ್.ಜೆ. ನಿಕಿನ್ ಜೋಸ್ ಔಟಾಗದೆ 3 (22 ಎ)
ಎ.ಸಿ. ರೋಹಿತ್‌ಕುಮಾರ್ 2 (22 ಎ)
ಎಸ್. ಶರತ್ 0 (1 ಎ)
ಇತರೆ: 15 (ಬೈ 5, ಲೆಗ್ ಬೈ 6, ವೈಡ್ 1, ನೋಬಾಲ್ 3)
ವಿಕೆಟ್ ಪತನ: 1-27 (ನಿಶ್ಚಲ್; 5.3), 2-236 (ಪಡಿಕ್ಕಲ್; 54.4), 3-244 (ಮಯಂಕ್; 57.2), ಎ.ಸಿ. ರೋಹಿತ್ ಕುಮಾರ್ (62.5)
ಬೌಲಿಂಗ್: ಅರ್ಜುನ್ ತೆಂಡೂಲ್ಕರ್ 8–1–36–0, ಹೇರಂಬ ಪರಬ್ 5–0–28–0, ದರ್ಶನ್ ಮಿಸಾಳ್ 24–1–68–2, ಮೋಹಿತ್ ರೆಡಕರ್ 18–2–65–2, ಫಿಲಿಕ್ಸ್ ಅಲೆಮಾವೊ 9–1–45–0

ಭಾರತ ತಂಡ ಶುಭಾರಂಭ

19 ವರ್ಷದೊಳಗಿನ ವಿಶ್ವಕಪ್: ಆದರ್ಶ್–ಉದಯ್ ಮಿಂಚು

ಬ್ಲೂಮ್‌ಫಾಂಟೆನ್, ದಕ್ಷಿಣ ಆಫ್ರಿಕಾ (ಪಿಟಿಐ): ಆರಂಭಿಕ ಬ್ಯಾಟರ್ ಆದರ್ಶ್ ಸಿಂಗ್ ಮತ್ತು ನಾಯಕ ಉದಯ್ ಸಹರಾನ್ ಅವರ ಶತಕದ ಜೊತೆಯಾಟದ ಬಲದಿಂದ ಭಾರತದ ಯುವಪಡೆಯು 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶನಿವಾರ ನಡೆದ ಎ ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ಭಾರತ ತಂಡವು 84 ರನ್‌ಗಳಿಂದ ಬಾಂಗ್ಲಾದೇಶದ ಎದುರು ಜಯಿಸಿತು.

ಮಾಂಗ್‌ವಾಂಗ್ ಓವಲ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬೌಲರ್‌ಗಳು ಭಾರತ ತಂಡಕ್ಕೆ ಆರಂಭದಲ್ಲಿಯೇ ಪೆಟ್ಟು ನೀಡಿದರು.

31 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡ ತಂಡಕ್ಕೆ ಆದರ್ಶ್ (76; 96ಎ, 4X6) ಮತ್ತು ಉದಯ್ (64; 94ಎ, 4X4) ಬಲ ತುಂಬಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 116 ರನ್ ಗಳಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 251 ರನ್ ಗಳಿಸಿತು. ಬಾಂಗ್ಲಾದ ಎಡಗೈ ಮಧ್ಯಮವೇಗಿ ಮರೂಫ್ ಮೃದಾ (43ಕ್ಕೆ5) ಭಾರತವು ದೊಡ್ಡ ಮೊತ್ತ ಗಳಿಸದಂತೆ ತಡೆಯೊಡ್ಡಿದರು.

ಶತಕದ ಜೊತೆಯಾಟವಾಡಿದ ಆದರ್ಶ ಸಿಂಗ್ ಮತ್ತು ಉದಯ್ ಸಹರಾನ್ – ಬಿಸಿಸಿಐ ಎಕ್ಸ್ ಚಿತ್ರ

ಗುರಿ ಬೆನ್ನಟ್ಟಿದ ಬಾಂಗ್ಲಾ ತಂಡಕ್ಕೆ ಭಾರತದ ಸ್ಪಿನ್ನರ್ ಸೌಮಿ ಪಾಂಡೆ (24ಕ್ಕೆ4) ಪೆಟ್ಟುಕೊಟ್ಟರು.

ಇದರಿಂದಾಗಿ ತಂಡವು 45.5 ಓವರ್‌ಗಳಲ್ಲಿ 167 ರನ್ ಗಳಿಸಿತು. ಅರಿಫುಲ್ ಇಸ್ಲಾಂ (41; 71ಎ) ಮತ್ತು ಮೊಹಮ್ಮದ್ ಶಿಹಾಬ್ ಜೇಮ್ಸ್ (54; 7ಎ) ಬಿಟ್ಟರೆ ಬಾಂಗ್ಲಾದ ಉಳಿದ ಬ್ಯಾಟರ್‌ಗಳು ವಿಫಲರಾದರು.

ಭಾರತದ ಮುಷೀರ್ ಖಾನ್ ಕೂಡ ಎರಡು ವಿಕೆಟ್ ಗಳಿಸಿ, ಬಾಂಗ್ಲಾದ ಪತನಕ್ಕೆ ಕಾರಣರಾದರು. ಮುಂಬೈ ತಂಡದ ಆಟಗಾರ ಸರ್ಫರಾಜ್ ಖಾನ್ ಅವರ ತಮ್ಮ ಮುಷೀರ್ ಚುರುಕಾದ ಫೀಲ್ಡಿಂಗ್ ಮಾಡಿ, ಒಂದು ರನ್‌ಔಟ್‌ಗೂ ಕಾರಣರಾದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 251 (ಆದರ್ಶ ಸಿಂಗ್ 76, ಉದಯ್ ಸಹರಾನ್ 64, ಪ್ರಿಯಾಂಶು ಮಾಲಿಯಾ 23, ಅರವೆಲ್ಲಿ ಅವಿನಾಶ್ 23, ಸಚಿನ್ ಧಾಸ್ ಔಟಾಗದೆ 26, ಮರೂಫ್ ಮೃಧಾ 43ಕ್ಕೆ5) ಬಾಂಗ್ಲಾದೇಶ: 45.5 ಓವರ್‌ಗಳಲ್ಲಿ 167 (ಅರಿಫುಲ್ ಇಸ್ಲಾಂ 41, ಮೊಹಮ್ಮದ್ ಶಿಹಾಬ್ ಜೇಮ್ಸ್ 54, ಸೌಮ್ಯಾ ಪಾಂಡೆ 24ಕ್ಕೆ4, ಮುಷೀರ್ ಖಾನ್ 35ಕ್ಕೆ2)

ಫಲಿತಾಂಶ: ಭಾರತ ತಂಡಕ್ಕೆ 84 ರನ್‌ಗಳ ಜಯ. ಪಂದ್ಯಶ್ರೇಷ್ಠ: ಆದರ್ಶ ಸಿಂಗ್.

ಆಸ್ಟ್ರೇಲಿಯನ್ ಓಪನ್: ಪ್ರಶಸ್ತಿ ಗೆಲ್ಲುವ ಕನಸು ಭಗ್ನ

ಇಗಾಗೆ ಆಘಾತ ನೀಡಿದ ಲಿಂಡಾ

ಮೆಲ್ಬರ್ನ್ (ರಾಯಿಟರ್ಸ್): ಅಗ್ರಶ್ರೇಯಾಂಕದ ಇಗಾ ಶ್ವಾಂಟೆಕ್ ಅವರು ಆಸ್ಟ್ರೇಲಿಯಾ ಓಪನ್ ಟೂರ್ನಿಯಿಂದ ಶನಿವಾರ ಹೊರಬಿದ್ದರು. ಮೊದಲ ಬಾರಿ ಈ ಟೂರ್ನಿಯಲ್ಲಿ ಆಡುತ್ತಿರುವ ಝೆಕ್ ರಿಪಬ್ಲಿಕ್‌ನ ಆಟಗಾರ್ತಿ ಲಿಂಡಾ ನೊಸ್ಕೊವಾ ಅವರು ಮೂರನೇ ಸುತ್ತಿನಲ್ಲಿ 3–6, 6–4, 6–4 ರಿಂದ ಇಗಾ ಅವರಿಗೆ ಮರೆಯಲಾಗದ ಆಘಾತ ನೀಡಿದರು.

ಇದರಿಂದಾಗಿ ಮೊದಲ ಬಾರಿ ಮೆಲ್ಬರ್ನ್ ಪಾರ್ಕ್‌ನಲ್ಲಿ ಪ್ರಶಸ್ತಿ ಗೆಲ್ಲುವ ಪೋಲೆಂಡ್ ಆಟಗಾರ್ತಿಯ ಕನಸು ನುಚ್ಚುನೂರಾಯಿತು. 22 ವರ್ಷದ ಶ್ವಾಂಟೆಕ್‌ಗೆ ಟೂರ್ನಿಯ ಮೊದಲ ಎರಡು ಸುತ್ತುಗಳೂ ಪ್ರಯಾಸದಾಯಕವಾಗಿದ್ದವು. ಆರಂಭದ ಸುತ್ತಿನಲ್ಲಿ ಸೋಫಿಯಾ ಕೆನಿನ್ ವಿರುದ್ಧ ಒಂದು ಟೈಬ್ರೇಕರ್‌ನಲ್ಲಿ ಆಡಬೇಕಾಯಿತು. ಎರಡನೇ ಸುತ್ತಿನಲ್ಲಿ ಡೇನಿಯಲಿ ಕಾಲಿನ್ಸ್ ಎದುರೂ ಜಯಗಳಿಸಿದ್ದು ಕಷ್ಟಪಟ್ಟೇ.

ನಾಲ್ಕು ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಶ್ವಾಂಟೆಕ್ ಸೋಲಿನೊಡನೆ ಮಹಿಳಾ ವಿಭಾಗದ ಅಗ್ರ 10 ರಲ್ಲಿ ಏಳು ಮಂದಿ ಸವಾಲು ಬೇಗನೆ ಅಂತ್ಯಗೊಂಡಂತಾಗಿದೆ.

19ರ ಹರೆಯದ ನೊಸ್ಕೊವಾ, ಈ ಹಿಂದೆ ವಿವಿಧ ಟೂರ್ನಿಗಳಲ್ಲಿ ಮೂವರು ಟಾಪ್ 10 ಆಟಗಾರ್ತಿಯರನ್ನು ಸೋಲಿಸಿ ಗಮನ ಸೆಳೆದಿದ್ದರು. ಆದರೆ ಶ್ವಾಂಟೆಕ್ ಮೊದಲ ಸೆಟ್‌ನಲ್ಲಿ ಹಿಡಿತ ಪಡೆದರು. ನಂತರ ಎದುರಾಳಿಯ ಶಕ್ತಿಶಾಲಿ ಹೊಡೆತಗಳ ಮುಂದೆ ನಿಯಂತ್ರಣ ಕಳೆದುಕೊಂಡು 2 ಗಂಟೆ 20 ನಿಮಿಷಗಳ ಪಂದ್ಯದಲ್ಲಿ ಸೋಲನುಭವಿಸಿದರು. ನೊಸ್ಕೊವಾ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ನಾಲ್ಕನೇ ಸುತ್ತಿಗೆ ಮುನ್ನಡೆದರು.

50ನೇ ಕ್ರಮಾಂಕದ ಲಿಂಡಾ ಮುಂದಿನ ಸುತ್ತಿನಲ್ಲಿ 19ನೇ ಶ್ರೇಯಾಂಕದ ಎಲಿನಾ ಸ್ವಿಟೊಲಿನಾ ಅವರನ್ನು ಎದುರಿಸಲಿದ್ದಾರೆ. ಇನ್ನೊಂದು ಪಂದ್ಯದಲ್ಲಿ ವಿಕ್ಟೋರಿಯಾ ಅಜರೆಂಕಾ 6–1, 7–5 ರಿಂದ 11ನೇ ಶ್ರೇಯಾಂಕದ ಯಲೆನಾ ಒಸ್ಟಪೆಂಕೊ (ಲಾತ್ವಿಯಾ) ವಿರುದ್ಧ ಜಯಗಳಿಸಿದರು.

ಸಂಭ್ರಮ... ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರನ್ನು ಸೋಲಿಸಿದ ಖುಷಿಯಲ್ಲಿ ಲಿಂಡಾ ನೊಸ್ಕೊವಾ. ಎಎಫ್‌ಪಿ ಚಿತ್ರ

ಅಲ್ಕರಾಝ್ ಮುನ್ನಡೆ: ಆದರೆ ಪುರುಷರ ವಿಭಾಗದಲ್ಲಿ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಪ್ರಮುಖರು ನಾಲ್ಕನೇ ಸುತ್ತಿಗೆ ಮುನ್ನಡೆದರು. ಕಾರ್ಲೋಸ್ ಅಲ್ಕರಾಝ್, ಡೇನಿಯಲ್ ಮೆಡ್ವೆಡೇವ್ ಮತ್ತು ಅಲೆಕ್ಸಾಂಡರ್ ಜ್ವರೇವ್ ಟೂರ್ನಿಯ ಏಳನೇ ದಿನ ತಮ್ಮ ಪಂದ್ಯಗಳನ್ನು ಗೆದ್ದುಕೊಂಡರು.

ಮೂರನೇ ಶ್ರೇಯಾಂಕದ ಮೆಡ್ವೆಡೇವ್ 6–3, 6–4, 6–3 ರಿಂದ ಕೆನಡಾದ ಫೆಲಿಕ್ಸ್ ಆಗರ್ ಅಲಿಸಿಮೆ ವಿರುದ್ಧ ಜಯಗಳಿಸಿ ಅಂತಿಮ 16ರ ಘಟ್ಟ ತಲುಪಿದರು. ಮೆಡ್ವೆಡೇವ್ ಇಲ್ಲಿ ಎರಡು ಬಾರಿ ರನ್ನರ್ ಅಪ್ ಆಗಿದ್ದಾರೆ.

ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಝ್ (ಸ್ಪೇನ್) ಸಹ 6–1, 6–1, 1–0 ಯಿಂದ ಶಾಂಗ್ ಜುನ್‌ಚೆಂಗ್ (ಚೀನಾ) ಅವರನ್ನು ಸೋಲಿಸಿದರು. ಶಾಂಗ್ ಮೂರನೇ ಸೆಟ್‌ನ ಆರಂಭದಲ್ಲಿ ತೊಡೆನೋವಿನಿಂದ ಪಂದ್ಯ ಬಿಟ್ಟುಕೊಟ್ಟರು.

ಟಾಟಾ ಮಡಿಲಿಗೆ ಐಪಿಎಲ್ ಟೈಟಲ್ ಪ್ರಾಯೋಜಕತ್ವ

ನವದೆಹಲಿ (ಎಎಫ್‌ಪಿ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮುಂದಿಯ ಐದು ವರ್ಷಗಳ ಪ್ರಮುಖ ಪ್ರಾಯೋಜಕತ್ವದ ಹಕ್ಕುಗಳನ್ನು ಟಾಟಾ ಸಮೂಹವು ₹ 2500 ಕೋಟಿಗೆ ಖರೀದಿಸಿ ದಾಖಲೆ ಮಾಡಿದೆ.

ಹೋದ ವರ್ಷ ನಡೆದಿದ್ದ ಮಹಿಳೆಯರ ಪ್ರೀಮಿಯರ್ ಲೀಗ್ ಟೂರ್ನಿಯ ಟೈಟಲ್ ಪ್ರಾಯೋಜಕತ್ವವನ್ನೂ ಟಾಟಾ ಪಡೆದಿತ್ತು.

‘ಅಂತರರಾಷ್ಟ್ರೀಯ ಕ್ರೀಡಾ ವೇದಿಕೆಯಲ್ಲಿ ಐಪಿಎಲ್ ಜನಪ್ರಿಯತೆ ಮತ್ತು ಆರ್ಥಿಕ ಉನ್ನತಿಯ ಪ್ರತೀಕ ಇದಾಗಿದೆ‘ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ.

ಟಾಟಾ ಸಮೂಹವು 2024 ರಿಂದ 28ರವರೆಗಿನ ಆವೃತ್ತಿಗಳಲ್ಲಿ ಟೈಟಲ್ ಪ್ರಾಯೋಜಕತ್ವವನ್ನು ಪಡೆದುಕೊಂಡಿದೆ ಎಂದು ಐಪಿಎಲ್ ಮುಖ್ಯಸ್ಥ ಅರುಣ್ ಸಿಂಗ್ ಧುಮಾಲ್ ಹೇಳಿದ್ದಾರೆ.

‘ಫಲಿತಾಂಶ ಒಪ್ಪಿ ಮುಂದೆ ಸಾಗಿ’

ರಾಂಚಿ (ಪಿಟಿಐ): ಭಾರತ ಮಹಿಳೆಯರ ಹಾಕಿ ತಂಡವು ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಳಿಸುವಲ್ಲಿ ವಿಫಲವಾಗಿದೆ. ಶುಕ್ರವಾರ ಇಲ್ಲಿ ನಡೆದ ಒಲಿಂಪಿಕ್ ಕ್ವಾಲಿಫೈಯರ್ ಹಾಕಿ ಟೂರ್ನಿಯಲ್ಲಿ ಮೂರನೇ ಸ್ಥಾನಕ್ಕಾಗಿ ಪಂದ್ಯದಲ್ಲಿ ಜಪಾನ್ ಎದುರು ಸೋತ ಸವಿತಾ ಪೂನಿಯಾ ಬಳಗವು ಅವಕಾಶ ಕೈಚೆಲ್ಲಿತು.

ದಿಲೀಪ್ ಟರ್ಕಿ

2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ತಂಡವು ಈ ಬಾರಿಯೂ ಒಲಿಂಪಿಕ್ ಅಂಗಳದಲ್ಲಿ ಆಡುವ ಭರವಸೆ ಮೂಡಿಸಿತ್ತು.

ಈ ಕುರಿತು ಪ್ರತಿಕ್ರಿಯಿಸಿರುವ ಹಾಕಿ ಇಂಡಿಯಾದ ಮಹಾಪ್ರಧಾನ ಕಾರ್ಯದರ್ಶಿ ಭೋಲಾನಾಥ್ ಸಿಂಗ್, ‘ನಮ್ಮ ಆಟಗಾರ್ತಿಯರು ಬಹಳ ಚೆನ್ನಾಗಿ ಆಡಿದರು. ಆದರೂ ಸೋತಿದ್ದು ದುರದೃಷ್ಟಕರ. ಇಡೀ ಟೂರ್ನಿಯಲ್ಲಿ ಉತ್ಕೃಷ್ಟ ಆಟವನ್ನು ಪ್ರದರ್ಶಿಸಿದರು. ಸೋಲು –ಗೆಲುವುಗಳು ಕ್ರೀಡೆಯ ಅವಿಭಾಜ್ಯ ಅಂಗಗಳು. ಫಲಿತಾಂಶವನ್ನು ಒಪ್ಪಿಕೊಳ್ಳಬೇಕು ಮತ್ತು ಮುಂದುವರಿಯಬೇಕು’ ಎಂದರು.

‘ಸೆಮಿಫೈನಲ್‌ನಲ್ಲಿ ಜರ್ಮನಿಯ ವಿರುದ್ಧ ನಮ್ಮ ತಂಡವು ಉತ್ತಮವಾಗಿ ಆಡಿತ್ತು. ಅದರಲ್ಲಿ ಗೆದ್ದುಬಿಡಬೇಕಿತ್ತು. ಅಲ್ಲಿ ನಮ್ಮವರಿಂದ ಆದ ಒಂದೆರಡು ತಪ್ಪುಗಳಿಂದಾಗಿ ಸೋಲಬೇಕಾಯಿತು. ಒಟ್ಟಾರೆ ಪ್ಯಾರಿಸ್ ಟಿಕೆಟ್ ಕೈತಪ್ಪಿದ್ದು ಬೇಸರದ ಸಂಗತಿ. ಬದಲಾವಣೆಗಳ ಕುರಿತು ಈಗಲೇ ಏನೂ ಹೇಳಲಾಗದು. ತ್ವರಿತವಾಗಿ ಯಾವುದೇ ನಿರ್ಧಾರ ಕೈಗೊಳ್ಳಲಾಗದು. ಮುಂದಿನ ತಿಂಗಳು ಭುವನೇಶ್ವರ್ ಮತ್ತು ರೂರ್ಕೆಲಾದಲ್ಲಿ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಬಗ್ಗೆ ಗಮನ ಹರಿಸಬೇಕಿದೆ. ಮುಂದಿನ ಒಲಿಂಪಿಕ್ ಕೂಟಕ್ಕೆ ಸಿದ್ಧವಾಗಲು ನಮಗೆ ಇನ್ನೂ ನಾಲ್ಕು ವರ್ಷಗಳ ಸಮಯ ಇದೆ.ಈ ಅವಧಿಯಲ್ಲಿ 2028ರ ಒಲಿಂಪಿಕ್ ಕೂಟಕ್ಕೆ ಅರ್ಹತೆ ಪಡೆದು ಪದಕವನ್ನೂ ಜಯಿಸಲು ಸಂಪೂರ್ಣ ತಯಾರಿ ನಡೆಸುತ್ತೇವೆ’ ಎಂದರು.

ಭಾರತ ತಂಡದ ಸೋಲಿನ ಕುರಿತು ಪ್ರತಿಕ್ರಿಯಿಸಿರುವ ಹಾಕಿ ಇಂಡಿಯಾದ ಅಧ್ಯಕ್ಷ ದಿಲೀಪ್ ಟರ್ಕಿ, ‘ಕೋಚ್ ಕುರಿತು ಈಗಲೇ ನಾವು ಏನೂ ಯೋಚಿಸುತ್ತಿಲ್ಲ. ಮುಂಬರುವ ದಿನಗಳಲ್ಲಿ ಕೆಲವು ಮಹತ್ವದ ಟೂರ್ನಿಗಳಿವೆ. ಅವುಗಳಮೇಲೆ ನಮ್ಮ ಗಮನ ಇದೆ’ ಎಂದಿದ್ದಾರೆ.

ಇಂಡಿಯಾ ಓಪನ್: ಪ್ರಣಯ್‌ಗೆ ಸೋಲು

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಕೊಡೈ ನರವೋಕಾ ಮೇಲೆ ಶನಿವಾರ ಮೂರು ಗೇಮ್‌ಗಳ ರೋಚಕ ಜಯಪಡೆದ ಹಾಂಗ್‌ಕಾಂಗ್‌ನ ಲೀ ಚೂಕ್ ಯಿಯು ಅವರು ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್ ತಲುಪಿದರು. ಇನ್ನೊಂದೆಡೆ ಭಾರತದ ಎಚ್.ಎಸ್.ಪ್ರಣಯ್ ಸೆಮಿಫೈನಲ್‌ನಲ್ಲಿ ಸೋಲನುಭವಿಸಿದರು.

ಮೊದಲ ಸೆಮಿಫೈನಲ್‌ನಲ್ಲಿ 18ನೇ ಕ್ರಮಾಂಕದ ಲೀ 21–13, 15–21, 21–19 ರಿಂದ ಜಪಾನ್ ಆಟಗಾರನ ಮೇಲೆ ಜಯಗಳಿಸಿದರು. ಲೀ ಸೂಪರ್ 750 ಟೂರ್ನಿಯ ಫೈನಲ್ ತಲುಪಿದ್ದು ಇದೇ ಮೊದಲ ಸಲ. ಚೀನಾದ ಷಿ ಯೂಕಿ ಇನ್ನೊಂದು ಸೆಮಿಫೈನಲ್‌ನಲ್ಲಿ 21–15, 21–5 ರಲ್ಲಿ ನೇರ ಗೇಮ್‌ಗಳಿಂದ ಪ್ರಣಯ್ ಅವರನ್ನು ಹಿಮ್ಮೆಟ್ಟಿಸಿದರು.

ನವದಂಪತಿ ಶೋಯೆಬ್ ಮಲಿಕ್– ಸನಾ ಜಾವೆದ್ ಪಿಟಿಐ ಚಿತ್ರ

ಶೋಯೆಬ್– ಸನಾ ವಿವಾಹ

ಕರಾಚಿ (ಪಿಟಿಐ): ಸಾನಿಯಾ ಮಿರ್ಜಾ ಅವರಿಂದ ವಿಚ್ಛೇದನಗೊಂಡ ನಂತರ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯೆಬ್ ಮಲಿಕ್ ಅವರು ದೇಶದ ಜನಪ್ರಿಯ ನಟಿ ಸನಾ ಜಾವೆದ್ ಅವರನ್ನು ಮದುವೆಯಾಗಿದ್ದಾರೆ. ಇದನ್ನು ಶೋಯೆಬ್ ಮಲಿಕ್ ಶನಿವಾರ ಪ್ರಕಟಿಸಿದ್ದಾರೆ.

ತಾರಾ ನಟಿಯ ಜೊತೆ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಮಲಿಕ್, ‘ನಾವು ನಿಮ್ಮನ್ನು ಜೋಡಿಯಾಗಿ ಸೃಷ್ಟಿಸಿದ್ದೇವೆ’ ಎಂಬ ನುಡಿಯನ್ನು ಉಲ್ಲೇಖಿಸಿದ್ದಾರೆ.

2010ರಲ್ಲಿ ಸಾನಿಯಾ ವಿವಾಹವಾಗಿದ್ದ ಶೋಯೆಬ್‌ಗೆ ಗಂಡು ಮಗುವಿದೆ. ಐದು ವರ್ಷದ ಮಗ ಇಝಾನ್ ಈಗ ಸಾನಿಯಾ ಜೊತೆ ಇದ್ದಾನೆ.

ಇದು ‘ಖುಲಾ’ ಎಂದು ಕುಟುಂಬದ ಮೂಲಗಳು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿವೆ. ಪತಿಗೆ ವಿಚ್ಛೇದನ ನೀಡುವ ಮಹಿಳೆಯ ಹಕ್ಕು ‘ಖುಲಾ’ ಆಗಿದೆ.

ಶೊಯೆಬ್ ಮತ್ತು ಸಾನಿಯಾ ಸಂಬಂಧದಲ್ಲಿ ಒಡಕು ಉಂಟಾಗಿದ್ದು ಅವರು ಬೇರೆಯಾಗುತ್ತಾರೆ ಎಂಬ ವದಂತಿ 2022ರಿಂದ ಕೇಳಿಬಂದಿದ್ದು, ಈಗ ಅಧಿಕೃತವಾಗಿದೆ.

ಕೆಲವು ವರ್ಷಗಳಿಂದ ದಂಪತಿ ಪ್ರತ್ಯೇಕವಾಗಿ ನೆಲೆಸಿದ್ದರು. ಮಲಿಕ್ ಕೆಲವು ದಿನಗಳ ಹಿಂದೆ ಇನ್‌ಸ್ಟಾದಲ್ಲಿ ಸಾನಿಯಾ ಅವರನ್ನು ‘ಅನ್‌ಫಾಲೊ’ ಮಾಡಿದ್ದರು. 2020 ರಲ್ಲಿ ಕೊರೊನಾ ಸಾಂಕ್ರಾಮಿಕ ಕಾಲದಲ್ಲಿ ಗಾಯಕ ಉಮೇರ್ ಜೈಸ್ವಾಲ್ ಅವರನ್ನು ಸನಾ ವಿವಾಹವಾಗಿದ್ದರು. ಎರಡು ತಿಂಗಳ ಹಿಂದೆ ಈ ಪತಿ–ಪತ್ನಿ ವಿಚ್ಛೇದನ ಗೊಂಡಿರುವ ಬಗ್ಗೆ ವರದಿಗಳು ಪ್ರಕಟವಾಗಿದ್ದವು. ಭಾರತದ ಮಹಿಳಾ ಟೆನಿಸ್‌ಗೆ ಜನಪ್ರಿಯತೆ ತಂದುಕೊಟ್ಟ ಸಾನಿಯಾ ಕಳೆದ ವರ್ಷ ನಿವೃತ್ತಿ ಘೋಷಿಸಿದ್ದರು.

ಫೆ.11ರಿಂದ ಗ್ವಾಲಿಯರ್‌ನಲ್ಲಿ ರಾಷ್ಟ್ರೀಯ ಕುಸ್ತಿ

ನವದೆಹಲಿ (ಪಿಟಿಐ): ಗ್ವಾಲಿಯರ್‌ನಲ್ಲಿ ಫೆಬ್ರುವರಿ 11 ರಿಂದ 17ರವರೆಗೆ 15 ವರ್ಷದೊಳಗಿನ ಮತ್ತು 20 ವರ್ಷದೊಳಗಿನ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸಲಾಗುವುದು ಎಂದು ಭಾರತ ಕುಸ್ತಿ ಸಂಸ್ಥೆಯ (ಡಬ್ಲ್ಯುಎಫ್‌ಐ) ತಾತ್ಕಾಲಿಕ ಸಮಿತಿ ಘೋಷಿಸಿದೆ.

ಗ್ವಾಲಿಯರ್‌ನ ಶಕ್ತಿ ನಗರದ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಪ್ರತಿಷ್ಠಿತ ಲಕ್ಷ್ಮಿಬಾಯಿ ನ್ಯಾಷನಲ್ ಶಿಕ್ಷಣ ಸಂಸ್ಥೆಯಲ್ಲಿ ಈ ಕ್ರೀಡಾಕೂಟ ನಡೆಯಲಿದೆ. ಸುಮಾರು 1200 ಕುಸ್ತಿಪಟುಗಳು ಮತ್ತು 300 ಅಧಿಕಾರಿಗಳು ಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದು ಸಮಿತಿ ಅಧ್ಯಕ್ಷ ಭೂಪೇಂದರ್ ಸಿಂಗ್ ಬಜ್ವಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾತ್ಕಾಲಿಕ ಸಮಿತಿ ಮತ್ತು ಡಬ್ಲುಎಫ್‌ಐನ ಅಮಾನತುಗೊಂಡ ಆಡಳಿತ ಸಮಿತಿ ಪ್ರತ್ಯೇಕ ರಾಷ್ಟ್ರೀಯ ಚಾಂಪಿಯನ್‌ಷಿಪ್ ಘೋಷಿಸುವುದರೊಂದಿಗೆ ಭಾರತೀಯ ಕುಸ್ತಿಯಲ್ಲಿ ಅಧಿಕಾರದ ಹೋರಾಟ ನಡೆಯುತ್ತಿದೆ.

ಸಂಜಯ್ ಸಿಂಗ್ ನೇತೃತ್ವದ ಆಡಳಿತ ಮಂಡಳಿ ಉತ್ತರ ಪ್ರದೇಶದ ಗೊಂಡಾದಲ್ಲಿ 20–23 ವಯೋಮಿತಿಯ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸುವುದಾಗಿ ಘೋಷಿಸಿತ್ತು.

ತವರಿನಲ್ಲಿ ಗೆದ್ದ ಟೈಟನ್ಸ್

ಹೈದರಾಬಾದ್: ಸತತ ಸೋಲುಗಳಿಂದ ಕಂಗೆಟ್ಟಿದ್ದ ತೆಲುಗು ಟೈಟನ್ಸ್ ತಂಡ, ಪ್ರೊ ಕಬಡ್ಡಿ ಲೀಗ್‌ನ ಹತ್ತನೇ ಆವೃತ್ತಿಯಲ್ಲಿ ಕೊನೆಗೂ ತವರು ನೆಲದಲ್ಲಿ ತನ್ನ ಮೊದಲ ಹಾಗೂ ಒಟ್ಟಾರೆ ಎರಡನೇ ಜಯ ದಾಖಲಿಸಿತು. ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟೈಟನ್ಸ್ ತಂಡ 49–32 ರಲ್ಲಿ ಯುಪಿ ಯೋಧಾಸ್ ತಂಡವನ್ನು ಸೋಲಿಸಿತು.

ಸ್ಟಾರ್ ರೈಡರ್ ಪವನ್ ಸೆಹ್ರಾವತ್ 16 ಪಾಯಿಂಟ್ಸ್ ಮತ್ತು ಓಂಕಾರ್ ಪಾಟೀಲ 10 ಪಾಯಿಂಟ್ಸ್ ಗಳಿಸಿ ಮಿಂಚಿದರು. ಟೈಟನ್ಸ್ ಆಡಿರುವ 14 ಪಂದ್ಯಗಳಲ್ಲಿ ಉಳಿದ 12 ಅನ್ನು ಸೋತಿದ್ದು ಕೊನೆಯ ಸ್ಥಾನದಲ್ಲಿದೆ. ಯೋಧಾಸ್ ಕಡೆ ನಾಯಕ ಪ್ರದೀಪ್ ನರ್ವಾಲ್ ‘ಸೂಪರ್ ಟೆನ್‘ (10 ಅಂಕ) ಗಳಿಸಿದರು.

ಇದಕ್ಕೆ ಮೊದಲು, ದಬಾಂಗ್ ಡೆಲ್ಲಿ ಕೆಸಿ ತಂಡ 39–33 ಪಾಯಿಂಟ್‌ಗಳಿಂದ ಯು ಮುಂಬಾ ತಂಡವನ್ನು ಸೋಲಿಸಿತು. ನವೀನ್ ಗೈರಿನಲ್ಲಿ ಪ್ರಮುಖ ರೈಡರ್ ಆಗಿರುವ ನಾಯಕ ಆಶು ಮಲಿಕ್ 17 ಪಾಯಿಂಟ್ಸ್ ಗಳಿಸಿ ಮಿಂಚಿದರು.

ಮುಂಬಾ ಪರ ಗುಮನ್ ಸಿಂಗ್ 13 ರೈಡ್ ಪಾಯಿಂಟ್ಸ್ ಕಲೆಹಾಕಿದರು. ದಬಾಂಗ್ ಮೂರನೇ ಸ್ಥಾನಕ್ಕೇರಿತು.

ಗುಕೇಶ್‌ಗೆ ಸತತ ಎರಡನೇ ಜಯ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ಹಾಲೆಂಡ್‌ನ ಜೊರ್ಡನ್ ವಾನ್ ಫೊರೀಸ್ಟ್ ಅವರನ್ನು ಸೋಲಿಸಿ ಸತತ ಎರಡನೇ ಜಯ ದಾಖಲಿಸಿದರು. ಅವರು ಶನಿವಾರ ಜಂಟಿ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ಗುಕೇಶ್ ಅವರು ಕಪ್ಪು ಕಾಯಿಗಳಲ್ಲಿ ಆಡಿ ಫೋರೀಸ್ಟ್ ಮೇಲೆ ಜಯಗಳಿಸಿದರು. ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಇನ್ನೊಂದು ಪಂದ್ಯದಲ್ಲಿ ನಿಪೊಮ್‌ನಿಯಾಚಿ ಸಂಗಡ ‘ಡ್ರಾ’ ಮಾಡಿ ಕೊಂಡರು.

ಡಿ. ಗುಕೇಶ್

ವಿದಿತ್ ಎಸ್. ಗುಜರಾತಿ ಸೋಲ ದಿದ್ದರೂ ಜಯ ಕೈಗೆಟಕಿಲ್ಲ. ಅವರು ಆರನೇ ಸುತ್ತಿನಲ್ಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆನ್‌ಜುನ್ ಜೊತೆ ಡ್ರಾ ಮಾಡಿ ಕೊಂಡರು. ಇದು ಅವರಿಗೆ ಆರನೇ ‘ಡ್ರಾ’.

ಇನ್ನೂ ಏಳು ಸುತ್ತಿನ ಪಂದ್ಯಗಳು ಬಾಕಿವುಳಿದಿವೆ. ಆತಿಥೇಯ ದೇಶದ ಅನಿಶ್ ಗಿರಿ 4.5 ಅಂಕಗಳೊಂದಿಗೆ ಮುನ್ನಡೆ ಉಳಿಸಿಕೊಂಡಿದ್ದಾರೆ.

ಫ್ರಾನ್ಸ್‌ನ ಫಿರೋಜ್ ಅಲಿರೇಝಾ ಅವರು (4) ಎರಡನೇ ಸ್ಥಾನದಲ್ಲಿದ್ದಾರೆ. ಅನಿಶ್ ಆರನೇ ಸುತ್ತಿನಲ್ಲಿ ಇರಾನ್‌ನ ಪರ್ಹಾಮ್ ಮಘಶೂಡ್ಲು (1.5) ಜೊತೆ ಡ್ರಾ ಮಾಡಿಕೊಂಡರು. ಅಲಿರೇಝಾ, ಚೀನಾದ ವೀ ಇ (3) ಅವರನ್ನು ಸೋಲಿಸಿದರು. ಡಿಂಗ್ ಲಿರೆನ್ (3) ಅವರು ಅಬ್ದುಸತ್ತಾರೊವ್ ಜೊತೆ ಪಾಯಿಂಟ್ ಹಂಚಿಕೊಂಡರು.

ಪ್ರಜ್ಞಾನಂದ, ಗುಕೇಶ್, ನಾಡಿರ್ಬೆಕ್ ಅಬ್ದುಸತ್ತಾರೋವ್ (ಉಜ್ಬೇಕಿಸ್ತಾನ), ಮ್ಯಾಕ್ಸ್ ವಾರ್ಮೆರ್‌ಡ್ಯಾಮ್ (ಹಾಲೆಂಡ್) ತಲಾ 3.5 ಪಾಯಿಂಟ್ಸ್ ಕಲೆಹಾಕಿ, ಮೂರನೇ ಸ್ಥಾನದಲ್ಲಿದ್ದಾರೆ.

ಬೆಲಾರಸ್‌ನ ಅಲೆಕ್ಸಿ–ಗೋವಾದ ನಿತೀಶ್ ನಡುವಿನ ಪಂದ್ಯ ‘ಡ್ರಾ’

ಚೆಸ್: ಮುನ್ನಡೆಯಲ್ಲಿ ಪ್ರಣವ್, ನೀಲೇಶ್

ಬೆಂಗಳೂರು: ಕರ್ನಾಟಕದ ಗ್ರ್ಯಾಂಡ್ ಮಾಸ್ಟರ್ ಪ್ರಣವ್ ಆನಂದ್ ಮತ್ತು ಬಂಗಾಳದ ಐಎಂ ನೀಲೇಶ್ ಸಹಾ, ಮೊದಲ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಗರಿಷ್ಠ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿ ಮುನ್ನಡೆ ಹಂಚಿಕೊಂಡಿದ್ದಾರೆ.

ನೀಲೇಶ್ ಮೊದಲ ಬೋರ್ಡ್‌ನಲ್ಲಿ ಅನುಭವಿ ಜಿಎಂ ನೈಜೆಲ್ ಶಾರ್ಟ್ (ಇಂಗ್ಲೆಂಡ್) ಅವರನ್ನು ಶನಿವಾರ 27 ನಡೆಗಳಲ್ಲಿ ಸೋಲಿಸಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯ ಮೂರನೇ ದಿನವಾದ ಶನಿವಾರ, ಕಪ್ಪುಕಾಯಿ ನಡೆಸಿದ ಪ್ರಣವ್ ಎರಡನೇ ಬೋರ್ಡ್‌ನಲ್ಲಿ ಮಹಾರಾಷ್ಟ್ರದ ಐಎಂ ಸಮ್ಮೇದ್ ಜಯಕುಮಾರ್ ಅವರನ್ನು 46ನೇ ನಡೆಯಲ್ಲಿ ಸೋಲಿಸಿದರು. 12 ಆಟಗಾರರು (ತಲಾ 3.5) ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಮುನ್ನಡೆಯಲ್ಲಿರುವ ಪ್ರಣವ್ ಆನಂದ್ ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಬೆಲಾರಸ್‌ನ ಗ್ರ್ಯಾಂಡ್ ಮಾಸ್ಟರ್ ಅಲೆಕ್ಸಿ ಫೆಡರೋವ್, ಗೋವಾದ ಐಎಂ ನಿತೀಶ್ ಬೆಲೂರ್ಕರ್ ಜೊತೆ 31 ನಡೆಗಳ ನಂತರ ಪಾಯಿಂಟ್ ಹಂಚಿಕೊಳ್ಳಬೇಕಾಯಿತು. ಮೊದಲ ಎಂಟು ಬೋರ್ಡ್‌ಗಳಲ್ಲಿ ‘ಡ್ರಾ’ ಆಗಿದ್ದು ಇದೊಂದೇ ಪಂದ್ಯ. ಬಂಗಾಳದ ಜಿಎಂ ಮಿತ್ರಬಾ ಗುಹಾ (3.5), ಕರ್ನಾಟಕದ ಐಎಂ ವಿಯಾನಿ ಡಿಕುನ್ಹ (3) ವಿರುದ್ಧ ಜಯಗಳಿಸಿದರು.

ಅಗ್ರ ಶ್ರೇಯಾಂಕದ ಜಿಎಂ ಅಭಿಜಿತ್ ಗುಪ್ತಾ (3.5), ಐಸಿಎಫ್‌ನ ಆರ್.ಆರ್. ಲಕ್ಷ್ಮಣ್ ವಿರುದ್ಧ ಜಯಗಳಿಸಿದರೆ, ಏಳನೇ ಬೋರ್ಡಿನಲ್ಲಿ ಜಿಎಂ ತೇಜ ಕುಮಾರ್ (ಕರ್ನಾಟಕ, 2.5), ಬಂಗಾಳದ ಐಎಂ ಅರಣ್ಯಕ್ ಘೋಷ್ (3.5) ಗೆ ಮಣಿದರು. ರಾಷ್ಟ್ರೀಯ ಚಾಂಪಿಯನ್ ಎಸ್.ಪಿ.ಸೇತುರಾಮನ್ (3.5), ತೆಲಂಗಾಣದ ಐಎಂ ಮೋಹನ್ ಕುಶಾಗ್ರ (2.5) ಅವರನ್ನು ಸೋಲಿಸಿದರು.

ಕರ್ನಾಟಕದ ಜಿ.ಎ.ಸ್ಟ್ಯಾನಿ (3), ಇನ್ನೊಂದು ಪಂದ್ಯದಲ್ಲಿ ಫಿಡೆಮಾಸ್ಟರ್ ಎ.ಪಿ.ಜೋಶುವ (2) ವಿರುದ್ಧ ಜಯಗಳಿಸಿದರು. ರಾಜ್ಯದ ಅಪೂರ್ವ ಕಾಂಬ್ಳೆ (2.5) ಅವರು ಬಂಗಾಳದ ಜಿಎಂ ದೀಪ್ತಾಯನ ಘೋಷ್ (2.5) ಜೊತೆ ಪಾಯಿಂಟ್ ಹಂಚಿಕೊಂಡಿದ್ದು ಕಡಿಮೆ ಸಾಧನೆಯಾಗಿರಲಿಲ್ಲ.

ನಾಲ್ಕನೇ ಸುತ್ತಿನಲ್ಲಿ ಮಹಾರಾಷ್ಟ್ರದ ನುಬೇರ್‌ಶಾ ಶೇಕ್ ಮೊಹಮ್ಮದ್ (2) ಅವರನ್ನು ಸೋಲಿಸಿದ ಕೇರಳದ ಪ್ರತಿಭಾನ್ವಿತ ಗೌತಮ್ ಕೃಷ್ಣ ಮೂರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಸೆಲ್ವಮುರುಗನ್‌ಗೆ ಮುನ್ನಡೆ: ‘ಬಿ’ ಕೆಟಗರಿ (2000ಕ್ಕಿಂತ ಕಡಿಮೆ ರೇಟಿಂಗ್) ಟೂರ್ನಿಯ ಏಳು ಸುತ್ತುಗಳ ನಂತರ ತಮಿಳುನಾಡಿನ ಸೆಲ್ವಮುರುಗನ್ (7 ಪಾಯಿಂಟ್) ಮುನ್ನಡೆಯಲ್ಲಿದ್ದಾರೆ. ತಲಾ ಆರೂವರೆ ಪಾಯಿಂಟ್ಸ್ ಪಡೆದಿರುವ ಓಂಕಾರ್ ಕಾಡವ್ (ಮಹಾರಾಷ್ಟ್ರ), ಜೈದಂಬರೀಶ್ ಎನ್.ಆರ್. ಮತ್ತು ತೆಲಂಗಾಣದ ಅಕುಲ ಪ್ರಣಯ್ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಸೋತ ರುತುಜಾ

ಬೆಂಗಳೂರು: ಭಾರತದ ಕೊನೆಯ ಭರವಸೆ ಎನಿಸಿದ ರುತುಜಾ ಭೋಸಲೆ ಅವರು ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಆರನೇ ಶ್ರೇಯಾಂಕದ ಕರೋಲ್ ಮೊನೆಟ್ ಎದುರು ಸೋಲನುಭವಿಸಿದರು. ಶನಿವಾರ ನಡೆದ ಪಂದ್ಯದಲ್ಲಿ ಫ್ರಾನ್ಸ್‌ನ ಆಟಗಾರ್ತಿ 6–2, 6–0 ಯಿಂದ ವೈಲ್ಡ್ ಕಾರ್ಡ್ ಪ್ರವೇಶ ಪಡದಿದ್ದ ರುತುಜಾ ಅವರನ್ನು 62 ನಿಮಿಷಗಳಲ್ಲಿ ಸೋಲಿಸಿದರು.

ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಪ್ರಶಸ್ತಿಗಾಗಿ ಭಾನುವಾರ ನಡೆಯುವ ಫೈನಲ್‌ನಲ್ಲಿ ಮೊನೆಟ್, ಅಗ್ರ ಶ್ರೇಯಾಂಕದ ದರ್ಜಾ ಸೆಮೆನಿಸ್ಟಾಜಾ ಅವರನ್ನು ಎದುರಿಸಲಿದ್ದಾರೆ.

21 ವರ್ಷದ ದರ್ಜಾ, ಇಟಲಿಯ ಕ್ಯಾಮಿಲ್ಲಾ ರೊಸಾಟೆಲ್ಲೊ ಜೊತೆಗೂಡಿ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಫೈನಲ್‌ನಲ್ಲಿ 3–6, 6–2, 10–8 ರಿಂದ ತೈಪೆಯ ಯು-ಯುನ್ ಲಿ ಮತ್ತು ಜಪಾನ್‌ನ ಎರಿ ಶಿಮಿಜು ಅವರ ಸವಾಲನ್ನು ಬದಿಗೊತ್ತಿದರು.

ರೈಝಾ, ಅನಂತಜೀತ್‌ಗೆ ಒಲಿಂಪಿಕ್ ಟಿಕೆಟ್

ಕುವೈತ್ (ಪಿಟಿಐ): ಭಾರತದ ಶೂಟರ್‌ಗಳಾದ ರೈಝಾ ದಿಲ್ಲೋನ್ ಮತ್ತು ಅನಂತಜೀತ್ ಸಿಂಗ್ ನರೂಕಾ ಅವರು ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ಶನಿವಾರ ಅರ್ಹತೆ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಏಷ್ಯಾ ಒಲಿಂಪಿಕ್ ಅರ್ಹತಾ ಶಾಟ್‌ಗನ್ ವಿಭಾಗದ ಮಹಿಳೆಯರ ಸ್ಕೀಟ್‌ನಲ್ಲಿ ಬೆಳ್ಳಿ ಪದಕ ಜಯಿಸಿದ ರೈಝಾ ಈ ಸಾಧನೆ ಮಾಡಿದರು. ಪುರುಷರ ಸ್ಕಿಟ್‌ನಲ್ಲಿಯೂ ಅನಂತಜೀತ್ ಬೆಳ್ಳಿ ಗೆದ್ದರು. ಇದರೊಂದಿಗೆ ಭಾರತದಿಂದ ಪ್ಯಾರಿಸ್ ಟಿಕೆಟ್ ಗಳಿಸಿದ ಶೂಟರ್‌ಗಳ ಸಂಖ್ಯೆಯು 19ಕ್ಕೇರಿತು.

19 ವರ್ಷದ ರೈಝಾ ಆರು ಸ್ಪರ್ಧಿಗಳಿದ್ದ ಫೈನಲ್ ಸುತ್ತಿನ ಆರಂಭದಲ್ಲಿ ಮುನ್ನಡೆಯಲ್ಲಿದ್ದರು. ಆದರೆ ಸ್ಪರ್ಧೆಯ ಉತ್ತರಾರ್ಧದಲ್ಲಿ ಮೂರು ಬಾರಿ ಗುರಿ ಕಟ್ಟುವಲ್ಲಿ ವಿಫಲರಾದರು.

ಇದರಿಂದಾಗಿ ಚೀನಾದ ಜಿನಿಮೀ ಗಾವೊ ಅವರು 60 ಶಾಟ್‌ಗಳ ಪೈಕಿ 56 ಬಾರಿ ನಿಖರ ಗುರಿ ಸಾಧನೆ ಮಾಡಿ ಚಿನ್ನ ಗೆದ್ದರು. ರೈಝಾ 52 ಹಿಟ್‌ಗಳೊಂದಿಗೆ ಎರಡನೇ ಸ್ಥಾನ ಪಡೆದರು.

ಬೆಳ್ಳಿ ಪದಕದೊಂದಿಗೆ ರೈಝಾ ದಿಲ್ಲೋನ್ –ಎನ್‌ಆರ್‌ಎಐ ಟ್ವಿಟರ್

ಭಾರತದವರೇ ಆದ ಮಹೇಶ್ವರಿ ಚವ್ಹಾಣ್ ಅವರು ಇದೇ ವಿಭಾಗದಲ್ಲಿ 43 ಅಂಕ ಗಳಿಸಿ ಕಂಚು ಪಡೆದರು. ಗಣೆಮತ್ ಶೇಖಾನ್ ಅವರು ಫೈನಲ್‌ನಲ್ಲಿ 30 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದರು.

ಗಣೇಮತ್ ಅವರು ಕ್ವಾಲಿಫಿಕೇಷನ್‌ನಲ್ಲಿ 117 ಹಾಗೂ ಮಹೇಶ್ವರಿ 115 ಅಂಕಗಳೊಂದಿಗೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿ ಫೈನಲ್ ಪ್ರವೇಶಿಸಿದ್ದರು. ರೈಝಾ ಅವರು ಅರ್ಹತಾ ಸುತ್ತಿನಲ್ಲಿ ಆರನೇ ಸ್ಥಾನ ಪಡೆದಿದ್ದರು.

ಅನಂತಜೀತ್ ಸಿಂಗ್ ನರೂಕಾ –ಪಿಟಿಐ ಚಿತ್ರ

ಪುರುಷರ ವಿಭಾಗದ ಫೈನಲ್‌ನಲ್ಲಿ ಅನಂತಜೀತ್ 56 ಅಂಕ ಗಳಿಸಿದರು. ಕೇವಲ ಒಂದು ಅಂಕದ ಅಂತರದಿಂದ ಚಿನ್ನ ಕೈತಪ್ಪಿತು. ತೈಪೆಯ ಮೆಂಗ್ ಯುನ್ ಲೀ ಅವರು 57 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದರು.

ಮೊಹಮ್ಮದ್ ಅಲ್ದಾಯಿಹನಿ ಕಂಚು ಪಡೆದರು.

‘ಡಾ. ಬಿ.ಆರ್. ಅಂಬೇಡ್ಕರ್: ನೌ ಆ್ಯಂಡ್ ದೆನ್’ ಕಿರುಚಿತ್ರದ ದೃಶ್ಯ

ಮುಂಬೈನಲ್ಲಿ ನೆಲೆಸಿರುವ ಜ್ಯೋತಿ ನಿಶಾ, ‘ಬಿ.ಆರ್. ಅಂಬೇಡ್ಕರ್: ನೌ ಆ್ಯಂಡ್ ದೆನ್’ ಎಂಬ ಕಿರುಚಿತ್ರ ತಯಾರಿಸಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಈ ಚಿತ್ರ ಪ್ರದರ್ಶಿತವಾಯಿತು. ಆ ಕಾಲದ ಅಂಬೇಡ್ಕರ್ ಹಾಗೂ ಈಗ ಕಾಣಿಸುತ್ತಿರುವ ಅಂಬೇಡ್ಕರ್ ಚಿಂತನೆಗಳನ್ನು ಅವರು ಮುಖಾಮುಖಿಯಾಗಿಸಿದ್ದಾರೆ. ಆ ಪ್ರಕ್ರಿಯೆಯನ್ನು ಅವರು ಈ ಮಾತುಕತೆಯಲ್ಲಿ ಹಂಚಿಕೊಂಡಿದ್ದಾರೆ.

ಕಾಲದ ಕನ್ನಡಿಯಲ್ಲಿ ಅಂಬೇಡ್ಕರ್

ಸಂದರ್ಶನ: ಶ್ರೇಯಸ್ ಶ್ರೀನಾಥ್



ಜ್ಯೋತಿ ನಿಶಾ

- **‘ಬಿ.ಆರ್. ಅಂಬೇಡ್ಕರ್: ನೌ ಆ್ಯಂಡ್ ದೆನ್’ ಕಿರುಚಿತ್ರ ಮಾಡಲು ನಿಮಗೆ ಪ್ರೇರಣೆ ಏನು?**

ಅನೇಕ ಸಂಗತಿಗಳಿವೆ. ಜನಪ್ರಿಯ ಸಂಸ್ಕೃತಿಯು ನಮ್ಮನ್ನು ಹೇಗೆ ಬಿಂಬಿಸುತ್ತಿದೆ ಎನ್ನುವುದನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ಏನಾದರೂ ಮಾಡಬೇಕು ಎಂದು ಅನ್ನಿಸಿತು. ದೇಶಕ್ಕೆ ಸಾಕಷ್ಟು ಕೊಡುಗೆಗಳನ್ನು ಕೊಟ್ಟಿದ್ದರೂ ಅಂಬೇಡ್ಕರ್ ಪರಂಪರೆಯನ್ನು ಕಡೆಗಣಿಸುತ್ತಿರುವುದಾದರೂ ಏಕೆ ಎಂದು ಅರ್ಥ ಮಾಡಿಕೊಳ್ಳುವ ಮಾರ್ಗವಾಗಿ ನನಗೆ ಈ ಚಿತ್ರ ಮಾಡುವ ಕೆಲಸ ತೋರಿತು. ಅಂಬೇಡ್ಕರ್ ಅವರನ್ನು ಕುರಿತು ಜಬ್ಬಾರ್ ಪಟೇಲ್ ಮಾಡಿದ್ದ ಸಿನಿಮಾದ ಬಗೆಗೆ ಕೇಳಿದ್ದೆ. ‘ಜೈ ಭೀಮ್ ಕಾಮ್ರೇಡ್’ ಎಂಬ ಸಾಕ್ಷ್ಯಚಿತ್ರವನ್ನು ಆನಂದ್ ಪಟವರ್ಧನ್ ಮಾಡಿದ್ದುದೂ ಗೊತ್ತಿತ್ತು. ಅವರ ರಾಜಕೀಯ ನಿಲುವುಗಳನ್ನು ನಾನು ಒಪ್ಪುವುದಿಲ್ಲ. ಹೀಗಾಗಿ ನನ್ನಂಥವಳೇ ಅಂಬೇಡ್ಕರ್ ಪರಂಪರೆಯನ್ನು ಹೇಳುವ ಚಿತ್ರದೊಟ್ಟಿಗೆ ನೇರವಾಗಿ ಸಂಬಂಧ ಇರಿಸಿಕೊಳ್ಳಬೇಕು ಅನಿಸಿತು.

ಅಷ್ಟೇ ಅಲ್ಲದೆ, ದೇಶದಲ್ಲಿ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ದೊಡ್ಡ ಮಟ್ಟದ ಬದಲಾವಣೆಗಳಾದವು. 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿತು. ಪರ್ಯಾಯವಾಗಿ ನನ್ನ ವಾರಗೆಯವರು ಹಾಗೂ ಯುವಕ-ಯುವತಿಯರು ‘ಅಂಬೇಡ್ಕರೈಟ್ ರಾಜಕೀಯ’ದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಜಿಗ್ನೇಶ್ ಮೇವಾನಿ, ಚಂದ್ರಶೇಖರ್ ಆಜಾದ್, ತೆನ್‌ಮೋಳಿ ಸೌಂದರರಾಜನ್, ರಾಯಾ ಸರ್ಕಾರ್ ಇವರೆಲ್ಲ ಅದಕ್ಕೆ ಉದಾಹರಣೆ. ರೋಹಿತ್ ವೇಮುಲ ಮರಣದ ದುರಂತವನ್ನೂ ಕಂಡೆವು. ಅವರು ಎತ್ತಿಹಿಡಿದಿದ್ದ ‘ಅಂಬೇಡ್ಕರಿಸಂ’, ಪ್ರಾರಂಭಿಸಿದ್ದ ಹೋರಾಟಕ್ಕೆ ಅವರ ಮರಣದಿಂದ ಕಿಚ್ಚು ಹಚ್ಚಿದಂತಾಯಿತು. ಅಧಿಕಾರಸ್ಥರ ನಡಾವಳಿಗಳನ್ನು ಖಂಡಿಸುವ ಯುವದನಿ ಹೆಚ್ಚಾಗಿ ‘ಜೈ ಭೀಮ್’ ಎಂಬ ಘೋಷಣೆ ಕೇಳಿದೆವು. ಯಾವುದೋ ಮಹತ್ತರವಾದುದು ಘಟಿಸುತ್ತಿದ್ದು, ಅದನ್ನು ಹಿಡಿದಿಡಬೇಕು ಎಂದು ನನಗೆ ಅನ್ನಿಸಿತು.

ಸಿನಿಮಾ ಮಾಡಲು ವೈಯಕ್ತಿಕ ಕಾರಣಗಳೂ ನನಗಿವೆ. ಜಾತಿ ವಿರೋಧಿ ಚಳವಳಿಯಲ್ಲಿ ತೊಡಗಿದ್ದ ಕುಟುಂಬದವಳಾದ ನನಗೆ ಅಂಬೇಡ್ಕರ್ ಬಗೆಗೆ ಗೌರವವಿದೆ. ನನ್ನ ಮನೆಯ ಆಚೆಗಿನ ಜಗತ್ತಿನಲ್ಲಿ ಏಕೆ ಅಂಬೇಡ್ಕರ್ ಪರಂಪರೆಯನ್ನು ಜನಪ್ರಿಯವಾಗಿ ಬಿಂಬಿಸಿಲ್ಲ ಎನ್ನುವುದು ಕಾಡತೊಡಗಿತು.

- **ಗತಕಾಲದ ಅಂಬೇಡ್ಕರ್ ಹಾಗೂ ಈ ಕಾಲದ ಅಂಬೇಡ್ಕರ್ ಇಬ್ಬರ ನಡುವಿನ ಸಂವಾದದ ರೂಪದಲ್ಲಿ ಈ ಚಿತ್ರವನ್ನು ಮಾಡಬೇಕು ಎಂದು ನಿಮಗೆ ಯಾಕೆ ಅನ್ನಿಸಿತು? ಚಳವಳಿಯ ಸೂಕ್ಷ್ಮಗಳನ್ನು ಅದರ ಮೂಲಕ ಅನಾವರಣಗೊಳಿಸಿದ್ದು ಹೇಗೆ? ನಿಮ್ಮ ಚಿತ್ರದ ಮೂಲಕ ಭವಿಷ್ಯದ ಅಂಬೇಡ್ಕರ್ ಅವರನ್ನು ಹೇಗೆ ಕಂಡುಕೊಳ್ಳುವಿರಿ?**

ನನ್ನ ಸುತ್ತಮುತ್ತ ತೆರೆದುಕೊಳ್ಳುತ್ತಿದ್ದ ಈ ಹೊತ್ತಿನ ಘಟನೆಗಳು ಹಿಂದೆ ನಡೆದ ಘಟನೆಗಳ ಬಲವಾದ ಅನುರಣನ ಎಂದೇ ನನ್ನ ಭಾವನೆ. ಚಳವಳಿಗಳನ್ನು ವಿಸ್ತೃತವಾಗಿ ದಾಖಲಿಸಿರುವ ‘ದಲಿತ್ ಕ್ಯಾಮೆರಾ’ ತರಹದ ಇತರ ಮಾಧ್ಯಮ ಸಂಸ್ಥೆಗಳ ನೆರವನ್ನು ಪಡೆದುಕೊಂಡೆ. ನನ್ನ ತೃಪ್ತಿಗಷ್ಟೇ ಈ ಚಿತ್ರ ಮಾಡದೆ, ಬಹುಜನರು ಹಾಗೂ ಅವರ ಕಳಕಳಿಯ ಪ್ರಾತಿನಿಧಿಕತೆಯ ಬಗೆಗೆ ತಿಳಿವಳಿಕೆ ನೀಡಿ, ಆ ಕುರಿತು ಮೂಡಿದ್ದ ತಪ್ಪು ಭಾವನೆಗಳನ್ನು ಸರಿಪಡಿಸುವ ಉದ್ದೇಶವನ್ನೂ ಇಟ್ಟುಕೊಂಡೆ. ಹೀಗಾಗಿ ಹಿಂದೆ ನಮ್ಮ ಜನರು ಜಾತಿಯ ಕಾರಣಕ್ಕೆ ತುಳಿತಕ್ಕೆ ಒಳಗಾದ ಸಂದರ್ಭವನ್ನು ಹೇಗೆ ಎದುರಿಸಿರಬಹುದು ಎಂದು ಕಲ್ಪಿಸಿಕೊಳ್ಳಲಿಕ್ಕೆ ಸಾಧ್ಯವಾಯಿತು.

13ನೇ ಪುಟಕ್ಕೆ...

ಹೀಗೊಂದು ರಾಮ ಸೀತಾ ಕಲ್ಯಾಣ

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಿರುವುದು ಸದ್ಯದ ಸುದ್ದಿ. ಹಳ್ಳಿ ಹಳ್ಳಿಗಳಲ್ಲೂ ಇರುವ ಜನಪದ ವಾಲ್ಮೀಕಿಗಳು ರಾಮಾಯಣವನ್ನು ಸಮಕಾಲೀನಗೊಳಿಸಿ ಅಥವಾ ವಿಸ್ತರಿಸಿ ಮರುಕಥೆಯನ್ನು ಪ್ರಾಣಿಗಳನ್ನೂ ಬಳಸಿಕೊಂಡು ಕಾಣಿಸುತ್ತಿದ್ದಾರೆ. ಅಂತಹ ಜನಪದದ ಪ್ರತಿಧ್ವನಿ ಈ ಲೇಖನ.

ಕಲೆ: ಶೇಖರ ಬಳ್ಳಾರಿ

ಸರಜೂ ಕಾಟ್ಕರ್

ಜಗತ್ತಿನಲ್ಲಿ ಅಸಂಖ್ಯಾತ ರಾಮಾಯಣಗಳಿವೆ. ಮೂಲದಲ್ಲಿ ವಾಲ್ಮೀಕಿ ಬರೆದ ರಾಮಾಯಣಕ್ಕೆ ಭಾರತದ ಅಥವಾ ಜಗತ್ತಿನ ಉದ್ದಗಲಕ್ಕೂ ಪಸರಿಸಿದ ‘ಜನಪದ ವಾಲ್ಮೀಕಿಯರು’ ತಮ್ಮ ತಮ್ಮ ಪರಿಸರಕ್ಕೆ ಅನುಸರಿಸಿ ಮೂಲ ರಾಮಾಯಣವನ್ನು ಮೂಲಕ್ಕೆ ಚ್ಯುತಿ ಬಾರದಂತೆ ಪುನರ್ಲೇಖನ ಮಾಡಿದರು. ಆ ಸಂದರ್ಭಗಳಲ್ಲಿ ಈ ಜನಪದ ವಾಲ್ಮೀಕಿಯರು ತಾವು ಪುನರ್‌ರಚಿಸಿದ ರಾಮಾಯಣದಲ್ಲಿ ತಮ್ಮ ಪ್ರತಿಭೆಯನ್ನು ಮೆರೆದರು. ಪ್ರಖ್ಯಾತ ಕವಿಗಳೂ ಭಾರತದ ವಿವಿಧ ಪ್ರದೇಶಗಳ ರಾಮಾಯಣಗಳನ್ನು ಸಂಗ್ರಹಿಸಿದ ಎ.ಕೆ. ರಾಮಾನುಜನ್ ಅವರು ‘ಜಗತ್ತಿನಲ್ಲಿ ಮೂರುನೂರು ರಾಮಾಯಣಗಳಿವೆ’ ಎಂದು ಹೇಳಿದರು; ಆ ಹೆಸರಿನಲ್ಲಿಯೇ ಅವರು ಕೃತಿಯನ್ನು ಪ್ರಕಟಿಸಿದರು. ಒಂದು ಸಂದರ್ಭದಲ್ಲಿ ಯು.ಆರ್. ಅನಂತಮೂರ್ತಿಯವರು ‘ಜಗತ್ತಿನಲ್ಲಿ ಕನಿಷ್ಠ ಮೂರು ಸಾವಿರವಾದರೂ ರಾಮಾಯಣಗಳಿವೆ’ ಎಂದು ಹೇಳಿದ್ದರು. ಅಂತರರಾಷ್ಟ್ರೀಯ ಖ್ಯಾತಿಯ ಇನ್ನೊಬ್ಬ ಸಂಶೋಧಕರಾದ ರಾ.ಚಿಂ. ಢೇರೆಯವರು ‘ಭಾರತದ ಜನಸಂಖ್ಯೆ ಎಷ್ಟಿದೆಯೋ ಅಷ್ಟು ರಾಮಾಯಣಗಳಿವೆ. ಇಲ್ಲಿಯ ಪ್ರತಿ ಮನೆಯೂ ರಾಮಾಯಣದ ಒಂದು ಕೃತಿಯೇ’ ಎಂದು ಹೇಳಿದ್ದರು.

ಮಹಾಭಾರತದ ಮೂಲ ಹೆಸರು ‘ಜಯ’. ವ್ಯಾಸರು ಅದನ್ನು ‘ಜಯ’ ಅನ್ನುವ ಹೆಸರಿನಲ್ಲಿ ಬರೆದರು. (ಅರ್ಜುನನ ಅನೇಕ ಹೆಸರುಗಳಲ್ಲಿ ‘ಜಯ’ ಅನ್ನುವುದು ಒಂದು ಹೆಸರು) ಮುಂದೆ ಭಾರತದಾದ್ಯಂತ ಇರುವ ‘ಜನಪದ ವ್ಯಾಸರು’ ಈ ‘ಜಯ’ದಲ್ಲಿ ತಮ್ಮ ತಮ್ಮ ಪ್ರದೇಶಗಳ ಕಥೆಗಳನ್ನು ಸೇರಿಸಿದರು. ಈ ಜನಪದ ವ್ಯಾಸರು ಕೆಲವೊಮ್ಮೆ ಮಹಾಭಾರತದ ಘಟನೆಗಳು ತಮ್ಮ ಊರಿನಲ್ಲಿಯೇ ನಡೆಯಿತೆಂಬಂತೆ ಚಿತ್ರಿಸಿರುವುದು ಅವರ ಅಗಾಧ ಪ್ರತಿಭೆಗೆ ಸಾಕ್ಷಿ. ಹೀಗೆ ಇಡಿಯ ಭಾರತದ ಕಥೆಗಳು ‘ಜಯ’ಕ್ಕೆ ಸೇರ್ಪಡೆಯಾದುದರಿಂದ ಮುಂದೆ ‘ಜಯ’ವೇ ‘ಮಹಾಭಾರತ’ವಾಯಿತು.

ಕೋಲೆ ಬಸವರಾಟ

ನಾನು ಚಿಕ್ಕವನಿದ್ದಾಗ ಅಂದರೆ ಅರವತ್ತರ ದಶಕದಲ್ಲಿ ನಮ್ಮ ಓಣಿಗೆ ಅನೇಕ ಜನ ಕೋಲೆ ಬಸವರಾಟದ ಜನರು ದಂಡು ದಂಡಾಗಿ ಬರುತ್ತಿದ್ದರು. ಮೂಲತಃ ಈ ಕೋಲೆ ಬಸವರು ಗೊಲ್ಲರು. ತಾವು ಯಾದವ ಕುಲಕ್ಕೆ ಸೇರಿದವರೆಂದು ಅವರು ಹೇಳಿಕೊಳ್ಳುತ್ತಾರೆ. ಇವರ ಆರಾಧ್ಯದೈವ ಜುಂಜಪ್ಪ. ಈ ಜುಂಜಪ್ಪನು ಬಸವರೂಪವನ್ನು ತಾಳಿ ತಮಗೆ ಅವನನ್ನು ಪಾಲನೆ ಮಾಡಲು ಹೇಳಿದ್ದಾನೆಂದು ಅವರ ನಂಬುಗೆ. ಹೀಗಾಗಿ ಬಸವನನ್ನು (ಆಕಳು, ಹಸು, ಗೂಳಿ, ಕಪಿಲೆ) ತಮ್ಮ ಜೀವನಕ್ಕೆ ಒಗ್ಗಿಸಿಕೊಂಡು ಅವರ ಮೂಲಕ ಜನರಿಗೆ ಮನರಂಜನೆಯನ್ನು ಒದಗಿಸುತ್ತ ತಮ್ಮ ಜೀವನ ನಿರ್ವಹಣೆಯನ್ನು ಮಾಡುತ್ತಿರುವುದಾಗಿಯೂ ಅವರು ಹೇಳುತ್ತಾರೆ. ಹುಬ್ಬಳ್ಳಿಯ ಮರಾಠ ಗಲ್ಲಿಯಲ್ಲಿರುವ ಡೆಕ್ಕನ್ ಟಾಕೀಸಿನ ಹಿಂಭಾಗದಲ್ಲಿ ಜುಂಜಪ್ಪನ ಗುಡಿ ಇದ್ದು, ಈ ಜನರು ಟೋಳಿ ಟೋಳಿಯಾಗಿ ಅಲ್ಲಿಗೆ ಬಂದು ನೆಲೆಸುತ್ತಿದ್ದರು.

ಈ ಗೊಲ್ಲರು ಪ್ರಾಣಿ ಸಂವಹನವನ್ನು ಒಂದು ಕಲೆಯಾಗಿ ಮಾರ್ಪಡಿಸಿಕೊಂಡವರು. ಬೇರೆ ಬೇರೆ ಪ್ರದೇಶಗಳಲ್ಲಿ ವಾಸ ಮಾಡುವ ಈ ಗೊಲ್ಲರು ಅಥವಾ ಕೋಲೆ ಬಸವರಾಟದ ಜನರು ಆಯಾ ಪ್ರದೇಶಕ್ಕೆ ಅನುಗುಣವಾದ ಆಟಗಳನ್ನು ತಾವು ಸಾಕಿಕೊಂಡಿರುವ ಆಕಳು, ಎತ್ತು, ಗೂಳಿ ಮುಂತಾದ ಪ್ರಾಣಿಗಳಿಂದ ಪ್ರದರ್ಶಿಸುತ್ತಿದ್ದರು. ಎಲ್ಲೆಡೆಗೆ ಅವರು ತಪ್ಪದೇ ಆಡುವ ಆಟ ‘ಶ್ರೀರಾಮ ಸೀತಾ ಕಲ್ಯಾಣ ಮಹೋತ್ಸವ’ವೇ ಆಗಿದೆ. ಈ ಆಟವನ್ನು ಭಾರತದ ಎಲ್ಲ ಕೋಲೆ ಬಸವರು ಪ್ರಾಂತ ಮತ್ತು ಭಾಷಾಭೇದವೆನ್ನದೇ ಆಡುತ್ತಾರೆ.

ನಾನು ನೋಡಿದ ‘ಶ್ರೀರಾಮ ಸೀತಾ ಕಲ್ಯಾಣ ಮಹೋತ್ಸವ’ದ ಆಟದಲ್ಲಿ ಸೂತ್ರಧಾರನು ರಾಮಾಯಣದ ಕಥೆಯನ್ನು ಕೂಡಿದ ಜನರಿಗೆ ಹೇಳುತ್ತಾನೆ. ಈ ಪ್ರದರ್ಶನವು ಬೀದಿ ನಾಟಕದಂತೆ ಅನಾವರಣಗೊಳ್ಳುತ್ತದೆ. ಹಿಂದಿನ ಕಾಲದಲ್ಲಿ ಈ ಆಟಗಳು ರಾತ್ರಿಯ ವೇಳೆಯಲ್ಲಿ ಹಿಲಾಲು ಬೆಳಕಿನಲ್ಲಿ ನಡೆಯುತ್ತಿದ್ದವಂತೆ.

ಬಸವನೇ ರಾಮ, ಹಸುವೇ ಸೀತೆ

‘ಶ್ರೀರಾಮ ಸೀತಾ ಕಲ್ಯಾಣ ಮಹೋತ್ಸವ’ ಆಟದಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆ ಪಾತ್ರಗಳ ರೂಪದಲ್ಲಿ ಒಂದು ಬಸವ (ಗೂಳಿ), ಮರಿಬಸವ ಮತ್ತು ಒಂದು ಹಸು ಇರುತ್ತದೆ. ಸೂತ್ರಧಾರ ಹಾಗೂ ಇನ್ನಿಬ್ಬರು ಅವನಿಗೆ ಸಹಾಯಕ ಪುರುಷ ಪಾತ್ರದವರು ಇರುತ್ತಾರೆ. ಆರಂಭದಲ್ಲಿ ಸೂತ್ರಧಾರನು ಆಟದ ಮೈದಾನವನ್ನು ಶಹನಾಯಿ ಊದುತ್ತ ಒಂದು ರೌಂಡ್ ಹೊಡೆಯುತ್ತಾನೆ. ನಂತರ ಕೂಡಿದ ಜನರಿಗೆ ‘ನಾವು ಅಯೋಧ್ಯೆಯಿಂದ ಬಂದಿದ್ದೇವೆ. ನಮ್ಮ ರಾಮನಿಗೆ ಹೆಣ್ಣು ನೋಡುವುದಕ್ಕೆ. ಇಡಿಯ ಭಾರತ ತಿರುಗಾಡಿದರೂ ನಮಗೆ ಎಲ್ಲಿಯೂ ಯೋಗ್ಯ ಹೆಣ್ಣು ಸಿಗಲಿಲ್ಲ. ಆಕಾಶವಾಣಿಯೊಂದು ನಿಮ್ಮ ರಾಮನಿಗೆ ಈ ಊರಿನಲ್ಲಿ (ಊರಿನ ಹೆಸರು) ಯೋಗ್ಯ ಹೆಣ್ಣು ಇದೆಯೆಂದು ಹೇಳಿದ್ದರಿಂದ ಇಲ್ಲಿಗೆ ಬಂದಿದ್ದೇವೆ. ನಮ್ಮ ರಾಮನಿಗೆ ಹೆಣ್ಣು ಕೊಡುವ ದಯಾಳು ತಂದೆ ತಾಯಿಗಳು ದಯಮಾಡಿ ಮುಂದೆ ಬರಬೇಕು’ ಎಂದು ಹೇಳುತ್ತಾನೆ. ಆಗ ಸೀತೆಯ ಕಡೆಯವನು ಮುಂದೆ ಬಂದು ‘ನಾನು ಜನಕ ಮಹಾರಾಜನು, ನಿಮ್ಮ ರಾಮನಿಗೆ ನಾನು ನನ್ನ ಮಗಳು ಸೀತೆಯನ್ನು ಕೊಡುವೆ’ ಎಂದೆನ್ನುತ್ತಾನೆ.

ಆಗ ಸೂತ್ರಧಾರನು, ‘ಬರೀ ಒಣ ಒಣ ಬಂದು ಹೆಣ್ಣು ಕೊಡ್ತೇನೆಂದರೆ ಆಗುವುದಿಲ್ಲ. ಮೊದಲು ಬೀಗರಿಗೆ ಚಹಾ ಪಾಣಿ ನಾಷ್ಟಾದ ವ್ಯವಸ್ಥೆ ಮಾಡ್ರಿ’ ಎಂದು ಹೇಳುತ್ತಾನೆ. ಜನಕ ಮಹಾರಾಜನು ‘ಆಯ್ತು; ಚಹಾ ಪಾಣಿ ವ್ಯವಸ್ಥೆ ಮಾಡಿದ್ದೇನೆ’ ಎಂದು ಹೇಳುತ್ತ ಶಹನಾಯಿ ಊದುತ್ತ ಮೈದಾನವನ್ನು ಒಂದು ಸುತ್ತ ತಿರುಗುತ್ತಾನೆ. ಸೂತ್ರಧಾರನು, ‘ನಿಮ್ಮ ಚಹಾ ಪಾಣಿಯಿಂದ ನಾವು ಖುಷ್ ಆದೆವು. ಈಗ ನಮ್ಮ ರಾಮನಿಗೆ ನೀವು ಏನೇನು ವಸ್ತುಗಳನ್ನು ಕೊಡುವಿರೋ ಎಲ್ಲ ಜನರಿಗೆ (ದೈವದವರಿಗೆ) ಹೇಳಿರಿ’ ಎಂದು ಕೇಳುತ್ತಾನೆ. ಸೀತೆಯ ತಂದೆಯಾದವನು ‘ರಾಮನಿಗೆ ವರದಕ್ಷಿಣೆಯೆಂದು ಎರಡು ಸಾವಿರ ಬೆಳ್ಳಿಯ ನಾಣ್ಯಗಳು, ಜೊತೆಗೆ ಅಂಗಿ, ಧೋತರ, ಕೋಟು, ರುಮಾಲು, ಟೈಮ್ ನೋಡಲು ವಾಚ್, ರೆಕಾರ್ಡ್ ಕೇಳಲು ರೇಡಿಯೊ, ಬಿಸಿಲಲ್ಲಿ ಹಾಕಿಕೊಳ್ಳಲು ಕಪ್ಪು ಗಾಗಲ್, ಬಂಗಾರದ ಚೈನ್ - ಇಷ್ಟು ವಸ್ತು ಕೊಡುತ್ತೇನೆ’ ಎಂದು ಹೇಳುತ್ತಾನೆ. ಜನಕ ಮಹಾರಾಜನಾದವನು ಸೀತೆ (ಹಸು)ಯ ಕಡೆಗೆ ನೋಡಿದಾಗ ಅದು ‘ಹುಂ’ ಎಂದು ಗೋಣು ಅಲುಗಾಡಿಸುತ್ತದೆ. ನಂತರ ಜನಕ ಮಹಾರಾಜ ಪಾತ್ರಧಾರಿಯು ‘ಈಗ ನಮ್ಮ ಸೀತೆಗೆ ನೀವೇನು ಹಾಕುತ್ತೀರಿ?’ ಎಂದು ಕೇಳುತ್ತಾನೆ. ಅದಕ್ಕೆ ಸೂತ್ರಧಾರನು ‘ಧಾರಿ ಸೀರೆ, ಎಂಟು ಪೈಠಣದ ಸೀರೆಗಳು, ಕುಬಸ, ಇಲಕಲ್ಲ ಸೀರೆ, ಕಿವಿಗೆ ವಜ್ರದ ಬೆಂಡೋಲೆಗಳು, ಮೂಗಿಗೆ ಮುತ್ತಿನ ನತ್ತು, ಕಾಲಿಗೆ ಬೆಳ್ಳಿಯ ಚೈನ್‌ಗಳು ಹಾಕುತ್ತೇವೆ’ ಎಂದು ಹೇಳುತ್ತಾನೆ. ಅದಕ್ಕೆ ಜನಕ ಮಹಾರಾಜನು ಒಪ್ಪಿಕೊಂಡು ‘ಹಾಗಾದ್ರೆ ಲಗ್ನವನ್ನು ಈಗಲೇ ಇಲ್ಲೇ ದೈವದವರ ಸಮಕ್ಷಮದಲ್ಲಿ ಮಾಡಿ ಮುಗಿಸೋಣ’ ಎಂದೆನ್ನುತ್ತಾನೆ.

ಅಷ್ಟರಲ್ಲಿ ಸೀತೆಯಾದ ಕಪಿಲೆ, ಜನಕ ಮಹಾರಾಜ ಪಾತ್ರಧಾರಿಗೆ ತಿವಿಯುತ್ತದೆ. ಏಕೆಂದು ಆತ ತನ್ನ ಕಿವಿಗಳನ್ನು ಅದರ ಬಾಯಿಗೆ ಒಡ್ಡುತ್ತಾನೆ. ಅನಂತರ ‘ನಮ್ಮ ಸೀತೆ ನಿಮ್ಮ ರಾಮನನ್ನು ಏಕಾಂತದಲ್ಲಿ ಮಾತನಾಡಬೇಕೆಂದು ಬಯಸಿದ್ದಾಳೆ’ ಎಂದು ಹೇಳುತ್ತಾನೆ. ಸೂತ್ರಧಾರನು ‘ಆಗಲಿ’ ಎಂದು ರಾಮ-ಸೀತೆ (ಬಸವ ಮತ್ತು ಹಸು) ಇಬ್ಬರನ್ನೂ ಮೂಲೆಗೆ ಕರೆದುಕೊಂಡು ಹೋಗಿ ತಾನು ದೂರ ನಿಲ್ಲುತ್ತಾನೆ. ಎರಡೂ ಪ್ರಾಣಿಗಳು ಪರಸ್ಪರ ಮಾತನಾಡಿದಂತೆ ಅಭಿನಯಿಸುತ್ತವೆ. ರಾಮ (ಬಸವ) ಸೀತೆ (ಹಸು)ಗೆ ಕಿವಿಯಲ್ಲಿ ಏನೋ ಹೇಳುತ್ತದೆ. ಆಗ ಹಸುವು ಸಿಟ್ಟಾಗಿ ಸೆಟಗೊಂಡಂತೆ ರಾಮನನ್ನು ಬಿಟ್ಟು ಈ ಕಡೆ ಬಂದು ಕೆಳಮುಖ ಮಾಡಿ ನಿಲ್ಲುತ್ತದೆ. ಆಗ ಜನಕ ಪಾತ್ರಧಾರಿಯು ‘ನಮ್ಮ ಸೀತೆಗೆ ನಿಮ್ಮ ರಾಮ ಲೈಕ್ ಆಗಿಲ್ಲವಂತೆ.

15ನೇ ಪುಟಕ್ಕೆ...



ಭಿನ್ನ ಸ್ವರೂಪ

ರಾಮಾಯಣಕ್ಕೂ ಮೂರು ಹೆಸರುಗಳಿವೆ. ‘ರಾಮಾಯಣ’ವೆನ್ನುವುದು ಅಯೋಧ್ಯೆಯಿಂದ ಲಂಕೆಯವರೆಗಿನ ರಾಮಾದಿಗಳ ಸಂಚಾರವನ್ನು ಸೂಚಿಸುವ ಹೆಸರು. ‘ಸೀತಾಚರಿತ’ ಮತ್ತು ‘ರಾವಣವಧಾ’ ಎನ್ನುವುದು ರಾಮಾಯಣದ ಹೆಸರುಗಳೇ. ಭಾರತದ ಉದ್ದಗಲಕ್ಕೂ ಬೇರೆ ಬೇರೆ ಸ್ವರೂಪದ ರಾಮಾಯಣಗಳೂ ಇವೆ. ಜನಪದರರು ರಾಮಾಯಣದ ಮೂಲ ಕಥೆಗೆ ಚ್ಯುತಿ ಬಾರದಂತೆ ಕಥೆಗಳನ್ನೂ, ಪ್ರಸಂಗಗಳನ್ನೂ ಚಿತ್ರಿಸಿದುಂಟು. ಬೈಲಹೊಂಗಲದ ಹಳ್ಳಿಯೊಂದರಲ್ಲಿ ನಾನು ಕೇಳಿದ ರಾಮಾಯಣದಲ್ಲಿ ಲಕ್ಷ್ಮಣನೇ ಸೀತಾ ಸ್ವಯಂವರವನ್ನು ಗೆಲ್ಲುತ್ತಾನೆ. ಸ್ವಯಂವರದ ಪಣವಾದರೂ ಎಂತಹದು? ಜನಕನ ರಾಜ್ಯದಲ್ಲಿ ವಿಪುಲ ಪ್ರಮಾಣದಲ್ಲಿ ಅಸಂಖ್ಯಾತ ಕಾಗೆಗಳಿರುತ್ತವೆ. ಈ ಕಾಗೆಗಳು ಜನರಿಗೆ ವಿಪರೀತ ತೊಂದರೆ ಕೊಡುತ್ತಿರುತ್ತವೆ. ‘ಈ ಕಾಗೆಗಳನ್ನು ನಾಶಪಡಿಸುವವರಿಗೆ ನಾನು ನನ್ನ ಮಗಳಾದ ಸೀತೆಯನ್ನು ಮದುವೆ ಮಾಡಿ ಕೊಡುವೆ’ನೆಂದು ಜನಕ ಡಂಗುರ ಸಾರುತ್ತಾನೆ. ಅಲ್ಲಿಗೆ ವಿಹಾರಾರ್ಥಿಗಳಾಗಿ ಬಂದಿದ್ದ ರಾಮ ಲಕ್ಷ್ಮಣರು ಈ ಚಾಲೆಂಜನ್ನು ಸ್ವೀಕರಿಸುತ್ತಾರೆ. ಇಬ್ಬರ ಕೈಗಳಲ್ಲೂ ಗುಲೇಲ್‌ಗಳಿವೆ. ಈ ಗುಲೇಲ್‌ಗಳ ಸಹಾಯದಿಂದ ಇಬ್ಬರೂ ಕಾಕ ನಾಶಕ್ಕೆ ಪ್ರವರ್ತರಾಗುತ್ತಾರೆ. ರಾಮನಿಗಿಂತ ಹೆಚ್ಚು ಕಾಗೆಗಳನ್ನು ಕೊಂದವನು ಲಕ್ಷ್ಮಣ. ಹೀಗಾಗಿ ಜನಕನು ತನ್ನ ಮಗಳನ್ನು ಲಕ್ಷ್ಮಣನಿಗೆ ಮದುವೆ ಮಾಡಿಕೊಡಲು ತಯಾರಾದಾಗ ಲಕ್ಷ್ಮಣನು ‘ರಾಮ ನನಗೆ ಅಣ್ಣ, ಅವನ ಮದುವೆ ಮೊದಲು ಆಗಬೇಕು’ ಎಂದು ಹೇಳಿ ಮದುವೆಗೆ ರಾಮನನ್ನು ಒಪ್ಪಿಸುತ್ತಾನೆ. ಹೀಗೆ ರಾಮ ಸೀತೆಯರ ಕಲ್ಯಾಣ ಮಹೋತ್ಸವ ನಡೆಯುತ್ತದೆ.

ಈ ರೀತಿಯ ಅನೇಕ ವಿಭಿನ್ನ ಕಥೆಗಳು ಭಾರತದ ಉದ್ದಗಲಕ್ಕೂ ಸಿಗುತ್ತವೆ. ಅಲ್ಲಲ್ಲಿಯ ಲೋಕಲ್ ಪರಿಸ್ಥಿತಿಗೆ ಅನುಗುಣವಾಗಿ ಕಥೆಯನ್ನು ರಚಿಸಿದಂತೆ ಅಥವಾ ಪಾತ್ರಗಳನ್ನು ಸೃಷ್ಟಿಸಿದಂತೆ ಕಂಡುಬರುತ್ತದೆ. ಕಥೆಯ ವಸ್ತು ಒಂದೇ; ಆದರೆ ನೋಟ ಅನೇಕ.

ಶಿಲ್ಪವನದಲ್ಲಿ ಕ್ರಾಂತಿಯ ಮರುಸೃಷ್ಟಿ

ಸಂಗೊಳ್ಳಿಯ ಶಿಲ್ಪವನವು ಇತ್ತೀಚೆಗೆ ವೀಕ್ಷಣೆಗೆ ತೆರೆದುಕೊಂಡಿತು. ರಾಯಣ್ಣನ ಚರಿತ್ರೆ ಬಿಂಬಿಸುವ ಈ ಶಿಲ್ಪವನದಲ್ಲಿ 1,800ಕ್ಕೂ ಹೆಚ್ಚು ಕಲಾಕೃತಿಗಳಿವೆ.

ಇಮಾಮ್‌ಹುಸೇನ್ ಗೂಡುನವರ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಸಂಘರ್ಷಮಯ ಜೀವನದ ಕುರಿತು ಅಧ್ಯಯನ ಮಾಡುವ ಹಂಬಲ ಇದ್ದರೆ, ಮಾಡಬೇಕಾದದ್ದು ಇಷ್ಟೇ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮಕ್ಕೆ ಭೇಟಿ ನೀಡಿ. ಅಲ್ಲಿರುವ ಶಿಲ್ಪವನ(ಶೌರ್ಯಭೂಮಿ)ದಲ್ಲಿ ಇಡೀ ದಿನ ಸುತ್ತಾಡಿದರೆ, ಹೋರಾಟಗಾರನ ಪರಿಚಯ ಆಗುತ್ತದೆ.

ಕಿತ್ತೂರು ರಾಣಿ ಚನ್ನಮ್ಮನ ಮಹಾಸೇನಾನಿ ಸಂಗೊಳ್ಳಿ ರಾಯಣ್ಣನ ಜೀವನ ಎಷ್ಟು ಸವಾಲುಗಳಿಂದ ಕೂಡಿದೆಯೋ, ಅಷ್ಟೇ ನಿಗೂಢವಾಗಿಯೂ ಇದೆ. ಸಂಗೊಳ್ಳಿ ಗ್ರಾಮದಲ್ಲಿ ನಿರ್ಮಿಸಲಾಗಿರುವ ‘ಶಿಲ್ಪವನ’ವು ಆ ದಿನಗಳ ಘಟನಾವಳಿಗಳನ್ನು ಸುಂದರವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದೆ.

ಬಾಲ್ಯದ ದಿನಗಳಿಂದ ಆರಂಭಗೊಂಡು ವೀರಮರಣದವರೆಗಿನ ಸಂಗೊಳ್ಳಿ ರಾಯಣ್ಣನ ಸಾಹಸಗಾಥೆಗಳನ್ನು ಕಲಾಕೃತಿಗಳ ಮೂಲಕ ಹೇಳುವ ಈ ವನದಲ್ಲಿ ನಡೆದಾಡಿದಷ್ಟೂ ಅಭಿಮಾನ ಹೆಚ್ಚುತ್ತದೆ. ‘ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ನಾವು ಪಾಲ್ಗೊಳ್ಳಬೇಕಿತ್ತು. ರಾಯಣ್ಣನಿಗೆ ಜೊತೆ ಆಗಬೇಕಿತ್ತು’ ಎಂಬ ಭಾವ ಮೂಡುತ್ತದೆ.

ಶಿಲ್ಪವನದ ಒಳಗಡೆ ಹೆಜ್ಜೆಯಿಟ್ಟ ಕೂಡಲೇ ರಾಯಣ್ಣನ ಮೂರ್ತಿ ಸ್ವಾಗತಿಸುತ್ತದೆ. ಕಿತ್ತೂರು ಸೇರಿದಂತೆ ಸುತ್ತಮುತ್ತಲ ಪ್ರದೇಶದ ಹೋರಾಟದ ಕಲಿಗಳ ಜೀವನ, ಸಾಹಸ, ಧೈರ್ಯ ಎಲ್ಲವೂ ಹಂತಹಂತವಾಗಿ ಅನಾವರಣಗೊಳ್ಳುತ್ತದೆ. ಮತ್ತಷ್ಟು, ಇನ್ನಷ್ಟು ತಿಳಿದುಕೊಳ್ಳಬೇಕು ಎಂಬ ಉಮೇದು ಹೆಚ್ಚುತ್ತದೆ.

1,800ಕ್ಕೂ ಅಧಿಕ ಕಲಾಕೃತಿಗಳು

ಒಟ್ಟು ₹ 15 ಕೋಟಿ ವೆಚ್ಚದಲ್ಲಿ 10 ಎಕರೆ ವಿಶಾಲ ಪ್ರದೇಶದಲ್ಲಿ ಈ ವನ ನಿರ್ಮಾಣಗೊಂಡಿದೆ. ರಾಯಣ್ಣನ ಚರಿತ್ರೆ ಬಿಂಬಿಸುವ 64 ಸನ್ನಿವೇಶಗಳು ಮತ್ತು 1,800ಕ್ಕೂ ಹೆಚ್ಚು ಕಲಾಕೃತಿಗಳು ಇಲ್ಲಿವೆ. ಸಿಮೆಂಟ್, ಕಬ್ಬಿಣ ಹಾಗೂ ಕೆಂಪು ಇಟ್ಟಿಗೆಯಿಂದ ಸಿದ್ಧಪಡಿಸಿರುವ ಒಂದೊಂದು ಕಲಾಕೃತಿಯೂ ಒಂದೊಂದು ಕಥೆ ಹೇಳುತ್ತದೆ.

ಇಲ್ಲಿನ ಒಟ್ಟಾರೆ ಸೌಂದರ್ಯ ವೃದ್ಧಿಸುವಲ್ಲಿ ಹಾವೇರಿ ಜಿಲ್ಲೆಯ ಗೋಟಗೋಡಿಯ ಶಿಲ್ಪಕಲಾ ಕುಟೀರದ 150ಕ್ಕೂ ಅಧಿಕ ಕಲಾವಿದರ ಶ್ರಮವಿದೆ. ಪರಿಸರವನ್ನು ಸುಂದರಗೊಳಿಸುವ ಕಾಯಕದಲ್ಲಿ ಅವರು ಮೂರು ವರ್ಷಗಳಿಂದ ನಿರತರಾಗಿದ್ದಾರೆ.

ಶಿಲ್ಪವನದಲ್ಲಿ ಏನೇನಿದೆ?

ಕಿತ್ತೂರು ಸಂಸ್ಥಾನದ ದೊರೆ ವೀರಪ್ಪ ದೇಸಾಯಿ ಅವರು ರಾಯಣ್ಣನ ಅಜ್ಜ ರೋಗಪ್ಪ ಅವರಿಗೆ ರಕ್ತಮಾನ್ಯ ಭೂಮಿ ನೀಡಿ ಗೌರವಿಸುವ ಕ್ಷಣ, ರಾಯಣ್ಣನ ತಂದೆ ಭರಮಪ್ಪ ಅವರು ಹುಲಿ ಬೇಟೆಯಾಡಿ ಕಿತ್ತೂರು ಸಂಸ್ಥಾನಕ್ಕೆ ಹೊತ್ತು ತರುವ ಸಂದರ್ಭ, ರಾಯಣ್ಣನ ನಾಮಕರಣ ಮಾಡಿದ ದಿನ, ಗರಡಿಮನೆಯಲ್ಲಿ ಪಳಗುವ ಸನ್ನಿವೇಶ, ಸಾಹಸ ಕಲೆಗಳನ್ನು ಕಲಿತ ಬಗೆ, ಕಿತ್ತೂರು ಸಂಸ್ಥಾನ ಸೇರಿ ರಾಣಿ ಚನ್ನಮ್ಮನ ಕೈಯಿಂದ ಖಡ್ಗ ಸ್ವೀಕರಿಸಿದ್ದು, ಆಗಿನ ಧಾರವಾಡದ ಜಿಲ್ಲಾಧಿಕಾರಿ ಥ್ಯಾಕರೆ ಕಿತ್ತೂರು ಅರಮನೆಗೆ ಬಂದು ಪುತ್ರ ದತ್ತಕ ನಿರಾಕರಿಸಿದ್ದು... ಎಲ್ಲವೂ ಒಂದಕ್ಕಿಂತ ಒಂದು ನೈಜತೆಗೆ ಕನ್ನಡಿ ಹಿಡಿದಿವೆ.

13ನೇ ಪುಟಕ್ಕೆ...



ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ನಿರ್ಮಿಸಿದ ಶಿಲ್ಪವನ -ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಹೀಗೊಂದು ಜನಪದ ಗೀತ ಯಾತ್ರೆ

ಮಂಜುಶ್ರೀ ಕಡಕೋಳ

‘ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ’ ಎಂಬುದು ರಾಮಾಯಣದ ಸಾಲು. ವೃತ್ತಿಗಾಗಿ ತಾಯ್ನಾಡು ತೊರೆದು ವಿದೇಶಕ್ಕೆ ತೆರಳಿದವರಲ್ಲಿ ತಾಯ್ನೆಲದ ನೆನಪು ಪದೇ ಪದೇ ಕಾಡುತ್ತಿರುತ್ತದೆ. ಅಂಥ ನೆನಪಿನ ಚುಂಗಿ ಹಿಡಿದು ಬದುಕುತ್ತಿರುವ ಅಮೆರಿಕದ ಕನ್ನಡಿಗರಿಗೆ ಕಳೆದ ವರ್ಷದ ಕರ್ನಾಟಕ ರಾಜ್ಯೋತ್ಸವ ಹಾಗೂ ದೀಪಾವಳಿ ಮರೆಯಲಾರದ್ದು. ಅಮೆರಿಕದ ಬೇರೆ ಬೇರೆ ಭಾಗಗಳಲ್ಲಿರುವ ವಿವಿಧ ಕನ್ನಡ ಕೂಟಗಳು ಹಮ್ಮಿಕೊಂಡಿದ್ದ ‘ಸವಿತಕ್ಕ ಜನಪದ ಸಂಭ್ರಮ’ ಕಾರ್ಯಕ್ರಮ ಕನ್ನಡಿಗರಲ್ಲಿ ಕರ್ನಾಟಕದ ನೆನಪನ್ನು ಮತ್ತಷ್ಟು ಹಸಿರಾಗಿಸಿತು. ಬೆಂಗಳೂರಿನ ಜನಪದ ಗಾಯಕಿ ಸವಿತಕ್ಕ (ಸವಿತಾ ಗಣೇಶ್ ಪ್ರಸಾದ್) ತಮ್ಮ

ಸವಿತಾ

> ಜನಪದ ಗೀತೆಗಳ ಮೂಲಕ ಛಾಪು ಮೂಡಿಸಿರುವ ಸವಿತಕ್ಕ ಅವರದ್ದೇ ಹಾಡಿನ ಸಂಭ್ರಮವೊಂದು ಅಮೆರಿಕದಲ್ಲಿ ತಿಂಗಳ ಕಾಲ ನಡೆಯಿತು.

ವಿಶಿಷ್ಟ ಕಂಠಸಿರಿಯಲ್ಲಿ ಜನಪದದ ಕಂಪು ಬೀರುವ ಮೂಲಕ ಅಲ್ಲಿನವರಲ್ಲಿ ತವರೂರ ನೆನಪನ್ನು ಮತ್ತಷ್ಟು ಹಸಿರಾಗಿಸಿದರು. ಅಮೆರಿಕದ ಶಿಕಾಗೊ, ನ್ಯೂಯಾರ್ಕ್, ವರ್ಜೀನಿಯಾ, ಡೆಟ್ರಾಯಿಟ್, ದಕ್ಷಿಣ ಕ್ಯಾಲಿಫೋರ್ನಿಯಾ...ಹೀಗೆ ಏಳು ರಾಜ್ಯಗಳಲ್ಲಿನ ಕನ್ನಡ ಕೂಟಗಳು ಆಯೋಜಿಸಿದ್ದ ಎಂಟು ಸಂಗೀತ ಕಾರ್ಯಕ್ರಮಗಳು ಕನ್ನಡಿಗರಲ್ಲಿ ಜನಪದ ಪ್ರೀತಿಯನ್ನು ಸಂಪ್ರೀತಗೊಳಿಸಿದವು. ಅಮೆರಿಕದಲ್ಲಿ ನಿರಂತರವಾಗಿ ಒಂದು ತಿಂಗಳ ಕಾಲ ಜನಪದ ಸಂಗೀತ ಕಾರ್ಯಕ್ರಮ ಹಾಗೂ ಮೂರು ಗಾಯನ ಕಾರ್ಯಾಗಾರ ನಡೆಸಿಕೊಟ್ಟದ್ದು ಒಂದು ರೀತಿಯಲ್ಲಿ ದಾಖಲೆ ಎಂಬುದು ಗಾಯಕಿ ಸವಿತಾ ಅವರ ಅಭಿಪ್ರಾಯ.

ಸಾಧನೆ

ಸವಿತಾ ಅವರ ಕಂಠಸಿರಿಯಲ್ಲಿ ಮೂಡಿಬಂದ ಮಂಟೇಸ್ವಾಮಿ, ಜುಂಜಪ್ಪ ಸ್ವಾಮಿ, ಮಾದೇಶ್ವರ ಸ್ವಾಮಿಯ ಆಯ್ದ ಚರಣಗಳು, ಉಧೋ ಉಧೋ ಎಲ್ಲವ್ವ ಸೇರಿದಂತೆ ಇತರ ಜನಪ್ರಿಯ ಜನಪದ ಗೀತೆಗಳು ಕನ್ನಡಿಗರ ಮನಸೂರೆಗೊಂಡವು. ‘ಚೆಲ್ಲಿದರು ಮಲ್ಲಿಗೆಯಾ’, ‘ಘಲ್ಲು ಘಲ್ಲು ಘಲ್ಲೆನುತಾ’, ‘ಶಿವನು ಭಿಕ್ಷೆಗೆ’, ‘ಪಂಚಮಿ ಹಬ್ಬ’, ‘ತವರೂರ ಮನೆಯ ನೋಡಬಂದೆ’, ‘ಹೆಣ್ಣಿನ ಜನುಮ...’ ಹಾಡುಗಳು ಹೆಣ್ಣುಮಕ್ಕಳಲ್ಲಿ ತವರು ಮನೆಯ ನೆನಪು ಮೂಡಿಸಿದರೆ, ‘ಮೂಡಲ್ ಕುಣಿಗಲ್ ಕೆರೆ’, ‘ಜಕ್ಕಣಕ್ಕ ’ ಹಾಡುಗಳು ಯುವಜನರು, ಪುಟಾಣಿಗಳನ್ನು ಹೆಜ್ಜೆ ಹಾಕುವಂತೆ ಮಾಡಿದವು. ಒಂದೊಂದು ಜನಪದ ಗೀತೆಯೂ ತಾಯ್ನೆಲದ ಬಗೆಗಿನ ಭಾವತೀವ್ರತೆಯನ್ನು ಹೆಚ್ಚಿಸಿತಲ್ಲದೆ, ಹಿರಿಯರು–ಕಿರಿಯರು ಒಗ್ಗೂಡಿ ಹೆಜ್ಜೆ ಹಾಕುವಂತೆ ಮಾಡಿತು. ಈ ನಿರಂತರ ಸಂಗೀತ ಯಾತ್ರೆಗೆ ಸಾಥ್ ನೀಡಿದವರು ಅಮೆರಿಕದ ಮಿಷಿಗನ್‌ನ ‘ಧ್ವನಿ ಮೀಡಿಯಾ’ದ ಸಂಸ್ಥಾಪಕಿ ಜಯಾ ಗೌಡ.

‘2014ರಲ್ಲಿ ಮೊದಲ ಬಾರಿಗೆ ‘ಅಕ್ಕ’ ಸಮ್ಮೇಳನಕ್ಕೆ ಅಮೆರಿಕಕ್ಕೆ ಹೋಗಿದ್ದೆ. ಅದಾದ ಮೇಲೆ ಮೂರ್ನಾಲ್ಕು ಬಾರಿ ಹೋಗಿದ್ದೇನೆ. ಆದರೆ, ಈ ಬಾರಿಯ ಅನುಭವ ಮರೆಯಲಾರದ್ದು. ಜನಪದ ಗೀತೆಗಳು ನಮಗೆ ಸಾಮಾನ್ಯ ಎನಿಸಬಹುದು. ವಿದೇಶದಲ್ಲಿರುವ ಕನ್ನಡಿಗರಿಗೆ ವಿಶೇಷ ಅನಿಸುತ್ತದೆ. ಈ ಹಾಡುಗಳನ್ನು ಕೇಳಿದಾಗ ಅವರಿಗೆ ಏನೋ ನಿಧಿ ಸಿಕ್ಕ ಸಂಭ್ರಮ’ ಎನ್ನುತ್ತಾರೆ ಸವಿತಕ್ಕ.

ಅಲ್ಲಿನ ಕನ್ನಡಿಗರ ಮನೆಗಳಲ್ಲಿ ಉಳಿದಿದ್ದ ಸವಿತಕ್ಕ, ಜನಪದ ಸಂಗೀತದಲ್ಲಿ ಒಲವುಳ್ಳವರಿಗೆ ಮೂರು ಗಾಯನ ಕಾರ್ಯಾಗಾರಗಳನ್ನೂ ಮಾಡಿದ್ದಾರೆ. ಅವರನ್ನು ವೇದಿಕೆಯಲ್ಲಿ ಹಾಡಿಸಿ, ಸಂಭ್ರಮಿಸಿದ್ದನ್ನು ಸಂತಸದಿಂದ ಹೇಳಿಕೊಳ್ಳುವ ಅವರಿಗೆ ಅಲ್ಲಿನ ಕನ್ನಡಿಗರಷ್ಟೇ ಅಲ್ಲ, ಅಮೆರಿಕನ್ನರಿಗೂ ಜನಪದದ ಬಗೆಗಿರುವ ಒಲವು ವಿಸ್ಮಯ ಮೂಡಿಸಿದೆ.

‘ಒಂದು ಕಾರ್ಯಕ್ರಮಕ್ಕೆ ಹಾಡಲು ಹೋಗಿ, ಏಳು ಕಾರ್ಯಕ್ರಮಗಳಲ್ಲಿ ಹಾಡಿದ್ದು ಜನಪದಕ್ಕಿರುವ ಶಕ್ತಿ. ವೇದಿಕೆಯಲ್ಲಿ ನಾನೊಬ್ಬಳೇ ಇದ್ದು, ಟ್ರ್ಯಾಕ್ ಹೊಂದಿಸಿಕೊಂಡು ಹಾಡುವುದು, ಜನರೊಂದಿಗೆ ಸಂವಹನ ನಡೆಸುತ್ತಲೇ ಹಾಡುವುದು, ನೃತ್ಯ ಮಾಡುವುದು...ಇವೆಲ್ಲವನ್ನೂ ಏಕಕಾಲಕ್ಕೆ ನಡೆಸಿದ್ದು ಸವಾಲಿನ ಕೆಲಸವಾಗಿತ್ತು. ಆದರೆ, ಎಲ್ಲವನ್ನೂ ಯಶಸ್ವಿಯಾಗಿ ನಿಭಾಯಿಸಿದೆ ಅನ್ನುವ ಹೆಮ್ಮೆ ಮೂಡಿದೆ. ಮೊದಲ ಬಾರಿಗೆ ಅಮೆರಿಕದಲ್ಲಿ ಹಾಡಲು ರಂಗಕರ್ಮಿ ಶ್ರೀನಿವಾಸ ಕಪ್ಪಣ್ಣ ಅವರು ನನ್ನನ್ನು ಕರೆದೊಯ್ದಿದ್ದರು. ಆಗ ಅವರು ಹೇಳಿದ್ದ ‘ಜನಪದ ಅಂದರೆ ಸವಿತಕ್ಕ’ ಅನ್ನುವಂತಾಗಬೇಕು ಎನ್ನುವ ಮಾತು ನನಗೆ ಪ್ರೇರಣೆ ಎನ್ನುತ್ತಾರೆ ಅವರು.

‘ಮತ್ತೆ ಸವಿತಕ್ಕ ಅವರು ಯಾವಾಗ ಬರ್ತಾರೆ ಎಂದು ಇಲ್ಲಿನ ಕನ್ನಡಿಗರು ಫೋನ್ ಮಾಡಿ ಕೇಳುತ್ತಾರೆ. ತಮ್ಮ ಕಂಠಸಿರಿಯ ಮೂಲಕ ಜಾನಪದ ಲೋಕಕ್ಕೆ ಕರೆದೊಯ್ದ ಸವಿತಕ್ಕ ಅವರ ಬಗ್ಗೆ ಮಿಷಿಗನ್‌ನ ಕನ್ನಡಿಗರು ಸಂತಸ ವ್ಯಕ್ತಪಡಿಸಿದ್ದಾರೆ’ ಎನ್ನುತ್ತಾರೆ ಮಿಷಿಗನ್‌ನ ಪಂಪ ಕನ್ನಡ ಕೂಟದ ಅಧ್ಯಕ್ಷ ಪ್ರಶಾಂತ್.

ಅಮೆರಿಕದ ಫಿಲಿಡೆಲ್ಫಿಯಾ ಕನ್ನಡ ಕೂಟದಿಂದ ಜನಪದ ಗಾಯಕಿ ಸವಿತಾ ಅವರನ್ನು ಸನ್ಮಾನಿಸಿದ ಕ್ಷಣ

‘ಸವಿತಕ್ಕ ಅವರು ನಿರೀಕ್ಷೆಗೂ ಮೀರಿ ಚೆನ್ನಾಗಿ ಜನಪದ ಗಾಯನವನ್ನು ಪ್ರಸ್ತುತಪಡಿಸಿದರು. ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್‌ನಲ್ಲೂ ಅವರು ಜನಪದ ಗೀತೆ ಹಾಡಿದ್ದು ಮರೆಯಲಾಗದ್ದು’ ಎನ್ನುತ್ತಾರೆ ಮಿಷಿಗನ್‌ನ ಧ್ವನಿ ಮೀಡಿಯಾ ಸಂಸ್ಥಾಪಕಿ ಜಯಾಗೌಡ.

ಹಾಡಿನ ಜತೆಗೆ ಹೆಜ್ಜೆಗಳನ್ನೂ ಹಾಕುವ ಸವಿತಾ ಅವರ ವಿಶಿಷ್ಟ ಗಾಯನ ಶೈಲಿ ಕನ್ನಡಿಗರನ್ನಷ್ಟೇ ಅಲ್ಲ, ಅಮೆರಿಕದವರನ್ನೂ ಬೆರಗುಗೊಳಿಸಿದೆ. ಸವಿತಾ ಹಾಡುತ್ತಿದ್ದ ವೇದಿಕೆಯ ಧ್ವನಿ ನಿಯಂತ್ರಣ ನಿರ್ವಹಿಸುತ್ತಿದ್ದ ಅಮೆರಿಕದ ಯುವತಿಯೊಬ್ಬರು ಸವಿತಾ ಅವರ ಹಾಡಿನ ಸಿ.ಡಿ ಬೇಕು ಎಂಬ ಬೇಡಿಕೆಯನ್ನೂ ಮಂಡಿಸಿದ್ದರಂತೆ. ಅಂತೆಯೇ ಮುಂದಿನ ಸೆಪ್ಟೆಂಬರ್, ಅಕ್ಟೋಬರ್ ಹೀಗೆ ಎರಡು ತಿಂಗಳ ಕಾಲ ಸವಿತಕ್ಕ ಅವರನ್ನು ಕರೆಸಲು ಅಮೆರಿಕ ಕನ್ನಡ ಕೂಟಗಳು ಸಿದ್ಧತೆಯನ್ನೂ ನಡೆಸಿವೆ. ❖

ಪಾತ್ರಗಳಿಲ್ಲದ ಭಿನ್ನ ನಿರೂಪಣಾ ಕ್ರಮ

> ಪಾತ್ರಗಳೇ ಇಲ್ಲದ ನಿರೂಪಣೆಯಲ್ಲಿ ದಲಿತ ಚಳವಳಿಯ ಇತಿಹಾಸ ಕಟ್ಟಿಕೊಡುವ ‘ಪಂಚಮ ಪದ’ ಹಾಡುಗಳಿಂದಲೇ ಕಣ್ಣೀರು ತರಿಸುವಷ್ಟು ಶಕ್ತವಾದ ಪ್ರಯೋಗ.

ಲಿಂಗರಾಜು ಮಳವಳ್ಳಿ

‘ಕಪ್ಪು ಮನುಜರು ನಾವು ಕಪ್ಪು ಮನುಜರು ಈ ಮಣ್ಣ ಕರಿಯೊಡಲ ಕೆಸರಲ್ಲಿ ಮಿಂದು ಬಂದವರು...’- ಈ ಹಾಡಿಲ್ಲದ ದಲಿತ ಚಳವಳಿಯನ್ನು ಊಹಿಸಲು ಸಾಧ್ಯವೇ?

ಕಳ್ಳುಬಳ್ಳಿ ಸಂಬಂಧದಂತೆ ಹೋರಾಟದ ಹಾಡುಗಳೊಂದಿಗೆ ದಲಿತ ಚಳವಳಿ ಬೆಸೆದು, ಬೆಳೆದು ಬಂದಿದೆ. ದಲಿತ ಸಂಘಟನೆಗಳ ಯಾವುದೇ ಹೋರಾಟ, ಕಾರ್ಯಕ್ರಮಗಳಿರಲಿ ಈಗಲೂ ಹೋರಾಟದ ಹಾಡಿನೊಂದಿಗೆ ಶುರುವಾಗುವ ಪ್ರತೀತಿ ಮುಂದುವರಿದಿದೆ. ಇಂಥದ್ದೊಂದು ಪರಂಪರೆಯನ್ನು ಆಧರಿಸಿ ಹಾಡುಗಳೊಂದಿಗೆ ದಲಿತ ಚಳವಳಿ ಬೆಳೆದುಬಂದ ಕಥನವನ್ನು ರಂಗಭೂಮಿ ಮೂಲಕ ನಿರೂಪಿಸುವ ಪ್ರಯತ್ನ ನಡೆದಿರುವುದು ವರ್ತಮಾನದ ದೃಷ್ಟಿಯಿಂದ ಮಹತ್ವದ್ದು.

ರಂಗಕರ್ಮಿ ಕೆ.ಪಿ.ಲಕ್ಷ್ಮಣ್ ವಿನ್ಯಾಸಗೊಳಿಸಿರುವ ‘ಪಂಚಮ ಪದ’ ಎಂಬ ನಾಟಕ, ಚಂದ್ರಶೇಖರ್ ನಿರ್ದೇಶನದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಮತ್ತು ರಂಗಶಂಕರದಲ್ಲಿ ಪ್ರದರ್ಶನಗಳನ್ನು ಕಂಡಿದೆ. ದಲಿತ ಚಳವಳಿಯ ಚರಿತ್ರೆಯ ಮಹತ್ವದ ದಾಖಲೆಯಾಗಿರುವ ‘ಪಂಚಮ ಪತ್ರಿಕೆ’ ಮತ್ತು ‘ಹಾಡು’ ಎರಡನ್ನೂ ಒಗ್ಗೂಡಿಸಿದ್ದರಿಂದ ‘ಪಂಚಮ ಪದ’ ಆಗಿದೆ.

ರಂಗಭೂಮಿ

‘ಪಂಚಮ ಪದ’ ನಾಟಕದಲ್ಲಿನ ಹಾಡು

ರಾಜ್ಯದ ಜನ ಚಳವಳಿಗಳ ಇತಿಹಾಸದಲ್ಲಿ ಎಪ್ಪತ್ತು ಮತ್ತು ಎಂಬತ್ತರ ದಶಕದ ಅವಧಿ ಗುರುತರವಾದುದು. ಎಡ ಚಳವಳಿ, ರೈತ ಚಳವಳಿಯ ಜೊತೆಗೆ ದಲಿತ ಚಳವಳಿಯೂ ಸಂಘಟಿತ ರೂಪ ಪಡೆದ ಮಹತ್ವದ ಘಟ್ಟ ಅದು. ದಲಿತ ಚಳವಳಿಯ ವೈಶಿಷ್ಟ್ಯವೆಂದರೆ, ಅದು ಹಾಡುಗಳೊಂದಿಗೆ ಬೆಳೆದದ್ದು. ಇದಕ್ಕೆ ಕಾರಣಗಳು ಹಲವಿದ್ದರೂ ಕವಿ ಸಿದ್ದಲಿಂಗಯ್ಯ, ದೇವನೂರ ಮಹಾದೇವ, ಕೆ.ಬಿ.ಸಿದ್ದಯ್ಯ, ಕೋಟಿಗಾನಹಳ್ಳಿ ರಾಮಯ್ಯ, ಇಂದೂಧರ ಹೊನ್ನಾಪುರ ಅವರಂತಹ ಬರಹಗಾರರು ದಲಿತ ಚಳವಳಿಯ ಮುಖ್ಯ ಭೂಮಿಕೆಯಲ್ಲಿದ್ದುದು ಮತ್ತೊಂದು ಮಹತ್ವದ ಕಾರಣ ಎನಿಸುತ್ತದೆ.

‘ನೆನ್ನೆ ದಿನ ನನ್ನ ಜನ’, ‘ಬರುತಿಹೆವು ನಾವು ಬರುತಿಹೆವು’, ‘ಕೋಟಿ ಕೋಟಿ ತಾರೆಗಳಲ್ಲಿ ಲಕ್ಷಾಂತರ ನೋವುಗಳಲ್ಲಿ ನೀ ಹುಟ್ಟಿ ಬೆಳೆದೆಯಮ್ಮ ನನ್ನ ತಂಗಿ ಅನಸೂಯ’, ‘ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆಯ’, ‘ಕಪ್ಪು ಮನುಜರು’ ಎಂಬ ಹಾಡುಗಳು ಭಾರಿ ಜನಪ್ರಿಯತೆಯನ್ನು ಗಳಿಸಿದ್ದವು. ಅಂದು ಹರಿದು ಬಂದ ಅದೇ ಹಾಡುಗಳು ಇಂದಿಗೂ ಯುವ ತಲೆಮಾರಿನ ಕಂಠದಲ್ಲಿ ಹೊಮ್ಮುತ್ತಿವೆ.

ಜಂಗಮ ತಂಡ ಪ್ರಸ್ತುತಪಡಿಸಿದ 'ಪಂಚಮ ಪದ' ನಿರೀಕ್ಷೆಯಂತೆ ಹಾಡಿನೊಂದಿಗೆ ಆರಂಭಗೊಂಡು ದಲಿತ ಚಳವಳಿಯ ಪ್ರಮುಖ ಘಟ್ಟಗಳನ್ನು ಪ್ರಸ್ತುತಪಡಿಸುತ್ತಾ, ಆ ಚಳವಳಿಯ ಚರಿತ್ರೆಯನ್ನು 90 ನಿಮಿಷದಲ್ಲಿ ಪಕ್ಷಿನೋಟದಂತೆ ಕಟ್ಟಿಕೊಡುತ್ತದೆ. ಒಟ್ಟು ನಾಟಕದಲ್ಲಿ ಪಾತ್ರಗಳೇ ಇಲ್ಲ; ಬದಲಾಗಿ ನಿರೂಪಣೆ ಮತ್ತು ಹಾಡುಗಳೇ ಇಲ್ಲಿನ ಪಾತ್ರಗಳು. ಅಭಿನಯಕ್ಕೆ ಹೆಚ್ಚಿನ ತಾವಿಲ್ಲ.

ರಂಗಭೂಮಿಯಲ್ಲಿ ವಸ್ತುವಿನ ಜತೆಗೆ ಅಭಿನಯ ಮತ್ತು ಬೆಳಕು ಮುಖ್ಯವಾಗುತ್ತದೆಯಾದರೂ, ಇಲ್ಲಿ ಇವರೆಡೂ ರಂಗಾಸಕ್ತರಿಗೆ ಕೊಂಚ ನಿರಾಸೆಯನ್ನು ಮೂಡಿಸುತ್ತವೆ. ಚರಿತ್ರೆಯನ್ನು ಪರಿಣಾಮಕಾರಿಯಾಗಿ ನಿರೂಪಿಸುವುದೇ ಇದರ ಉದ್ದೇಶ. ಹೀಗಾಗಿ ಇದೊಂದು ವಿನೂತನ ಪ್ರಯೋಗವೆಂದು ಹೇಳಬಹುದು.

ನಾಟಕದಲ್ಲಿ ತುಮಕೂರಿನ ದಲಿತ ಚಿಕ್ಕತಿಮ್ಮಯ್ಯನ ಕೊಲೆ ಆಧರಿಸಿ ಕೆ.ಬಿ.ಸಿದ್ದಯ್ಯನವರು ಬರೆದ ‘ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆ’ ಹಾಡು ಕಣ್ಣಾಲಿಗಳನ್ನು ಒದ್ದೆಯಾಗಿಸುತ್ತದೆ. ಅನಸೂಯ ಪ್ರಕರಣ ಸೇರಿದಂತೆ ದಲಿತ ಚಳವಳಿಯ ಆಯ್ದ ಪ್ರಮುಖ ಪ್ರಕರಣಗಳನ್ನು ನಿರೂಪಿಸುತ್ತಲೇ ಎಲ್ಲಿಯೂ ಬೋರು ಹೊಡೆಸದೇ, ಪ್ರೇಕ್ಷಕರನ್ನು ಭಾವುಕರನ್ನಾಗಿಸುತ್ತಲೇ ಕ್ಲೈಮ್ಯಾಕ್ಸ್‌ಗೆ ತಲುಪುತ್ತದೆ.

ಕ್ಲೈಮ್ಯಾಕ್ಸ್‌ನಲ್ಲಿ ದಲಿತರ ವಿಮೋಚನೆ ಅಂಬೇಡ್ಕರ್ ವಾದದಲ್ಲೇ ಇದೆ ಎಂಬಲ್ಲಿಗೆ ತಂದು ನಿಲ್ಲಿಸುತ್ತಾರೆ. ‘ಮಲಗಿದವರ ಕೂರಿಸಿದೆ, ನಿಲ್ಲಿಸುವವರು ಯಾರು?’ ಎಂಬ ಸಿದ್ದಲಿಂಗಯ್ಯನವರ ಪ್ರಶ್ನೆ ಏಳುತ್ತದೆ. ಅದಕ್ಕೆ, ಅಂಬೇಡ್ಕರ್ ಅವರೇ ‘ಎದ್ದು ನಿಲ್ಲುವುದು ಹೇಗೆಂದು ಹೇಳಿ ಹೋಗಿದ್ದಾರೆ, ಛಲದ ಜೊತೆಗೆ ಬಲದ ಪಾಠವನ್ನೂ ಹೇಳಿಕೊಟ್ಟು ಹೋಗಿದ್ದಾರೆ, ಹೀಗಾಗಿ ದಲಿತರ ವಿಮೋಚನೆ ಅಂಬೇಡ್ಕರ್ ವಾದದಲ್ಲೇ ಇದೆ’ ಎಂಬುದನ್ನು ಗಟ್ಟಿದನಿಯಲ್ಲಿ ಹೇಳಲು ಪ್ರಯತ್ನಿಸಲಾಗಿದೆ. ಕಟ್ಟುವಿಕೆಯ ಇಂತಹ ಸೂಕ್ಷ್ಮದಿಂದಾಗಿ ‘ಪಂಚಮ ಪದ’ ಒಂದು ಶ್ಲಾಘನೀಯ ಪ್ರಯೋಗವಂತೂ ಹೌದು. ❖

ಕಾಲದ ಕನ್ನಡಿಯಲ್ಲಿ...

12ನೇ ಪುಟದಿಂದ...

ಈ ಚಿತ್ರ ನನ್ನ ವೈಯಕ್ತಿಕ ಪಯಣವೂ ಹೌದು. ಅದೊಂದು ಸಹಾನುಭೂತಿಯ ಕಾರ್ಯ. ವೈಯಕ್ತಿಕ ತತ್ತ್ವದ ಅಭಿವ್ಯಕ್ತಿ ಎನ್ನುವುದೂ ಸತ್ಯ. ಚಿತ್ರ ತಯಾರಿಕೆಯ ಮೂಲಕ, ನನ್ನಂತಹ ಸಮುದಾಯದಿಂದ ಬಂದವರು ಹೇಗೆ ಕಲಾವಿದರಾಗಬಹುದು, ಚಿಂತಕರಾಗಬಹುದು, ಸಾರ್ವಜನಿಕ ಸಂಸ್ಕೃತಿಗೆ ಕೊಡುಗೆ ನೀಡಬಹುದು ಎಂಬುದನ್ನು ಅರಿಯುವ ಪ್ರಯತ್ನವೇ ಆದಂತಾಯಿತು. ನಾನು ಚಿತ್ರಿಸಲು ಹೊರಟ ಚಳವಳಿಗಳಿಗೂ ನಾನು ಓದಿದ್ದ ಇತರ ಚಳವಳಿಗಳು, ಚಿಂತಕರಿಗೂ ಹೇಗೆಲ್ಲ ಸಂಬಂಧವಿದೆ ಎನ್ನುವುದನ್ನೂ ತಿಳಿದೆ. ಜ್ಯೋತಿಬಾ ಫುಲೆ ಆಗಿರಲಿ, ಅಮೆರಿಕದಲ್ಲಿ ದಮನಿತರ ಪರವಾಗಿ ಹೋರಾಡಿದ ಮಾರ್ಟಿನ್ ಲೂಥರ್ ಕಿಂಗ್ ಆಗಿರಲಿ ಅಥವಾ ಮಾಲ್ಕಂ ಎಕ್ಸ್ ಆಗಿರಲಿ, ಸ್ಯಾಂಡ್ರಾ ಹಾರ್ಡಿಂಗ್, ಬೆಲ್ ಹುಕ್ಸ್ ಅಥವಾ ಲೂಯಿ ಅಲ್ತುಸರ್ ಅವರ ಕೆಲಸಗಳಿರಲಿ; ಚಿತ್ರ ತಯಾರಿಕೆಯಿಂದ ಅಂಬೇಡ್ಕರಿಸಂ ಅನ್ನು ವಿಶ್ವದ ಅಂತಹ ವಿವಿಧ ಚಳವಳಿಗಳ ಜೊತೆಗೆ ಸಮೀಕರಿಸಿಕೊಂಡು ನೋಡುವುದು ಸಾಧ್ಯವಾಯಿತು; ಅದೂ ಎಲ್ಲ ಭೇದಗಳ ಎಲ್ಲೆ ಮೀರಿ, ಮನುಷ್ಯಳಾಗಿ.

ಈ ಚಿತ್ರವು ಸಮುದಾಯದ ಇನ್ನಷ್ಟು ಮಹಿಳಾ ಕಲಾವಿದೆಯರು ಮುಂದೆ ಬರಲು ಇಂಬುಗೊಟ್ಟೀತು ಎನ್ನುವ ನಂಬಿಕೆ ಇದೆ. ಮಹಿಳೆಯರ ಕಿರುಚಿತ್ರಗಳು ಆಗೀಗ ಬರುವುದನ್ನಷ್ಟೇ ಕೇಳಿದ್ದೇನೆ. ಈ ಸಂಖ್ಯೆ ಇನ್ನೂ ಹೆಚ್ಚಬೇಕು.

- **ನಿಮ್ಮ ಹಿಂದಿನ ‘ಬಹುಜನ ವೀಕ್ಷಣೆ’ಯ ಪರಿಕಲ್ಪನೆಯ ಚೌಕಟ್ಟೇ ಈ ಚಿತ್ರಕ್ಕೆ ಇದೆ. ಈ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ತಿಳಿಸಿ. ಬಹುಜನ ಎನ್ನುವ ರಾಜಕೀಯ ಸಮುದಾಯವನ್ನು ಹೇಗೆ ವಿವರಿಸುವಿರಿ?**

ಉತ್ತರ ಭಾರತದಲ್ಲಿ ಬೆಳೆದ ನಾನು ಕಾನ್ಶಿ ರಾಮ್ ಪರಂಪರೆಯಲ್ಲಿ ಮುಳುಗೆದ್ದವಳು. ಆಧುನಿಕ ರಾಜಕೀಯವನ್ನು ಸಹಿಸಿಕೊಳ್ಳಲು ‘ಬಹುಜನ’ ಎನ್ನುವ ಪರಿಕಲ್ಪನೆಯನ್ನು ರೂಪಿಸಿದವರು ಅವರು. ನನ್ನ ಸಹೋದದರಿಗೆ ಬಾಬಾಸಾಹೇಬ್ ಕಾನ್ಶಿ ರಾಮ್ ಅವರ ತತ್ತ್ವದಲ್ಲಿ ಆಸಕ್ತಿ ಇತ್ತು. ‘ಬಹುಜನ ಹಿತಾಯ ಬಹುಜನ ಸುಖಾಯ’ ಎಂಬ ಬುದ್ಧಪ್ರಜ್ಞೆಯೂ ಇದರಲ್ಲಿದೆ ಎಂದು ನಾನು ಭಾವಿಸಿರುವೆ. ಒಂದು ಸಮುದಾಯದ ಬಹುಜನರ ಕುರಿತು ಯೋಚಿಸುವುದು ನನಗಿಷ್ಟ. ಅಂದರೆ, ನಲುಗಿದವರ ಇತಿಹಾಸದಲ್ಲಿನ ಬಹುಜನ. ಪ್ರತಿ ಸಮುದಾಯಕ್ಕೂ ಇತಿಹಾಸದೊಡನೆ ಬೇರೆ ಬೇರೆಯದೇ ಸಂಬಂಧ ಇದ್ದಿರಬಹುದು. ಶೂದ್ರರು, ಶೂದ್ರೇತರರ ನಡುವಿನ ವಿಭಜನೆ ಅಥವಾ ಮತಾಂತರಗೊಂಡ ಅಲ್ಪಸಂಖ್ಯಾತರ ಸಂಕಷ್ಟಗಳನ್ನು ಗಮನಿಸಿ. ಜಾತಿ ವ್ಯವಸ್ಥೆಯು ಉಪಜಾತಿಗಳನ್ನೂ ಸೃಷ್ಟಿಸಿ, ಶೋಷಿಸಲು ಬಯಸುತ್ತದೆ ಎನ್ನುವುದು ಗೊತ್ತಾಗುತ್ತದೆ. ‘ಬಹುಜನ’ ಎನ್ನುವುದು ದಲಿತ ಪ್ರಜ್ಞೆಯನ್ನೂ ಮೀರಿದ ರಾಜಕೀಯ ಸಮೂಹವನ್ನು ಸೂಚಿಸುತ್ತದೆ. ಹೀಗಾಗಿ ನಾನು ಬಹುಜನ ಪರಿಕಲ್ಪನೆಯನ್ನು ಬಳಸಿಕೊಂಡೆ.

‘ಸ್ಪೆಕ್ಟೇಟರ್‌ಶಿಪ್’ನ ಪರಿಕಲ್ಪನೆಯು ಬೆಲ್ ಹುಕ್ಸ್ ಅವರ ಓದಿನಿಂದ ಲಭಿಸಿತು. ದಮನಿತರ ಪ್ರತಿರೋಧದ ನೋಟವನ್ನು ಕಾಣಿಸಿದವರು ಅವರು. ಅಮೆರಿಕದಲ್ಲಿ ಜೀತಕ್ಕಿದ್ದ ಕಪ್ಪು ಜನರು, ಬಿಳಿಯರು ತಮ್ಮನ್ನು ಹೇಗೆ ನೋಡುತ್ತಿದ್ದಾರೆ ಎಂದಷ್ಟೇ ಗ್ರಹಿಸಿದ್ದರು. ಆದರೆ, ಬಿಳಿಯರು ತಮ್ಮ ಜಗತ್ತನ್ನು ಹೇಗೆ ಕಟ್ಟಿಕೊಂಡಿದ್ದಾರೆ ಎನ್ನುವುದನ್ನು ಕರಿಯರು ಗ್ರಹಿಸಬೇಕು. ಇದು ಪ್ರತಿರೋಧದ ನೋಟಕ್ಕೆ ಇಂಬುಗೊಟ್ಟೀತು ಎನ್ನುವುದು ಬೆಲ್ ಹುಕ್ಸ್ ಬಯಕೆಯಾಗಿತ್ತು. ಮಹಾರಾಷ್ಟ್ರದಲ್ಲಿ ಪೇಶ್ವೆಗಳು ತಳವರ್ಗದವರನ್ನು ಅಮೆರಿಕನ್ ಬಿಳಿಯರು ಕರಿಯರನ್ನು ನಡೆಸಿಕೊಂಡಂತೆಯೇ ನಡೆಸಿಕೊಂಡಿದ್ದರು. ಇವತ್ತಿನ ಸೃಜನಶೀಲ ಕೆಲಸಗಳನ್ನು ಗಮನಿಸಿದರೆ, ದಮನಿತರನ್ನು ಬಹುಜನರಾಗಿ ಬಿಂಬಿಸುವುದು ಕಾಣದೆ ಅವರು ತುಳಿತಕ್ಕೆ ಒಳಗಾದ ಅಂಶ ಮಾತ್ರ ಕಾಣಿಸುತ್ತದೆ. ಸಮಕಾಲೀನ ಸಿನಿಮಾ ಹಾಗೂ ಮಾಧ್ಯಮ ಸಂಕೇತಗಳು, ರೂಪಕಗಳು, ಪಾತ್ರಗಳ ವಿನ್ಯಾಸದಿಂದ ಜಾತಿ ಸಿದ್ಧಾಂತವನ್ನು ಹೇಳುತ್ತಿವೆ. ನನ್ನ ಚಿತ್ರ ಇದಕ್ಕೆ ಭಿನ್ನವಾದ ಇನ್ನೊಂದು ಮಾರ್ಗದಲ್ಲಿ ಸಾಗಿದೆ. ಸಿನಿಮಾ ಪಾರದರ್ಶಕ ಮಾಧ್ಯಮವಾದುದರಿಂದ ಜನರಿಗೆ ಬೇಗ ನಾಟುತ್ತದೆ. ❖

ರಾಯಣ್ಣನ ಚರಿತ್ರೆ ಬಿಂಬಿಸುವ ಕಲಾಕೃತಿಗಳು

ಶಿಲ್ಪವನದಲ್ಲಿ ಕ್ರಾಂತಿಯ ಮರುಸೃಷ್ಟಿ

12ನೇ ಪುಟದಿಂದ...

‘ಪ್ರಥಮ ಆಂಗ್ಲೊ – ಕಿತ್ತೂರು ಯುದ್ಧ’ದ ಪ್ರತಿಕೃತಿಗಳು ಕೂಡ ಇವೆ. ಯುದ್ಧದಲ್ಲಿ ಪಾಲ್ಗೊಂಡವರ ಮುಖಭಾವ, ಯುದ್ಧ ನಡೆದ ಸಂದರ್ಭ, ಆಗಿನ ಗ್ರಾಮೀಣ ಪರಿಸರ ಎಲ್ಲವೂ ನೈಜತೆಗೆ ಹತ್ತಿರವಾಗಿವೆ. ರಾಣಿ ಚನ್ನಮ್ಮನ ಬಂಧನ, ರಾಯಣ್ಣನ ಸೆರೆ, ಡೋರಿಹಳ್ಳದಲ್ಲಿ ರಾಯಣ್ಣನನ್ನು ಮೋಸದಿಂದ ಬಲೆಗೆ ಬೀಳಿಸಿದ ರೀತಿ, ನಂದಗಡ ಹೊರವಲಯದ ಆಲದ ಮರಕ್ಕೆ ರಾಯಣ್ಣನೊಂದಿಗೆ ಆರು ಜನರಿಗೆ ಗಲ್ಲುಶಿಕ್ಷೆ ವಿಧಿಸುವ ಚಿತ್ರಣ ಎಲ್ಲವೂ ಕಣ್ಣಿಗೆ ಕಟ್ಟಿದಂತೆ ದೀರ್ಘ ಕಾಲ ನೆನಪಿನಲ್ಲಿ ಉಳಿಯುತ್ತದೆ.

‘ಉಪನ್ಯಾಸ, ಭಾಷಣಕ್ಕಿಂತ, ಕಲಾಕೃತಿಗಳ ಮೂಲಕ ರಾಯಣ್ಣನ ಇತಿಹಾಸ ಕಟ್ಟಿಕೊಡಬೇಕೆಂಬ ಕನಸು ಬಹಳ ವರ್ಷಗಳಿಂದ ಇತ್ತು. ಇಂದು ಅದು ಸಾಕಾರವಾಗಿದೆ’ ಎನ್ನುತ್ತಾರೆ ಸಂಶೋಧಕ ಬಸವರಾಜ ಕಮತ್.

‘ಸಂಗೊಳ್ಳಿ ರಾಯಣ್ಣನ ಬದುಕಿನ ಕುರಿತು ಇನ್ನಷ್ಟು ಅಧ್ಯಯನ ಆಗಬೇಕು ಎಂಬ ಉದ್ದೇಶದಿಂದ ಶಿಲ್ಪವನ ನಿರ್ಮಾಣಗೊಂಡಿದೆ’ ಎಂಬ ಅಭಿಪ್ರಾಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮಲ್ಲೇಶಪ್ಪ ಹೊರಪೇಟೆ ಅವರದ್ದು. ❖

ಕ್ರಾಂತಿಕತೆಯ ಒಂದು ಅಧ್ಯಾಯ

ಬರುವುದು ಹೇಗೆ?

ಬೆಳಗಾವಿಯಿಂದ 50 ಕಿ.ಮೀ, ಧಾರವಾಡದಿಂದ 45 ಕಿ.ಮೀ, ಬೈಲಹೊಂಗಲದಿಂದ 16 ಕಿ.ಮೀ ಹಾಗೂ ಚನ್ನಮ್ಮನ ಕಿತ್ತೂರಿನಿಂದ 15 ಕಿ.ಮೀ ದೂರದಲ್ಲಿ ಸಂಗೊಳ್ಳಿ ಗ್ರಾಮವಿದೆ. ಬೈಲಹೊಂಗಲ ಮತ್ತು ಕಿತ್ತೂರಿನಿಂದ ಸಂಗೊಳ್ಳಿಗೆ ಬಸ್ ಸೌಕರ್ಯವಿದೆ. ಜನರು ಖಾಸಗಿ ವಾಹನಗಳಲ್ಲೂ ಭೇಟಿ ಕೊಡಬಹುದು. ಸವದತ್ತಿಯ ಯಲ್ಲಮ್ಮ ದೇವಸ್ಥಾನ, ಐತಿಹಾಸಿಕ ಕಿತ್ತೂರು ಕೋಟೆಯ ಅವಶೇಷಗಳು, ಬೈಲಹೊಂಗಲದಲ್ಲಿನ ಚನ್ನಮ್ಮನ ಸಮಾಧಿ, ಎಂ.ಕೆ. ಹುಬ್ಬಳ್ಳಿಯಲ್ಲಿನ ಶರಣೆ ಗಂಗಾಂಬಿಕೆ ಐಕ್ಯಮಂಟಪ ಮತ್ತಿತರ ಪ್ರವಾಸಿ ಸ್ಥಳಗಳು ಸನಿಹದಲ್ಲಿವೆ.

ಮುನ್ನೋಟ 21-01-2024 ರಿಂದ 27-01-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಮನಸ್ಸಿನಲ್ಲಿ ಒಂದು ರೀತಿಯ ಪ್ರಶಾಂತತೆಯು ಇರುತ್ತದೆ. ಹಣದ ಒಳಹರಿವು ನಿಮ್ಮ ಅವಶ್ಯಕತೆಯನ್ನು ಪೂರೈಸುತ್ತದೆ. ನಿಮ್ಮ ಚಟುವಟಿಕೆಗಳಲ್ಲಿ ನಿಧಾನ ಗತಿಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ಹೊಟ್ಟೆಗೆ ಸಂಬಂಧಿಸಿದ ಕೆಲವು ಅನಾರೋಗ್ಯಗಳು ನಿಮ್ಮನ್ನು ಕಾಡಬಹುದು. ಆಸ್ತಿ ವಿಚಾರದಲ್ಲಿ ಸ್ವಲ್ಪ ಪ್ರಗತಿಯನ್ನು ಕಾಣಬಹುದು.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಧನ ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಬಹಳ ಚುರುಕಾಗಿ ಕೆಲಸ ಮಾಡಿ ಎಲ್ಲರಿಂದ ಹೊಗಳಿಕೆ ಪಡೆಯುವಿರಿ. ಆಸ್ತಿ ಖರೀದಿಯ ಬಗ್ಗೆ ಇದ್ದ ತಕರಾರುಗಳು ಈಗ ಪರಿಹಾರವಾಗುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಷ್ಟು ಶ್ರದ್ಧೆ ಇರುವುದಿಲ್ಲ. ಸಂಗಾತಿ ಕೊಳ್ಳುವ ಆಸ್ತಿಗೆ ಧನಸಹಾಯ ಮಾಡಲೇ ಬೇಕಾದ ಅನಿವಾರ್ಯ ಎದುರಾಗುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಬಹಳಷ್ಟು ವಿಚಾರಗಳಲ್ಲಿ ದ್ವಂದ್ವವಿರುತ್ತದೆ. ಮಾತನಾಡುವಾಗ ಎಚ್ಚರಿಕೆ ಇರಲಿ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಬಂಧುಗಳು ನಿಮ್ಮ ಸಹಾಯಕ್ಕೆ ಬರುತ್ತಾರೆ. ಆಸ್ತಿ ವಿಸ್ತರಣೆಯನ್ನು ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ದೊರೆಯುತ್ತದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರ ಇರಲಿ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಆತ್ಮಗೌರವ ಹೆಚ್ಚಾಗಿರುತ್ತದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮಗೆ ಹೆಚ್ಚು ಲಾಭವಿರುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆಯಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸುವ ಯೋಗವಿದೆ. ಬಂಧುಗಳು ನಿಮ್ಮ ಕೆಲಸಕಾರ್ಯಗಳಿಗೆ ಅಡ್ಡಿಯಾಗಬಹುದು. ನಿಮ್ಮ ಸಂಗಾತಿಯ ಅತಿ ಮಾತುಗಳು ಬಹಳ ಬೇಸರ ಹುಟ್ಟಿಸಬಹುದು. ಆಸ್ತಿ ಹೂಡಿಕೆ ಮೇಲೆ ಹಣ ಹೂಡುವಾಗ ಎಚ್ಚರವಿರಲಿ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ನಿಮ್ಮ ಉತ್ಸಾಹವು ಕಡಿಮೆಯಾದಂತೆ ಅನಿಸತೊಡಗುತ್ತದೆ. ನಿಮ್ಮ ಮಾತಿನಲ್ಲಿ ಕಠಿಣತೆ ಬೇಡ, ಸೌಮ್ಯತೆ ಇದ್ದಲ್ಲಿ ನಿಮಗೆ ಹೆಚ್ಚು ಅನುಕೂಲ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಅಪೇಕ್ಷಿತ ಆಸ್ತಿಯನ್ನು ಕೊಳ್ಳಲು ಮನಸ್ಸು ಮಾಡುವಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಕಣ್ಣಿನತೊಂದರೆ ಅಥವಾ ತಲೆಗೆಪೆಟ್ಟು ಬಿದ್ದಿರುವವರು ಹೆಚ್ಚು ಎಚ್ಚರ ವಹಿಸಿರಿ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಕೆಲವೊಂದು ಕೆಲಸಗಳು ಆಗದೆ ಇರುವುದರಿಂದ ಮನಸ್ಸು ವ್ಯಗ್ರವಾಗಿರುತ್ತದೆ, ಸಮಾಧಾನವಾಗಿರುವುದು ಬಹಳ ಒಳ್ಳೆಯದು. ನಿಮ್ಮ ನಿರೀಕ್ಷೆಯಷ್ಟು ಧನ ಆದಾಯ ಇರುವುದಿಲ್ಲ. ನಿಮ್ಮ ಚಟುವಟಿಕೆಗಳಿಂದಲೇ ವೈರಿಗಳನ್ನು ಸಂಪಾದನೆ ಮಾಡಿಕೊಳ್ಳುವಿರಿ. ಭೂಮಿಯ ವ್ಯವಹಾರವನ್ನು ಮಾಡುವವರಿಗೆ ಕಮಿಷನ್ ಹಣ ಬರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ಎಲ್ಲರಲ್ಲೂ ಹೊಂದಿಕೊಳ್ಳಲು ಸಾಕಷ್ಟು ಪ್ರಯತ್ನ ಪಟ್ಟು ನಿಮ್ಮ ವರ್ಚಸ್ಸನ್ನು ಉಳಿಸಿಕೊಳ್ಳಲು ಯತ್ನಿಸುವಿರಿ. ನಿಮ್ಮ ಕೆಲಸ ಕಾರ್ಯಗಳಿಂದ ಹಣ ಸಂಪಾದನೆ ಮಾಡಬಹುದು. ಕೃಷಿ ಭೂಮಿಯನ್ನು ಈಗ ಹೊಂದುವ ಯೋಗವಿದೆ. ದಿನಸಿ ವ್ಯಾಪಾರಿಗಳಿಗೆ ಉತ್ತಮ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ವಿದೇಶಿ ಸಂಸ್ಥೆಗಳಿಂದ ಸಾಲ ಪಡೆದವರಿಗೆ ಸಮಸ್ಯೆಗಳು ಹೆಚ್ಚಾಗಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಸಮೂಹದಲ್ಲಿ ಉತ್ತಮ ಗೌರವ ದೊರೆಯುತ್ತದೆ. ಜಾಣತನದಿಂದ ಶತ್ರುಗಳನ್ನು ಕಡಿಮೆ ಮಾಡಿಕೊಳ್ಳುವಿರಿ. ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಮಾಡುವವರಿಗೆ ಈಗ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಹೊಸ ಆಸ್ತಿಯನ್ನು ಕೊಳ್ಳುವ ವಿಚಾರ ಸದ್ಯಕ್ಕೆ ಬೇಡ. ಲೇವಾದೇವಿ ವ್ಯವಹಾರವನ್ನು ಮಾಡುತ್ತಿರುವವರಿಗೆ ಹಿನ್ನಡೆ ಆಗಬಹುದು. ಸಂಗಾತಿಯು ನಿಮ್ಮೆಲ್ಲಾ ಕಾರ್ಯಗಳಿಗೆ ಸಹಕಾರ ನೀಡುವರು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಆತ್ಮ ಪೂರಕವಾಗಿ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿರಿ. ಧನ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ಸರ್ಕಾರದಿಂದ ಅಥವಾ ಸಂಸ್ಥೆಗಳಿಂದ ಬರಬೇಕಾಗಿದ್ದ ಸಹಾಯಧನಗಳು ಈಗ ಬರುತ್ತವೆ. ನಿಮ್ಮ ಶತ್ರುಗಳಿಗೆ ನಿಮ್ಮನ್ನ ಕಂಡರೆ ಭಯಪಡುವ ಸಂದರ್ಭಗಳು ಇವೆ. ವಿದೇಶದಲ್ಲಿರುವವರು ಈಗ ಸ್ಥಿರಾಸ್ತಿಯನ್ನು ಮಾಡಿಕೊಳ್ಳಬಹುದು.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರಿಗೆ ವಿಶೇಷ ಗೌರವ ದೊರೆಯುತ್ತದೆ. ನಿಮ್ಮ ಆತ್ಮವಿಶ್ವಾಸವು ಕೆಲಸ ಕಾರ್ಯಗಳಲ್ಲಿ ಶ್ರೇಯಸ್ಸು ನೀಡುತ್ತದೆ. ಹಣದ ಒಳಹರಿವು ಕಡಿಮೆ ಇದ್ದರೂ ನಿರ್ವಹಣೆಯಲ್ಲಿ ಯಶಸ್ಸನ್ನು ಕಾಣುವಿರಿ. ಕೆಲವು ಬಂಧುಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಬರುವ ಸಾಧ್ಯತೆ ಇದೆ. ಆಸ್ತಿ ಕೊಳ್ಳುವುದಕ್ಕೆ ಬೇಕಾದ ಹಣ ಒಗ್ಗೂಡಿಕೆ ಮಾರ್ಗಗಳು ಗೋಚರಿಸುತ್ತವೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಹಿರಿಯರು ನಿಶ್ಚಲ ಮನಸ್ಥಿತಿಯಿಂದ ಕೆಲಸ ಕಾರ್ಯಗಳನ್ನು ಆರಂಭಿಸಿ ಮುಗಿಸುವರು. ಆಮದು ಮತ್ತು ರಫ್ತು ವ್ಯಾಪಾರ ಮಾಡುವವರಿಗೆ ನಿರೀಕ್ಷಿತ ಆದಾಯವಿರುತ್ತದೆ. ಕಿರಿಯರ ನಡವಳಿಕೆಗಳು ಬೇರೆಯವರಿಗೆ ಪ್ರೇರಣೆ ಕೊಡುತ್ತವೆ.ಆಸ್ತಿ ಖರೀದಿ ಮಾಡುವ ವಿಷಯದಲ್ಲಿ ಒಂದು ಮೆಟ್ಟಿಲು ಮುಂದೆ ಹೋಗುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಫಲಿತಾಂಶ ದೊರೆಯುತ್ತದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಧನ ಆದಾಯವು ನಿಮ್ಮ ಅಪೇಕ್ಷೆಯನ್ನು ಪೂರೈಸುವಷ್ಟಿರುತ್ತದೆ. ತಾಯಿಯಿಂದ ಕೆಲಸ ಕಾರ್ಯಗಳಿಗೆ ಸಹಾಯ ದೊರೆಯುತ್ತದೆ. ಸಂಸಾರದಲ್ಲಿ ವಾಗ್ವಾದದಿಂದ ಸಂತೋಷವನ್ನು ಹಾಳು ಮಾಡಿಕೊಳ್ಳುವಿರಿ. ವ್ಯವಹಾರಗಳಲ್ಲಿ ನಿಮ್ಮದೇ ಅನ್ನುವಂತಹ ಛಾಪು ಮೂಡಿಸುವಿರಿ. ಹಿರಿಯರ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು. ವೈಯಕ್ತಿಕವಾಗಿ ಕಣ್ಣು ಮತ್ತು ತಲೆ ಕಡೆ ಹೆಚ್ಚಿನ ಗಮನ ಕೊಡಿ.

ಪದಬಂಧ 2825



ಮೇಲಿನಿಂದ ಕೆಳಕ್ಕೆ
1. ಸಿರಿಯನ್ನು ಕೊಡುವ ಅಭಯ ಹಸ್ತ 3
2. ಸುಸಂಸ್ಕೃತರಿಗೆ ಸೇರಿದ ಹಣ 3
3. ಹೊರ ರಾಷ್ಟ್ರಕ್ಕೊಂದು ಪರ್ಯಾಯ 3
5. ತಳಮಳದಿಂದುಂಟಾಗುವ ನಡುಕ 3
7. ಅಕ್ಕಿಬೇಳೆ ಬೆರೆತ ಉತ್ತರಭಾರತದ ಕಲಸನ್ನ 3
9. ಒಂಭತ್ತು ರೀತಿಯ ಹೊಸ ಭಾರವನ್ನು ಹೊತ್ತು ಹೊರಟ ನಮ್ಮ ದೇಶ 5
10. ನೂರು ಪ್ರಶ್ನೆಗಳಿಗೆ ಒಮ್ಮೆಗೆ ಉತ್ತರ ನೀಡುವ ಕಲೆ 5
11. ಮೈಸೂರಿನ ರಾಜ ಮನೆತನ 3
12. ಹೇಗೆ ತಿರುಗಿದರೂ ಪಾದರಕ್ಷೆಗೆ ಹೆಸರಾದ ಸ್ಥಳವಿದು 3
16. ಯೋಜನೆ ಕಾರ್ಯಗತವಾಗದಿದ್ದಾಗ ಮಾಡುವ ಚಿಂತೆ 3
17. ಒಳ್ಳೆಯದು ಎನ್ನುವ ಹಳೆಯ ಮಾತು 3
19. ಗಾಂಧಿ ಹೆಸರಿನಲ್ಲಿರುವ ವಿರಳ ಕರ್ಮ 3
20. ಒಂಟಿಯಾಗಿ ಸಿಗುವ ಆನೆ 3
21. ಪುಣ್ಯಕಥೆಯ ಜೊತೆ ಬರುವ ಪೂರ್ವ ಚರಿತೆ 3

ಎಡದಿಂದ ಬಲಕ್ಕೆ
1. ಇರುಳಲ್ಲಿ ಶಶಿಯ ಬೆಳಕಂತೆ ದಶರಥಾತ್ಮಜನ ಶ್ರೇಷ್ಠ ನಾಮ 5
3. ವಿಧಿಯಾಗಬಹುದಾದ ನಿರ್ಣಯ 4
4. ಏನೇ ಬಂದರೂ ಭಾವನೆಗಳಿಂದ ಕದಲದವ 4
6. ಸೂರ್ಯನ ಪ್ರಕಾಶಮಾನವಾದ ಬೆಳಕಿನ ತರಂಗ 5
8. ಒಳ್ಳೆಯದು ಅಥವಾ ಕೆಟ್ಟದು ನಡೆಯುವುದೆಂಬ ಮುನ್ಸೂಚನೆ 3
10. ಶಿವನಿಗೆ ಎಲ್ಲವನ್ನೂ ಅರ್ಪಿಸಿದ ಶಿವ ಭಕ್ತ 3
11. ಅಡಿಗಡಿಗೆ ಕಾವ್ಯಪ್ರಜ್ಞೆಗೆ ಮುನ್ನುಡಿಯಿಟ್ಟ ಕವಿ 3
13. ಬೆಳಕಿನ ಭರವಸೆ ಮೂಡಿಸುವ ಸೂರ್ಯ 3
14. ವರವನ್ನು ನೀಡುವ ತಿಮ್ಮಪ್ಪ ಹಿಮ್ಮುಖವಾಗಿ 3
15. ಸಮಯ ಕೂಡಿ ಬಂದಾಗ ಸಿಗುವ ಭಾಗ್ಯ 3
17. ವಿರೋಧದ ನಡುವೆಯೂ ಬರುವ ಒಂದೇ ಧರ್ಮದ ಅಭಿಪ್ರಾಯ 3
18. ಚಳಿಗೆ ಸೊಂಟದಿಂದ ಏರುವ ಕಂಪನ 3
20. ಮೆಲುಕು ಹಾಕಿದಷ್ಟೂ ಸಿಹಿ ಎನಿಸುವ ಸ್ಮೃತಿ 5
22. ಹಿಂದಿನ ಕಾಲದ ಗೋಶಕ್ತಿಯನ್ನು ಹೀಗೆನ್ನಬಹುದೆ? 4
23. ಅಯ್ಯೋ ಎಂದಾಗ ತುಟಿಯಿಂದ ಮತ್ತೆ ಮತ್ತೆ ಹೊರಡುವ ಸೀತಾಪತಿಯ ಹೆಸರು 4
24. ಬಿಡಿಸಿದ ಆನೆಯ ಕಿವಿ 5

ಪದಬಂಧ ಉತ್ತರ -2824

ಮೇಲಿಂದ ಕೆಳಕ್ಕೆ
1.ಸಂಕ್ರಾಂತಿ 2.ನಿವಾರಕ 3.ಪದಬಂಧಪ್ರಿಯ 4.ಸರಳ 7.ರವಿವಾರ 10.ಸಂತಕಬೀರ 12.ವಾನರಸೇನೆ 14.ಸ್ಥಿತಿದಾನಿ 16.ಣರಕಪ್ರ 17.ರಾಘವ 19.ಜಲಧಿ

ಎಡದಿಂದ ಬಲಕ್ಕೆ
1. ಸಂಜೀವಿನಿ 3.ಪರಿಹಾಸ 5. ವಾದವಿವಾದ 6.ತಿರಸ್ಕಾರ 8.ಬಂಡವಾಳ 9.ಕನ್ಯಾಸಂಬಂಧ 11.ಕರಸೇವಾ 13.ಯಥಾಸ್ಥಿತಿ 15.ರಮಾರಮಣ 17.ರಾಮರಸ 18.ರಜನಿಜ 20.ಮೂಕಪ್ರೇಕ್ಷಕ 21.ವಸ್ತ್ರಮೋಹ 22.ಪ್ರತಿನಿಧಿ

ಕುಮಾರವ್ಯಾಸನ ಜಾಗತೀಕರಣ

ಮಾತುಕತೆ: ವಿಶಾಖ ಎನ್.

ಸಂವಾದ

ಕುಮಾರವ್ಯಾಸನ 'ಕರ್ನಾಟ ಭಾರತ ಕಥಾಮಂಜರಿ'ಯನ್ನು ಇಂಗ್ಲಿಷ್‌ಗೆ ಅನುವಾದಿಸುವ ಕೆಲಸ ಶುರುವಾಗಿ ವರ್ಷಗಳೇ ಆಗಿವೆ. ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ವರ ಮಗ ರೋಹನ್ ಮೂರ್ತಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಒಂದು ಟ್ರಸ್ಟ್ ಸ್ಥಾಪಿಸಿ, ಅದರ ಮೂಲಕ ಪ್ರಾಚೀನ ಭಾರತೀಯ ಸಾಹಿತ್ಯ ಕೃತಿಗಳ ಇಂಗ್ಲಿಷ್ ಅನುವಾದಗಳ ಪ್ರಕಟಣೆಗೆ ಅನುವು ಮಾಡಿಕೊಟ್ಟಿದ್ದಾರಷ್ಟೆ. ಅದರ ಫಲವೇ 'ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ'. ನ್ಯೂಯಾರ್ಕ್‌ನಲ್ಲಿ ಸ್ಟೋನಿಬ್ರೂಕ್ ವಿಶ್ವವಿದ್ಯಾಲಯದಲ್ಲಿ 'ಭಾರತೀಯ ಅಧ್ಯಯನ ಕೇಂದ್ರ'ದ ಮುಖ್ಯಸ್ಥರಾಗಿರುವ ಎಸ್. ಎನ್. ಶ್ರೀಧರ್ ಅವರು ಆ ಸಂಸ್ಥೆಯ ನಿರ್ದೇಶಕರಾದ ಶೆಲ್ಡನ್ ಪೊಲಾಕ್ ಅವರೊಟ್ಟಿಗೆ ಚರ್ಚಿಸಿ, ಕುಮಾರವ್ಯಾಸ ಭಾರತದ ಅನುವಾದಕ್ಕೆ ಅವರ ಒಪ್ಪಿಗೆ ಪಡೆದಿದ್ದರು. ಎಚ್.ಎಸ್. ಶಿವಪ್ರಕಾಶ್, ನಾರಾಯಣ ಹೆಗ್ಡೆ, ಎಚ್.ಎಸ್. ರಾಘವೇಂದ್ರ ರಾವ್, ಸಿ.ಎನ್. ರಾಮಚಂದ್ರನ್ (ಸಿ.ಎನ್. ಆರ್.) ಹಾಗೂ ಖುದ್ದು ಶ್ರೀಧರ್ ಕೃತಿಯನ್ನು ಅನುವಾದಿಸುತ್ತಿದ್ದಾರೆ. ಅನುವಾದದ ಮೊದಲ ಭಾಗದ ಕೃತಿ ಇತ್ತೀಚೆಗೆ ಬಿಡುಗಡೆಯಾಯಿತು. ಕುಮಾರವ್ಯಾಸ ಭಾರತವನ್ನು ಅನುವಾದ ಮಾಡುವ ಪ್ರಕ್ರಿಯೆ ಕುರಿತು ಶ್ರೀಧರ್, ಸಿ.ಎನ್. ಆರ್. ಹಾಗೂ ಈ ಯೋಜನೆಯ ಸಲಹೆಗಾರರಲ್ಲಿ ಒಬ್ಬರಾಗಿರುವ ಕೃಷ್ಣಮೂರ್ತಿ ಹನೂರು ಅವರು 'ಭಾನುವಾರದ ಪುರವಣಿ' ಜೊತೆಗೆ ಮಾತಿಗೆ ತೆರೆದುಕೊಂಡರು..

ಕುಮಾರವ್ಯಾಸ ಒಡ್ಡಿದ ಸವಾಲುಗಳ ಚರ್ಚೆಯಲ್ಲಿ ಕೃಷ್ಣಮೂರ್ತಿ ಹನೂರು, ಎಸ್.ಎನ್. ಶ್ರೀಧರ್ ಹಾಗೂ ಸಿ.ಎನ್. ರಾಮಚಂದ್ರನ್



ಕುಮಾರವ್ಯಾಸ ಭಾರತ ಅನುವಾದದ ಮೊದಲ ಸಂಪುಟದ ಮುಖಪುಟ

ಕುಮಾರವ್ಯಾಸ ಕಾವ್ಯದ ಆಯ್ಕೆಗೆ ಕಾರಣ

ಎಸ್.ಎನ್. ಶ್ರೀಧರ್: ಕಾಳಿದಾಸ, ವ್ಯಾಸ, ವಾಲ್ಮೀಕಿ ಸಾಹಿತ್ಯದ ಕುರಿತೇ ಹೆಚ್ಚು ಮಾತನಾಡುತ್ತೇವೆ. ಆದರೆ, ಕುಮಾರವ್ಯಾಸನ ಬಗೆಗೆ ಎಲ್ಲೂ ಮಾತಿಲ್ಲ. ಅದಕ್ಕೇ ಕರುಳು ಚುರ್ರೆನ್ನುತ್ತದೆ. ಅಯ್ಯಪ್ಪ ಫಣಿಕ್ಕರ್ ಅವರು ಸಂಪಾದಿಸಿದ 'ಮೆಡಿವಲ್ ಇಂಡಿಯನ್ ಲಿಟರೇಚರ್' ಕೃತಿಗಾಗಿ ಎಚ್.ಎಸ್. ಶಿವಪ್ರಕಾಶ್ ಕೆಲವು ಷಟ್ಪದಿಗಳನ್ನು ಅನುವಾದ ಮಾಡಿಕೊಟ್ಟಿದ್ದರು. ಅದನ್ನು ಹೆಚ್ಚು ಜನರು ಓದಿಲ್ಲ. ಕುಮಾರವ್ಯಾಸನದ್ದು ವಿಶ್ವಮಾನ್ಯತೆ ಗಳಿಸಬೇಕಾದ ಕೃತಿ. ಶೇಕ್ಸ್‌ಪಿಯರ್, ಹೋಮರ್, ಡಾಂಟೆ ಅವರ ಸಾಲಿಗೆ ಸೇರಬೇಕಾದುದು.

ಪ್ರಾರಂಭ, ಅಂತ್ಯ, ಸಸ್ಪೆನ್ಸ್, ಸಾರ್ವತ್ರಿಕತೆ, ಸಾರ್ವಕಾಲಿಕತೆ, ನೈತಿಕತೆ ಕುರಿತ ಪ್ರಶ್ನೆಗಳು – ಎಲ್ಲವನ್ನೂ ಒಳಗೊಂಡ ಕಾವ್ಯವನ್ನು ಕುಮಾರವ್ಯಾಸ ಹೇಳಿರುವ ರೀತಿಯಲ್ಲಿಯೇ ಪರಿಣತಿ ಇದೆ.

ನಾನು ಈ ಕೃತಿ ಸಂಪುಟಗಳ ಸಂಪಾದಕ. ಗುಣಮಟ್ಟ ನಿರ್ವಹಣೆಯ ಕಾರಣಕ್ಕೆ ಎರಡು ತತ್ತ್ವಗಳನ್ನು ಒಪ್ಪಿಕೊಂಡೆವು. ಮೂಲದ ಅರ್ಥಛಾಯೆ ಬಿಡದಂತೆ ಅನುವಾದಿಸಬೇಕು ಎನ್ನುವುದು ಮೊದಲನೆಯದು. ಎರಡನೆಯದು, ಮೂಲದಲ್ಲಿ ಇಲ್ಲದ ಏನನ್ನೂ ಸೇರಿಸಬಾರದು ಎನ್ನುವುದು.

ಹನೂರರ ಪಾತ್ರವೇನು?

ಶ್ರೀಧರ್: ಹಳಗನ್ನಡ ಪಂಡಿತರು ನಾವಲ್ಲ. ಹನೂರರು ಅದನ್ನು ನಮಗೆ ಹೇಳಿಕೊಡುವ ಗುರುಗಳಂತೆ. ನಾವು ಮೊದಲಿನಿಂದಲೂ ಕೆಲವು ತಪ್ಪುಗಳನ್ನೇ ಸರಿ ಅಂದುಕೊಂಡಿರುತ್ತೇವೆ. ಅವನ್ನು ಅವರು ತಿದ್ದುತ್ತಾರೆ. ಕುಮಾರವ್ಯಾಸನ ಕಾವ್ಯದ ಕುರಿತು ಒಳನೋಟ, ತತ್ತ್ವ, ಲೋಕಜ್ಞಾನ ಅವರಿಗೆ ಇದೆ. ಜೊತೆಗೆ ಅವರು ಜನಪದ ವಿದ್ವಾಂಸರು.

ಯೋಜನೆ ಶುರುವಾದದ್ದು ಯಾವಾಗ?

ಶ್ರೀಧರ್: 2011ರಲ್ಲಿ ಶುರುವಾಯಿತು. 2015ರಿಂದ ಗಂಭೀರವಾಗಿ ಕೆಲಸಗಳು ಶುರುವಾದವು. ಅರಣ್ಯಪರ್ವ, ಶಲ್ಯಪರ್ವದ ಅನುವಾದವನ್ನು ನಾನು ಮಾಡಿದೆ. ಆದಿಪರ್ವ, ಭೀಷ್ಮಪರ್ವ– ಸಿಎನ್‌ಆರ್, ಸಭಾಪರ್ವ, ಗದಾಪರ್ವ– ನಾರಾಯಣ ಹೆಗ್ಡೆ, ಉದ್ಯೋಗಪರ್ವ, ಕರ್ಣಪರ್ವ– ಎಚ್.ಎಸ್. ಶಿವಪ್ರಕಾಶ್, ವಿರಾಟಪರ್ವ, ದ್ರೋಣ ಪರ್ವ– ರಾಘವೇಂದ್ರ ರಾವ್ ಅನುವಾದಿಸಿದರು. 'ಆದಿಪಂಚಕ'ದಿಂದ ಒಂದು ಪರ್ವ, 'ಯುದ್ಧ ಪಂಚಕ'ದಿಂದ ಒಂದು ಪರ್ವದಂತೆ ತೆಗೆದುಕೊಂಡು, ರಸವತ್ತಾದ ಭಾಗಗಳನ್ನು ಮಾತ್ರ ಅನುವಾದಿಸುತ್ತಿದ್ದೇವೆ. ಕೆ.ಎಸ್. ಮಧುಸೂದನ, ಕೆ.ವಿ. ನಾರಾಯಣ ಅವರೂ ಸಲಹೆಗಾರರು. ಒಂದು ಸಂಪುಟ ಬಂದಿದೆ. ಇನ್ನೂ ಮೂರು ಸಂಪುಟಗಳು ಬರಲಿವೆ. 2026ರ ಹೊತ್ತಿಗೆ ಎಲ್ಲ ಕೆಲಸ ಮುಗಿಯಬಹುದು.

ಹನೂರು: ಒಟ್ಟು 2500 ಷಟ್ಪದಿಗಳನ್ನು ಆಯ್ದುಕೊಂಡಿದ್ದು, ಅನುವಾದಗಳೆಲ್ಲ ಮುಗಿದಿವೆ. ಏಕರೂಪತೆ, ಗುಣಮಟ್ಟಕ್ಕಾಗಿ ಕರಡುಗಳನ್ನು ತಿದ್ದುವ ಕೆಲಸ ನಡೆಯುತ್ತಿದೆ.

ಕುಮಾರವ್ಯಾಸನ ಸೃಷ್ಟಿಕ್ರಿಯೆಯ ಝಲಕ್

ಶ್ರೀಧರ್: ವ್ಯಾಸರ ಹೂರಣವನ್ನು ಯಥಾವತ್ ತೆಗೆದುಕೊಳ್ಳದೆ, ತನಗೆ ಬೇಡದೇ ಇರುವುದನ್ನು ಕುಮಾರವ್ಯಾಸ ಬಿಟ್ಟ. ಭಗವದ್ಗೀತೆಯಂತಹ ಮುಖ್ಯವಾದ ಭಾಗವನ್ನೇ ಸಂಕ್ಷಿಪ್ತಗೊಳಿಸಿದ. ಶಾಂತಿಪರ್ವದಂತಹ ಮುಖ್ಯವಾದ ಭಾಗವನ್ನೇ ಬಿಟ್ಟ. 18 ಪರ್ವಗಳನ್ನು 10 ಪರ್ವಗಳಿಗೆ ಇಳಿಸಿದ. ಪಾತ್ರಗಳನ್ನು ಅವನು ಪುನರ್ ಸೃಷ್ಟಿ ಮಾಡಿದ. ಕೃಷ್ಣನನ್ನು ಕೇಂದ್ರವಾಗಿಸಿದ. ಕರ್ಣನಿಗೆ ಅವನು ಕೊನೆಯಲ್ಲಿ ವಿಶ್ವರೂಪ ದರ್ಶನ ಮಾಡಿಸಿದ, ಕರ್ಣನನ್ನು ಕೊಲ್ಲುವಂತೆ ಅರ್ಜುನನಿಗೆ ಹೇಳಿದ್ದ ಅವನೇ ಹೀಗೆ ಕೊನೆಯಲ್ಲಿ ಮೋಕ್ಷ ಕಾಣಿಸುತ್ತಾನೆ.

ದ್ರೌಪದಿ ಇವನಲ್ಲಿ ತುಂಬಾ ಬಲಶಾಲಿ ಪಾತ್ರವಾಗಿದ್ದಾಳೆ. ಇವನಷ್ಟು ಸ್ತ್ರೀ ಪರವಾದ ಸಾಹಿತಿ ಕನ್ನಡದಲ್ಲಿ ಬೇರೆ ಯಾರೂ ಇಲ್ಲವೆನಿಸುತ್ತದೆ. 'ಧರ್ಮರಾಯ ಜೂಜಿನಲ್ಲಿ ತನ್ನನ್ನು ಮೊದಲು ಸೋತು ಆಮೇಲೆ ನನ್ನನ್ನು ಸೋತನೋ ಹೇಗೆ' ಎಂಬ ತರ್ಕಬದ್ಧ ಪ್ರಶ್ನೆಯನ್ನು ಹಾಕಿದ ಬುದ್ಧಿವಂತೆ.

ಹನೂರು: 'ಯಥಾರ್ಥ ಭಾಷಣ ಭೀತ ಚೇತನರು' ಎಂದು ಅವಳು ಸಭೆಯಲ್ಲೇ ಕೇಳುವ ಪರಿ, 'ನೀವೇನು ಗಂಡರೋ ಷಂಡರೋ?' ಎನ್ನುವ ರೀತಿ, 'ತೋಳಹೊರೆ' ಎಂದು ವ್ಯರ್ಥ ಭುಜಬಲವನ್ನು ಹಂಗಿಸುವ ಜಾಣತನ ಅವಳಲ್ಲಿ ಇವೆ.

ಶ್ರೀಧರ್: ಅವಳು ಕಾಲಿಗೆ ಬಿದ್ದು ನಮಸ್ಕಾರ ಮಾಡಿಯೇ ಇವನ್ನೆಲ್ಲ ಹೇಳುತ್ತಾಳೆ. ಸುಂದರವೂ ಸಂಕೀರ್ಣವೂ ಆದ ಪಾತ್ರವಿದು. ಸಾರ್ವತ್ರಿಕ ಸ್ತ್ರೀ ಸಮಸ್ಯೆ ಹೇಳುವ ಶೈಲಿ ಇದು.

ಕುಮಾರವ್ಯಾಸನ ಕಾವ್ಯಮೀಮಾಂಸೆ ಬಹಳ ವಿಭಿನ್ನ. ಅವನು ಜನರ ಕವಿ. 'ಇಳೆಯ ಜಾಣರು ಮೆಚ್ಚುವಂತಿರೆ' ಎನ್ನುವುದು ಅವನ ಉದ್ದೇಶ. ಮಹಾಕಾವ್ಯವನ್ನು ಸೃಜಿಸುವ ಸಾಂಪ್ರದಾಯಿಕ ಕ್ರಮವನ್ನು ಅವನು ಅನುಸರಿಸಿಲ್ಲ. ಉದಾಹರಣೆಗೆ, ಅಷ್ಟಾದಶ ವರ್ಣನೆ ಅವನಲ್ಲಿ ಇಲ್ಲ. ತನಗೆ ಮುಖ್ಯವಾದುದನ್ನು ಮಾತ್ರ ಅವನು ಹೇಳುತ್ತಾನೆ. ಪಾಂಡುವಿನ ಮರಣದ ಪ್ರಸಂಗವನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ.

ಹನೂರು: ಮರಣ ಭೀತಿಯಿಂದಾಗಿ ಹೆಂಡತಿ ಜೊತೆ ಅವನು ದೈಹಿಕ ಸಂಪರ್ಕ ಇಟ್ಟುಕೊಂಡಿರುವುದಿಲ್ಲ. ಆದರೆ, ವಸಂತ ಬರುತ್ತದೆ. ವಸಂತ ಋತುವೇ ಇವನ ಮೇಲೆ ದಂಡೆತ್ತಿ ಬಂತೆನೋ ಎನ್ನುವ ಸಾವಯವ ಸಂಕೇತವನ್ನು ಅವನು ತರುತ್ತಾನೆ.

ಅನುವಾದದ ಸವಾಲು

ಹನೂರು: 'ಹೌದು, ಅಲ್ಲ' ಎನ್ನುವ ಸಿದ್ಧಾಂತವನ್ನು ಕುಮಾರವ್ಯಾಸ ಬಹಳ ಮಟ್ಟಿಗೆ ಸಾಧಿಸಿಬಿಟ್ಟಿದ್ದಾನೆ. ಭಾಷಾಂತರದ ವಿಷಯದಲ್ಲಿ ಪಂಪ ಸುಲಭ, ಕುಮಾರವ್ಯಾಸ ಕಷ್ಟ. ಪಂಪ ಕಥನಕಾರ, ಇವನು ವ್ಯಾಖ್ಯಾನಕಾರ. ವಸ್ತುವಿನ ಆಯ್ಕೆ, ಭಾಷಾ ಪ್ರಯೋಗ ಎರಡರಲ್ಲೂ ಇವನು ನಿಸ್ಸೀಮ. ಪಂಪ–ವ್ಯಾಸರ ವಸ್ತು, ವಚನಕಾರರ ಭಾಷೆ, ತನ್ನ ಕಾಲದ ಭಕ್ತಿ ಮೂರನ್ನೂ ಏಕಕಾಲಕ್ಕೆ ಇವನು ಬಳಸಿರುವುದು ನಮಗೆ ಸವಾಲೊಡ್ಡುತ್ತಿದೆ. ಇದನ್ನು ಜನಪದ ಭಾಷೆಯ ಭಾಷಾಂತರದ ಸವಾಲು ಎನ್ನಬಹುದು.

ಶ್ರೀಧರ್: 'ಮಗುವುತನದಲಿ ಬೊಂಬೆಯಾಟಕೆ/ಮಗುವನೇ ತಹೆನೆಂದು ಬಂದಳು' ಎನ್ನುವುದನ್ನು 'As a childish prank, the young girl,/hoping to get a living doll for her games' ಎಂದು ಅನುವಾದಿಸಿದ್ದೇವೆ. ಆರು ಸಾಲುಗಳಿಗೆ ಅಷ್ಟೇ ಸಾಲಿನ ಅನುವಾದ. ಕಾವ್ಯದ ಗುಣವನ್ನೂ ಉಳಿಸಿಕೊಂಡಿದ್ದೇವೆ. 10–12 ಕರಡುಗಳನ್ನು ತಿದ್ದಿ ಮಾಡಿರುವ ಅನುವಾದ ಇದು. ಒಂದು ಕಡೆ ಮೂಲ ಷಟ್ಪದಿ ಇರುತ್ತದೆ, ಇನ್ನೊಂದು ಕಡೆ ಇಂಗ್ಲಿಷ್ ಅನುವಾದ. ಇದಕ್ಕೆ ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪದಾರ್ಥದ ಹುಡುಕಾಟ

ಸಿ.ಎನ್.ಆರ್.: ವಿಜಯನಗರದ ಕಾಲದಲ್ಲಿ ಚಾಲ್ತಿಯಲ್ಲಿದ್ದ ಕನ್ನಡ, ಅರೇಬಿಕ್, ಪರ್ಷಿಯನ್, ಮರಾಠಿ, ತೆಲುಗು, ಸಂಸ್ಕೃತದ ಪದಗಳೆಲ್ಲವನ್ನೂ ಕುಮಾರವ್ಯಾಸ ಬಳಸಿದ್ದಾನೆ. ಅವುಗಳಲ್ಲಿ ಎಷ್ಟೋ ಈಗ ಬಳಕೆಯಲ್ಲಿಲ್ಲ. ಹೀಗಾಗಿ ಅವುಗಳ ಅರ್ಥಕ್ಕಾಗಿ ಹೆಚ್ಚು ಹುಡುಕಾಟ ನಡೆಸಿದೆವು.

'ತೋಳುಗಳ ಲೌಡಿಗಳ' ಎಂದು ಷಟ್ಪದಿಯೊಂದರಲ್ಲಿ ಬಳಕೆಯಾಗಿದೆ. 'ಲೌಡಿ' ಎನ್ನುವುದು ಈಗ ಬೈಗುಳ. ಆದರೆ, ಕುಮಾರವ್ಯಾಸನು ದ್ರೌಪದಿಯ ತೋಳುಗಳ ಬಣ್ಣನೆಯಲ್ಲಿ ಅದನ್ನು ಬಳಸಿದ್ದಾನೆ. ಅದರ ಅರ್ಥ 'ಕಬ್ಬಿಣದ ಸರಳುಗಳಂತಹ' ಎಂದು.

ಹನೂರು: ಲಾಕುಳ, ಲವಡಿ ಎನ್ನುವುದೇ ಲೌಡಿ ಆಗಿದೆ.

ಸಿ.ಎನ್.ಆರ್.: ಹಲ್ಲಣಿಸು (ಮುಂದೆ ಹೋಗದೆ ನೋಡುತ್ತಾ ನಿಂತುಬಿಡುವುದು), ವಿಡಾಯ (ವೈಭವ), ತಿಗುರು (ಪೂಸುವುದು), ಜವಾದಿ (ಕಸ್ತೂರಿ), ತೇಜಿ (ಕುದುರೆ) ಇಂತಹ ಪದಗಳು ಸವಾಲೊಡ್ಡಿದವು. ಕೃಷ್ಣ, ಬಲರಾಮನ ನಡುವಿನ ಸಂಭಾಷಣೆಯಂತೆ ಕಾಣುವ 'ಏನಹರು ನಿಮಗಿಂದು ಕುಂತಿ ಮಾನಿನಿಯರು' ಎಂಬ ಷಟ್ಪದಿಯಲ್ಲಿ ಪ್ರಶ್ನೆಯೇ, ಉದ್ಗಾರವೇ, ಹೇಳಿಕೆಯೇ ಎಂಬ ಅನುಮಾನವೂ ಕಾಡಿದ್ದಿದೆ. ಶ್ರೀಧರ್ ಜೊತೆ ಐದು ಸುತ್ತಿನ ಚರ್ಚೆ ನಡೆಸಿದ ಮೇಲೆ, ಅದು ಕೃಷ್ಣನು ಪ್ರಶ್ನೆಯನ್ನು ತನಗೆ ತಾನೇ ಹಾಕಿಕೊಂಡು, ಉತ್ತರ ಕೊಟ್ಟಂತಹ ಮಾದರಿ ಎನ್ನುವ ನಿರ್ಧಾರಕ್ಕೆ ಬಂದೆವು. ಪೂರ್ಣವಿರಾಮ, ಅಲ್ಪವಿರಾಮ ಹೊರತುಪಡಿಸಿ ಬೇರೆ ಯಾವುದೇ ಚಿಹ್ನೆಗಳನ್ನು ಕುಮಾರವ್ಯಾಸ ಹಾಕದೇ ಇರುವುದರಿಂದ ಮೂಡಿದ ಸಮಸ್ಯೆ ಇದು.

ನಟ–ನಟಿಯರ ಕಸುಬುದಾರಿಕೆಗೆ ಕೈಪಿಡಿ

ವೆಂಕಟೇಶ್ವರ ಕೆ.

ಒಳನೋಟ

ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ರಂಗಶಿಕ್ಷಣ ನೀಡಲು ಹಲವಾರು ಪ್ರಮುಖ ರಂಗ ಪ್ರಯೋಗ ಶಾಲೆಗಳಿವೆ. ಹಾಗೆಯೇ ಅವುಗಳಿಗೆ ಪ್ರವೇಶ ಕೋರಿ ಬರುತ್ತಿರುವ ರಂಗಾಭ್ಯಾಸಿಗಳಿಗೂ ಕೊರತೆಯಿಲ್ಲ. ಇತ್ತೀಚಿನವರೆಗೂ ಕನ್ನಡದ ಎಲ್ಲಾ ರಂಗಶಿಕ್ಷಣ ಕೇಂದ್ರಗಳಲ್ಲೂ ಅಭಿನಯದ ಕುರಿತಾಗಿ ಲಭ್ಯವಿರುವ ಆಕರ ಗ್ರಂಥಗಳಲ್ಲಿ ವಾಸ್ತವವಾದಿ ಅಭಿನಯ ಸಿದ್ಧಾಂತಕಾರ ಸ್ತಾನಿಸ್ಲಾವಸ್ಕಿಯವರು ಬರೆದಿರುವ 'ಆ್ಯನ್ ಆ್ಯಕ್ಟರ್ ಪ್ರಿಪೇರ್ಸ್' ಪುಸ್ತಕದ ಕನ್ನಡ ಅವತರಣಿಕೆಯಾದ 'ರಂಗದಲ್ಲಿ ಅಂತರಂಗ' ಪುಸ್ತಕವು ಪ್ರಮುಖವಾದುದಾಗಿತ್ತು. ಸುಮಾರು ನಾಲ್ಕು ದಶಕಗಳ ಹಿಂದೆ ಕೆ.ವಿ ಸುಬ್ಬಣ್ಣನವರ ಅನುವಾದದಲ್ಲಿ ಮೂಡಿಬಂದ ಈ ಪುಸ್ತಕವು ಕನ್ನಡದ ರಂಗನಟರ ಪಾಲಿಗೆ ವಾಸ್ತವವಾದಿ ನಟನೆಯ ಕುರಿತಾಗಿ ಸ್ಪಷ್ಟತೆಯನ್ನು ಕಂಡುಕೊಳ್ಳಲು ಅತ್ಯುಪಯುಕ್ತ ಆಕರ ಗ್ರಂಥವಾಗಿ ಬಳಕೆಯಾಗಿದೆ.

ಇತ್ತೀಚಿನ ದಿನಗಳಲ್ಲಿ 'ನಟನೆಯ ಪಾಠಗಳು', 'ಅಭಿನಯ ಕಲಿಸಲು ಸಾಧ್ಯವಿಲ್ಲ' ತರಹದ ನಟನೆಯ ಕುರಿತಾದ ಕನ್ನಡದ್ದೇ ಪುಸ್ತಕಗಳು ಬಂದಿವೆಯಾದರೂ, ಅಭಿನಯ ಸಿದ್ಧಾಂತದ ಕುರಿತು ಪಾಶ್ಚಿಮಾತ್ಯ ಸಿದ್ಧಾಂತಕಾರರ ಕೃತಿಗಳ ಕನ್ನಡೀಕರಣ ಅತಿ ವಿರಳ. ಇಂತಹ ಸಂದರ್ಭದಲ್ಲಿ 'ಥಿಯೇಟರ್ ತತ್ಕಾಲ್ ಬುಕ್ಸ್'ನವರು ಸ್ತಾನಿಸ್ಲಾವಸ್ಕಿಯ 'ಬಿಲ್ಡಿಂಗ್ ಎ ಕ್ಯಾರೆಕ್ಟರ್' ಪುಸ್ತಕವನ್ನು ಶ್ರೀಧರ ಹೆಗ್ಗೋಡು ಅವರಿಂದ 'ಪಾತ್ರ ಪ್ರವೇಶ' ಎಂದು ಅನುವಾದ ಮಾಡಿಸಿ, ಪ್ರಕಾಶಿಸಿರುವುದು ಅಭಿನಂದನೀಯ.



ಪಾತ್ರ ಪ್ರವೇಶ
ಮೂಲ: ಕೋನ್‌ಸ್ತಂತಿನ್ ಸ್ತಾನಿಸ್ಲಾವಸ್ಕಿಯ
ಕನ್ನಡಕ್ಕೆ: ಶ್ರೀಧರ ಹೆಗ್ಗೋಡು
ಪ್ರ: ಥಿಯೇಟರ್ ತತ್ಕಾಲ್ ಬುಕ್ಸ್
ಸಂ: 9901234161
ಪು: 402 ₹300

ನಟನೆಯ ಕುರಿತಾಗಿ ಸ್ತಾನಿಸ್ಲಾವಸ್ಕಿಯು ಬರೆದಿರುವ ಮೂರು ಸಂಪುಟಗಳಲ್ಲಿ 'ಬಿಲ್ಡಿಂಗ್ ಎ ಕ್ಯಾರೆಕ್ಟರ್' ಕೂಡ ಒಂದು. ನೀನಾಸಂ ಪದವೀಧರರಾದ ಹಾಗೂ ಅಲ್ಲಿ ರಂಗ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿರುವ ಶ್ರೀಧರ ಹೆಗ್ಗೋಡು ತಮ್ಮ ರಂಗಾನುಭವದ ಹಿನ್ನೆಲೆಯಲ್ಲಿ ಇದನ್ನು ಕನ್ನಡೀಕರಿಸಿದ್ದಾರೆ. ಆಕಸ್ಮಿಕ ಅಪಘಾತದಿಂದಾಗಿ ದೇಹ ಸ್ವಾಧೀನ ಕಳೆದುಕೊಂಡಿದ್ದರೂ ತಮ್ಮ ಮನೋಸ್ಥೈರ್ಯ ಹಾಗೂ ರಂಗಭೂಮಿಯ ಕುರಿತಾದ ತಮ್ಮ ತುಡಿತದಿಂದ ಕೃತಿಯ ಅನುವಾದ ಮಾಡಿರುವುದು ಯುವ ರಂಗಕರ್ಮಿಗಳಿಗೆ ಪ್ರೇರಣಾದಾಯಕ. ಮೊದಲ ಸಂಪುಟವನ್ನು ಕೆ.ವಿ. ಸುಬ್ಬಣ್ಣನವರು 1982ರಲ್ಲಿ ಕನ್ನಡಕ್ಕೆ ತಂದಿದ್ದು, ಇದುವರೆವಿಗೂ ಹಲವಾರು ನಟರಿಗೆ ಅಭ್ಯಾಸಕ್ಕಾಗಿ ಮಾರ್ಗ ತೋರುವ ಪುಸ್ತಕವಾಗಿದೆ. ಅದಾದ ನಂತರ ಇಲ್ಲಿಯವರೆವಿಗೂ ವಾಸ್ತವವಾದೀ ಅಭಿನಯದ ಕುರಿತಾದ ಇನ್ನೊಂದು ಪುಸ್ತಕ ಕನ್ನಡದಲ್ಲಿ ಲಭ್ಯವಿರಲಿಲ್ಲ. ನಟನೆಗೆ ವಿಪುಲ ಅವಕಾಶಗಳಿರುವ ಈ ಕಾಲದಲ್ಲಿ ಪಾತ್ರ ಈ ಪುಸ್ತಕವು ವೃತ್ತಿಪರ ನಟರಿಗೆ ನೆರವಾಗುವುದರಲ್ಲಿ ಯಾವುದೇ ಅನುಮಾನಗಳಿಲ್ಲ. ನಟರಾಗುವ ಕನಸು ಹೊತ್ತು ರಂಗಶಾಲೆಗಳಿಗೆ ಸೇರಿರುವ, ಮುಂದೆ ಸೇರ ಬಯಸುವ ರಂಗ ವಿದ್ಯಾರ್ಥಿಗಳಿಗೆ ಇದು ದಾರಿ ದೀಪವಾಗಬಲ್ಲದು. ಅಭಿನಯ ಸಿದ್ಧಾಂತವನ್ನು ಬೋಧಿಸುತ್ತಿರುವ ಅಧ್ಯಾಪಕರಿಗೆ ಪರಿಪೂರ್ಣ ಕೈಪಿಡಿಯೂ ಆಗಬಲ್ಲದು.

'ರಂಗದಲ್ಲಿ ಅಂತರಂಗ' ಪುಸ್ತಕವು ನಟನೊಬ್ಬ ಪಾತ್ರ ತಯಾರಿಯ ವೇಳೆ ಒಳಗೊಳ್ಳಬೇಕಾದ ಕಾಲ್ಪನಿಕ ಪ್ರಕ್ರಿಯೆಗಳು ಮತ್ತು ಒಂದು ಪಾತ್ರವನ್ನು ಪೂರ್ಣವಾಗಿ ಅನ್ವೇಷಿಸಲು ನಟನು ಒಳಪಡಬೇಕಾದ ಆಂತರಿಕ ಸಿದ್ಧತೆಯ ಪ್ರಕ್ರಿಯೆಗಳ ಕುರಿತು ನಿರೂಪಿಸಿತ್ತು. 'ಪಾತ್ರ ಪ್ರವೇಶ' ಪುಸ್ತಕವು, ರಂಗದ ಮೇಲೆ ಪಾತ್ರದ ಭೌತಿಕ ಸಾಕ್ಷಾತ್ಕಾರಕ್ಕಾಗಿ, ದೈಹಿಕ ಅಭಿವ್ಯಕ್ತಿಗಳು, ಚಲನೆ, ಚಲನೆಯಲ್ಲಿನ ತಾಳ – ಲಯ, ಸಂಗೀತ ಮತ್ತು ಹಾಡು, ಮಾತುಗಾರಿಕೆ, ಮಾತಿನಲ್ಲಿ ತಾಳ-ಲಯ, ಉಚ್ಚಾರ- ಒತ್ತು-ಕಾಕು- ಅಭಿವ್ಯಂಜಕತೆ, ಪಾತ್ರ ರಚನೆ... ಇವುಗಳೆಲ್ಲದರ ಜೊತೆಗೆ ನಟನೊಬ್ಬ ಹೇಗೆ ವ್ಯವಹರಿಸುತ್ತಾನೆ ಎಂಬುದನ್ನು ವಿಸ್ತಾರವಾಗಿ, ಪ್ರಾಯೋಗಿಕವಾಗಿ ಚರ್ಚೆ ಮಾಡುತ್ತದೆ.

ಪ್ರತಿಯೊಂದು ಸಿದ್ಧಾಂತವು ಪ್ರಾಯೋಗಿಕ ಅಭ್ಯಾಸದೊಂದಿಗೆ ಬೇರ್ಪಡಿಸಲಾಗದಂತೆ ಬೆಸೆದುಕೊಂಡಿರುವ, ನಟನೆಯಂತಹ ಭೌತಿಕ ಕಲೆಯಲ್ಲಿ ಕುಶಲತೆಯನ್ನು ಸಾಧಿಸುವ ನಿಟ್ಟಿನಲ್ಲಿರುವ ನಟರ ಕಸುಬುದಾರಿಕೆಗೆ ಒಂದು ಪರಿಪೂರ್ಣ ಕೈಪಿಡಿಯಾಗಿದೆ. ಆಂಗಿಕ ಮತ್ತು ವಾಚಿಕ ಅಭ್ಯಾಸಗಳ ಕುರಿತು ದೃಷ್ಟಾಂತಗಳ ಸಹಿತ ಕೃತಿಯಲ್ಲಿ ವಿವರಿಸಲಾಗಿದೆ. ಅಭಿನಯದ ಕುರಿತಾದ ಪ್ರಾಯೋಗಿಕ ಚಟುವಟಿಕೆಗಳಿಂದ ಕೂಡಿರುವ ವಿವರಣಾತ್ಮಕ ಟಿಪ್ಪಣಿಗಳು ಇದರಲ್ಲಿ ಇವೆ. ಇಂತಹ ಪುಸ್ತಕವನ್ನು ಯಥಾವತ್ತಾಗಿ ಮೂಲಕ್ಕೆ ಧಕ್ಕೆಯಾಗದಂತೆ ಅನುವಾದಿಸುವುದು ಸವಾಲಿನ ಕೆಲಸ. ನಮ್ಮ ಭಾಷೆ ಮತ್ತು ಪರಿಸರಕ್ಕೆ ಅನ್ವಯಿಸದ ಹಲವು ಅಂಶಗಳನ್ನು ಕೈಬಿಟ್ಟು, ಎಲ್ಲಾ ನಟರಿಗೂ ಅವಶ್ಯವಾಗುವಂತಹ ಪ್ರಮುಖ ವಿಷಯಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಸಲೀಸಾಗಿ ಓದಲು ನೆರವಾಗುವಂತೆ ಆಡುಮಾತಿನ ಧಾಟಿಯ ಭಾಷಾ ಬಳಕೆಯಿದೆ. ಈ ಪುಸ್ತಕವನ್ನು ಓದಿ, ನಟ–ನಟಿಯರು ತಮ್ಮ ವೃತ್ತಿ ಜೀವನದಲ್ಲಿ ಹಲವು ಆಶಯಗಳನ್ನು ಅಳವಡಿಸಿಕೊಳ್ಳಬಹುದು ಎನ್ನುವುದೂ ಅಗ್ಗಳಿಕೆ.

ಫ್ಯಾಂಟಸಿ ಜಗತ್ತಿನ ರಿಯಲಿಸ್ಟಿಕ್ ಸತ್ಯಗಳು

ಸಾಹಸಗಾಥೆ

ಜರ್ಮನಿಯ ಲೇಖಕ ಮಿಖಾಯಲ್ ಆಂಡ್ರೆಯಾಸ್ ಹೆಲ್ಮುಟ್ ಎಂಡ ಅವರು ಬರೆದಿರುವ ಕಾದಂಬರಿ 'ಮೊಮೊ'. ಮೇಲ್ನೋಟಕ್ಕೆ ಮೊಮೊ ಎಂಬ ಹುಡುಗಿಯ ಸಾಹಸಗಾಥೆ ಇದು. ಮಕ್ಕಳಿಗೆ ಖುಷಿಕೊಡುವ ಫ್ಯಾಂಟಸಿ ಕಥೆ ಎನಿಸಿದರೂ, ಇದು ಹಿರಿಯ ಓದುಗರೂ ಓದಲೇಬೇಕಾದ ಕೃತಿ. ಇದನ್ನು ಜಯಶ್ರೀ ಕಾಸರವಳ್ಳಿ ಕನ್ನಡಕ್ಕೆ ಅನುವಾದಿಸಿದ್ದಾರೆ.

'ಮೊಮೊ' ಕಾದಂಬರಿಯ ಕೇಂದ್ರದಲ್ಲಿರುವುದು 'ಸಮಯ'. ನಮ್ಮ ಇಂದಿನ ಆಧುನಿಕ ಬದುಕಿನ ಓಟನಾಟಕದ ಕೇಂದ್ರದಲ್ಲಿರುವುದೂ ಸಮಯವೇ ಅಲ್ಲವೇ? ಫ್ಯಾಂಟಸಿಯ ರೂಪದ ಕಥೆಯನ್ನು ಹೇಳುತ್ತಲೇ ನಮ್ಮ ಬದುಕಿನೊಂದಿಗೇ ಹೆಣೆದುಕೊಂಡಿರುವ ರಿಯಲಿಸ್ಟಿಕ್ ಸತ್ಯಗಳನ್ನು ಮನಗಾಣಿಸುತ್ತ ಹೋಗುತ್ತದೆ ಈ ಕಾದಂಬರಿ.

ಈ ಕಥೆ ಪ್ರಾರಂಭವಾಗುವುದೇ ಮಹಾನಗರದಿಂದ ಹೊರಭಾಗದಲ್ಲಿರುವ, ಪಾಳುಬಿದ್ದಿರುವ ಒಂದು ಹಳೆಕಾಲದ ಅರೆ ವೃತ್ತಾಕಾರದ ರಂಗಮಂದಿರದಲ್ಲಿ. ಆ ಊರು, ವಾತಾವರಣವೇ ಗತಕಾಲದ ಅವಶೇಷಗಳು ಮತ್ತು ವರ್ತಮಾನದ ಸೌಲಭ್ಯಗಳ ಜೊತೆಗೆ ಭವಿಷ್ಯದ ಕನಸುಗಳೂ ಕೂಡಿರುವಂಥದು. ಇಡೀ ಕಾದಂಬರಿಯ ನಡೆಯನ್ನು ನಿಯಂತ್ರಿಸುವ ಕಾಲದ ಮೂರೂ ಅಂಗಗಳು ಅವು. ಅಲ್ಲಿ ಮೊಮೊ ಎಂಬ ಅನಾಥ ಹುಡುಗಿ ಬಂದು ಉಳಿದುಕೊಂಡಿದ್ದಾಳೆ. ಅವಳನ್ನು ಊರವರೆಲ್ಲ ಆದರದಿಂದ ಬರಮಾಡಿಕೊಳ್ಳುತ್ತಾರೆ. ತಮ್ಮ ಕೈಯಾರೆ ವಸತಿ ಸಿದ್ಧಮಾಡಿಕೊಡುತ್ತಾರೆ. ಅವರಾರೂ ಶ್ರೀಮಂತರಲ್ಲ. ಮತ್ತೊಬ್ಬ ಅತಿಥಿ ಮನೆಗೆ ಬಂದರೆ ತಮ್ಮ ಊಟಕ್ಕೆ ಕುತ್ತು ಬರಬಹುದಾದ ಸ್ಥಿತಿಯಲ್ಲಿರುವವರು. ಆದರೆ, ಅವರ ಮನಸ್ಸು ಶ್ರೀಮಂತಿಕೆಯಿಂದ ತುಂಬಿ ತುಳುಕುವಂಥದ್ದು. ಆ ಊರಿಗೆ ಮೊಮೊ ಒಬ್ಬಳು ಅನಿವಾರ್ಯ ಸದಸ್ಯಳಾಗುತ್ತಾಳೆ. ಹಾಗೆಂದು ಅವಳಿಗೆ ಯಾವ ಮಾಂತ್ರಿಕ ಶಕ್ತಿಯೂ ಇಲ್ಲ. ಮೋಡಿ ಮಾಡುವ ರೂಪ, ಗುಣಗಳಿಲ್ಲ. ಅವಳಿಗಿರುವ ಒಂದೇ ಒಂದು ಶಕ್ತಿ ಎಂದರೆ ಕೇಳಿಸಿಕೊಳ್ಳುವುದು. ಯಾರು ತನ್ನ ಬಳಿ ಬಂದು ಮಾತಾಡಿದರೂ ಅವಳು ಆಸ್ಥೆಯಿಂದ ಕೇಳಿಸಿಕೊಳ್ಳುತ್ತಾಳಷ್ಟೆ. ಅವಳ ಕೇಳಿಸಿಕೊಳ್ಳುವ ಗುಣದಿಂದಲೇ ಆ ಊರಿನಲ್ಲೊಂದು ಬಗೆಯ ಸ್ವಾಸ್ಥ್ಯ ಮನೆಮಾಡಿದೆ. ಯಾರಿಗೆ ಬೇಜಾರಾದರೂ, ತೊಂದರೆಯಾದರೂ, 'ನೀನೊಮ್ಮೆ ಮೊಮೊಳನ್ನು ನೋಡಿ ಬಾ' ಅನ್ನುವಷ್ಟು ಅವಳು ಆ ಊರಿನ ಮಾನಸಿಕತೆಯ ಭಾಗವಾಗಿದ್ದಾಳೆ. ಆದರೆ ಮತ್ತೊಂದೆಡೆ ಮಹಾನಗರವನ್ನು ಬೂದು ಬಣ್ಣದ ಸಮಯಗಳ್ಳರು ಆಕ್ರಮಿಸಲಾರಂಭಿಸಿದ್ದಾರೆ. ವ್ಯಕ್ತಿಗಳಿಗೆ ಕಾಣಿಸಿಕೊಂಡು ಅವಳನ್ನು ತಮ್ಮ ಸಮಯ ಠೇವಣಿಯ ಬ್ಯಾಂಕಿನ ಸದಸ್ಯರನ್ನಾಗಿಸಿಕೊಂಡು ಮಾಯವಾಗಿಬಿಡುವ ಠಕ್ಕರು ಅವರು. ಜನರ ಸಮಯವನ್ನು ಕದ್ದಷ್ಟೂ ಅವರ ಬದುಕು ಕ್ಷೇಮ.



ಮೊಮೊ
ಮೂಲ ಲೇಖಕ: ಮಿಖಾಯಲ್ ಎಂಡ
ಕನ್ನಡಾನುವಾದ: ಜಯಶ್ರೀ ಕಾಸರವಳ್ಳಿ
ಪ್ರ: ಮಣಿಪಾಲ ಯೂನಿವರ್ಸಿಟಿ ಪ್ರೆಸ್
ಸಂ: 8202922954
ಪು: 300 ₹450

ಸಮಯ ಠೇವಣಿಯ ಬ್ಯಾಂಕಿನಲ್ಲಿ ಸಮಯ ಉಳಿತಾಯ ಮಾಡಲು ತೊಡಗಿದವರೆಲ್ಲ, ಮನುಷ್ಯ ಸಂಬಂಧಗಳನ್ನು, ತಮ್ಮ ಬದುಕಿನ ಆನಂದವನ್ನು ಕಳೆದುಕೊಳ್ಳತೊಡಗುತ್ತಾರೆ. ಸಮಯ ಉಳಿಸುವ ರೇಸ್‌ನಲ್ಲಿ ಬಿದ್ದ ಬದುಕನ್ನು ಆತಂಕದ, ಉದ್ವೇಗದ ಬೆಂಕಿಯಲ್ಲಿ ಸುಟ್ಟುಕೊಳ್ಳುತ್ತಿರುತ್ತಾರೆ.

ಮೇಲ್ನೋಟಕ್ಕೆ ಒಂದು ಫ್ಯಾಂಟಸಿ ಕಥೆಯನ್ನು ಹೇಳುತ್ತಲೇ ಕಾದಂಬರಿಕಾರ ನಮ್ಮ ಇಂದಿನ ಬದುಕಿನ ಕ್ರಮವನ್ನೂ ಹೇಳುತ್ತಿದ್ದಾರೆ. ಹಾಗಾಗಿಯೇ ಇದು ಮಕ್ಕಳ ಕಥೆಯಷ್ಟೇ ಅಲ್ಲವೇ ಅಲ್ಲ. ಹಿರಿಯರೂ ಓದಲೇಬೇಕಾದ ಕಥನ.

ಜಗತ್ತಿನ ಸಮಯವನ್ನೆಲ್ಲ ಕದ್ದುಬಿಡುವ ಹುನ್ನಾರದಲ್ಲಿರುವ ಬೂದು ಬಣ್ಣದ ಮನುಷ್ಯರನ್ನು, ಅನಾಥ ಹುಡುಗಿಯೊಬ್ಬಳು ಎದುರಿಸುತ್ತಾಳೆ. ಅವಳ ಬಳಿ ಇರುವುದು ಸತ್ಯ, ಪ್ರಾಮಾಣಿಕತೆ ಮತ್ತು ಮುಗ್ಧತೆಯಷ್ಟೆ. ಅದೇ ಅವಳನ್ನು ಮುನ್ನಡೆಸುತ್ತದೆ.

ಥ್ರಿಲ್ಲರ್ ಗುಣವಿರುವ ಕಥೆಯನ್ನು ಹೇಳುತ್ತಲೇ ನಮ್ಮ ಆಧುನಿಕ ಬದುಕಿನ ಬಿಕ್ಕಟ್ಟನ್ನೂ ಕಾಣಿಸುತ್ತ ಹೋಗುತ್ತಾರೆ ಕಾದಂಬರಿಕಾರರು. ಜರ್ಮನಿ ದೇಶದ ಈ ಕಥೆಯನ್ನು ಜಯಶ್ರೀ ಸಮರ್ಥವಾಗಿ ಕನ್ನಡಕ್ಕೆ ತಂದಿದ್ದಾರೆ. ಕೆಲವು ವಾಕ್ಯಗಳು ತುಸು ಕೃತಕ ಎನಿಸುತ್ತವಾದರೂ, ಮೊಮೊಳ ಜಗತ್ತನ್ನು ಪರಿಚಯಿಸಿರುವುದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಮುನ್ನೂರು ಪುಟಗಳ ಈ ಕಾದಂಬರಿ ಕೆಲವೊಮ್ಮೆ ಸಮಯದಷ್ಟೇ ವೇಗವಾಗಿಯೂ ಇನ್ನು ಕೆಲವು ಕಡೆಗಳಲ್ಲಿ ಕಥೆಯೊಳಗಿನ ಆಮೆಯಂತೆ ನಿಧಾನವಾಗಿಯೂ ಚಲಿಸುತ್ತದೆ. ಆ ಎರಡೂ ಬಗೆಯ ಓದನ್ನು ದಕ್ಕಿಸಿಕೊಂಡು ಒಂದು ವಿಶಿಷ್ಟವಾದ ಅನುಭವವನ್ನಂತೂ ನೀಡುತ್ತದೆ.

ಮೊದಲ ಓದು

ರೆಕ್ಕೆ ಕಟ್ಟುವ ಊರುಗಳ ಕಥೆ

ಏರೋ ಪುರಾಣ
ಲೇ: ಯೋಗೀಂದ್ರ ಮರವಂತೆ
ಪ್ರ: ಪ್ರಿಸಮ್ ಬುಕ್ಸ್ ಪ್ರೈ, ಲಿ.
ಸಂ: 080-26714108
ಪು: 128 ₹195

1903ರಲ್ಲಿ ರೈಟ್ ಸಹೋದರರು ಯಂತ್ರಚಾಲಿತ ವಿಮಾನ ಹಾರಿಸಿದ ಚಾರಿತ್ರಿಕ ಘಟನೆಯ ನಂತರ ಬ್ರಿಟನ್‌ನ ಬ್ರಿಸ್ಟಲ್‌ನ ಜಾರ್ಜ್ ವೈಟ್ ಆರಂಭಿಸಿದ ವಿಮಾನ ತಯಾರಿಕಾ ಕಂಪನಿ ಆ ಕಾಲದಲ್ಲಿ ಭಾರಿ ಸದ್ದು ಮಾಡಿತ್ತು. ಆದರೆ ಈಗಲೂ ವಿಮಾನ ಕ್ಷೇತ್ರದೊಂದಿಗೆ ಬ್ರಿಸ್ಟಲ್ ಸಂಪರ್ಕ ಹೊಂದಿದೆ. ಜತೆಗೆ 2021 ಫೆ. 19ಕ್ಕೆ 111 ವರ್ಷ ಪೂರ್ಣಗೊಳಿಸಿದೆ. ವಿಮಾನ ಕ್ಷೇತ್ರದ ಇಂಥ ಬಹಳಷ್ಟು ಕುತೂಹಲಕಾರಿ ಅಂಶಗಳನ್ನು ಯೋಗೀಂದ್ರ ಮರವಂತೆ ಅವರ 'ಏರೋ ಪುರಾಣ' ಕೃತಿ ಒಳಗೊಂಡಿದೆ.

ವಿಮಾನ ತಯಾರಿಕಾ ಸಂಸ್ಥೆ ಏರ್‌ಬಸ್‌ನೊಂದಿಗೆ ಸುಮಾರು ಎರಡು ದಶಕಗಳ ಒಡನಾಟ ಹೊಂದಿರುವ ಯೋಗೀಂದ್ರ ಅವರು ತಮ್ಮ ವೃತ್ತಿ ಬದುಕಿನಲ್ಲಿ ಕಂಡ ವಿಮಾನಲೋಕದ ಬಹಳಷ್ಟು ಅಚ್ಚರಿಯ ಅನುಭವಗಳನ್ನು ಇಲ್ಲಿ ದಾಖಲಿಸಿದ್ದಾರೆ. ಇದು ಕೇವಲ ಅನುಭವದ ಪಯಣವಾಗಿರದೆ, ಲೋಹದ ಹಕ್ಕಿಗಳ ಒಳ–ಹೊರಗಿನ ಮಾಹಿತಿ ಕೋಶವೂ ಆಗಿದೆ.

ವಿಮಾನ ಹಾರುವ ಮೊದಲಿನ ತಯಾರಿಯಿಂದ ಹಿಡಿದು, ವಿಮಾನಗಳ ಅಂಗವಿಜ್ಞಾನ, ಬಾನಾಡಿಗಳ ರೆಕ್ಕೆ ಕಟ್ಟುವ ಊರುಗಳ ಇತಿಹಾಸ, ವಿಮಾನ ನಿಲ್ದಾಣಗಳಲ್ಲಿನ ವಿಧಿವಿಧಾನಗಳು, ಅಪಘಾತಗಳು, ವಿಮಾನ ಹಾರಾಟದಿಂದ ಹಸಿರು ಹೋರಾಟದಂತಹ ಅಧ್ಯಯನಗಳ ಮಾಹಿತಿಯೂ ಇದರಲ್ಲಿದೆ. ಮಂಗಳೂರು ವಿಮಾನ ಅಪಘಾತದ ಮರುಓದು ಆಸಕ್ತಿಕರವಾಗಿದೆ. ಲೋಹದ ಹಕ್ಕಿಗಳ ಕುರಿತು ಕುತೂಹಲ ಹೊಂದಿರುವವರು ಮತ್ತು ವಾಯುಬಲ ವಿಜ್ಞಾನದಲ್ಲಿ ಆಸಕ್ತಿ ಹೊಂದಿದವರಿಗೆ ಇದೊಂದು ಮಾಹಿತಿಪೂರ್ಣ ಕೃತಿ.

ಸಂಗೀತದ ಯಶೋಗಾಥೆಯ ಕೃತಿ

ಸಂಗೀತ ಸಾಮ್ರಾಜ್ಞಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಬಗ್ಗೆ ಎಷ್ಟು ಬರೆದರೂ ಸಾಲದು. ಸಂಗೀತದ ಮಟ್ಟಿಗೆ 'ತಂಗಾಳಿ ಬೀಸುವ ಗಂಗಾನದಿ' ಅವರು ಎಂದು ಸಂಗೀತಗಾರರೇ ಹೇಳುತ್ತಾರೆ. ಸುಬ್ಬುಲಕ್ಷ್ಮಿ ಬಗ್ಗೆ ಕೆಲವಾರು ಪುಸ್ತಕಗಳು ಬಂದಿವೆಯಾದರೂ, 'ಸುನಾದ ವಿನೋದಿನಿ' ಪುಸ್ತಕವು ಅವರ ವ್ಯಕ್ತಿತ್ವದ ಸಮಗ್ರ ಚಿತ್ರಣ ಕಟ್ಟಿಕೊಡುತ್ತದೆ.

ಕೃತಿಯ ಆರಂಭದಲ್ಲಿ ಲೇಖಕರು ಸುಬ್ಬುಲಕ್ಷ್ಮಿ ಅವರನ್ನು ದೈವಿಕ ಕಾಂತಿಯುಳ್ಳ ತೇಜಸ್ಸು ಎಂಬಂತೆ ಚಿತ್ರಿಸಿರುವುದು ಈ ಮಹಾನ್ ಕಲಾವಿದೆಗೆ ಸಂದ ನಮ್ರ ಗೌರವ ಎಂದೇ ಭಾವಿಸಬೇಕು. ಅವರ ಜೀವನವನ್ನು, ಸಾಧನೆಯನ್ನು, ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ಅವಲೋಕಿಸಿ ಸಮಗ್ರವಾಗಿ ಇಲ್ಲಿ ಚಿತ್ರಿಸಲಾಗಿದೆ. ಸುಬ್ಬುಲಕ್ಷ್ಮಿ ಅವರ ಸಾಧನೆಯನ್ನು, ಅವರ ವಿಶಿಷ್ಟ ಮನೋಧರ್ಮವನ್ನು ಅತ್ಯಂತ ಸಂವೇದನಾಶೀಲವಾಗಿ ನಿರೂಪಿಸಲಾಗಿದೆ.

ಅವರು ಹಾಡಿರುವ ದೇವರನಾಮ, ಕೃತಿ, ಕೀರ್ತನೆಗಳು, ಅಭಂಗಗಳು ಸದಾ ಕೇಳುಗರ ಕಿವಿಯಲ್ಲಿ ರಿಂಗಣಿಸುತ್ತಿದ್ದರೂ ಅವರ ಜೀವನದ ನಾದಪಯಣವನ್ನು ಅಕ್ಷರರೂಪದಲ್ಲಿ ಒಪ್ಪವಾಗಿ ಪೋಣಿಸಿ ಕೊಟ್ಟಿರುವುದು ಲೇಖಕ ಎಸ್. ಕೃಷ್ಣಮೂರ್ತಿ ಅವರ ಸಂಗೀತದ ಮೇಲಿನ ತುಡಿತವನ್ನು ಅನಾವರಣಗೊಳಿಸುವಂತಿದೆ. ಕೃತಿಯುದ್ದಕ್ಕೂ ಸಂಗೀತ ಸಾಮ್ರಾಜ್ಞಿಯ ಸಂಗೀತ ಬದುಕಿನ ಯಶೋಗಾಥೆ ಹನ್ನೊಂದು ಅಧ್ಯಾಯಗಳಲ್ಲಿ ತೆರೆದುಕೊಂಡಿದೆ. ಅವರ ಪತಿ ಸದಾಶಿವಂ ಅವರಿಗೆ ಪತ್ನಿಯ ಮೇಲಿದ್ದ ಅಕ್ಕರೆ, ಅವರು ತೋರಿಸುತ್ತಿದ್ದ ಪ್ರೋತ್ಸಾಹ ಈ ಹೊತ್ತಗೆಯಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಸಂಗೀತ ವಿದ್ಯಾರ್ಥಿಗಳಿಗೆ ನಿಜವಾದ ದಾರಿದೀಪದಂತಿದೆ ಈ ಹೊತ್ತಗೆ.

ಸುನಾದ ವಿನೋದಿನಿ ಎಂ.ಎಸ್. ಸುಬ್ಬುಲಕ್ಷ್ಮಿ
ಲೇ: ಎಸ್. ಕೃಷ್ಣಮೂರ್ತಿ
ಪ್ರ: ಪ್ರಿಸಂ ಪುಸ್ತಕ ಪ್ರಕಾಶನ
ಸಂ: 080-26714108
ಪು: 136 ₹195

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಗುಂಪುಲಿ

ಗುಂಪುಲಿ (ನಾ). (ಪಕ್ಷಿ ಮೊದಲಾದುವುಗಳು) ಒಟ್ಟಾಗಿ ಮಾಡುವ ಶಬ್ದ, ಸಾಮೂಹಿಕ ಧ್ವನಿ

(ಗುಂಪು + ಉಲಿ)

ಪಂಚವಟಿಯಲ್ಲಿದ್ದಾಗ ಹೇಮಂತ ಋತುವಿನ ಒಂದು ದಿನ ಬೆಳಿಗ್ಗೆ ರಾಮಲಕ್ಷ್ಮಣರು ಗೋದಾವರಿಯಲ್ಲಿ ಮಿಂದು ಹಿಂತಿರುಗುತ್ತಿರುತ್ತಾರೆ. ಆಗ ರಾಮಚಂದ್ರನು ತಮ್ಮನಿಗೆ 'ನಾವು ಇಲ್ಲಿಂದ ಒಂದು ಮಂಗಳ ಮುಹೂರ್ತದಲ್ಲಿ ಅಯೋಧ್ಯೆಗೆ ಹಿಂದಿರುಗೋಣ' ಎಂದು ಹೇಳುವನು. ಆ ಬೆಳಗಿನ ಹೊಂಬಿಸಿಲು ಬಿದ್ದ ಬಿದಿರ ಮೆಳೆಯ ತುದಿಗಣೆಯಲ್ಲಿದ್ದ ಕಾಮಳ್ಳಿಗಳ ಹಿಂಡು ಹಾರಿ ಹೋಗುವಾಗ ಅವು ಒಟ್ಟಾಗಿ ಮಾಡಿದ ಉಲಿತವನ್ನು ಕವಿಯು 'ಗುಂಪುಲಿ' ಎಂಬ ಪದ ರಚಿಸಿ ಉಲಿತದ ಸಾಂಗತ್ಯವನ್ನು ಪ್ರಕಟಪಡಿಸಿದ್ದಾರೆ.

ದಾರಿಯೆಡೆ
ಹೊಮ್ಮಿದೆಳ ಹೊಂಬಿಸಿಲ್ ಬಿಳ್ದೊಂದು
ಬಿದಿರ್ಮೆಳೆಯ
ತುದಿಗಣೆಯೊಳಿರ್ದೊಂದು ಕಾಮಳ್ಳಿಗಳ ಹಿಂಡು
ಹಾರಿದುದು ಗುಂಪುಲಿಯನೆಸೆದು.
(1.11: 230-232)

ಸಾದರ ಸ್ವೀಕಾರ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕವನ
ಸ್ಮಿತಾ ಅಮೃತರಾಜ್. ಸಂಪಾಜೆ ಅವರ ಹಾದಿ ನಿದ್ದೆಗೆ ಜಾರಿದ ಹೊತ್ತು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಕಥೆ
ವಿಶ್ವನಾಥ ಎನ್ ನೇರಳಕಟ್ಟೆ ಅವರ ಖಾಲಿಹಾಳೆ ಮತ್ತು ಚಿತ್ರ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಬಯಲು ಸೀಮೆಯ ಉರಿ ಬಿಸಿಲಿನಲ್ಲಿ ಹೆದ್ದಾರಿಯ ಇಕ್ಕೆಲಗಳಲ್ಲಿ ಅರಳಿನಿಂತ ಈ ದೇವಮರಗಳ ಕೇಸರಿ ಹೂಗಳು ಕ್ಯಾನ್ವಾಸ್ ಮೇಲೆ ಕೆಂಬಣ್ಣ ಚೆಲ್ಲಿದಂತೆ ಚಿತ್ತಾರ ಮೂಡಿಸುತ್ತಿವೆ. ಎಲೆ ಉದುರಿಸಿ ಮೈತುಂಬ ಹೂವರಳಿಸಿಕೊಂಡು ನಿಂತ ಈ ಚೆಲುವಿಗೆ ದಾರಿಹೋಕರು ಮಾರುಹೋಗದೇ ಇರಲಾರರು. ಕೈ ಬೀಸಿ ಕರೆವ ಮುತ್ತುಗದ ಚೆಲುವಿಗೆ ಕೊಂಚ ಮತ್ತೇರುವುದು ಖರೆ...

ಭೂರಮೆಯ ತುಂಬ ಮುತ್ತುಗದ ಹೂ

ದೇವವೃಕ್ಷದಲ್ಲರಳಿವೆ ಕೇಸರಿಪುಷ್ಪ

ಚಿತ್ರ-ಬರಹ: ರಾಮಕೃಷ್ಣ ಸಿದ್ರಪಾಲ

ಹುಬ್ಬಳ್ಳಿ-ಅಂಕೋಲಾ ಹೆದ್ದಾರಿಯಲ್ಲಿ ಸಾಗುತ್ತಿದ್ದಾಗ ಇದ್ದಕ್ಕಿದ್ದಂತೆ ಕಣ್ಮನ ಸೆಳೆದಿದ್ದು ಕೇಸರಿವರ್ಣದ ಹೂದುಂಬಿದ ಮರಗಳ ರಾಶಿ.

'ಮೇ ಫ್ಲವರ್...ಮೇ ಫ್ಲವರ್' ಅಂತ ಒಮ್ಮೆಲೆ ಉತ್ಸಾಹದಿಂದ ಮಗಳು ಕೂಗಿಕೊಂಡಳು.

'ಸಂಕ್ರಾಂತಿಯಷ್ಟೇ ಮುಗಿದ ಈ ಹೊತ್ತಿನಲ್ಲಿ ಎಲ್ಲಿಯ ಮೇ ಫ್ಲವರ್? ಮೇಲ್ನೋಟಕ್ಕೆ ಹಾಗೆ ಕಾಣುವ ಮುತ್ತುಗದ ಹೂಗಳಿವು' ಎಂದು ಅವಳಿಗೆ ತಿಳಿಸುತ್ತ ಮೆಲ್ಲಗೆ ಹೂಗಳ ಲೋಕದತ್ತ ಹೆಜ್ಜೆಹಾಕಿದೆವು. ಹೆದ್ದಾರಿ ಬದಿಯಲ್ಲಿ ಜುಂಜನಬೈಲ್ ಬಳಿ ರಸ್ತೆ ಬದಿ ಇಕ್ಕೆಲಗಳಲ್ಲಿ ಈಗ ಕೇಸರಿಬಣ್ಣದ ಹೂಗಳದ್ದೇ ರಾಶಿ. ಬಯಲು ಸೀಮೆಯ ಉರಿ ಬಿಸಿಲಲ್ಲಿ ಅರಳಿನಿಂತ ಈ ದೇವಮರಗಳ ಹೂಗಳು ಕ್ಯಾನ್ವಾಸ್ ಮೇಲೆ ಕೆಂಬಣ್ಣ ಚೆಲ್ಲಿದಂತೆ ಚಿತ್ತಾರ ಮೂಡಿಸುತ್ತಿವೆ.

ತಂಗಾಳಿಗೆ ಬಳುಕುತ್ತ ಲಾಸ್ಯವಾಡುವ ಈ ಹೂಗಳ ಸುತ್ತ ಹಾರಾಡುತ್ತ ಮಕರಂದ ಸಂಗ್ರಹಿಸುವ ದುಂಬಿ, ಜೇನ್ನೊಣಗಳ ಝೇಂಕಾರದ ಮರ್ಮರ ಕಿವಿಗಿಂಪು. ಮಕರಂದ ಕುಡಿಯಲು ಬರುವ ಹಕ್ಕಿಗಳ ಕಲರವವೂ ಚೇತೋಹಾರಿ.

ಚಳಿಗಾಲದಲ್ಲಿ ಅರಳುವ ಈ ಕೇಸರಿ ಸುಂದರಿಯ ಹೆಸರು ಮುತ್ತುಗ. ಸಂಸ್ಕೃತದಲ್ಲಿ ಪಾಲಾಶ. ಶಿವರಾತ್ರಿಯಲ್ಲಿ ಈ ಬ್ರಹ್ಮವೃಕ್ಷ, ದೇವಮರಗಳ ಹೂಗಳನ್ನು ಶಿವನಿಗೆ ಅರ್ಪಿಸುತ್ತಾರೆ.

ಮುತ್ತುಗದ ಹೂವುಗಳು ಲಕ್ಷ್ಮಿ ದೇವಿಗೆ ಬಹಳ ಪ್ರಿಯ. ಈ ಹೂವಿನಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ನೆಲೆಸಿದ್ದಾರೆ ಎನ್ನುವ ನಂಬಿಕೆಯಿದೆ. ನವಗ್ರಹಗಳಲ್ಲಿ ಈ ಮರಕ್ಕೆ ಚಂದ್ರನ ಸ್ಥಾನವನ್ನು ನೀಡಲಾಗಿದೆ. ಮುತ್ತುಗದ ಹೂಗಳು ಹೆಚ್ಚು ಹೆಚ್ಚು ಅರಳಿಕೊಂಡಲ್ಲಿ ಆ ವರ್ಷ ಮಳೆ ಹೆಚ್ಚು ಎನ್ನುವ ನಂಬಿಕೆ ಗ್ರಾಮೀಣ ಭಾಗದಲ್ಲಿದೆ.

ಬೆಂಕಿಯರಳಿದಂತೆ ಕಾಣುವ ಈ ಹೂಗಳಿಂದಾಗಿಯೇ ಇದಕ್ಕೆ 'ಫ್ಲೇಮ್ ಆಫ್ ಫಾರೆಸ್ಟ್' ಎಂದು ಆಂಗ್ಲಭಾಷೆಯಲ್ಲಿ ಕರೆದರು. ಇನ್ನೊಂದು ಹೆಸರು 'ಬುಟಿಯ ಗಮ್ ಟ್ರೀ'(Butea gum tree). ಸಸ್ಯವಿಜ್ಞಾನದ ಹೆಸರು 'ಬುಟಿಯ ಮೊನೊಸ್ಪೆರ್ಮ'(Butea monosperma).

ಆಯುರ್ವೇದ, ನಾಟಿ ಔಷಧವಾಗಿಯೂ ಮುತ್ತುಗದ ಗಿಡ, ತೊಗಟೆ, ಹೂ, ಬೀಜಗಳನ್ನು ಬಳಸುತ್ತಾರೆ. ಹೋಮ, ಹವನಾದಿಗಳಿಗೂ ಸಮಿಧವಾಗಿ ಬಳಕೆಯಿದೆ. ಮದುವೆ, ಮುಂಜಿ ಮತ್ತಿತರ ಶುಭ ಸಮಾರಂಭಗಳಲ್ಲಿ ಊಟಕ್ಕೆ ಇದರ ಎಲೆಯ ಬಳಕೆ ಈಗಲೂ ಗ್ರಾಮೀಣ ಭಾಗಗಳಲ್ಲಿ ಇದೆ. ವಿಶೇಷವಾಗಿ ಬಯಲು ಸೀಮೆ, ಮಲೆನಾಡು ಭಾಗಗಳಲ್ಲಿ ಹೊಲದಂಚಿನ ಬದುಗಳ ಮೇಲೆ ಹೆಚ್ಚಾಗಿ ಕಾಣುತ್ತಿದ್ದ ಮುತ್ತುಗದ ಮರಗಳು ಈಗ ಕಡಿಮೆಯಾಗುತ್ತಿವೆ.

ಮರದ ತುಂಬೆಲ್ಲ ಅರಳಿದ್ದ ಹೂಗಳೊಂದಿಗೆ ಒಂದಿಷ್ಟು ಹೊತ್ತು ಕಳೆದು, ಕಣ್ಮನ ತುಂಬಿಕೊಂಡು ಹಗುರಾಗುತ್ತ ನಮ್ಮ ಪಯಣ ಮುಂದುವರಿಯಿತು. ❖

...ರಾಮ ಸೀತಾ ಕಲ್ಯಾಣ

12ನೇ ಪುಟದಿಂದ...

ಆತ ಅವಳ ವಯಸ್ಸಿಗಿಂತ ಡಬ್ಬಲ್ ವಯಸ್ಸಿನವನಿದ್ದಾನಂತೆ. ಜೊತೆಗೆ ಕಪ್ಪಗಿದ್ದಾನಂತೆ. ಮುಂದಿನ ಒಂದೆರಡು ಹಲ್ಲು ಬಿದ್ದಿವೆಯಂತೆ. ಒಟ್ಟಿನಲ್ಲಿ ಈ ಮನುಷ್ಯ ಬೇಡವೆಂದು ಆಕೆ ಹಟ ಹಿಡಿದಿದ್ದಾಳೆ' ಎಂದು ಹೇಳುತ್ತಾನೆ. ಇದನ್ನು ಕೇಳಿದ ಸೂತ್ರಧಾರನು 'ಈಗಾಗಲೇ ನೀವು ಹೆಣ್ಣು ಕೊಡಲು ಒಪ್ಪಿಕೊಂಡಿದ್ದೀರಿ. ಈಗ ಹೀಗೆ ಸಡನ್ನಾಗಿ ಮುರಿದುಕೊಂಡರೆ ಅದು ನ್ಯಾಯವೇ? ನೀವು ಹೀಗೆ ಮಾಡಿದರೆ ನಾವು ನಿಮ್ಮ ಸೀತೆಯನ್ನು ಯಾರಿಗೆ ಲಗ್ನ ಮಾಡಿಕೊಡುತ್ತೀರೆಂಬುದನ್ನು ನೋಡಿಕೊಳ್ಳುತ್ತೇವೆ' ಎಂದು ಜಬರ್ದಸ್ತಾಗಿ ಹೇಳುತ್ತಾನೆ. ಜನಕ ರಾಜನ ಪಾತ್ರಧಾರಿಯು, 'ನಮ್ಮ ಸೀತೆಯನ್ನು ಮದುವೆ ಮಾಡಿಕೊಳ್ಳಲು ದಿಲೀಪಕುಮಾರ, ರಾಜಕುಮಾರ ಮುಂತಾದವರು ಬಂದಿದ್ದರು. ಅವರ್‍ಯಾರೂ ಸೀತೆಗೆ ಒಪ್ಪಿಗೆಯಾಗಲಿಲ್ಲ' ಎಂದು ಹೇಳುತ್ತಾನೆ. ರಾಮ ಪಾತ್ರಧಾರಿ ಬಸವ ಮುಖ ಕೆಳಗೆ ಹಾಕಿ ವಿಷಣ್ಣವಾಗಿ ಸುಮ್ಮನೆ ನಿಂತಿರುತ್ತದೆ. ಆಗ ಸೂತ್ರಧಾರನು 'ರಾಮಾ, ನೀನೇನೂ ಕಾಳಜಿ ಮಾಡಬೇಡ. ಅವರು ಹೆಣ್ಣು ಕೊಡುತ್ತೇವೆಂದು ಈಗಾಗಲೇ ಈ ದೈವದವರ ಎದುರು ಒಪ್ಪಿಕೊಂಡಿದ್ದಾರೆ. ಒಂದು ವೇಳೆ ಏನಾದರೂ ತಕರಾರು ಮಾಡಿದರೆ ನಾವು ಸೀತೆಯನ್ನು ಹಗ್ಗದಿಂದ ಕಟ್ಟಿಕೊಂಡು ಹೋಗೋಣ. ಅಷ್ಟು ದೂರ ಅಯೋಧ್ಯೆಯಿಂದ ನಾವು ಬಂದಿದ್ದೇವೆ. ಈಗ ಇವರು ಹುಡುಗಾಟ ಮಾಡಿದರೆ ನಮಗೂ ಕೋರ್ಟು ಕಚೇರಿ, ಪೊಲೀಸರು ಇದ್ದಾರೆ' ಎಂದು ಹೆದರಿಸುತ್ತಾನೆ. ಅವನ ಮಾತಿಗೆ ಹೆದರಿದ ಜನಕ ಮಹಾರಾಜನ ಪಾತ್ರಧಾರಿ 'ಆಯ್ತು, ನಾವು ಹೆಣ್ಣು ಕೊಡಲು ತಯಾರಿದ್ದೇವೆ. ನೀವು ನಮ್ಮ ಸೀತೆಯನ್ನು ಅಯೋಧ್ಯೆಯ ರಾಣಿಯನ್ನಾಗಿ ಮಾಡಬೇಕು' ಎಂದು ಕರಾರನ್ನು ಹಾಕುತ್ತಾನೆ. ಈ ಸಂದರ್ಭದಲ್ಲಿ ವಿವಾಹ ನಾಟಕದ ವಿವಿಧ ಸನ್ನಿವೇಶಗಳೂ ಬರುತ್ತವೆ. ಗಂಡ ಹೆಂಡಿರ ಮುನಿಸು, ಮಧ್ಯಸ್ಥಗಾರರ ಸಮಾಧಾನ, ಪರಸ್ಪರ ರಾಜಿಯಾಗುವುದು - ಹೀಗೆ ಸನ್ನಿವೇಶಗಳು ಅಲ್ಲಿದ್ದ ಜನರಿಗೆ ಸಾಕಷ್ಟು ಮನರಂಜನೆ ನೀಡುತ್ತವೆ.

ಕೊನೆಗೆ ಜನಕ ಮಹಾರಾಜನ ಪಾತ್ರಧಾರಿಯು ಸೀತೆಯ ಬಳಿ ಬಂದು 'ನೋಡು ಸೀತಮ್ಮ, ರಾಮ ದೇವರು ನಿನ್ನನ್ನು ಮದುವೆಯಾಗಲು ಇಲ್ಲಿಯವರೆಗೆ ಬಂದಿದ್ದಾರೆ. ನಿನ್ನನ್ನು ಅಯೋಧ್ಯೆಯ ರಾಣಿಯನ್ನಾಗಿ ಮಾಡುತ್ತೇನೆಂದು ದೈವದೆದುರು ಆಣೆ ಮಾಡಿದ್ದಾರೆ. ಅದನ್ನು ಒಪ್ಪಿಕೋ' ಎಂದು ಕೇಳುತ್ತಾನೆ. ಆಗ ಸೀತೆಯಾದ ಹಸು ಗೋಣನ್ನು ಅಲುಗಾಡಿಸಿ ಒಪ್ಪಿಗೆ ನೀಡುತ್ತದೆ.

ಧಾರೆಯೆರೆಯುವ ಸಂದರ್ಭದಲ್ಲಿ ಸೀತೆ ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಮೆಲ್ಲ ಮೆಲ್ಲನೆ ಬಂದು ರಾಮನ ಪಕ್ಕದಲ್ಲಿ ನಿಲ್ಲುತ್ತದೆ. ಧಾರೆಯ ಸೂಚನೆಯಾಗಿ ಮಂಗಲವಾದ್ಯ, ಶಹನಾಯಿ, ನಾದಸ್ವರ, ಡೋಲು ಬಾರಿಸಿದ ಬಳಿಕ ಸೀತೆ, ರಾಮನ ಸುತ್ತಲೂ ಐದು ಸಲ ಪ್ರದಕ್ಷಿಣೆ ಹಾಕಿ ಪಕ್ಕದಲ್ಲಿ ಬಂದು ನಿಲ್ಲುತ್ತದೆ. ಸೂತ್ರಧಾರನು 'ಇಲ್ಲಿಗೆ ಶ್ರೀ ರಾಮ ಸೀತೆ ಕಲ್ಯಾಣ ಮಹೋತ್ಸವವು ಮುಗಿಯಿತು. ಈಗ ಮದುವೆಗೆ ಬಂದ ಜನರು ಆಹೇರು ಮಾಡಬೇಕು' ಎಂದು ಘೋಷಿಸುತ್ತಾನೆ. ನಂತರ ಶಹನಾಯಿ ಬಾರಿಸುತ್ತ ಸೂತ್ರಧಾರ, ರಾಮ, ಸೀತೆ, ಜನಕ ಮಹಾರಾಜನ ಪಾತ್ರಧಾರಿ ಹೀಗೆ ಎಲ್ಲರೂ ಜನರೆಡೆಗೆ ಹೋಗಿ ಅವರಿಂದ ಆಹೇರುಗಳನ್ನು ಸ್ವೀಕರಿಸುತ್ತಾರೆ.

ಈ ಆಟವನ್ನು ಆಡುವ ಸಮುದಾಯದವರು ಮೂಕ ಪ್ರಾಣಿಗಳಾದ ಗೂಳಿ, ಆಕಳು, ಹಸು ಮುಂತಾದವುಗಳಿಗೆ ಹದವಾಗಿ ತರಬೇತಿ ನೀಡಿರುತ್ತಾರೆ. ಇದು ಸುಲಭದ ಕೆಲಸವಲ್ಲ. ಈ ಮೂಕ ಪ್ರಾಣಿಗಳು ಸಂತೋಷ, ಸಿಟ್ಟು, ಸೆಡವು ಮುಂತಾದ ಭಾವಗಳನ್ನು ಬಲು ಸಮರ್ಥವಾಗಿ ಅಭಿನಯಿಸುತ್ತವೆ. ಸೂತ್ರಧಾರನು ಕಾಲಕ್ಕೆ ತಕ್ಕಂತೆ ಅಥವಾ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಅಲ್ಲಿ ಮಾತುಗಳನ್ನು ಹೇಳುವ ಚತುರ ಆಗಿರಬೇಕಾಗುತ್ತದೆ. ಈ ಕೋಲೆ ಬಸವರಾಟವನ್ನು ಆಡುವವರು ಒಂದು ಹಳ್ಳಿಯಲ್ಲಿ ನಾಲ್ಕಾರು ದಿನವಿದ್ದು ಅನಂತರ ಮುಂದಿನ ಊರಿಗೆ ಹೊರಡುತ್ತಾರೆ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ತನ | ಜೀವ | ಗತಿ

ಸಂಗ | ರಸಿ | ಗುಣಿ

ಅಕ್ಷರ ಪಟ್ಟಿ

ಸಂ	ಚೇ	ಡ	ನ	ಅ	ಸು
ಪ್ರ	ಸು	ಕ	ರಾ	ಕ	ಸು

ಗಣಿತದಲ್ಲಿ ಗರ್ದಿ ಗಮ್ಮತ್ತು

ಲೆಕ್ಕ ಹಾಕಿ...

ಮೊನ್ನೆ ನಮ್ಮೂರ ಜಾತ್ರೆಗೆ ನನ್ನ ಎಲ್ಲ ಮಕ್ಕಳು, ಮೊಮ್ಮಕ್ಕಳು ಸೇರಿದ್ದರು. ಕಿರಿಯ ಮಗ ಗಣಿತ ಶಿಕ್ಷಕ. ಆತನೂ ಬಂದಿದ್ದ. ನನ್ನ 3 ಜನ ಮೊಮ್ಮಕ್ಕಳು ಆತನಿಗೆ ಜಾತ್ರೆ ಮಾಡಲು ಹಣಕ್ಕೆ ದುಂಬಾಲು ಬಿದ್ದರು. ಆತ ಮೊದಲೇ ಲೆಕ್ಕಾಚಾರದ ಮನುಷ್ಯ. ಅವರಿಗೆ ಒಂದು ಕರಾರು ಹಾಕಿದ. ಇಲ್ಲಿ 9 ಪಾಕೀಟುಗಳಿವೆ. 1ನೇ ಪಾಕೀಟಿನಲ್ಲಿ 10 ರೂ., 2ರಲ್ಲಿ 20 ರೂ., 3ರಲ್ಲಿ 30 ರೂ., 4ರಲ್ಲಿ 40 ರೂ., 5ರಲ್ಲಿ 50 ರೂ., 6ರಲ್ಲಿ 60 ರೂ., 7ರಲ್ಲಿ 70 ರೂ., 8ರಲ್ಲಿ 80 ರೂ. ಹಾಗೂ 9ರಲ್ಲಿ 90 ರೂ. ಇವೆ. ಪ್ರತಿಯೊಬ್ಬರೂ 150 ರೂ. ಬರುವ ಹಾಗೆ ಮೂರು-ಮೂರು ಪಾಕೀಟುಗಳನ್ನು ಮೂವರು ಹಂಚಿಕೊಳ್ಳಬೇಕು. ಹಣ ಹೊರಗೆ ತೆಗೆಯದೆಯೇ ಬರೀ ಪಾಕೀಟು ಹಂಚಿಕೊಂಡು 150 ರೂ.ಪಡೆಯುವುದು ಹೇಗೆ ಎಂದು ತಿಳಿಸಿ.

10 ರೂ.	20 ರೂ.
30 ರೂ.	40 ರೂ.
50 ರೂ.	60 ರೂ.
70 ರೂ.	80 ರೂ.
90 ರೂ.	

ಡಣ್ಣ ಚಿಕ್ಕು ಕೇಶ್ರಷ್ಟು ಕಥೆಯ — ಮೀನಲ್ಲ..ಮೊಸಳೆ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಹರ್ಷವರ್ಧನ್ ಕೆ. ದೊಡ್ಡಬಳ್ಳಾಪುರ

ತನುಷ್ಕಾ ಕಿರಣ್ ಮಣಿಪಾಲ್

ಎನ್.ಎಸ್.ಪ್ರೇಕ್ಷ ನರಸೀಪುರ

ಅರ್ಣವ್ ಸೂರ್ಯ ಬೆಂಗಳೂರು

ರಾಹುಲ್ ಗಬ್ಬೂರು


ಯುಕ್ತ ಯೋಗೀಶ್ ಕೊಪ್ಪಳ

ಜಾಣಪದ ಆಟ



ಇಲ್ಲಿ ಕೊಟ್ಟಿರುವ ಅನುಸ್ವಾರಕ್ಕೆ ಸುಳಿವು ಆಧರಿಸಿ ಅಕ್ಷರ ಪಟ್ಟಿಯಿಂದ ಎರಡಕ್ಷರ ಆರಿಸಿ ಹಿಂದೆ ಮುಂದೆ ತುಂಬಿ ಎರಡಕ್ಷರಗಳ ಪದ ಮಾಡಿ

ಅಕ್ಷರ ಪಟ್ಟಿ

ಮೆ	ಮ	ಡ್ಯ	ಡೆ	ಗೆ	ಬು
ಹ	ಮ	ಸ	ಪಿ	ಲಿ	ಗಿ
ಹ	ಹ	ಗ	ತ	ಡಾ	ತೆ
ಬೆ	ಪು	ಬೋ	ಡೆ	ಅ	ಹೊ

1		ಂ		ಒಂದು ಸೊಪ್ಪು
2		ಂ		ಒಂದು ತರಕಾರಿ
3		ಂ		ಒಂದು ಹಣ್ಣು
4		ಂ		ಒಂದು ದೊಡ್ಡ ತಾಮ್ರದ ಪಾತ್ರೆ
5		ಂ		ಒಂದು ಚಲನಚಿತ್ರ
6		ಂ		ಒಂದು ಜಿಲ್ಲೆ
7		ಂ		ಒಂದು ಜಾನಪದ ವಾದ್ಯ
8		ಂ		ಒಂದು ಮರ
9		ಂ		ಹೋಟೆಲ್ ತಿಂಡಿ
10		ಂ		ಒಂದು ಯಾತ್ರಾ ಸ್ಥಳ
11		ಂ		ಒಂದು ಪ್ರಾಣಿ
12		ಂ		ಒಂದು ಪಕ್ಷಿ

ಅಲ್ಫಾಬೆಟ್ ಗೇಮ್

ಇಲ್ಲಿ ಕೊಟ್ಟಿರುವ ವ್ಯಂಜನಾಕ್ಷರಕ್ಕೆ ಅಕ್ಷರಪಟ್ಟಿಯಿಂದ ಎರಡು ಸ್ವರಾಕ್ಷರ ಸೇರಿಸಿ ಪದ ಮಾಡಿ

ಅಕ್ಷರಪಟ್ಟಿ

E	I	A	A
I	E	U	A
O	A	E	A
A	I	E	E
E	A	E	A

1			R
2	S		
3		R	
4			L
5	D		
6			M
7	P		
8	T		
9			T
10			R

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಟಿಸಿಲುಕು 2.ಸೌರಭಸ 3.ರಮಣಕ 4.ಜೀಕಳಿಸು 5.ನಗಾರಿಗೆ 6.ಸುಮಾರುತ

ಮೋಜಿನ ಇಂಗ್ಲಿಷ್: 1.BIT 2.BIG 3.BIM 4.FIX 5.HIS 6.HIT 7.MIX 8.NIB 9.PIN 10.SIT

ಪದ ಸಂಪತ್ತಿಗೆ ಸವಾಲ್: ಪದ ಸಂಪತ್ತಿಗೆ ಸವಾಲ್: ಕಕವಕ ಅಥವಾ ಕಕಮಕ. ಇದರ ಅರ್ಥ ಭ್ರಾಂತಿ

ಜಾಣಪದ ಆಟ: 1.ಅವಮಾನ 2.ಜಾಯಮಾನ 3.ಬಹುಮಾನ 4.ಬಿಗುಮಾನ 5.ಅಪಮಾನ 6.ಅಭಿಮಾನ 7.ಹವಾಮಾನ 8.ಸ್ಥಾನಮಾನ 9.ವರಮಾನ 10.ಅಂಡಮಾನ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

HONDA
ELEVATE
YOU'RE THE chase
ELEVATE
Book Now
Honda SENSING* (ADAS Technology) in MT & CVT
First-in-segment**
Honda Connect with 5 Year Complimentary Subscription~
Best-in-industry
High Ground Clearance (220 mm^) and Large Cargo Space (458 L)
26.03 cm (10.25") Advanced HD Touchscreen Display Audio
LaneWatch™ Camera
Acclaimed 1.5L i-VTEC DOHC with VTC Petrol Engine
Power: 89kW (121 ps)
Torque: 145 Nm
Available in MT & CVT
Ultra Spacious Cabin with Luxurious Brown & Black Two-Tone Colour Interior
Experience the Boldly Stylish and Comfortable SUV at your Nearest Honda Showroom.
10 YEAR ANYTIME WARRANTY
Standard Warranty | 3 Year / UNLIMITED Kilometres
Extended Warranty (comes at an extra cost) | 4th & 5th Year / UNLIMITED Kilometres
Service Interval | 1 Year / 10 000 Kilometres (whichever is earlier)
Honda Auto Terrace CAR EXCHANGE
Honda ProCARE CUSTOMER SERVICE
SEAT BELTS FOR ALL SAFETY FOR ALL
Scan now to Book or Buy Honda From Home
Terms and conditions applicable. Images and depictions shown above are computer generated/enhanced for illustrative and representational purpose only. Actual colour, feature and any other specification as shown may not be part of standard fitment and may differ from actual product. Appearance of black shade on glass of vehicle is due to lighting effect. All colours, features and specifications are grade specific and subject to change without prior notice. Please check and experience the availability of variants, colours and features at the authorized dealerships. ~Honda Connect application works on smartphones: Android 7.0 & above; iOS 11.0 & above. All services and features of Honda Connect are subject to network availability, facility/ transmission limitations as per government regulation and permissions in specific regions/ locations. Honda Connect comes with free subscription for 1st 5 years from the date of purchase. Ω10 year Anytime Warranty is extendable up to the maximum age of 10 years/120 000 kilometers by renewing every year and is applicable from the date of purchase of car. *Honda SENSING is Honda's exclusive Advanced Driver Assistance System (ADAS). Honda SENSING cannot substitute human acumen and vigilance while driving. Honda Cars India Limited urges drivers to follow traffic rules which are meant to keep them safe on roads. ^Honda Internal Data. Measured between front & rear tyres in 1G condition at kerb (unladen) weight. **Segment is defined by mid-size SUVs with length between 4300 mm & 4400 mm; and engine size up to 1.5 Litres; and seating capacity of 5 persons. For more information, please visit our authorized dealership or www.hondacarindia.com. For corporate sales enquiry please write to corporatesales@hondacarindia.com
For more information, Contact: Belagavi: Alpha Honda - 86575 88418, Bengaluru: Dakshin Honda - Hosur Road -86575 88495, Lavelle Road - 86575 89201, Mysore Road - 86575 89889, Brigade Honda – Yelahanka- 86575 88450, Whitefield Honda - Whitefield Road- 86575 89175, Magnum Honda Kanakapura Road - 98455 24394, Mekhri Circle - 99000 29164 Tumkur - 99160 04127, Hassan: Inspire Honda - 844 844 8770, Hubli: Lakeview Honda - 86575 88923, Mangalore: Artha Honda - 96069 65270, Mysore: Inspire Honda - 844 844 8660, Udupi: Shama Honda - 86575 89083

PATANJALI® wellness
Yoga, Ayurveda & Naturopathy
ಪವಿತ್ರೀಕರಣದ ಸಂದರ್ಭದಲ್ಲಿ ಪತಂಜಲಿ ವೆಲ್‌ನೆಸ್ ಹೀಲಿಂಗ್ ಉಡುಗೊರೆಯನ್ನು 30% ರಿಯಾಯಿತಿಯನ್ನು ನೀಡುತ್ತದೆ (ಜನವರಿ 30ರವರೆಗೆ)
ಸ್ಥೂಲಕಾಯತೆ, ಬಿಪಿ, ಮಧುಮೇಹ, ಸಂಧಿವಾತ, ಅಸ್ತಮಾ ಮತ್ತು ಯಕೃತ್ತು, ಮೂತ್ರಪಿಂಡ ಮತ್ತು ಹೃದಯ ಕಾಯಿಲೆಗಳಿಂದ ಶಾಶ್ವತ ಪರಿಹಾರವನ್ನು ಪಡೆಯಲು ವಸತಿ ಯೋಗ, ಆಯುರ್ವೇದ ಮತ್ತು ಪಂಚಕರ್ಮ ಇತ್ಯಾದಿಗಳ ಮೂಲಕ 3–7 ದಿನಗಳ ಚಿಕಿತ್ಸೆಗಾಗಿ ಪತಂಜಲಿ ಯೋಗಕ್ಷೇಮವನ್ನು ಭೇಟಿ ಮಾಡಿ.
ನೋಂದಣಿಗಾಗಿ ಸಂಪರ್ಕಿಸಿ:
8954555888, 8954666222, 8954666333, 8954555999
(ಸಮಯಗಳು: ಬೆಳಿಗ್ಗೆ 6 ರಿಂದ ರಾತ್ರಿ 10)
ವಿಶ್ವದ ಅತ್ಯುತ್ತಮ ಚ್ಯವನಪ್ರಾಶ್, ಪತಂಜಲಿಯನ್ನು ಅಳವಡಿಸಿಕೊಳ್ಳೀ. ಚ್ಯವನ್‌ಪ್ರಾಶ್ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ ಮತ್ತು ನಿಮ್ಮ ಮುಗ್ಧ ಮಕ್ಕಳು ಮತ್ತು ಕುಟುಂಬವನ್ನು ತೀವ್ರ ಶೀತದಿಂದ ರಕ್ಷಿಸಿ.
ದೂರದ ಚ್ಯವನಪ್ರಾಶವು ಕೇವಲ ವಾಣಿಜ್ಯ ಉತ್ಪನ್ನವಲ್ಲ ಆದರೆ ಮಹಾನ್ ಋಷಿ ಮಹರ್ಷಿ ಚ್ಯವನ ಅವರಿಂದ ಪಡೆದ ಸೂತ್ರವಾಗಿದೆ, ಅವರು ವಯಸ್ಸಾದಾಗ ತನ್ನ ಯೌವನವನ್ನು ಮರಳಿ ಪಡೆಯಲು ಇದನ್ನು ಬಳಸಿದರು. ಆ ಋಷಿಮುನಿಗಳ ಪರಂಪರೆಯನ್ನು ನಿಷ್ಠೆಯಿಂದ ಅನುಸರಿಸಿ, 51 ಗಿಡಮೂಲಿಕೆಗಳಿಂದ ಪತಂಜಲಿ ಚ್ಯವನಪ್ರಾಶವನ್ನು ಸಿದ್ಧಪಡಿಸಿದ್ದೇವೆ. ಇದನ್ನು ಅಳವಡಿಸಿಕೊಳ್ಳಿ ಮತ್ತು ಸಾಮಾನ್ಯವಾಗಿ ಚ್ಯವನಪ್ರಾಶ್‌ನಿಂದ ವ್ಯತ್ಯಾಸವನ್ನು ನೋಡಿ ಏಕೆಂದರೆ ಹೊಸ ತಯಾರಿಯ ಪಟಾರ್ ಆಯುರ್ ಮಾರುಕಟ್ಟೆಯಲ್ಲಿ ಲಭ್ಯವಿದೆ.
ವಿಶ್ವಪ್ರಸಿದ್ಧ ಲ್ಯಾಬ್‌ಗಳಲ್ಲಿ ಪರೀಕ್ಷಿಸಲಾದ ವಿಶ್ವದ ಅತ್ಯುತ್ತಮ ಜೇನುತುಪ್ಪ, ಪತಂಜಲಿ ಜೇನುತುಪ್ಪದ ಸಕಾರಾತ್ಮಕ ಫಲಿತಾಂಶಗಳನ್ನು ನೀವು ಅನುಭವಿಸುವಿರಿ. ಶುದ್ಧತೆಯ 100 ಕ್ಕೂ ಹೆಚ್ಚು ಪ್ಯಾರಾಮೀಟರ್‌ಗಳನ್ನು ದಾಟಿದ ನಂತರ ಇದು 100% ಶುದ್ಧವಾಗಿದೆ ಎಂದು ಕಂಡುಬಂದಿದೆ.
पतंजलि च्यवनप्राश CHYAWANPRASH
PATANJALI Honey 1 kg
ಆಯುರ್ವೇದ ಋಷಿ ಸಂಪ್ರದಾಯ. ವಾಣಿಜ್ಯ ಕಂಪನಿಗಳು ಇದನ್ನು ಪ್ರತಿನಿಧಿಸುವುದಿಲ್ಲ. ಪತಂಜಲಿ ಈ ಋಷಿ ಸಂಪ್ರದಾಯದ ನಿಜವಾದ ಪ್ರತಿನಿಧಿ.
ಪತಂಜಲಿಯು ಆಯುರ್ವೇದದ ಬಗ್ಗೆ ಕಳೆದ 200 ವರ್ಷಗಳಲ್ಲಿ ಯಾವುದೇ ಕಂಪನಿ ಅಥವಾ ಸರ್ಕಾರ ಮಾಡದ ಅಧಿಕೃತ ಸಂಶೋಧನೆಯನ್ನು ಮಾಡಿದೆ. ಇಂದು, ಪತಂಜಲಿಯು 3,000 ಸಂಶೋಧನಾ ಪ್ರೋಟೋಕಾಲ್‌ಗಳನ್ನು ಮತ್ತು 500 ಕ್ಕೂ ಹೆಚ್ಚು ಪ್ರಕಟಿತ ಸಂಶೋಧನಾ ಪ್ರಬಂಧಗಳನ್ನು ಹೊಂದಿದೆ.
ಇವುಗಳನ್ನು ವೀಕ್ಷಿಸಲು, ಭೇಟಿ ನೀಡಿ: www.patanjali.res.in
ಮೊದಲ ಬಾರಿಗೆ, ಪತಂಜಲಿಯು ಸಂಶೋಧನೆ ಮತ್ತು ಸಾಕ್ಷ್ಯಾಧಾರಿತ ಆಯುರ್ವೇದ ಔಷಧಗಳನ್ನು (ರಸ-ರಸಯನ್, ಭಸ್ಮ-ಪಿಷ್ಟಿ ಇತ್ಯಾದಿ) ಸಿದ್ಧಪಡಿಸಿದೆ ರೋಗಗಳನ್ನು ನಿಯಂತ್ರಿಸಲು ಮಾತ್ರವಲ್ಲದೆ ನಿರ್ಮೂಲನೆ ಮಾಡಲು. ಅವರು. B.P., ಶುಗರ್, ಥೈರಾಯ್ಡ್, ಸಂಧಿವಾತ, ಅಸ್ತಮಾ ಮುಂತಾದ ಕಾಯಿಲೆಗಳ ನಿರ್ಮೂಲನೆಗಾಗಿ ಪತಂಜಲಿ ಆಸ್ಪತ್ರೆಗಳು ಮತ್ತು ಪತಂಜಲಿ ಆರೋಗ್ಯ ಕೇಂದ್ರಗಳಿಗೆ (ಪತಂಜಲಿ ಚಿಕಿತ್ಸಾಲಯ ಮತ್ತು ಪತಂಜಲಿ ಆರೋಗ್ಯ ಕೇಂದ್ರಗಳು) ಭೇಟಿ ನೀಡಿ
ಆಯುರ್ವೇದವು ಋಷಿ ಸಂಪ್ರದಾಯದಲ್ಲಿ ಒಂದು ಕೆಲಸವಾಗಿದೆ. ಚಿಕಿತ್ಸೆ ಮತ್ತು ದಾನದ ಉತ್ಸಾಹದಲ್ಲಿ ನಾವೀನ್ಯತೆಯನ್ನು ತೊಡಗಿಸಿಕೊಂಡಿರುವ ನಾವು ದಿವ್ಯ ಫಾರ್ಮಸಿಯಲ್ಲಿ ಪತಂಜಲಿ ಟ್ರಸ್ಟ್‌ನ ಪರವಾಗಿ ಈ ಎಲ್ಲಾ ಔಷಧಿಗಳನ್ನು ಸಿದ್ಧಪಡಿಸುತ್ತಿದ್ದೇವೆ, ಇದು ಆಯುರ್ವೇದ, ಸನಾತನ ಧರ್ಮ, ಶಿಕ್ಷಣ, ಆರೋಗ್ಯ ಮತ್ತು ಸೇವೆಯ ಸೇವೆಯಲ್ಲಿ ತನ್ನ ಲಾಭದ 100% ಅನ್ನು ಹೂಡಿಕೆ ಮಾಡುತ್ತದೆ. ರಾಷ್ಟ್ರ ಸೇವೆ ಇತ್ಯಾದಿ ಕನಿಷ್ಠ ವೈಯಕ್ತಿಕ ಹಿತಾಸಕ್ತಿಗಳೂ ಇದರಲ್ಲಿ ಸೇರಿಲ್ಲ.
ದಿವ್ಯ ಮತ್ತು ಪತಂಜಲಿಯ 1000 ಕ್ಕೂ ಹೆಚ್ಚು ಶಾಸ್ತ್ರೀಯ ಸಾಂಪ್ರದಾಯಿಕ ಔಷಧಗಳು ಪತಂಜಲಿ ಸ್ಟೋರ್‌ಗಳು ಮತ್ತು ಪ್ರಮುಖ ವೈದ್ಯಕೀಯ ಮಳಿಗೆಗಳಲ್ಲಿ ಲಭ್ಯವಿದೆ.
Divya Swarn Bhasma
TRIPHALA CHURNA
LAUH BHASMA
ಮೇಲೆ ಉಲ್ಲೇಖಿಸಲಾಗಿರುವ ಔಷಧಿಗಳ ಬಳಕೆಯು ಸಲಹಾತ್ಮಕ ಸ್ವರೂಪದ್ದಾಗಿರುತ್ತದೆ ಮತ್ತು ಇದು ಮೇಲ್ಕಂಡ ಕಾಯಿಲೆಗಳ ಆರೈಕೆಯ ವಿಚಾರದಲ್ಲಿ ನಿಮ್ಮ ಆಯ್ಕೆಯ ವಿಚಾರವಾಗಿರುತ್ತದೆ. ಸ್ವಯಂ ಔಷಧೋಪಚಾರ ಮಾಡಿಕೊಳ್ಳದಿರಿ ಮತ್ತು ಯಾವಾಗಲೂ ವೈದ್ಯಕೀಯ ಮೇಲ್ವಿಚಾರಣೆಯ ಅಡಿಯಲ್ಲಿಯೇ ಔಷಧಗಳನ್ನು ಸೇವಿಸಿರಿ.
ಈ ಸಂದರ್ಭದಲ್ಲಿ ಪ್ರತಿಜ್ಞೆ ತೆಗೆದುಕೊಳ್ಳಿ ರಾಮ್‌ಲಲ್ಲಾರ ಪವಿತ್ರ ದಿನದಂದು
ಮರ್ಯಾದಾ ಪುರುಷೋತ್ತಮ ಶ್ರೀ ರಾಮಜಿಯವರ ಆದರ್ಶಗಳನ್ನು ಪಾಲಿಸುವುದು ರಾಮರಾಜ್ಯವನ್ನು ತರಲು ಮತ್ತು ದೇಶವನ್ನು ಎಲ್ಲಾ ರೀತಿಯ ಆರ್ಥಿಕ, ಸೈದ್ಧಾಂತಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ವೈದ್ಯಕೀಯ ದಾಸ್ಯದಿಂದ ಮುಕ್ತಗೊಳಿಸಿ ಅದನ್ನು ಸಂಪೂರ್ಣವಾಗಿ ಮಾಡಲು ಸ್ವಾವಲಂಬಿ ಮತ್ತು ಸಮೃದ್ಧ
ಸ್ವದೇಶಿಗಾಗಿ ಪ್ರತಿಜ್ಞೆ
ಈಸ್ಟ್ ಇಂಡಿಯಾ ಕಂಪನಿಯ ಕಾಲದಿಂದಲು ಕೋಟ್ಯಂತರ ರೂಪಾಯಿ ಲೂಟಿಯಾಗಿದೆ. ಎಂಎನ್‌ಸಿಗಳು ಇನ್ನೂ ಟ್ರಿಲಿಯನ್‌ಗಟ್ಟಲೆ ರೂಪಾಯಿ ಮೌಲ್ಯದ ಆರ್ಥಿಕತೆಯ ಮೇಲೆ ನಿಯಂತ್ರಣ ಹೊಂದಿವೆ. ಇದನ್ನು ಹೋಗಲಾಡಿಸಲು ಸ್ವದೇಶಿ ಪ್ರತಿಜ್ಞೆ ಮಾಡಿ ದೇಶಕ್ಕೆ ಆರ್ಥಿಕ ಸ್ವಾತಂತ್ರ್ಯ ದೊರಕಿಸಿಕೊಡಿ ದೇಶದ ಹಣವನ್ನು ದೇಶದ ಸೇವೆಗೆ ಬಳಸಿ.
ವೈದ್ಯಕೀಯ ಸ್ವಾತಂತ್ರ್ಯದ ಪ್ರತಿಜ್ಞೆ
ವೈದ್ಯಕೀಯ ಸ್ವಾತಂತ್ರ್ಯಕ್ಕಾಗಿ ಪತಂಜಲಿ ಸ್ವಾಸ್ಥ್ಯ, ಯೋಗಗ್ರಾಮ್ ಮತ್ತು ನೀರಾಮಯಂಗೆ ಬನ್ನಿ ಮತ್ತು ಆಯುರ್ವೇದವನ್ನು ರಾಷ್ಟ್ರೀಯ ವೈದ್ಯಕೀಯ ವ್ಯವಸ್ಥೆಯಾಗಿ ಘೋಷಿಸಲು ಸರ್ಕಾರಗಳನ್ನು ಒತ್ತಯಿಸಿ. ಅಲ್ಲದೆ ಆಯುರ್ವೇದವನ್ನು ಅಳವಡಿಸಿಕೊಂಡು ರೋಗಗಳನ್ನು ದೂರವಿಟ್ಟು ಆರೋಗ್ಯವಂತರಾಗಿರಿ.
ಶೈಕ್ಷಣಿಕ ಸ್ವಾತಂತ್ರ್ಯದ ಪ್ರತಿಜ್ಞೆ
335ರಿಂದ ಜಾರಿಯಲ್ಲಿರುವ ಮೆಕಾಲೆಯ ಶಿಕ್ಷಣ ಪದ್ಧತಿಯಿಂದ ದೇಶವನ್ನು ಉಳಿಸಲು, ನಿಮ್ಮ ಶಾಲೆಗಳನ್ನು ಭಾರತೀಯ ಶಿಕ್ಷಣ ಮಂಡಳಿಯೊಂದಿಗೆ ಜೋಡಿಸಿ ಮತ್ತು ನಿಮ್ಮ ಮಕ್ಕಳಿಗೆ ಪತಂಜಲಿ ಗುರುಕುಲಂ ಆಚಾರ್ಯಕುಲಂನಲ್ಲಿ ಶಿಕ್ಷಣ ನೀಡಿ ಉತ್ತಮ ವ್ಯಕ್ತಿತ್ವದ ಮಕ್ಕಳನ್ನು ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿ. ನಡವಳಿಕೆ ಮತ್ತು ನಾಯಕತ್ವದ ಗುಣಗಳು.
ಹೆಚ್ಚಿನ ಮಾಹಿತಿಗಾಗಿ 8954555999 ಸಂಪರ್ಕಿಸಬಹುದು
(ಸಮಯ: ಬೆಳಿಗ್ಗೆ 6 ರಿಂದ ರಾತ್ರಿ 10 ರವರೆಗೆ)
www.patanjaligurukulam.org.in | www.bsb.org.in
ಯೋಗ ಗುರು ಸ್ವಾಮಿ ರಾಮದೇವ್ ಜಿ ಅವರನ್ನು ಅನುಸರಿಸಿ
@SwamiRamdevOfficial swami.ramdev
ಪೂಜ್ಯ ಆಚಾರ್ಯ ಬಾಲಕೃಷ್ಣ ಜಿ ಅವರನ್ನು ಅನುಸರಿಸಿ
@AcharyaBalkrishan AcharyBalkrishna
SWASARI GOLD
SWASARI VATI
BRONCHOM
SWASARI PRAVAHI
MUKTA VATI EXTRAPOWER
BPGRIT बीपीग्रिट
MADHUNASHINI VATI EXTRAPOWER
MADHUGRIT मधुग्रिट
PEEDANIL GOLD
ORTHOGRIT ऑर्थोग्रिट
PeedaNIL
PEEDANIL TAILA
लिवोग्रिट LIVOGRIT
लिवामृत एडवांस LIVAMRIT ADVANCE
ಅಸ್ತಮಾ, ಕೆಮ್ಮು, ಶೀತ ಇತ್ಯಾದಿಗಳಿಗೆ
ಬಿಪಿ ಮತ್ತು ಸಕ್ಕರೆಗಾಗಿ
ಸಂಧಿವಾತ, ಕೀಲು ನೋವು ಮತ್ತು ವಾತ ರೋಗಗಳಿಗೆ
ಯಕೃತ್ತಿನ ರೋಗಗಳು ಮತ್ತು ಜೀರ್ಣಾಂಗ ವ್ಯವಸ್ಥೆಗೆ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

WANTED BDA SITES
BSK 5th & 6th STAGE ANJANAPURA VISHVESHWARAIAH LAYOUT KEMPE GOWDA ARKAVATHY JP NAGAR 8th & 9th PHASE HSR JAYNAGARA BTM 4TH STAGE
GENUINE SELLERS ONLY. NRI BUYER'S DIRECT REGISTRATION WITHIN 15 DAYS
SURYA PROPERTIES:-
9880659555
9916759939

BUNGALOW FOR SALE
60x40 feet East facing Independent Bungalow for Sale 45 squares building, Ground Floor, 1st Floor and II Floor with 5 Bedrooms, built with teak wood, Italian Marble Tiles, located at BEML Layout, Basaveshwaranagar, Bangalore - 560 079. Clear Titles & 'A' Katha.
~ CONTACT ~
9845765559 / 9845043282

E-Khata Sites for Sale

DC Converted Sites
Before Devanahalli Near Hiranandani Project
₹2599 per Sq. Ft
Upto 80% Bank Loan
Features & Amenities
- Black Tap Roads
- Street Lights
- Under Ground Drainage
- Fully Covered Compound for Entire Layout
- Individual Water Connection for Each Plot

7022160615 / 7993847390

SITES FOR SALE NEAR RAJANKUNTE
SDE
Bangalore Urban, Yelahanka Taluk

Rs 1799/- Per Sft
DC Conversion E - Katha
* Ready For Registration & Construction
* Bank Loans Available
* 30 Feet wide Roads

Highlights
* Adjacent to Aditya Engineering College
* Presidency College University
* Just Cricket Academy
* Sai Vidya Institute of Technology

7019040221 / 9036207777 / 9611146463

Modern APARTMENT bookings Open

SCHOOLS
■ Orchid International School ■ Marigold International School ■ National Public School
INSTITUTIONS
■ RV College of Engineering ■ Rajarajeshwari Medical College, ■ Don Bosco Institute of Technology ■ Christ University
HOSPITALS
■ Rajarajeshwari Hosptial ■ Fortis Hospital
MALLS
■ Gopalan Arcade Mall ■ Global Mall
■ 500 mtrs to Deepanjali Metro Station
■ 1Km to ORR ■ 300 Mtrs to Satellite Bus Terminal
BBMP Approved
AKSHAYA PROJECTS
Address: Site No. 56 & 57, Anjaneya Enclave Welfare Association, 1st Cross, MM Road, Behind Byatarayanapura Police Station, Bangalore-560 026.
Email: akshayaproject98@gmail.com
Combo bookings open
Contact:
Hemanth +91 98450 81345
Vinay +91 99863 84629
Raghu +91 98447 04666

HOUSE FOR SALE

Brand New Ready to occupy 5 BHK Duplex House in Jayanagar, 4th T Block 23rd Main.
Contact Direct Owner:
8088158281

Commercial Land

Banashankari

"HOSAKEREHALLI 40X60- COMMERCIAL Property for Sale 100 feet Ring Road Banashankari 3rd Stage, 2nd Phase. 9845500019/ 7019314962"

J P Nagar

READY TO Move with OC in Majestic Fortune 7th Phase J.P. Nagar High end Flats for Sale 1) 3BHK 1874 Sqft East Facing in 3rd Floor with Covered Car Park in Basement for Rs. 1.77 Cr. All Inclusive except Registration 2) 3BHK 2220 Sqft North Facing in 3rd Floor with Car Park for Rs. 2.11Cr. all Inclusive except Registration Contact Kiran: 8147729384

Flat

Cambridge Layout

ARTILLARY ROAD Spacious Four Bedrooms, Private Garden/ Entrance, Car-parking. 3700 sft. 2.8 Cr. 9620204637/ 9880346216

